THE BOOK WAS
DRENCHED

UNIVERSAL LIBRARY
OU_200083
UNIVERSAL LIBRARY

OUP—881—5-8-74—15,000

**OSMANIA UNIVERSITY LIBRAI**

Call No. Accession No.

Author

Title

This book should be returned on or before the date last marked

ಕನ್ನಡ ಕಾವ್ಯಮಾಲೆ

# ಮುಸುಗ
# ತೆಗೆಯೇ ಮಾಯಾಂಗನೆ

ಎಂ. ಎಸ್. ಪುಟ್ಟಣ್ಣ

ಮೈಸೂರು
ಕಾವ್ಯಾಲಯ : : ಪ್ರಕಾಶಕರು

ಮೊದಲನೆಯ ಮುದ್ರಣ : ೧೯೨೮
ಎರಡನೆಯ ಮುದ್ರಣ (ಕಾವ್ಯಾಲಯದಿಂದ) ೧೯೫೭

Copyright
All Rights Reserved
ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ

Published by Kavyalaya Publishers
at Mysore

ಬೆಲೆ : ರೂ. ೧·೫೦ (೨·೫೦ ; ೪·೦೦)

ಮುದ್ರಕರು :
ಜಿ. ಎಚ್. ರಾಮರಾವ್, ಬಿ.ಎಸ್‌ಸಿ.,
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್,
ಮೈಸೂರು.

# PREFACE

This story is based upon the nucleus of a few scattered and unconnected facts, learnt from my revered uncle the late Mr. Pete Annaiya Sastry of Mysore whose name occurs in the body of the work. A few more additional facts equally scattered, mentioned to me by the late Mr. Raghunatha Rao of the Mysore Government Press, threw some light on the scanty version that I heard already. These few materials, which could altogether be noted on a quarter sheet of paper, have been amplified into the present form.

The scene is laid at Mysore which was the chief seat of the conspiracy. The principal hero of the drama is Aprameya whose integrity of purpose and fidelity to his master are unsurpassed. In his active sympathy and unsolicited help on behalf of any person in trouble, even though such person may himself be ignorant of the dangerous situation, he approaches Herbert Spencer's perfect man. In this respect he also resembles Hatim Tai, the great hero of the Persian tale of the same name. The genuine nobility and generosity manifest in H. H. The Maharaja Krishnaraja Wodeyar III deserve our highest regard. The other characters of consummate roguery were adequately dealt with by the masterly way in which Aprameya conducted the several cases. The whole story is replete

with instances of misery bred of envy, wickedness, treachery and conspiracy which, but for Aprameya's adventure and skilful management would have ended as a Shakespearean Tragedy.

The natural delineation of a course of events need not be constructed as wounding the communal susceptibilities of any class. One point however, to which particular attention is paid, is the development of character from the beginning.

For having heard the MS read to them by me, I have to thank

1. Rajakaryaprasakta Rao Bahadur M. Shama Rau, Esq., M.A., Inspector-General of Education in Mysore. (Retired)
2. B. Dasappa Esq , B.A , Dy. Inspector - General of Education in Mysore. (Retired)
3. Mr. K. Lakshminaranaiya, B.A., Sub-Judge (Retired)
4. Channakesava Iyeagar, Esq , of the Bombay Educational Service, Dharwar,
   who all kindly and patiently heard the MS.

read to them by me. Further, I am specially grateful to

1. Rajakaryapravina H. V. Nanjundaiya, Esq , M.A., M.L., C.I.E., my late lamented friend; and
2. B. M. Sreekantaiya, Esq., M.A., B.L., Registrar of the Mysore University.

for having patiently read through my MS. and encouraged me to publish the book.

BASAVANAGUDI
*Bangalore City*
*15-12-1928*

**M. S. PUTTANNA**

# ಪೀಠಿಕೆ

ಈ ಗ್ರಂಥದಲ್ಲಿ ನಮೂದಾಗಿರುವ ನಮ್ಮ ಸೋದರ ಮಾವಂದಿರಾದ ಮತ್ತು ಗಣ್ಯರಾದ ಶ್ರೀ॥ ಮೈಸೂರು ಪೇಟೆ ಅಪ್ಪಯ್ಯಶಾಸ್ತ್ರಿಗಳು ಎಲ್ಲಿಯೋ ಒಂದೊಂದಾಗಿ ಹೇಳಿದ ಅಲ್ಪಸ್ವಲ್ಪ ಸಂಗತಿಗಳ ಅಸ್ತಿಭಾರದ ಮೇಲೆ ಈ ಕಥೆಯು ನಿರ್ಮಾಣವಾಯಿತು. ಈಚೆಗೆ ಸರ್ಕಾರದ ಅಚ್ಚುಕೂಟದಲ್ಲಿದ್ದ ಮ॥ ರಾ॥ ರಘುನಾಥ ರಾಯರೆಂಬ ಆಚಾರ್ಯರು ಈ ವಿಷಯದಲ್ಲಿ ನನಗೆ ಹೇಳಿದ ಕೆಲವು ಹೊಸ ಸಂಗತಿಗಳು ಮೊದಲು ನನಗೆ ಗೊತ್ತಾಗಿದ್ದ ಸಂದರ್ಭಗಳನ್ನು ದೃಢೀಕರಿಸಿದವು. ಹೀಗೆ ನನಗೆ ತಿಳಿಯ ಬಂದ ಅಲ್ಪಸ್ವಲ್ಪವಾದ ಸಂಗತಿಗಳೆಲ್ಲಾ ಒಂದು ಕಾಗದದ ಕಾಲು ಪುಟದಲ್ಲಿ ಧಾರಾಳವಾಗಿ ಬರೆಯುವ ಮಟ್ಟಿಗೆ ಇತ್ತಲ್ಲದೆ ಹೆಚ್ಚಾಗಿರಲಿಲ್ಲ. ಇಷ್ಟು ದೊರೆತದ್ದನ್ನು ಹುದುಗಿಸಿ ಈ ಗ್ರಂಥವಾಗಿ ಬರೆದಿದೆ. ಇದರಲ್ಲಿ ಕಂಡಿರುವ ತಂತ್ರಕ್ಕೆ ಮೈಸೂರು ಪಟ್ಟಣ ಮೂಲಸ್ಥಾನವಾಗಿತ್ತು. ಈ ಕಥೆಯ ಮುಖ್ಯವಾದ ನಾಯಕ ಅಪ್ರಮೇಯ. ಇವನ ಪ್ರಾಮಾಣಿಕತೆಯೂ ಸ್ವಾಮಿ ಭಕ್ತಿಯೂ ಅವನ ಅಸದೃಶವಾದ ಗುಣಗಳಾಗಿದ್ದವು. ಒಬ್ಬ ಮನುಷ್ಯನಿಗೆ ಸಂಭವಿಸಿದ ವಿಪತ್ತು ಅವನಿಗೆ ಗೊತ್ತಿಲ್ಲದಿದ್ದಾಗ್ಯೂ ಅಂಥಾದ್ದನ್ನು ಅಪ್ರಾರ್ಥಿತವಾಗಿ ಪರಿಹಾರಮಾಡುವಂಥಾ ಸದ್ಗುಣವು ಈತನಲ್ಲಿ ಅಮೋಘವಾದ ರತ್ನಪ್ರಾಯವಾದಂಥಾ ಗುಣವಾಗಿತ್ತು. ಈ ಭಾಗದಲ್ಲಿ ಹಾತಿಂ ಎಂಬ ಫಾರ್ಸಿ ಕಥೆಯ ಮುಖ್ಯ ನಾಯಕನಾದ ಹಾತಿಂ ತೈಯನ್ನು ಅಪ್ರಮೇಯ ಹೋಲುತಾನೆ. ಇವನಿಗೆ ಪರಪ್ರಯೋಜನ ಗಣನೀಯವಾದ್ದಲ್ಲದೆ ಸ್ವಪ್ರಯೋಜನದ ಮೇಲೆ ಲೇಶವೂ ದೃಷ್ಟಿ ಇಲ್ಲ. ಅಪರಾಧಮಾಡಿದವರ ಮೇಲೆ ತಾನು ಸ್ವತಃ ಬಿದ್ದು ಶಿಕ್ಷಿಸುವುದಕ್ಕೆ ಬದಲಾಗಿ ಅಂಥವರನ್ನು ಯುಕ್ತವಾದ ಅಧಿಕಾರಸ್ಥಾನಕ್ಕೆ ಒಪ್ಪಿಸುವುದೇ ಅವನ ಮತವಾಗಿತ್ತು.

ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರವರ ಸದ್ಗುಣಗಳು ಅತ್ಯಂತ ಶ್ಲಾಘನೀಯವಾಗಿದ್ದವು. ಅಪ್ರಮೇಯನು ಮೊಕದ್ದಮೆಗಳನ್ನು ಬಹು ಚಮತ್ಕಾರವಾಗಿ ನಡಿಸಿದ ರೀತಿಯಿಂದ ಹಲವು ನೀಚಪಾತ್ರಗಳಿಗೆ ತಕ್ಕ ಪ್ರಾಯಶ್ಚಿತ್ತವಾಯಿತು. ಈ ಕಥೆಯಲ್ಲಿ ಅಸೂಯೆ, ನೀಚತನ, ದ್ರೋಹ, ಫಿತೂರಿ ಮೊದಲಾದ ಅಕೃತ್ಯಗಳು ತುಂಬಿಕೊಂಡಿವೆ. ಇದಕ್ಕೆಲ್ಲಾ ಅಪ್ರಮೇಯನ ಸಾಹಸ ಚಮತ್ಕೃತಿಗಳೆಂಬ ಮಾತ್ರೆಗಳಿಲ್ಲದಿದ್ದರೆ ನಿರಪರಾಧಿಗಳು ಕೂಡ ನಿಷ್ಕಾರಣವಾದ ನಾಶಕ್ಕೆ ಗುರಿಯಾಗುತಿದ್ದರು. ಆಯಾ ಕಾರ್ಯಸರಣಿಯಲ್ಲಿ ಜರುಗತಕ್ಕ ವಿಷಯಗಳ ವಿವರಣೆಯು ಕೆಲವು ಜಾತಿಪ್ರಭೇದವವರ ಮನಸ್ಸಿಗೆ ಕಿಂಕೃತಿಯನ್ನುಂಟುಮಾಡುವುದೆಂದು ಭಾವಿಸಬಾರದು. ಆಯಾ ಪಾತ್ರಗಳ ಗುಣದೋಷಗಳು ಹೇಗೆ ವೃದ್ಧಿಯಾಗುತಾ ಬಂದವೊ ಅಂಥಾ ಕ್ಲಿಷ್ಟವಾದ ಭಾಗಕ್ಕೆ ಮುಖ್ಯವಾಗಿ ಮೊದಲಿನಿಂದಲೂ ಗಮನಕೊಟ್ಟಿದೆ.

ಈ ಲೇಖನವನ್ನು ಓದಿಸಿ ಕೇಳಿದ್ದಕ್ಕಾಗಿ ರಾಜಕಾರ್ಯ ಪ್ರಸಕ್ತ ರಾವ್ ಬಹಾದೂರ್ ಮ|| ರಾ|| ಮ. ಶಾಮರಾಯರು ಮೊದಲಾದ ಪುರುಷಶ್ರೇಷ್ಠರಿಗೆ ನಾನು ಕೃತಜ್ಞನಾಗಿದೇನೆ. ದಿವಂಗತರಾದ ರಾಜಕಾರ್ಯಪ್ರವೀಣ ಮ|| ರಾ|| ಹೆ. ವೆ. ನಂಜುಂಡೈಯ್ಯ, ಸಿ.ಐ.ಇ. ಯವರೂ, ಮೈಸೂರು ಯೂನಿವರ್ಸಿಟಿ ರಿಜಿಸ್ಟ್ರಾರು ಮ|| ರಾ|| ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ರವರೂ ಸಹಾ ಈ ಲೇಖನವನ್ನು ತಾವು ಓದಿ ಅಚ್ಚು ಹಾಕಿಸೆಂದು ಬೆನ್ನು ತಟ್ಟಿದ್ದಕ್ಕಾಗಿ ನಾನು ಬಹಳವಾಗಿ ಉಪಕೃತನಾಗಿದೇನೆ.

ಬೆಂಗಳೂರು ಸಿಟಿ ಬಸವನ ಗುಡಿಯಲ್ಲಿ ಸಿದ್ಧಾರ್ಥಿ ಸಂ|| ಪುಷ್ಯ ಬ|| ೯ ಬುಧವಾರ ಶಂಕರಾಂತಿ ಹಬ್ಬದ ದಿವಸ ಈ ಗ್ರಂಥ ಮುಗಿಯಿತು.

ಬೆಂಗಳೂರು ಬಸವನಗುಡಿ<br>
ಸನ್ ೧೯೨೮ನೇ ಇಸವಿ ಡಿಸೆಂಬರು

**ಎಂ. ಎಸ್. ಪುಟ್ಟಣ್ಣ.**

# ವಿಷಯ ಸೂಚಿಕೆ


| ಅಧ್ಯಾಯ | | ಪುಟ |
|---|---|---|
| | Preface | iii |
| | ಪೀಠಿಕೆ | v |
| ೧. | ಚಾಮುಂಡೀ ಬೆಟ್ಟದಲ್ಲಿ ಸಿಂಹ ವಾಹನ | ೧ |
| ೨. | ಅಪ್ರಮೇಯಹುಟ್ಟಿ ಬೆಳೆದದ್ದು | ೫ |
| ೩. | ಹನುಮಂತರಾವ್ ರಣಸವರೆ | ೧೫ |
| ೪. | ದುರ್ಗಾಬಾಯಿ | ೨೪ |
| ೫. | ಪೇಷ್ವೆಯ ಶಿವಪೂಜೆಸಾಮಗ್ರಿ | ೩೪ |
| ೬. | ಅಪ್ರಮೇಯ ಗುಮಾಸ್ತನಾದ್ದು | ೪೩ |
| ೭. | ಶಿವಾಚಾರದವರ ಪ್ರಾಬಲ್ಯ | ೫೮ |
| ೮. | ದೇಪಣ್ಣ | ೬೬ |
| ೯. | ಸಿಸ್ತುಗಾರಿಕೆಯ ಫಲ | ೬೯ |
| ೧೦. | ಜವಾಹಿರು ಪರೀಕ್ಷೆ | ೮೦ |
| ೧೧. | ಪಿತೂರಿ | ೧೦೭ |
| ೧೨. | ಹನುಮಂತರಾಯ ಏನಾದ ? | ೧೧೭ |
| ೧೩. | ಅಪ್ರಮೇಯನ ಪ್ರಯಾಣ | ೧೨೩ |
| ೧೪. | ಆತ್ಮಾರಾಂಬಾವಾಜಿ | ೧೨೬ |
| ೧೫. | ಕರಾಡಿಗರು-ಮಹಾಕಾಳಿಗೆ ನರಬಲಿ | ೧೩೯ |
| ೧೬. | ಹಿಟ್ಟಿಗೆನಾ ಬಿಟ್ಟಿಗೆನಾ | ೧೪೭ |
| ೧೭. | ಜನ್ನೈಯಂಗಾರಿ | ೧೫೩ |
| ೧೮. | ಬಂದೀಖಾನೆ ಭಾಗಮ್ಮ | ೧೫೮ |
| ೧೯. | ಜಮೂದಾರ್ | ೧೬೧ |
| ೨೦. | ಪುನರ್ವಿಚಾರಣೆ | ೧೬೩ |
| ೨೧. | ಹಗ್ಗದ ಚೆನ್ನಿ | ೧೭೭ |
| ೨೨. | ರಾಜ ಪೂಜ್ಯತೆ | ೧೯೮ |

ಶ್ರೀ ಗಣಾಧಿಪತಯೇ ನಮಃ

ಶ್ರೀ ಶಾರದಾಂಬಾಯೈ ನಮಃ

ಶ್ರೀ ಲಕ್ಷ್ಮೀ ನರಸಿಂಹಾಯನಮಃ

# ಮುಸುಗ ತೆಗೆಯೇ ಮಾಯಾಂಗನೆ

ಎಂಬ ಗ್ರಂಥವನ್ನು ಬರೆಯುವುದಕ್ಕೆ ನಿರ್ವಿಘ್ನಮಸ್ತು

---

## ೧ ನೇ ಅಧ್ಯಾಯ

## ಚಾಮುಂಡೀಬೆಟ್ಟದಲ್ಲಿ ಸಿಂಹವಾಹನ

ಮಾಪೈಯ್ಯ—"ಬ್ರೂವಸಮ್ಮತಾಮುಸಮೇಲೆ, ಕಾಮಾಕ್ಷಿ...." ಮೊದಲು ಈ ಕೀರ್ತನೆಯನ್ನು ಹಾಡಿದಳು. ಇದು ಮುಗಿದ ಮೇಲೆ,

ಐಗಿರಿ ನಂದಿನಿ ನಂದಿತ ಮೇದಿನಿ।
ವಿಶ್ವವಿನೋದಿನಿ ನಂದಿನುತೆ॥
ಜಯ ಜಯ, ಹೇ ಮಹಿಷಾಸುರಮರ್ದಿನಿ।
ರಮ್ಯ ಕಪರ್ದಿನಿ ಶೈಲಸುತೆ॥

ಎಂಬ ಈ ಅಷ್ಟಕವನ್ನು ಹೇಳಿದಳು. ಈ ಗಾನವನ್ನು ಕೇಳುವುದಕ್ಕೆ ಹತ್ತುಕಿವಿ ಸಾಲವೆನ್ನುವ ಹಾಗಿತ್ತು. ಮೊನ್ನೆ ಜಾತ್ರೆಯಾದಾಗ ನೀನೂ ಚಾಮುಂಡೀ ಬೆಟ್ಟಕ್ಕೆ ಬಂದಿದ್ದೆಯಲ್ಲವೆ?

ಬಸವೈಯ್ಯ—ಮುಂಚೆ ಬರಲಿಲ್ಲ, ರಥೋತ್ಸವವಾದ ಮೇಲೆ ಬಂದೆ. ರಥ ನಿಲೆಗೆ ನಿಂತ ಮೇಲೆಯೇ ನಾನು ಬೆಟ್ಟಕ್ಕೆ ಹೊರಟದ್ದು, ದೂರ ನಿಂತಿದ್ದೆ. ಅವಳು ಹಾಡಿದ ಗಾನದ ಪ್ರಸ್ತಾಪ ಎತ್ತಿದರೆ ಈಗಲೂ ಮೈಯೆಲ್ಲಾ ಗುಗ್ಗುರು ನೆಸುಗೊಳ್ಳುವುದು.

ಮಾಪೈಯ್ಯ—ಆ ಹಾಡುಗಾರಿಕೆಯ ಆನಂದವನ್ನು ಎಷ್ಟು

ಹೇಳಿದರೂ ತೀರದು. ಇದನ್ನು ಕೇಳುವುದಕ್ಕೆ ಅನೇಕ ಜನ ನುಗ್ಗಿ ಬಿಟ್ಟಿತು. ಆದಾಗ್ಯೂ ಸ್ವಲ್ಪವೂ ಗದ್ದಲವಿಲ್ಲವಲ್ಲಾ! ಅದೇನು ಕಂಠ, ಅದೇನು ರೂಪು, ನಾನು ಎಷ್ಟು ವರ್ಣಿಸಲಿ?

ಬಸವೈಯ್ಯ—ನಾನು ಕೊನೆ ಕೊನೆಯಲ್ಲಿ ಕೇಳಿದೆ. ಪುರುಷನ ಮನಸ್ಸನ್ನು ಅಪಹರಿಸುವುದಕ್ಕೆ ಆ ರೂಪು ಒಂದೇ ಸಾಕು. ಮೇಲೆ ಆ ಒಲಪೂ, ಆ ಕಂಠವೂ ಸೇರಿಕೊಂಡರೆ ಕೇಳಬೇಕೇ? ನನ್ನ ಕಣ್ಣಿಗಂತೂ ಅವಳು ಅಪ್ಸರ ಸ್ತ್ರೀಯ ಹಾಗೆ ಕಂಡಳು. ಇನ್ನೊಂದು ಅರೆಗಳಿಗೆಯಾದರೂ ಆ ಗಾನವನ್ನು ಕೇಳಿ ಕಿವಿಯ ಪಾಪವನ್ನೂ, ಆ ಸೌಂದರ್ಯವನ್ನು ನೋಡಿ ಕಣ್ಣಿನ ಪಾಪವನ್ನೂ ಕಳೆದು ಕೊಳ್ಳೋಣವೆಂದರೆ ಇಲ್ಲದ ಹಾಗಾಯಿತು. ನನಗಂತೂ ಅವೆಲ್ಲಾ ಮಿಂಚು ಹೊಳೆದು ನಿಂತು ಹೋದ ಹಾಗಾಯಿತು. ಅವಳು ಯಾರಯ್ಯ?

ಮಾಪೈಯ್ಯ—ಇವಳನ್ನು ಅರಿಯೆಯ? ಏನೋ ಚೋಜಿಗ ವಾಗಿದೆ. ನಿಮ್ಮ ಬೀದಿಯಲ್ಲಿಯೇ ಕೆಳಭಾಗ, ದೀವಟಿಗೆ ಬೀದಿಗೆ ಸಮೀಪವಾಗಿ, ಆ ಚೌಕದ ಬಳಿ........

ಬಸಪ್ಪ—ತಾಳು, ಹೆಗ್ಗಡೆಸೇವನ ಕೋಟೆಯವರ?

ಮಾಪೈಯ್ಯ—ಕುಲಗಾಣದವರಲ್ಲವೇ?

ಬಸಪ್ಪ—ಕುಲಗಾಣದ ನಾಗರತ್ನಾ ಸಾನಿಯೆ?

ಮಾಪೈಯ್ಯ—ಮತ್ತಿನ್ನು ಯಾರು ಎಂದು ತಿಳಿದಿದ್ದೆ?

ಬಸಪ್ಪ—ನಾನು ಏನು ಮೋಸ ಹೋದೆನಯ್ಯ? ಯಾರು ಸ್ವೀಕರಿಸಿಕೊಂಡಿದಾರೊ?

ಮಾಪೈಯ್ಯ—ನಿನಗೆ ಹೇಳಿದರೆ ನೀನು ಎಲ್ಲಿಯಾದರೂ ಬಾಯಿಬಿಟ್ಟೀಯಪ್ಪ? ಆ ಮೇಲೆ ಪ್ರಾಣಕ್ಕೆ ಬಂದೀತು?

ಬಸಪ್ಪ—ಇಲ್ಲ, ಹೇಳಯ್ಯ ಯಾರು ಇಟ್ಟುಕೊಂಡಿದಾರೆ?

ಮಾಪೈಯ್ಯ—ನೀನು ಕೇಳುವ ರೀತಿ ನೋಡಿದರೆ, ನಿನಗೆ ಸಿಕ್ಕತಕ್ಕ ಪದಾರ್ಥವೆಂದು ತಿಳಿದಿದ್ದೀಯೇನೋ, ಆ ಆಶೆಯನ್ನು

ಬಿಟ್ಟುಬಿಡು. ಅಲ್ಲಿಗೆ ದೇವಣ್ಣನವರ ಪ್ರವೇಶವಾಗಿದೆ. ಹಾಗಿಲ್ಲದಿದ್ದರೆ ಅವಳು ಇಟ್ಟಿದ್ದ ಜವಾಹಿರು ಉಟ್ಟಿದ್ದ ಪೀತಾಂಬರ ಅವಳಿಗೆ ಎಲ್ಲಿಂದ ಬಂದೀತು?

ಬಸಪ್ಪ—ಅವನು ಕಾಲಹಾಕಿಕೊಂಡಿದಾನೆಯೋ! ಹಾಗಾದರೆ ಸರಿ. ಇಲ್ಲಿಯೂ ಇವನ ಹಾವಳಿ ತಪ್ಪಲಿಲ್ಲವೇ? ಏನು ಉರಿತ ಉರಿಯುತಾ ಇದಾನೈಯ್ಯ, ಚಂದ್ರಗಾವಿ ಉರಿತವ?

ಮಾವೈಯ್ಯ—ಹವುದು, ಅವನ ದಶೆ ಹಾಗೆ ನಡಿಸುತಾ ಇದೆ.

ಬಸಪ್ಪ—ಎಂಥೆಂಥವರಿಗೂ ಶಾಶ್ವತವಿಲ್ಲ. ಈ ಗುಂಗಾಣಿ. ಒಂದು ಪದಾರ್ಥವೆಂತ ಮಾತನಾಡುತೀಯೆ? ಇವರೆಲ್ಲಾ ನನಗೆ ಒಂದು ಲಕ್ಷ್ಯವೆ?

ಮಾವೈಯ್ಯ—ಆಡುವತನಕ ಅರಗಿಣಿ, ನಡೆಯುವತನಕ ನಾಣ್ಯ.

ಬಸಪ್ಪ—ನಿನ್ನೆ ಅವಳನ್ನು ನೋಡಿದ್ದು ಕಣ್ಣಿನಲ್ಲಿ ಕಟ್ಟಿದಹಾಗಿದೆ. ಅವಳ ರೂಪು ನನ್ನ ಮನಸ್ಸಿನ ಮೇಲೆ ಮುದ್ರೆ ಹೊಡೆದು ಬಿಟ್ಟಹಾಗಿದೆ. ಅಂಥಾ ವಸ್ತು ದೊರೆಯಬೇಕಾದರೆ ಪುಣ್ಯ ಮಾಡಿರಬೇಕು, ಇದು ಒಂದು. ಇನ್ನೂ ರಾಜಕಾರ್ಯಗಳಿವೆ ಅವೆಲ್ಲಕ್ಕೂ ಮೊದಲು ದೇವಣ್ಣನನ್ನು ತುಳಿದುಬಿಡಬೇಕು. ಆ ಮಹಾತಾಯಿ, ಚಾಮುಂಡೇಶ್ವರಿ, ಏನು ಮಾಡುತಾಳೆಯೋ ನೋಡೋಣ.

ಹೀಗೆ ಮಾತನಾಡಿಕೊಂಡು ಇವರಿಬ್ಬರೂ ಮನೆಗೆ ಹೊರಟು ಹೋದರು. ಈ ಬಸಪ್ಪನು ಆ ಹೆಂಗಸಿನ ಗೀಳನ್ನು ಮನಸ್ಸಿಗೆ ಹತ್ತಿಸಿಕೊಂಡು ಪೇಚಾಡುತಾ ತನ್ನ ಕೋರಿಕೆ ನೆರವೇರುವುದಕ್ಕೆ ಬೇಕಾದ ಪ್ರಯತ್ನ ಒಂದನ್ನೂ ಬಿಡದೆ ಮಾಡಿದನು. ಒಂದು ದಿನ ಅಂಗರೇಖು ರುಮ್ಮಾಲು ಪಾಯಿಜಾಮ ಹಾಕಿಕೊಂಡು ಒಳ್ಳೇ ಪಂಚೆಯನ್ನು ಮೇಲೆ ಹೊದ್ದು ಆ ನಾಯಿಕಸಾನಿಯ ಮನೇ ಮುಂದೆ ಸುಳಿದಾಡುವುದೂ; ಇನ್ನೊಂದುದಿನ ತಲೆಗೆ ಜೋಡೀ

ವಸ್ತ್ರವನ್ನು ಕುಚ್ಚುಬಿಟ್ಟು ಸುತ್ತಿ ಪಟ್ಟೇ ಅಂಚಿನ ಪಂಚೆಯನ್ನು ಕಠಾರಿ ಕಚ್ಚೇಹಾಕಿ ಉಟ್ಟು ಅಗಸನ ಮನೆಯ ಮಡಿಪಂಚೆಯನ್ನು ಹೊದ್ದು ಹೋಗುವುದೂ; ಇನ್ನೊಂದು ದಿನ ವಜ್ರದ ಹತ್ತ ಕಡಕನ್ನೂ ಕೈಬೆರಳುಗಳಿಗೆ ಉಂಗುರಗಳನ್ನೂ ಇಟ್ಟು, ಮಲ್ಲಿಗೇ ಹೂವು, ಪಚ್ಚೇತೆನೆ, ಸಂಪಿಗೇಹೂವು, ಇರವಂತಿಗೇ ಹೂವು ಮೊದಲಾದ ಪರಿಮಳದ ಹೂವು ಇವುಗಳಿಗೆ ಪನ್ನೀರನ್ನು ಚಿಮಿಕಿಸಿ ಅವುಗಳನ್ನು ಜವ್ವಾಜಿ ಸವರಿದ ನಾರಿನಿಂದ ಕಟ್ಟಿಸಿ ಅದನ್ನು ತನ್ನ ಎಣ್ಣೆ ಗಂಟಿಗೆ ದಟ್ಟವಾಗಿ ಸುತ್ತಿ, ಆ ಗಂಟನ್ನು ತನ್ನ ಬೆನ್ನ ಮೇಲೆ ಭುಜದಿಂದ ಭುಜಕ್ಕೆ ಉರುಳಾಡಿಸುತಾ, ಹುಬ್ಬಿನ ನಡುವೆ ಚುಕ್ಕಿಬಟ್ಟನ್ನಿಟ್ಟು ಒಲಪು ಮಾಡುತ್ತಾ, ಆ ಬೀದಿಯಲ್ಲಿ ಗುಜರೀ ಹೊತ್ತಿನಲ್ಲಿ ತಿರಗಾಡುತ್ತಾ, ನೆವನೆವದಲ್ಲಿ ಆ ಹೆಂಗಸಿನ ಮನೆಯ ಮುಂದೆ ನಿಲ್ಲುತಾ ತಾಂಬೂಲವನ್ನು ದವಡೆ ಒಡೆಯುವಹಾಗೆ ಒತ್ತರಿಸಿಕೊಂಡು ಅಗಿಯುತಾ, ಸಿಕ್ಕಿದವರನ್ನು ಅಲ್ಲಲ್ಲಿ ನಿಲ್ಲಿಸಿ ಕೊಂಡು ಮಾತನಾಡುತಾ, ಕಾರಣವಿಲ್ಲದಿದ್ದಾಗ್ಯೂ ತಾನೇ ನಗುತಾ ಹೀಗೆಲ್ಲಾ ಒಲಪು ಮಾಡುತಾ ಬಂದನು. ಇಂಥಾ ನೋಟವನ್ನೇ ಅಪೇಕ್ಷಿಸಿಕೊಂಡು ಹೋಗತಕ್ಕದ್ದೇ ತಮ್ಮ ವೃತ್ತಿ ಯಾಗಿ ಮಾಡಿಕೊಂಡಿರುವ ಸ್ತ್ರೀಯರು ತಮ್ಮ ಮನೇ ಬಾಗಿಲಿಗೇ ಬಂದು ನಿಂತು ಹಲವು ಬಗೆಯಲ್ಲಿ ಮನೋಭಿಪ್ರಾಯವನ್ನು ತೋರಿಸುವ ವಿಟನ ಎದುರಿಗೆ ನಲಿದಾಡದೇ ಇದ್ದಾರೆ? ಒಂದು ವೇಳೆ ಚಿಕ್ಕವರು ತಾತ್ಸಾರವಾಗಿದ್ದರೂ ಮನೆಯಲ್ಲಿರುವ ವೃದ್ಧ ಜಂಬುಕಿಯರು ಅವರನ್ನು ಸುಮ್ಮನೇ ಬಿಟ್ಟಾರೆ? ಗಂಡಸಿನ ಆಸೆ ಯನ್ನು ಹತ್ತರಷ್ಟು ಹೆಚ್ಚಿಸುವಹಾಗೆ ಹೆಂಗಸಿನ ಒಲಪೂ ಚರ್ಯ ಗಳೂ ಸಹಕಾರಿಯಾದವು. ಅಂಥಾ ಶೃಂಗಾರ ಚೇಷ್ಟೆಗಳಿಂದಲೂ ಮಾತುಗಳಿಂದಲೂ ಪರಸ್ಪರ ಭಾವ ಗೊತ್ತಾಯಿತು. ರಹಸ್ಯವಾಗಿ ನಡೆದಿದ್ದ ಒಳಪ್ರಯತ್ನಗಳಿಗೆ ಇವೆಲ್ಲಾ ಅನುಕೂಲಿಸಿತು. ಆ ವಿಲಾಸ ಮಂದಿರಕ್ಕೆ ಬಸಪ್ಪನವರ ಪ್ರವೇಶವಾಯಿತು. ಇದೆಲ್ಲಾ

ವೇಶ್ಯಾಸ್ತ್ರೀಯರ ಮನೆಯಲ್ಲಿ ನಡೆಯುವುದಕ್ಕಿಂತಲೂ ಹೆಚ್ಚಾದ ರಹಸ್ಯದಿಂದ ಜರುಗುತ್ತಿತ್ತು.

೨ ನೇ ಅಧ್ಯಾಯ

## ಅಪ್ರಮೇಯ ಹುಟ್ಟಿ ಬೆಳೆದದ್ದು

ಮೈಸೂರು ಸೀಮೆಯ ದಕ್ಷಿಣ ಪ್ರಾಂತದಲ್ಲಿ ಗುಂಡಲಪೇಟೆ ಎಂಬ ಊರಿದೆ. ಆ ವೂರಲ್ಲಿ ಅಪ್ರಮೇಯನೆಂಬ ಒಬ್ಬ ಬ್ರಾಹ್ಮಣ ನಿದ್ದನು. ಇವನು ಮತದಲ್ಲಿ ಶ್ರೀವೈಷ್ಣವ, ಕುಲದಲ್ಲಿ ಹೆಬ್ಬಾರರು. ಚಿಕ್ಕಂದಿನಲ್ಲಿಯೇ ಇವನ ತಂದೆ ಸತ್ತುಹೋದನು. ಆದ್ದರಿಂದ ಈ ಹುಡುಗನನ್ನು ಇವರ ಅಣ್ಣನಾದ ಅನಂತೈಯ್ಯನು ಪೋಷಣೆ ಮಾಡುತ್ತಾ ಪಿತ್ರಾರ್ಜಿತವಾದ ಭಾರಿ ಆಸ್ತಿಯನ್ನು ರೂಢಿಸಿ ಕೊಂಡಿದ್ದನು. ತಂದೆ ಸಾಯುವಾಗ್ಗೆ ಅಪ್ರಮೇಯನಿಗೆ ಅಕ್ಷರಾ ಭ್ಯಾಸವಾಗಿತ್ತು. ಆ ಕಾಲದಲ್ಲಿ ಕನ್ನಡದ ಮಠಗಳನ್ನು ಅಲ್ಲಲ್ಲಿ ಇಟ್ಟುಕೊಂಡು ಉಪಾಧ್ಯಿಗಳು ಹುಡುಗರಿಗೆ ಓದಿಸುತಿದ್ದರು. ಇವರು ಸಾಧಾರಣವಾಗಿ ಕುಂಟ ಉಪಾದ್ರು ಕುರುಡು ಉಪಾದ್ರು ಚೊತ್ತ ಉಪಾದ್ರು ಹೀಗೆ ಆಗಿರುತಿದ್ದರು. ಉದಯರಾಗಾ ಹೇಳಿಸುವುದು, ಹಲಗೆ ಬರೆಯಿಸುವುದು, ಕೊಟ್ಟ ಕಾಗದ ಓದಿಸು ವುದು, ಇಚ್ಚಿ ಟವಣೆ ಹಾಕಿಸುವುದು, ಇದೇ ಸಾಧಾರಣವಾಗಿ ವಿದ್ಯಾಭ್ಯಾಸ ಕ್ರಮವಾಗಿತ್ತು. ಇದರಲ್ಲಿ ಜೈಮಿನಿ, ಕನ್ನಡ ಭಾರತ, ಯಕ್ಷಗಾನದ ಕಥೆಗಳು ಇವುಗಳನ್ನು ರಾಗವಾಗಿ ಓದಿಸತಕ್ಕ ಉಪಾ ಧ್ಯಾಯನೇ ಬಹಳ ನಿಪುಣನೆನ್ನಿಸಿಕೊಂಡಿದ್ದನು. ಆದರೆ ಆಗ ದರ ಬಾರಿನ ಕಾಗದ ಪತ್ರಗಳೆಲ್ಲಾ ಹಿಂದವಿಯಲ್ಲಿ ವಿಶೇಷವಾಗಿ ನಡೆ ಯುತಾ ಇದ್ದ ಕಾರಣ, ಪುಣ್ಯವಂತರಾದ ಮೇಲ್‌ತರದ ಜನರು ತಮ್ಮ ಮಕ್ಕಳಿಗೆ ಹಿಂದವಿಯನ್ನು ಕಲಿಸುತಿದ್ದರು. ತಮ್ಮನಲ್ಲಿ ಹೆಚ್ಚಾದ ಪ್ರೀತಿಯನ್ನು ಇಟ್ಟುಕೊಂಡಿದ್ದ ಅನಂತೈಯ್ಯನು

ಅಪ್ರಮೇಯನನ್ನು ಹಿಂದವಿಸಾಲೆಗೆ ಕಳುಹಿಸಿದನು. ಹುಡುಗನು ವಿಶೇಷವಾಗಿ ಬುದ್ಧಿಶಾಲಿಯಾಗಿದ್ದನು: ಬೆಳಗ್ಗೆ ಕೊಟ್ಟ ಹೊಸ ಪಾಠ ಮಧ್ಯಾಹ್ನಕ್ಕೂ ಮಧ್ಯಾಹ್ನ ಕೊಟ್ಟ ಪಾಠ ಸಾಯಂ ಕಾಲಕ್ಕೂ ಚೆನ್ನಾಗಿ ಒಪ್ಪಿಸುತ್ತಿದ್ದನು. ಒಂದು ದಿನದಲ್ಲಿ ಇವನು ಕಲಿಯುತ್ತಿದ್ದ ಅಂಶವನ್ನು ಇತರರು ಕಲಿಯಲು ಮೂರು ದಿವಸ ಬೇಕಾಗುತ್ತಿತ್ತು.

ಈ ಕಾರಣದಿಂದ ಈ ಹುಡುಗನಲ್ಲಿ ಉಪಾಧ್ಯಾಯನಿಗೆ ಬಹುವಾಗಿ ಅಭಿಮಾನವಿತ್ತು. ಹಿಂದವಿಯಲ್ಲಿ ಹುಡುಗರಿಗೆ ಹೆಚ್ಚಾದ ಲೆಕ್ಕವನ್ನೂ ಮಗ್ಗಿಯನ್ನೂ ಹೇಳಿ ಕೊಡುತಾರೆ. ದೊಡ್ಡದೊಡ್ಡದಾಗಿ ಕಷ್ಟವಾಗಿರುವ ಲೆಕ್ಕಗಳನ್ನು ಮಾಡುವುದಕ್ಕೆ ಇವೆಲ್ಲಾ ವಿಶೇಷವಾಗಿ ಉಪಯೋಗಕ್ಕೆ ಬರುವುದು. ಹಿಂದವಿ ಕಲಿತವರು ಗಣಿತದಲ್ಲಿ ಜಾಣರೆಂದು ಈಗಲೂ ಜನವಾರ್ತೆ ಇದೆ. ಹೀಗೆ ಹೇಳಿಕೊಟ್ಟರೆ ಹಾಗೆ ಕಲಿತು ಕೊಳ್ಳುತಾ ಇದ್ದ ಅಪ್ರಮೇಯನಿಗೆ ಇದು ಯಾವುದೂ ಕಷ್ಟವಾಗಿರಲಿಲ್ಲ. ಇವನು ಇಷ್ಟು ಸುಟಿಯಾಗಿರುವುದನ್ನು ಕಂಡು ಪಂತೋಜಿಗೆ ಸಂತೋಷವೂ ಅಹಂಕಾರವೂ ಜೊತೆಜೊತೆಯಲ್ಲಿ ಹೆಚ್ಚುತಾ ಇದ್ದವು. ಇದಕ್ಕೆ ತಕ್ಕ ಹಾಗೆಯೇ ಶಿಷ್ಯನಲ್ಲಿ ಗುರುವಿಗೆ ಪ್ರೀತಿಯೂ ಅಧಿಕವಾಗಿತ್ತು. ಈ ಪಂತನು ಇತರ ಹುಡುಗರಿಗಿಂತಲೂ ಹೆಚ್ಚಾದ ಅಕ್ಕರೆಯಿಂದ ಅಪ್ರಮೇಯನಿಗೆ ಪಾಠವನ್ನು ಹೇಳಿಕೊಡುವುದೂ ಅಲ್ಲದೆ, ತಾನು ಇತರ ಶಿಷ್ಯರಮನೆಗೆ ಹೋದಾಗ ಇವನನ್ನೂ ಸಂಗಡ ಕರೆದುಕೊಂಡು ಹೋಗುತ್ತಿದ್ದನು; ಮತ್ತು ಎಲ್ಲರೆದುರಿಗೂ ಈ ಹುಡುಗನನ್ನು ಬೇಕಾದ ಪ್ರಶ್ನೆ ಕೇಳಿ ಅವನು ಸರಿಯಾಗಿ ಹೇಳುತ್ತಿದ್ದ ಉತ್ತರವನ್ನು ಸುತ್ತಲೂ ಇರುವ ಜನರಿಗೆ ತಿಳಿಸುತ್ತಿದ್ದನು. ಇದರಿಂದ ಆ ಹುಡುಗ ಬಹು ಬುದ್ಧಿಶಾಲಿ ಎಂಬ ಸಂಗತಿಯೊಂದಿರಲಿ, ಇಂಥವನನ್ನು ತಯಾರ್ಮಾಡಿದ ತನ್ನ ಸಾಮರ್ಥ್ಯವು ಬಹು ದೊಡ್ಡದೆಂದು ತೋರ್ಪಡಿಸುವುದೂ ಪಂತನಿಗೆ ಒಂದು ಮುಖ್ಯೋ

ದ್ದೇಶವಾಗಿತ್ತು. ಆದರೆ ಈ ಬಾಲಕನಿಗೆ ಗರ್ವಹುಟ್ಟಿ ತಾನು ನಿಪುಣನೆಂದು ತಿಳಿದುಕೊಂಡು ಮುಂದಕ್ಕೆ ಅಹಂಕಾರ ಪಟ್ಟರೆ ಅವನ ಅಭಿವೃದ್ಧಿಗೆ ಕುಂದಕವಾದೀತೆಂದು ತಿಳಿದು, ತಾನೂ ಶಿಷ್ಯ ಇಬ್ಬರೇ ಇರುವಾಗ—ಅಪ್ರಮೇಯ, ನೀನು ದೊಡ್ಡ ಪಂಡಿತನೆಂದು ತಿಳಿದು ಅರೆಗರ್ವದಿಂದ ಕೆಡಬೇಡ, ನಿನಗೆ ಬರುವುದನ್ನು ಇತರರಿಗೆ ತೋರಿಸಿದೆ. ನೀನು ಕಲಿಯಬೇಕಾದ್ದು ಬೆಟ್ಟದಷ್ಟಿದೆ ಎಂದು ಆಗಾಗ್ಗೆ ಪಂತನು ಹೇಳುತಿದ್ದನು. ಮರಾಟಿಯ ಸಂಗಡ ಕನ್ನಡವೂ ಈ ಹುಡುಗನಿಗೆ ಅಭ್ಯಾಸವಾಯಿತು. ಮರಾಟಿ ಭಾಷೆಯಲ್ಲಿ ಶಿವಾಜಿ ಮೊದಲಾದ ವೀರರ ಕಥೆಗಳೂ ಪೂನೆ ಶ್ರೀಮಂತರ ಚರಿತ್ರೆಗಳೂ ಬರೆಯಲ್ಪಟ್ಟಿವೆ. ಇವುಗಳನ್ನು ಬಖೈರು ಎನ್ನುತ್ತಾರೆ. ಅಪ್ರಮೇಯನು ಪಂತರ ಸಹಾಯದಿಂದ ಇವೆಲ್ಲವನ್ನೂ ಓದಿದನು. ಒಂದಿದ್ದ ಚರಿತ್ರ ಪುರುಷರ ಗುಣವನ್ನೂ ಪರಾಕ್ರಮವನ್ನೂ ಕುರಿತು ಓದಿದಾಗೆಲ್ಲಾ ನಮ್ಮಲ್ಲಿ ಉನ್ನತವಾದ ಸದ್ಗುಣವೂ ಒಂದು ಬಗೆಯಾದ ಪೌರುಷವೂ ಹುಟ್ಟುವುದು ಅನುಭವದ ಮಾತಾಗಿದೆ. ಇಂಥಾದ್ದನ್ನು ಓದುತಾ ಓದುತಾ ಇಂಥಾ ಪುರಾತನ ಚರಿತ್ರೆಗಳನ್ನು ಇನ್ನೂ ಹೆಚ್ಚಾಗಿ ತಿಳಿದುಕೊಳ್ಳಬೇಕೆಂಬ ಆಶೆಯು ಅಪ್ರಮೇಯನಿಗೆ ಹುಟ್ಟಿತು. ಇವನಿಗೆ ಪುಸ್ತಕಗಳನ್ನು ತಂದು ಒದಗಿಸುವುದಕ್ಕೆ ಯಾರಿಂದ ಸಾಧ್ಯ? ಅಂಥಾ ಪುಸ್ತಕಗಳು ಸಿಕ್ಕುವುದು ಹೇಗೆ? ಕೆಲಸಕ್ಕೆ ಬಂದದ್ದೂ, ಬಾರದ್ದೂ, ಒಳ್ಳೇದೂ ಕೆಟ್ಟದೂ, ಎಲ್ಲವನ್ನೂ ಯೋಗ್ಯತೆ ಇರಲಿ, ಇಲ್ಲದಿರಲಿ ಮನಸ್ಸು ಬಂದ ಹಾಗೆ ಬರೆದು ವಿಚಿತ್ರವಾದ ಹೆಸರುಗಳನ್ನಿಟ್ಟು ಮುದ್ರಿಸಿ ಪ್ರಚುರ ಮಾಡುವುದಕ್ಕೆ ಆ ಕಾಲದಲ್ಲಿ ಮುದ್ರಾಕ್ಷರ ಶಾಲೆಗಳು ಇರಲಿಲ್ಲ. ಕೈಲಿ ಬರೆದ ಪುಸ್ತಕಗಳು ದೊರೆಯುವುದು ಸುಲಭವಾಗಿರಲಿಲ್ಲ. ಈ ಹುಡುಗನು ಹೊಸ ಪುಸ್ತಕಗಳನ್ನು ಓದುವುದಕ್ಕೆ ತಂದುಕೊಡಿ ಎಂದು ಮಾಡುತಿದ್ದ ವರಾತಿಗೆ ಪಂತನು ಒಂದು ದಿನ—ಅಪ್ರಮೇಯ, ಇಂಥಾ ವಹಿಗಳು ಫಾರ್ಸಿ, ಹಿಂದುಸ್ಥಾನಿ, ಉರ್ದು,

ಈ ಭಾಷೆಗಳಲ್ಲಿ ಹೆಚ್ಚಾಗಿವೆ. ಹಿಂದವಿಯಲ್ಲಿ ಅಷ್ಟು ದೊರೆಯುವು ದಿಲ್ಲ ಎಂದನು.

ಹೀಗೆ ಕೆಲವು ಕಾಲ ಕಳೆಯಿತು. ಪಂತರ ಸಾಲೆಯನ್ನು ಅಪ್ರಮೇಯ ಬಿಟ್ಟು ಬಿಟ್ಟನು. ಆದರೆ ಪಂತರಲ್ಲಿ ಮಾತ್ರ ಇವನಿಗೆ ಗೌರವ ಕೆಡಲಿಲ್ಲ. ಫಾರ್ಸಿ ಮೊದಲಾದ ದರ್ಬಾರ್ ಭಾಷೆಗಳಲ್ಲಿ ಹೆಚ್ಚಾಗಿ ಗ್ರಂಥಗಳಿವೆ ಎಂಬ ಮಾತು ಬಾಲಕನ ಮನಸ್ಸಿಗೆ ಚೆನ್ನಾಗಿ ನಾಟಿತು. ಇವರ ಅಣ್ಣ ಅನಂತೈಯ್ಯನು ವಿಸ್ತಾರವಾಗಿದ್ದ ತಮ್ಮ ಭೂಮಿಗಳನ್ನು ತಾನು ನಿಂತು ಆರಂಬ ಮಾಡಿಸುತಾ ಬೆಳೆಯನ್ನು ರೂಡಿಸುತಾ ಊರಲ್ಲಿ ಹತ್ತು ಜನಕ್ಕೆ ಬೇಕಾದವನಾಗಿ ಎಲ್ಲಕ್ಕೂ ಮುಂದಾಳಾಗಿದ್ದನು. ಇವನಿಗೆ ತಮ್ಮನಲ್ಲಿ ಹೆಚ್ಚಾದ ಪ್ರೀತಿಯಿದ್ದ ಕಾರಣ ಇವನು ಓದಿ ಬುದ್ಧಿವಂತನಾಗಿ ಸರ್ಕಾರದ ಉದ್ಯೋಗಕ್ಕೆ ಬರಲೆಂದು ಅವನಿಗೆ ಮನೇಕೆಲಸ ಯಾವುದನ್ನೂ ಹೇಳುತಾ ಇರಲಿಲ್ಲ. ಇದಕ್ಕೆ ಅನುಸಾರವಾಗಿ ಅಪ್ರಮೇಯನು ವ್ಯಾಸಂಗ ಮಾಡುತಾ ಇದ್ದನು. ಯಾವ ಆಟಗಳಿಗೂ ಇವನು ಹೋದವನಲ್ಲ. ಹುಡುಗರು ಆಟವಾಡುವ ಕಡೆ ಯಾವಾಗಲಾದರೂ ನಿಂತು ಇವನು ನೋಡುತಾ ಇರುವ ವಾಡಿಕೆ ಇತ್ತು. ಯಾರ ಸಂಗಡಲೂ ಜಗಳವಾಡುವುದಕ್ಕೆ ಹೋಗುತಾ ಇರಲಿಲ್ಲ. ಆದರೆ ಯಾರಾದರೂ ಇವನನ್ನು ಕೆಣಕಿ ಕೀಟಲೆ ಜಗಳವನ್ನು ತೆಗೆದರೆ ಎದುರಾಳಿಗೆ ಪರಿಣಾಮವಾಗುತಿರಲಿಲ್ಲ. ಅಂಥವರನ್ನು ಚೆನ್ನಾಗಿ ಹಿಡಿದು ಹೊಡೆಯುತಿದ್ದನು. ತನಗೆ ಯಾರಾದರೂ ಅವಮಾನಕರವಾದ ಮಾತನಾಡಿದರೆ ಅವರ ಹಣೇಬರಹವೂ ಹೀಗೆಯೇ ಆಗುತಿತ್ತು. ಇನ್ನೊಂದು ವಿಲಕ್ಷಣವಾದ ನಡತೆಯು ಈ ಹುಡುಗನಲ್ಲಿತ್ತು. ಬಲಿಷ್ಠನಾದವನೂ ಬಲಹೀನನಾದವನೂ ಜಗಳವಾಡುತಿದ್ದರೆ, ಅಪ್ರಮೇಯನು ತನಗೆ ಆ ವ್ಯಾಜ್ಯ ಸಂಬಂಧಿಸಿರಲಿ ಇಲ್ಲದೇ ಇರಲಿ, ಯಾವಾಗಲೂ ಬಲಹೀನನಾದವನ ಪಕ್ಷವನ್ನು ವಹಿಸುತಿದ್ದನು. ಯಾರು ಸಂಕಟಪಟ್ಟರೂ ಅದನ್ನು ನೋಡಿ

ತಾನು ವ್ಯಥೆ ಪಡುತಿದ್ದನು.

ಇದು ಹಾಗಿರಲಿ. ಫಾರಸಿ ಓದಬೇಕೆಂಬ ಕುತೂಹಲವು ಇವನಿಗೆ ದಿನೇ ದಿನೇ ಹೆಚ್ಚುತಾ ಬಂತು. ಇವನ ಸೋದರ ಮಾವನಾದ ಕೇಶವಯ್ಯನೆಂಬುವನು ಮಳವಳ್ಳಿಯಲ್ಲಿದ್ದನು. ಅವರ ಮನೆಯಲ್ಲಿ ನಡೆದ ಒಂದು ಉಪನಯನಕ್ಕಾಗಿ ಅಪ್ರಮೇಯ ಇವರ ಅಣ್ಣ ಮತ್ತು ತಾಯಿ ಮೊದಲಾದ ಸಂಸಾರವೆಲ್ಲಾ ಹೊರಟಿತು. ಅಪ್ರಮೇಯನು ಹೋಗಿ ಅಲ್ಲಿ ಪ್ರಸ್ತದ ಮನೆಯ ಕೆಲಸಗಳನ್ನು ತಾನೇ ನಿಂತು ಮಾಡಿ ನಿರ್ವಹಿಸುತಾ ಬಂದವರಿಗೆ ಇಕ್ಕುತಾ ಬಡಿಸುತಾ ಸ್ವಲ್ಪವೂ ಕೋಪತಾಪಗಳಿಲ್ಲದೆ ಎಲ್ಲರಲ್ಲಿಯೂ ನಗುನಗುತಾ ಯಾರ ಮನಸ್ಸನ್ನೂ ನೋಯಿಸದೆ ನಡೆದುಕೊಳ್ಳುತಿದ್ದನು. ಬಂಧು ಜನರಿಗೂ ಬಂದು ಹೋದವರಿಗೂ ಇವ ಇದ್ದರೆ ಊರು, ಇಲ್ಲದಿದ್ದರೆ ಹಾಳು. ಎನ್ನುವ ಹಾಗೆ ಎತ್ತಿದವರ ಕೈ ಕೂಸಾಗಿದ್ದನು. ಉಪನಯನ ಬೆಳೆಯಿತು. ಬಂದ ನಂಟರೆಲ್ಲಾ ಅವರವರ ಊರಿಗೆ ಪ್ರಯಾಣ ಮಾಡಿದರು. ಸೋದರ ಮಾವನಿಗೆ ಇವನಲ್ಲಿ ಹೆಚ್ಚಾದ ಪ್ರೀತಿಯಿತ್ತು. ಇಲ್ಲಿ ಕೆಲವು ದಿವಸ ಇದ್ದು ಬರುತಾನೆ ಅಪ್ರಮೇಯ, ನಿಮ್ಮೂರಿಗೆ ಬಂದು ಮಾಡಬೇಕಾದ್ದೇನಿದೆ? ಎಂದು ಕೇಶವಯ್ಯ ಹೇಳಿದ್ದಕ್ಕೆ ಎಲ್ಲರೂ ಒಪ್ಪಿದರು.

ಮಳವಳ್ಳಿಯು ಪೂರ್ವದಿಂದಲೂ ಹೆಸರಾದ ಊರು. ಹೈದರಲ್ಲಿಯೂ ಇವನ ಮಗ ಟೀಪುಸುಲ್ತಾನನೂ ಆಗಾಗ್ಗೆ ಬಂದು ಇಲ್ಲಿ ನಿಲ್ಲುತಾ ಇದ್ದರು. ಸುಲ್ತಾನನು ಇದಕ್ಕೆ ಗುಲ್‌ಷನಾಬಾದ್ ಎಂದು ಹೆಸರಿಟ್ಟು ಪ್ರಬಲಕ್ಕೆ ತಂದನು. ಈ ಕಾರಣದಿಂದ ನವಾಬನ ಕಡೆ ಜನರಾದ ಅನೇಕ ತುರುಕರು ಇಲ್ಲಿ ನಿಂತರು. ಭಾರಿಯಾದ ಒಂದು ದಂಡಿನ ತುಕಡಿಯು ಈ ಊರಲ್ಲಿ ಠಾಣ್ಯ ಹಾಕಿಕೊಂಡು ಇರುತಿತ್ತು. ಶ್ರೀರಂಗಪಟ್ಟಣಕ್ಕೆ ಮುತ್ತಿಗೇ ಹಾಕಲು ಇಂಗ್ಲೀಷರು ತಮ್ಮ ದಂಡನ್ನು ಎಂದಿನಂತೆ ಪೂರ್ವ

ದಿಕ್ಕಿನಿಂದಲೂ ಉತ್ತರದಿಕ್ಕಿನಿಂದಲೂ ತರದೆ ದಕ್ಷಿಣದಕಡೆಯಿಂದ ಬಂದು ಮಳವಳ್ಳಿಯ ಮೇಲೆ ನುಗ್ಗಿದರು. ಈ ಸ್ಥಳದಲ್ಲಿ ಹೆಸರಾದ ಯುದ್ಧ ಸಹಿತ ನಡೆಯಿತು. ಇಲ್ಲಿ ಅನೇಕ ಜನ ಮುಸಲ್ಮಾನರು ನೆಲೆಯಾಗಿ ನಿಂತರು. ಈ ಊರಲ್ಲಿ ಅಪ್ರಮೇಯನು ಇರುತಾ ಜನರ ಪರಿಚಯವನ್ನು ಸಂಪಾದಿಸುತಾ ಬಂದನು. ಹೀಗೆಯೇ ಕೆಲವು ಮುಸಲ್ಮಾನರ ಸಂಗವೂ ದೊರೆಯಿತು. ಇವನ ಆಶೆ ಪೂರ್ತಿಯಾಗುವುದಕ್ಕೆ ಅನುಕೂಲವಾದ ಸಮಯ ಸಿಕ್ಕಿತು. ಉರ್ದು, ಫಾರಸಿ ಈ ಭಾಷೆಗಳನ್ನು ರಹಸ್ಯವಾಗಿ ಓದಲು ಆರಂಭವಾಯಿತು. ಇವನ ಬುದ್ಧಿಗೆ ಯಾವ ವ್ಯಾಸಂಗವೂ ಕಷ್ಟವಾಗಿರಲಿಲ್ಲ. ಸ್ವಲ್ಪ ದಿವಸದಲ್ಲಿ ಇವನು ಈ ಭಾಷೆಗಳನ್ನು ಲಕ್ಷಣಯುಕ್ತವಾಗಿ ತಿಳಿದುಕೊಂಡದ್ದೂ ಅಲ್ಲದೆ ಆ ಭಾಷೆಗಳಲ್ಲಿರುವ ಅನೇಕ ಗ್ರಂಥಗಳನ್ನು ಓದಿದನು. ಅರಬ್ಬಿ ಪರಿಚಯವೂ ಆಯಿತು. ಇವನ ಪಾಂಡಿತ್ಯವನ್ನು ಆ ಪೂರ ಮೌಲ್ವಿಗಳು ಶ್ಲಾಘನೆ ಮಾಡುತಾ ಬಂದರು. ಕೆಲವು ಮುಸಲ್ಮಾನರು ಸಹಿತ ಹಲವು ಸಂಗತಿಗಳನ್ನು ಕುರಿತು ಇವನನ್ನು ಕೇಳಿ ತಿಳಿದುಕೊಂಡು ಹೋಗುತಿದ್ದರು. ಮುಸಲ್ಮಾನರಲ್ಲಿಯೂ ಮರಾಟೆಯವರಲ್ಲಿಯೂ ಇವನಿಗೆ ಬಳಕೆ ಹೆಚ್ಚಾಗಿತ್ತು. ಇವನು ಲಕ್ಷಣವಾಗಿ ಚಚು ತಪ್ಪದೆ ಆಡತಕ್ಕ ಮಾತನ್ನು ಕೇಳಿ ಮುಸಲ್ಮಾನರೆಲ್ಲಾ ಬಹಳ ಶ್ಲಾಘನೆ ಮಾಡುತಿದ್ದರು.

ಹೀಗಿರುವಲ್ಲಿ ಮೊಹರಂ ಹಬ್ಬ ಬಂತು. ಆ ದಿವಸಗಳಲ್ಲಿ ತುರುಕರು ತಮ್ಮ ಮಹಾ ಪುರುಷರುಗಳ ಚರಿತ್ರೆಯನ್ನು ಯೋಗ್ಯವಾದ ವಾಚಕರಿಂದ ಓದಿಸತಕ್ಕದ್ದೂ ಇತರ ಜನರೆಲ್ಲಾ ಬಂದು ಸೇರಿ ಕೇಳತಕ್ಕದ್ದೂ ವಾಡಿಕೆಯಾಗಿದೆ. ಈ ವಿಧವಾದ ಪುಣ್ಯಕಥಾಶ್ರವಣಕ್ಕೆ ಮಳವಳ್ಳಿ ಊರಲ್ಲಿ ಐದನೇ ಖಾನಿಂದ ಮೊದಲು ಮಾಡಿದರು. ಆ ಕಾಲದಲ್ಲಿ ಒಂದು ದಿವಸ ಇರ್ರಾ ದೇಶದಿಂದ ಬಂದಿರುವ ಒಬ್ಬ ಹೊಸ ಮೌಲ್ವಿಯು ಉರ್ದುವಿನಲ್ಲಿಯೂ

ಫಾರಸಿಯಲ್ಲಿಯೂ ಓದಿ ಪ್ರಸಂಗ ಮಾಡುತ್ತಾನೆಂತ ಪ್ರವಾದ ಹುಟ್ಟಿತು. ಇದನ್ನು ಕೇಳುವುದಕ್ಕೆ ಸುತ್ತುಮುತ್ತಿನ ಮುಸಲ್ಮಾನರೂ ಅಲ್ಲದೆ ಶ್ರೀರಂಗಪಟ್ಟಣ ಮೈಸೂರು ಈ ಪ್ರಾಂತದಿಂದಲೂ ಪಂಡಿತರಾದ ತುರುಕರು ಮಳವಳ್ಳಿಗೆ ಬಂದು ಜಮಾಯಿಸಿದರು. ಮಸೀತಿಯ ಹಜಾರದಲ್ಲಿ ಆ ರಾತ್ರೆ ವಿಶೇಷವಾಗಿ ದೀಪಗಳನ್ನು ಹತ್ತಿಸಿ ಪ್ರಕಾಶ ಮಾಡಿದರು. ದೊಡ್ಡ ಮುಸಲ್ಮಾನ್ ಸಭೆ ಅದರ ಜೊತೆಗೆ ಗಣ್ಯವಾದ ಕೆಲವು ಹಿಂದುಗಳೂ ಮತ್ತು ಸರ್ಕಾರದ ಉದ್ಯೋಗಸ್ಥರೂ ಈ ವಿಶಿಷ್ಟರೂ ಸೇರಿದರು. ತಲೆಗೆ ವಿಜಾತೀಯವಾಗಿ ಸುತ್ತಿದ ಹಸರು ಪೇಟಾ, ಮೈಗೆ ತೊಟ್ಟ ಅಚ್ಚ ಬಿಳುಪಿನ ನೀಮಾಜಾಮ, ಸೊಂಟಕ್ಕೆ ಅಳ್ಳಕವಾಗಿ ಕಟ್ಟಿ ಮುಂದುಗಡೆಗೆ ಕುಚ್ಚುಬಿಟ್ಟ ಕೆಂಪುವರ್ಣದ ದಟ್ಟಿ, ಮೀಸೆ ಸಹಾ ಬಾರದೇ ಇದ್ದ ಮುಖದ ಬಿಳಿ ಛಾಯ, ಇದಕ್ಕೆ ತಕ್ಕಂತೆ ಜನರ ಮನಸ್ಸನ್ನು ಬಲೇ ಬೀಸಿ ಎಳೆದಹಾಗೆ ಇದ್ದ ಹಸನ್ಮುಖ, ಅದಕ್ಕೆ ತಕ್ಕ ವಿನಯ ಸಂಪತ್ತು, ಇವುಗಳೆಲ್ಲಾ ಸಭೆಯವರ ಮನಸ್ಸನ್ನು ಆಕರ್ಷಣೆ ಮಾಡಿತು. ವಿಶೇಷವಾಗಿ ಸೇರಿದ್ದ ಸಭೆಗೆ ಇರಾನಿನ ಮೌಲ್ವಿಯು ಗಂಭೀರವಾಗಿ ಬಂದು ಸಲಾಂ ವಗೈರೆ ಮಾಡಿ ಮಧ್ಯಭಾಗದಲ್ಲಿ ಬೈಲಾಗಿ ಸ್ಥಳಬಿಟ್ಟಿದ್ದ ಕಡೆ ಅಗ್ರಾಸನದಲ್ಲಿ ಕೂತು ಫಾರ್ಸಿಯಲ್ಲಿಯೂ ತರುವಾಯ ಉರ್ದು ಭಾಷೆಯಲ್ಲಿಯೂ ಸ್ವಲ್ಪ ಪೀಠಿಕೆ ಹಾಕಿ ಮಾತನಾಡಿ, ತರುವಾಯ ಮುಖ್ಯವಾದ ಗ್ರಂಥವನ್ನು ನಾಲ್ಕು ಗಂಟೇ ಹೊತ್ತು ತಡೆಬಿಡೆ ಇಲ್ಲದೇ ಓದಿ ಮಧ್ಯೆ ಮಧ್ಯೆ ಕಷ್ಟವಾದ ಸಂಗತಿಗಳನ್ನು ವಿವರಿಸುತಾ ಕಡೆಗೆ ದೊಡ್ಡದಾಗಿ ಒಂದು ಉಪನ್ಯಾಸ ಮಾಡಿ ನಿಲ್ಲಿಸಿದನು. ಸಭೆಯಾದ ಸಭೆಯೆಲ್ಲಾ ವಾಕ್‌ಸ್ತಂಭಕ್ಕೆ ಮಂತ್ರಾ ಹಾಕಲ್ಪಟ್ಟ ಮೂರ್ತಿಗಳಾಗಿ ಕೂತಿದ್ದರು. ಕೊನೆಗೆ ಎಲ್ಲರೂ ಎದ್ದು ಮನೆಗೆ ಹಿಂತಿರುಗಿ ಹೋಗುತಿರುವಾಗ ಮುಸಲ್ಮಾನರು—ಈ ಮೌಲ್ವಿಗೆ ವಯಸ್ಸು ಚಿಕ್ಕದಾದರೂ ಪಾಂಡಿತ್ಯ ಬಹು ದೊಡ್ಡದಾಗಿದೆ.

ಇಂಥವರು ಈ ಸೀಮೆಗೆ ಬರುವುದು ಬಹಳ ಅಪೂರ್ವ. ಆ ವಾಗ್ಝರಿಯೋ ಆ ನಿರೂಪಣ ಸಾಮರ್ಥ್ಯವೋ ಆ ಉಚ್ಚಾರಣೆಯೋ ಆ ಶುದ್ಧವಾದ ಪ್ರಯೋಗಗಳೋ ಆ ಕಥೆಯ ತಾತ್ಪರ್ಯವೋ ಯಾವುದನ್ನು ಶ್ಲಾಘನೆ ಮಾಡೋಣ, ಯಾವುದನ್ನು ಬಿಡೋಣ! ಎಂದು ಕೊಂಡಾಡುತಾ ಮನೆಗಳಿಗೆ ತೆರಳಿದರು. ಅಲ್ಲಿಂದ ಹೊರಟ ಹಿಂದುಗಳು—ಯಾವ ಭಾಷೆಯಾದರೇನು? ಪಾಂಡಿತ್ಯ ಮುಖ್ಯವಾದ್ದು, ಭಾಷೆಯನ್ನರಿಯದ ಜನರಿಗೂ ಅರ್ಥವಾಗುವ ಹಾಗೆ ಹೇಳಿದನಲ್ಲಾ ! ಅದಲ್ಲವೆ ಅವನ ಶಕ್ತಿ ! ಎಂದು ಹೊಗಳುತಾ ಹೋದರು. ಹೀಗೆ ಎರಡು ಮೂರು ಕಚೇರಿಗಳಾದವು. ಒಂದಕ್ಕಿಂತ ಒಂದು ಚೆನ್ನಾಗಿತ್ತು.

ಕೆಲವು ದಿವಸ ಕಳೆದ ಮೇಲೆ ಸ್ವಲ್ಪ ಒಡಕು ಶಬ್ದ ಹುಟ್ಟಿತು. ಇರ್ರಾದೇಶದ ಮೌಲ್ವಿಯಾಗಿ ಬಂದು ಮೊಹರಂನಲ್ಲಿ ಉಪನ್ಯಾಸ ಮಾಡಿದ ಮೌಲ್ವಿಯು ಅಪ್ರಮೇಯನೆಂದು ಜನರು ಗುಸಗುಸ ಗುಟ್ಟುವುದಕ್ಕೆ ಮೊದಲಾಯಿತು. ಇವನನ್ನು ಕಂಡರೆ ಜನರಿಗೆ ವಿಶೇಷವಾದ ಗೌರವ ಹುಟ್ಟಿತು. ಗತ್ವಾಗತ್ವಾ ಈ ಸಮಾಚಾರವು ಕೇಶವ್ವೈಯ್ಯನ ಕಿವಿಗೂ ಬಿತ್ತು. ಅವನು ಒಂದು ದಿನ ಊಟಮಾಡುತಾ ಕೂತಿರುವಾಗ ಸೋದರಳಿಯನನ್ನು ಕುರಿತು ಇದು ನಿಜವೆ ಎಂದು ಕೇಳಿದನು. ಆಗ ಅಪ್ರಮೇಯನು ನಗುತಾ ಸುಮ್ಮನಿದ್ದನು.

ಕೇಶವ್ವೈಯ—ಕೇಳಿದ್ದಕ್ಕೆ ನೀನೇನೋ ನಗುತೀಯೆ, ಹಾಗಾದರೆ ಅದು ನಿಜವಾಗಿರಬೇಕು. ನೀನು ಫಾರಸಿಯನ್ನು ಓದಿದ್ದು ಯಾವಾಗ ಕಲಿತದ್ದು. ಯಾವಾಗ? ಗುಂಡಲಪೇಟೆಯಲ್ಲಿ ನಿನಗೆ ಯಾರು ಫಾರಸಿ ಹೇಳಿಕೊಡತಕ್ಕವರು ಸಿಕ್ಕಿದರು?

ಅಪ್ರಮೇಯ–ನಾನು ಈ ಊರಿಗೆ ಬಂದ ಮೇಲೆ ಕಲಿತುಕೊಂಡೆ

ಕೇಶವ—ಈ ಊರಿಗೆ ಬಂದ ತರುವಾಯ ಇಷ್ಟು ಜಾಗ್ರತೆಯಾಗಿ ಕಲಿತುಕೊಂಡೆಯ? ಇದು ಆಶ್ಚರ್ಯವಾಗಿದೆ. ರಾಜಭಾಷೆ

ಯಲ್ಲಿ ಇಂಥಾ ಪಾಂಡಿತ್ಯವನ್ನು ಸಂಪಾದಿಸಿದ್ದೇನೋ ಸರಿಯೆ. ಇರ್ರಾ ದೇಶದ ಮೌಲ್ವಿ ಎಂದು ಊರಿಗೆ ಊರೇ ಹತ್ತು ಬಾಯಲ್ಲಿ ಹೊಗಳುತಾ ಇವೆ, ಹೇಗಾದರೂ ಪ್ರಸಿದ್ಧಿಗೆ ಬರತಕ್ಕದ್ದು ಮುಖ್ಯ ಭಾವ ಇದ್ದರೆ ಎಷ್ಟೋ ಸಂತೋಷ ಪಡುತಾ ಇದ್ದೆ. ಆದರೆ ಆ ದಿವಸ ಮಸೀತಿಯಲ್ಲಿ ನೀನು ಮುಲ್ಲಾ ಶಾಸ್ತ್ರ ಓದುವುದನ್ನು ನೀನು ನನಗೆ ಮೊದಲು ತಿಳಿಸಲೇ ಇಲ್ಲ.

ಅಪ್ರ—ಆ ದಿವಸ ಸಾಯಂಕಾಲದಮೇಲೆ ಉಸ್ತಾದರು, ಸರಖಾಜಿ ಇನಾಮುದ್ದೀನ ಸಾಹೇಬರು, ಮೀರ್ ಮೀರಾರಫಿ ಸಾಹೇಬರು, ಸರ್ ಫೌಜುದಾರ ಗುಲಾಂ ಹುಸೇನ ಸಾಹೇಬರು ಈ ಮೊದಲಾದ ದೊಡ್ಡ ಮನುಷ್ಯರೆಲ್ಲಾ ಸೇರಿ ಬಹಳವಾಗಿ ಬಲವಂತ ಮಾಡಿದರು, ಮನೆಗೆ ಬಂದು ಹೇಳಿ ಬಿಟ್ಟು ಹೋಗುವ ತನಕ ಪುರಸತ್ತು ಕೊಡಲಿಲ್ಲ ಮೊದಲ ದಿವಸ ಎರಡನೇ ದಿವಸ ಮಜಮಾಕ್ಕೆ ಈ ಊರ ಬ್ರಾಹ್ಮಣರು ಅನೇಕರು ಬಂದಿದ್ದರು, ನೀನೂ ಬಂದಿದ್ದೆಯ ಮಾವೈಯ್ಯ?

ಕೇಶವ—ನಾನು ಬಂದಿದ್ದೆ. ಅದು ಹಾಗಿರಲಿ, ಈ ಹಾಳ ತುರುಕರ ಸಹವಾಸ ಕೆಟ್ಟದು. ಆ ದಿವಸ ಓದುವುದಕ್ಕೆ ನಿನ್ನನ್ನು ಬಲವಂತ ಮಾಡಿದಹಾಗೆ ಅವರ ಜಾತಿಗೆ ಸೇರಿಸಿಕೊಳ್ಳುವುದಕ್ಕೂ ಬಲವಂತ ಮಾಡಿದರೆ, ಆ ಮೇಲೆ ಗತಿಯೇನು? ನೀನು ಇಲ್ಲಿರಲಿ ಎಂದು ನಾನು ಇರಿಸಿಕೊಂಡಿದ್ದಕ್ಕೆ ಅಪಕೀರ್ತಿ ಬರುವಹಾಗಾಗುವುದಲ್ಲಾ.

ಅಪ್ರ—ನಾನು ಅವರ ಜಾತಿಗೆ ಸೇರುವುದು ಹಾಗಿರಲಿ, ಈ ಜನ್ಮಕ್ಕೆ ಬೇರೆ ಇಲ್ಲ. ನಾನು ಬೇಕಾದರೆ ಕೆಲವು ಮೌಲ್ವಿಗಳನ್ನು ಹಿಡಿದುಕೊಂಡು ಬಂದು ಮುದ್ರಧಾರಣೆ ಕೊಡಿಸಬಲ್ಲೆ. ಅಂದರೆ ನಮ್ಮ ಅಹೋಬಲ ಮಠದವರು ಮಾತ್ರ ಒಪ್ಪಬೇಕು.

ಕೇಶವ—ಅವರನ್ನು ನಮ್ಮ ಜಾತಿಗೆ ಸೇರಿಸಿಕೊಂಡರೇನು ನಾವು ಅವರ ಜಾತಿಗೆ ಸೇರಿಕೊಂಡರೇನು? ಹೇಗಾದರೂ ನಾವು

ಜಾತಿಕೆಟ್ಟ ಹಾಗಾಯಿತು.

ಅಪ್ರ—ನಾನೇನೋ ಮಾತಿಗೆ ಹೇಳಿದೆ. ಹಾಗೆಲ್ಲಾ ಈ ತುರು ಕರು ನನ್ನ ಹತ್ತರ ಬಾಲಾ ಅಲ್ಲಾಡಿಸುವುದಕ್ಕೆ ಮಾರ್ಗವಿಲ್ಲ.

ಕೇಶವ—ಹೇಗಾದರೂ ಆಗಲಿ ನೀನು ಜಾಗ್ರತೆಯಾಗಿರು, ಜಾಗ್ರತೆಯಾಗಿರು

ಹೀಗೆ ಸ್ವಲ್ಪ ದಿವಸ ಕಳೆದ ಮೇಲೆ ಇಂಥಾದ್ದೇ ಇನ್ನೊಂದು ಸಂಗತಿ ಜರುಗಿತು. ಅಪ್ರಮೇಯನ ಪಾಂಡಿತ್ಯವನ್ನು ಮಳವಳ್ಳಿ ಯಲ್ಲಿ ನೋಡಿಕೊಂಡುಹೋದ ಶ್ರೀರಂಗಪಟ್ಟಣದ ಮುಸಲ್ಮಾನರು ತಮ್ಮ ಊರಲ್ಲಿ ಇವನ ಪ್ರಶಂಸೆಯನ್ನು ವಿಶೇಷವಾಗಿ ಮಾಡಿ ಇವನ ಮತ ಇಂಥಾದ್ದೆಂದು ಅರಿಯದೆ ಈ ಮೌಲ್ವಿಯಿಂದ ತಮ್ಮ ಪಟ್ಟಣದಲ್ಲಿ ಇಂಥಾ ದೊಡ್ಡ ಮಜಮಾಸೇರಿಸಿ ಉಪನ್ಯಾಸ ಮಾಡಿಸಬೇಕೆಂದು ಪ್ರಯತ್ನಮಾಡಿದರು. ಈ ಮಧ್ಯೆ ಇವನು ಇರ್ರಾದೇಶದ ಮುಸಲ್ಮಾನನಲ್ಲ, ಬ್ರಾಹ್ಮಣ ಜಾತಿಯವನೆಂದು ಗೊತ್ತಾಯಿತು. ಆ ಕೂಡಲೆ ಅಪ್ರಮೇಯನ ವಿಷಯದಲ್ಲಿ ಗೌರವವು ಮತ್ತೂ ಹೆಚ್ಚಿತು. ಆಗ ಶ್ರೀರಂಗಪಟ್ಟಣ ಹೋಗಿ ಬಹಳ ದಿವಸವಾಗಿರಲಿಲ್ಲ. ಅನೇಕ ಸಾಹುಕಾರರೂ, ನವಾಬರೂ ಮಿರಾರ್ ಮಿರಾರಾಗಳೂ ಇನ್ನೂ ಆ ಊರಲ್ಲಿ ಹತಶೇಷವಾಗಿ ಹತ್ತಿ ಕೊಂಡಿದ್ದರು. ಅಪ್ರಮೇಯ ಅಲ್ಲಿಗೆ ಹೋಗಿ ಫಾರ್ಸಿಯಲ್ಲಿಯೂ ಹಿಂದುಸ್ಥಾನಿಯಲ್ಲಿಯೂ ಉಪನ್ಯಾಸಮಾಡಿ ಹಸೇ಼ ಹುಸೇ಼ನರ ಚರಿತ್ರೆಯನ್ನು ಬಹು ಲಕ್ಷಣವಾಗಿ ಅರ್ಥಕ್ಕೆ ಅನುಗುಣವಾದ ರಾಗದಲ್ಲಿ ಓದಿದನು. ಎಲ್ಲರ ಕಣ್ಣಿನಲ್ಲಿಯೂ ನೀರು ಬಂತು, ಇವನ ಪ್ರಖ್ಯಾತಿ ದಿನೇ ದಿನೇ ವೃದ್ಧಿಯಾಗುತಾ ಬಂತು. ಆ ಊರಲ್ಲಿ ಕೆಲವು ದಿವಸ ಇರಬೇಕೆಂದು ಇವನಿಗೆ ಬೇಕಾದ್ದನ್ನು ಕೊಟ್ಟು ಪಟ್ಟಣದಲ್ಲಿಯೇ ಇರಿಸಿಕೊಂಡರು.

೩ನೇ ಅಧ್ಯಾಯ

## ಹನುಮಂತರಾವ್ ರಣನವರೆ

ಪೂನೆಯ ಪೇಷ್ವೆ ಕಡೆ ದಂಡಿನ ಮರಾಟಿಯವರು ಎಲ್ಲಾ ಕಡೆಯಲ್ಲಿಯೂ ರಾಜ್ಯಗಳನ್ನು ಜೈಸುತಾ ಬಂದ ಹಾಗೆಯೇ ಮೈಸೂರ ಸೀಮೆಯಲ್ಲಿಯೂ ಹೆಚ್ಚಾದ ಪ್ರಾಂತಗಳನ್ನು ಹಿಡಿದು ಅಲ್ಲಲ್ಲಿ ಸಂಸಾರಮಾಡಿಕೊಂಡು ನೆಲೆಯಾಗಿ ನಿಲ್ಲುತಾ ಬಂದರು. ಇದೂ ಅಲ್ಲದೆ ಈ ಮರಾಟೆ ಅಧಿಕಾರಿಗಳ ಹಾವಳಿಯನ್ನು ಅಡಗಿಸಲು ಹೈದರಲ್ಲಿ ಟೇಪು ಸುಲ್ತಾನರಾದ ನವಾಬರುಗಳ ಆಳಿಕೆಯಲ್ಲಿ ಮರಾಟೆ ತುಕಡಿಗಳನ್ನೇ ವಿಶೇಷವಾಗಿ ಕಟ್ಟಿದರು. ಹೀಗೂ ಹಾಗೂ ಅನೇಕ ಕಾರಣಗಳಿಂದ ಮರಾಟೆ ಜನರು ಮೈಸೂರ ಸೀಮೆಯಲ್ಲಿ ಜವಾನಿ ಮುತ್ತು ಸಿಪಾಯಿ ಕೆಲಸದಿಂದ ದಿವಾನಗಿರಿ ದಂಡಿನ ಸರ್‌ಬಕ್ಷಗಿರಿ ಪದವಿಯವರೆಗೂ ವ್ಯಾಪಿಸಿದರು.

ಹನುಮಂತರಾವ್ ರಣನವರೆ ಎಂಬ ಒಬ್ಬ ಸವಾರನು ಬಾದಾಮಿ ಬಿಷ್ಟೋಪಂತರ ತುಕಡಿಯಲ್ಲಿದ್ದುಕೊಂಡು ಅನೇಕ ಮೋಹಿಂಗಳ ಸಂಗಡ ಹೋಗಿ ಒಂದೊಂದರಲ್ಲಿಯೂ ಖಾಡಾ ಖಾಡಿ ಲಡಾಯಿಮಾಡಿ ಬಹುಮಾನಗಳನ್ನು ಹೊಂದಿ ತುಕಡಿದಾರಪದವಿಗೆ ಬಂದಿದ್ದನು. ಈತನು ಸ್ವಂತವಾಗಿ ೨೫೦ ಖಾರ್ ಗೀರ್ ಇಟ್ಟುಕೊಂಡು ದೊಡ್ಡ ಸರದಾರನೆನ್ನಿಸಿಕೊಂಡಿದ್ದನು. ಇವನ ಪರಾಕ್ರಮದಲ್ಲಿಯೂ ಪ್ರಾಮಾಣಿಕತೆಯಲ್ಲಿಯೂ ಸ್ವಾಮಿ ಭಕ್ತಿಯಲ್ಲಿಯೂ ಬಿಷ್ಟೋಪಂತರಿಗೆ ವಿಶೇಷವಾದ ನಂಬಿಕೆ ಇತ್ತು.

ಟೇಪುಸುಲ್ತಾನನನ್ನು ಜೈಸಬೇಕೆಂದು ಅನೇಕ ಶತ್ರುಗಳು ಕಾದಿದ್ದರು. ಇವನ ಅವಿವೇಕದ ಕೆಲಸಗಳು ಮಿತ್ರರನ್ನು ಉದಾಸೀನರನ್ನಾಗಿಯೂ ಉದಾಸೀನರನ್ನು ಶತ್ರುಗಳನ್ನಾಗಿಯೂ ಮಾಡಿದ ಕಾರಣ, ಹೊರಗಿನ ಹಗೆಗಳ ಜೊತೆಗೆ ಒಳಗಿನ ಹಗೆ

ಗಳೂ ಸೇರಿ ಸಮಯವನ್ನು ನಿರೀಕ್ಷಣೆ ಮಾಡುತಿದ್ದರು. ಪರ ರಾಜ್ಯದವರು ದಂಡೆತ್ತಿ ಬರುವಾಗ ತಮ್ಮ ಭುಜಬಲ ಸೇನಾಬಲ ಗಳ ಮೇಲೆಯೇ ಎಲ್ಲಾ ನಂಬಿಕೆಯನ್ನೂ ಇಟ್ಟುಕೊಂಡಿರುವುದಿಲ್ಲ. ಭೇದೋಪಾಯದಿಂದ ಒಳಪಿತೂರಿ ಮಾಡಿ ಪಾಳ್ಯದಲ್ಲಿ ತುಳಿ ದಾಟವನ್ನುಂಟುಮಾಡುವುದೂ ಕೂಡ ಶತ್ರುಗಳನ್ನು ಗೆಲ್ಲುವುದಕ್ಕೆ ಒಂದು ಮಾರ್ಗವಾಗಿದೆ. ಕೊನೆ ಕೊನೆಗೆ ಇಂಥಾ ಪಿತೂರಿಗೆ ಟೀಪುಸುಲ್ತಾನನ ಬಳಿಯಲ್ಲಿದ್ದ ಕೆಲವು ಸರದಾರರು ಒಳಗಾದ ರೆಂದು ಬಲವಾದ ಸಂಶಯ ಹುಟ್ಟಿತು. ಇವರಲ್ಲಿ ರಾಬಜಿ ಮತಕ್ಕೆ ಸೇರಿದ್ದ ಮಿರ್‌ಮಹಮದ್ ಸಾದಕ್ ಎಂಬುವನೂ ಒಬ್ಬ ಪ್ರಮುಖನೆಂದು ಸಮಸ್ತರೂ ಸಂಶಯಪಡುತಿದ್ದರು.

ಹೀಗಿರುವಲ್ಲಿ ಶ್ರೀರಂಗಪಟ್ಟಣದ ಕೋಟೆಗೆ ಇಂಗ್ಲಿಷರು, ಹೈದರಾಬಾದಿನವರು, ಮರಾಟಿಯವರು ಈ ಮೂರು ಸೇನೆಯೂ ಕ್ರಿ. ಶ. ೧೭೯೯ ರಲ್ಲಿ ಮುತ್ತಿಗೆ ಹಾಕಿದರಷ್ಟೆ. ಆಗ ಶತ್ರುಗಳ ಏಟು ಬಲವಾಗಿ ಕೋಟೆ ಹೋಗುವಂತೆ ತೋರಿತು. ಆಗ ಸುಲ್ತಾ ನನು ಕೇವಲ ಸ್ವಾಮಿಕಾರ್ಯ ಧುರಂಧರನಾದ ತನ್ನ ಆಪ್ತಸೇನಾ ಪತಿ ಸೈಯದ್ ಗಫೂರ್‌ನನ್ನು ಕೋಟೆ ಅಲಂಗದ ಮೇಲಕ್ಕೆ ಕಳುಹಿಸಿದನು. ಈ ಸರದಾರನು ಫಿರಂಗಿಗಳನ್ನೂ ಗೋಲಂದಾಜು ಗಳನ್ನೂ ಹುರಿಮಾಡಿ ನಿಂತಕಡೆಯಲ್ಲಿ ನಿಲ್ಲದೆ ಬೇಕಾದ ಜಂಗೀ ಸಾಮಾನುಗಳನ್ನು ಒದಗಿಸುತಾ ಸೇನೆಯವರಿಗೆ ಧೈರ್ಯವನ್ನು ಹೇಳುತಾ ಬಂದನು. ಶತ್ರುಗಳಕಡೆ ಅನೇಕ ಜನ ಸತ್ತು ಹೋದರು. ಅವರಿಗೆ ಜಯವಾಗುವ ಸಂಭವವೇ ತೋರಿಬರಲಿಲ್ಲ. ಆಗ ಮಿರ್‌ಸಾದಕನು ತಾನೂ ಕೋಟೆಮೇಲೆ ಹತ್ತಿ ತಾನೂ ಶತ್ರುಗಳ ಮೇಲೆ ವಿಶೇಷವಾಗಿ ಕಾರ್ಯಭಾಗಗಳನ್ನು ನಡಿಸುವನಂತೆ ನಟಿಸುತಾ ಸೈಯದ್‌ಗಫೂರನ ಸಮೀಪಕ್ಕೆ ಹೋಗಿ ಅವನಿಗೆ ಇಲ್ಲದ ಉಪಚಾರವನ್ನು ಹೇಳುತಾ ಅವನಿಗೆ ಬಿಳೀ ಛತ್ರಿಯನ್ನು ಹಿಡಿಸಿದನು. ಈ ಸುಳುವನ್ನು ಕಂಡ ಹಗೆಗಳ ದಂಡಿನವರು ಗುರಿ

ಇಟ್ಟು ಜಂಬೂರೆ ಎಂಬ ಫಿರಂಗಿಯನ್ನು ಹೊಡೆದರು.

ಎತ್ತರವಾದ ಮೊಹರ್‌ಚಾಲ್ ಕಡೆಯಿಂದ ಆ ಗುಂಡು ಬಂದು ತಗಲಿ ಸೈಯದ್‌ಗಫೂರನನ್ನು ಕೊಂದಿತು. ಇದನ್ನು ಕಂಡು ಸೇನೆಯವರು ಹೆದರಿಬಿಟ್ಟರು. ಟೀಪುವಿನ ಭಾಗ್ಯದೇವತೆ ಮಡಿದಂತಾಯಿತು. ಆಗ ಸೈಯದ್‌ಗಫೂರನ ಸಮೀಪದಲ್ಲಿ ಹನುಮಂತರಾವ್ ರಣಸವರೇ ಎಂಬ ತುಕಡಿದಾರನು ಕತ್ತಿ ಹಿಡಿದುಕೊಂಡು ನಿಂತಿದ್ದನು.

ಪಟ್ಟಣವೇನೋ ಉಳಿಯಲಿಲ್ಲ. ಹಲ್ಲಾ ಹತ್ತಿ ಶತ್ರುಗಳು ಕೋಟೆಯೊಳಕ್ಕೆ ನುಗ್ಗಿದರು. ಈ ಜಗಳದಲ್ಲಿ ಟೀಪುವೂ ನುಗ್ಗಿ ಮಹಾ ಪರಾಕ್ರಮದಿಂದ ಕಡಿದಾಡುತಾ ಕದನದಲ್ಲಿ ಮಡಿದನಷ್ಟೆ. ಊರೆಲ್ಲಾ ಅನಾಯಕವಾಯಿತು. ಸೇನೆಯವರು ವಿಪರೀತವಾಗಿ ಹುಯಿಲನ್ನು ಮಾಡುತಾ ಊರನ್ನೆಲ್ಲಾ ಕೊಳ್ಳೇ ಹೊಡೆಯುತಾ ಸಿಕ್ಕಿದ ನಿರಪರಾಧಿಗಳನ್ನು ಕಡಿಯುತಾ ಬಂದರು. ಹುಯಿಲಿನಲ್ಲಿ ಹುಯಿಲು ಎಂದು ಮೀರಸಾದಕನು ಆ ದಿನ ರಾತ್ರಿಯೇ ಒಂಟೆಗಳ ಮೇಲೂ ಕುದುರೆಗಳ ಮೇಲೂ ಹಣವನ್ನೂ ಚಿನ್ನ ಬೆಳ್ಳೀ ಪದಾರ್ಥಗಳನ್ನೂ ಹೇರಿಕೊಂಡು ಶ್ರೀರಂಗಪಟ್ಟಣದ ಕೋಟೆಗೆ ಉತ್ತರಕಡೆ ಇರತಕ್ಕ ದಿಳ್ಳೀದರವಾಜ ಎಂಬ ಕೋಟೇ ಬಾಗಿಲಿನಿಂದ ಹೊರಟನು. ಯುದ್ಧಕ್ಕಾಗಿ ಹಾಕಿದ್ದ ಕೋಟೇಬಾಗಿಲು ಇನ್ನೂ ತೆಗೆದಿರಲಿಲ್ಲ. ತೆಗೆಯಬೇಡವೆಂದು ಹುಕ್ಕುಂ ಕೊಡತಕ್ಕ ಅಧಿಕಾರಿಯೇ ಇರಲಿಲ್ಲ. ಟೀಪುಸುಲ್ತಾನ ಸತ್ತುಹೋದನೆಂದು ಇನ್ನೂ ಜನರಲ್ಲೆಲ್ಲಾ ಗೊತ್ತಾಗಿ ಹರಡಿಕೊಂಡಿರಲಿಲ್ಲ. ಮೀರ್‌ಸಾದಕನು ಒಳಗಿನಿಂದ ಮೊದಲನೇ ಕೋಟೇಬಾಗಿಲಿಗೆ ಬಂದು ಅಲ್ಲಿದ್ದ ಪಹರೆಯವರನ್ನು ಹೆದರಿಸಿ ಬಾಗಿಲನ್ನು ತೆಗೆಯಿಸಿಕೊಂಡು ಎರಡನೇ ಬಾಗಿಲಿಗೆ ಹೋದನು. ಅಲ್ಲಿನ ಪಹರೇದವರೂ ಬಾಗಿಲನ್ನು ತೆಗೆದು ಇವನನ್ನು ಹೊರಕ್ಕೆ ಬಿಟ್ಟರು. ಮೂರನೇ ಬಾಗಿಲು ಸಿಕ್ಕಿತು. ಅಲ್ಲಿಯೂ ಬಾಗಿಲ ತೆಗೆ ಎಂದು ಗರ್ಜನೆ

ಮಾಡಿದನು. ಅದಕ್ಕೆ ಆ ಬಾಗಿಲಲ್ಲಿ ಪಹರೇ ಕೊಡುತ್ತಿದ್ದ ಒಬ್ಬ ರಾಜಪೂತ ಸಿಪಾಯಿಯು—ಸಾಹೇಬ್, ನಮ್ಮ ಹುದ್ದೆದಾರರ ಅಪ್ಪಣೆ ಇಲ್ಲದೆ ಯಾರು ಹೇಳಿದರೂ ಬಾಗಿಲನ್ನು ತೆಗೆಯುವುದಿಲ್ಲ, ಎಂದನು. ಅದಕ್ಕೆ ಮೀರ್‌ಸಾದಕನು ನಾನು ಹುಕ್ಕುಂ ಮಾಡುತೇನೆ, ಬಾಗಿಲ ಅಡ್ಡ ಮರವನ್ನು ತೆಗೆ, ಇಲ್ಲದೆ ತಕರಾರು ಮಾಡಿದರೆ ಖತಲ್ ಮಾಡಿಯೇನು ಎಂದು ಕುದುರೇ ಮೇಲಿನಿಂದ ಕೆಳಕ್ಕೆ ಧುಮ್ಮಿಕ್ಕಿ ಆ ಸಿಪಾಯಿಯ ಮೇಲೆ ಕತ್ತಿ ಎತ್ತಿದನು. ಆ ಕ್ಷಣದಲ್ಲಿಯೇ ಆ ಸಿಂಗನು ನನ್ನ ಮೇಲೆ ಕತ್ತೀ ಎತ್ತುತೀಯ? ನಮ್ಕ್ ಹರಾಂ, ನೀನು ಮಾಡಿದ ದ್ರೋಹಕ್ಕೆ ಹಿಡಿ ಶಿಕ್ಷೆಯನ್ನು ಎಂದು ತನ್ನ ಕೈಲಿದ್ದ ಬಿಚ್ಚುಕತ್ತಿಯಿಂದ ಮೀರ್‌ಸಾದಕನನ್ನು ಎರಡು ತುಂಡಾಗಿ ಸೀಳಿ ಕೆಳಕ್ಕೆ ಕೆಡವಿದನು. ಆ ಕ್ಷಣದಲ್ಲಿಯೇ ಅಲ್ಲಿದ್ದವರೆಲ್ಲಾ ಈ ಸಿಪಾಯಿಯನ್ನು ಹೊಗಳುತಾ ಕೆಳಗೆ ಬಿದ್ದ ಹೆಣದ ಮೇಲೆ ಕಾಲಿಟ್ಟು ತುಳಿದರು. ಮೀರ್‌ಸಾದಕನ ಜೊತೆಯಲ್ಲಿ ಬರುತ್ತಿದ್ದವರೂ ಸಹಿತ ದ್ರೋಹಿಯ ಹೆಣದ ಮೇಲೆ ಉಗುಳಿ ಹೊರಟು ಹೋದರು. ಅವನು ಸಂಗಡ ತಂದಿದ್ದ ಹಣಕಾಸು ಮೊದಲಾದ ಐಶ್ವರ್ಯವನ್ನೆಲ್ಲಾ ಅಲ್ಲಿದ್ದ ಸೇನೆಯವರೇ ದೋಚಿಕೊಂಡರು. ಅವನನ್ನು ಕೊಂದ ರಾಜಪೂತ ಸಿಪಾಯಿ ಮಾತ್ರ ತನ್ನ ಧೀರತ್ವಕ್ಕೆ ಲೋಪಬರುವುದೆಂದು ಇಂಥಾ ಅಲ್ಪ ಕೆಲಸಕ್ಕೆ ಹೋಗಲಿಲ್ಲ. ಒಬ್ಬ ಸಿಪಾಯಿಯ ಪರಾಕ್ರಮದಿಂದ ಆ ತುಕಡಿಯ ವೀರರಿಗೆ ದೊಡ್ಡ ಹೆಸರು ಬಂತು.

ಇಂಗ್ಲಿಷರು ರಾಜ್ಯವನ್ನು ತಮ್ಮ ಕೈಗೆ ತೆಗೆದುಕೊಂಡು ಖಿಲವಾಗಿದ್ದ ಮೈಸೂರು ರಾಜ್ಯವನ್ನು ಸ್ಥಾಪನೆಮಾಡಿ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರಿಗೆ ಪಟ್ಟವನ್ನು ಕಟ್ಟಿ ಮೈಸೂರಿನಲ್ಲಿ ನಿಲ್ಲಿಸಿ ಟಿಪ್ಪುಸುಲ್ತಾನನಿಗೆ ಮುಖ್ಯಮಂತ್ರಿಯಾಗಿದ್ದ ಪೂರ್ಣಯ್ಯನನ್ನು ದಿವಾನಗಿರಿಗೆ ನೇಮಿಸಿ ದೊರೆಯ ಬಾಲ್ಯಾವಸ್ಥೆಯಲ್ಲಿ ಸರ್ವಾಧಿಕಾರವನ್ನೂ ರಾಜರ ಪೋಷಣೆಯನ್ನೂ ಆ ಅಧಿಕಾರಿಗೆ

ಒಪ್ಪಿಸಿದರು. ಮತ್ತು ಈ ಮೈಸೂರ ದೊರೆಯು ಯುದ್ಧದ ವೆಚ್ಚ ಕ್ಕಾಗಿ ಒಂದು ಕೋಟಿ ವರಹವನ್ನು ಕೊಡಬೇಕೆಂತಲೂ ಈ ಹಣ ಸಂದಾಯವಾಗುವವರೆಗೆ ವರುಷ ಒಂದಕ್ಕೆ ಒಂಭತ್ತು ಲಕ್ಷ ವರ ಹವನ್ನು ಬಡ್ಡಿಗಾಗಿ ಕೊಡಬೇಕೆಂತಲೂ ನಾಲ್ಕು ಸಾವಿರ ಕುದುರೆ ಎಂಟು ಸಾವಿರ ಬಾರು ಇದಕ್ಕೆ ತಕ್ಕ ಪರಿಕರ ಮೊದಲಾದ್ದನು ಇಟ್ಟು ಕೊಂಡು ಅಗತ್ಯ ಬಿದ್ದಾಗ ಕಂಪನಿಯವರಿಗೆ ಯುದ್ಧದಲ್ಲಿ ಸಹಾಯಮಾಡಬೇಕೆಂತಲೂ ಮೈಸೂರ ಸಂಸ್ಥಾನದವರಿಗೂ ಇಂಗ್ಲೀಷರಿಗೂ ಕರಾರು ನಡೆಯಿತು. ಈ ಒಪ್ಪಂದದ ಪ್ರಕಾರ ಇಟ್ಟ ಸೇನೆಯಲ್ಲಿ ಖಾನೆ ಜಿಹಾ ಖಾ಼ ಎಂಬಾತನನ್ನು ಬಾರ್ ಕಚೇರಿ ಬಕ್ಷಿಯಾಗಿಯೂ ಬಾದಾಮಿ ಬಿಷ್ಟೋಪಂತರನ್ನು ಸವಾರ ಕಚೇರಿ ಬಕ್ಷಿಯಾಗಿಯೂ ನೇಮಿಸಿದ್ದರು. ಈ ಖಾನೆ ಜಿಹಾಖಾ ನನು ಮೊದಲು ದೇಶಸ್ಥ ಬ್ರಾಹ್ಮಣನಾಗಿದ್ದು ಟಿಪ್ಪೂಸುಲ್ತಾನನ್ನ ಹಿಂಸೆಯಿಂದ ಮುಸಲ್ಮಾ಼ ಮತವನ್ನು ಅವಲಂಬಿಸಿದ್ದನು. ಈ ರೀತಿಯಲ್ಲಿ ಬಾರ್ ಇಲಾಖೆ ಸವಾರ್ ಇಲಾಖೆ ಎರಡೂ ಮರಾಟಿ ಸರದಾರರ ಕೈಯ್ಯಲ್ಲಿಯೇ ಇದ್ದಂತಾಯಿತು. ಬಿಷ್ಟೋ ಪಂತರು ಮೊದಲಿನಿಂದಲೂ ತಮ್ಮ ತುಕಡಿಗೆ ಸೇರಿದ್ದು ಒಳ್ಳೇ ಪರಾಕ್ರಮ ಶಾಲಿ ಎನ್ನಿಸಿಕೊಂಡಿದ್ದ ಹನುಮಂತರಾವ್ ರಣನವರೆಗೆ ಒಂದು ಉತ್ತಮವಾದ ಸೇನಾಧಿಕಾರವನ್ನು ಕೊಟ್ಟು ತಮ್ಮ ಸಮೀಪ ದಲ್ಲಿಯೇ ಇರಿಸಿಕೊಂಡರು.

ದೊಡ್ಡ ನವಾಬನೆಂದು ಜನರು ಸಾಧಾರವಾಗಿ ಕರೆಯುತಾ ಇದ್ದ ಹೈದರಲ್ಲಿ, ಟಿಪ್ಪೂಸುಲ್ತಾನ ಇವರುಗಳ ದಿವಸದಲ್ಲಿ ಧೊಂಡ್ಯ ವಾಹಗ್ ಎಂಬ ಒಬ್ಬ ಮರಾಟಿ ಪುಂಡು ಪಾಳೆಯಗಾರನು ಮೈಸೂರ ರಾಜ್ಯದಲ್ಲಿ ಆಗಾಗ್ಯೆ ಅನೇಕ ಗಡಿಗಳನ್ನೂ ದುರ್ಗಗ ಳನ್ನೂ ಹಿಡಿಯುವುದು, ತಾಲ್ಲೋಕುಗಳನ್ನು ಲೂಟಿಮಾಡುವುದು, ಜನರನ್ನು ಹಿಂಸಿಸುವುದು, ಹೀಗೆಲ್ಲಾ ಕಿರುಕುಳವನ್ನು ಮಾಡುತಾ ಇದ್ದನು. ದೊಡ್ಡ ನವಾಬನು ಬಹು ಶ್ರಮಪಟ್ಟು ಇವನನ್ನು ಗೆದ್ದು

ಶ್ರೀರಂಗಪಟ್ಟಣಕ್ಕೆ ಕರೆತಂದು ವಿಶೇಷ ಬಿಗಿಯಾದ ಸೆರೆಮನೆಯಲ್ಲಿಟ್ಟನು. ಪಟ್ಟಣವನ್ನು ಇಂಗ್ಲಿಷರು ವಶಮಾಡಿಕೊಂಡ ಕೂಡಲೆ, ಟಿಪ್ಪೂಸುಲ್ತಾನನ ಸೆರೆಯಲ್ಲಿದ್ದವರೆಲ್ಲರನ್ನೂ ಬಿಟ್ಟು ಬಿಟ್ಟರು. ಈ ಧೊಂಡ್ಯವಾಹಗ್‍ನನ್ನು ಬಿಡಕೂಡದು ಸೆರೆಯಲ್ಲಿಯೇ ಇಟ್ಟರಬೇಕು ಎಂತಲೂ ಬಿಟ್ಟು ಬಿಟ್ಟರೆ ಅತ್ಯಂತ ತುಂಟನಾದ ಇವನ ದೆಶೆಯಿಂದ ಬಹಳ ತೊಂದರೆ ಸಂಭವಿಸುವುನೆಂತಲೂ ಇಂಗ್ಲಿಷ್ ಸರದಾರರಾದ ಜನರಲ್ ಹಾರಿಸ್ ಜನರಲ್ ವೆಲ್ಲೆಸ್ಲಿ ಇವರುಗಳಿಗೆ ಬಿಷ್ಟೋಪಂತನು ಒತ್ತಿ ಹೇಳಿದನು. ಸರ್ವ ಸೇನಾಪತಿಯಾದ ಜನರಲ್ ಹಾರಿಸ್ ಸಾಹೇಬನು ಒಪ್ಪದೆ ಧೊಂಡ್ಯನಿಗೆ ಬಿಡುಗಡೆ ಮಾಡಿಸಿದನು. ಇಷ್ಟಾದರೆ ಸಾಕೆಂದು ಕಾದುಕೊಂಡಿದ್ದ ಧೊಂಡ್ಯನು ಪಟ್ಟಣದಿಂದ ಹೊರಟು ಅಲ್ಲಲ್ಲಿ ಕೆಲವು ಜನರನ್ನೂ ಕುದುರೆಗಳನ್ನೂ ಸೇರಿಸಿಕೊಂಡು ಸಿಕ್ಕಿದ ಕಡೆ ಲೂಟಿ ಮಾಡುತಾ ಊರುಗಳನ್ನು ಹಿಡಿದುಕೊಳ್ಳುತಾ ಸೇನೆಯನ್ನು ಬಲಕಾಯಿಸಿಕೊಂಡು ಇಂಗ್ಲಿಷರಿಗೂ ಮೈಸೂರು ದೇಶದವರಿಗೂ ಬಹಳ ತೊಂದರೆಯನ್ನು ಉಂಟುಮಾಡುತಾ ಬಂದನು. ಇವನನ್ನು ಗೆಲ್ಲುವುದಕ್ಕೆ ಜನರಲ್ ವೆಲ್ಲೆಸ್ಲಿ ಎಂಬ ದೊಡ್ಡ ಸರದಾರನೇ ಹೊರಡಬೇಕಾಯಿತು. ಇದಕ್ಕೆ ಮೈಸೂರ ಸೇನೆಯೂ ಹೋಗಿತ್ತು. ಈ ತುಕ್ಕಡಿಯಲ್ಲಿ ಸೇರಿದ್ದ ಹನುಮಂತರಾವ್ ರಣನವರೆಯು ಬಹಳ ಪರಾಕ್ರಮವನ್ನು ತೋರಿಸಿದನು. ಇದರಿಂದ ಇವನು ಇಂಗ್ಲಿಷ್ ಸೇನಾಪತಿಗಳ ಗಣನೆಗೆ ಬಂದನು.

ತರುವಾಯ ಇಂಗ್ಲೀಷರಿಗೂ ಮರಾಟೆಯುವರಿಗೂ ೧೮೦೩ ರಿಂದ ೧೮೦೫ರ ವರೆಗೆ ನಡೆದ ಯುದ್ಧಗಳಿಗೆ ಇಂಗ್ಲಿಷರ ಸಹಾಯಕ್ಕಾಗಿ ಮೈಸೂರು ಸೇನೆಯನ್ನು ಕಳುಹಿಸಿದರು. ಈ ದಂಡಿಗೆ ಬಕ್ಷಿ ಬಿಷ್ಟೋಪಂತರ ಮಗ ಬಕ್ಷಿ ರಾಮರಾಯರೂ ಅವರ ಮೊಮ್ಮಗ ಬಕ್ಷಿ ಭೀಮರಾಯರೂ ಸಹಾ ಸೇನಾಪತಿಗಳಾಗಿ ಕಳುಹಿಸಲ್ಪಟ್ಟಿದ್ದರು. ಇದೂ ಅಲ್ಲದೆ ೧೮೧೭-೧೮ರಲ್ಲಿಯೂ ೧೮೧೭ ರಿಂದ

೧೮೧೮ ರವರೆಗೂ ನಡೆದ ಮರಾಟಿ ಯುದ್ಧಗಳಲ್ಲಿ ಅವೇ ಬಕ್ಷಿ ರಾಮರಾವ್ ಭೀಮರಾವ್ ಇವರುಗಳಿಲ್ಲದಿದ್ದರೆ ಪರಾಕ್ರಮದಲ್ಲಿ ನಮ್ಮ ದೇಶೀಯರು ಯಾರಿಗೂ ಕಡಮೆ ಇಲ್ಲವೆಂಬ ಅಭಿಪ್ರಾಯವು ಇಂಗ್ಲಿಷಿನವರಿಗೆ ಬರುತಿರಲಿಲ್ಲ. ಆಗ ನಡೆದ ಯಾವ ಕದನದಲ್ಲಿಯೂ ಮೈಸೂರಿನವರೇ ಮುಂದಾಳು ಎಂಬ ಮಾತು ಜನಜನಿತವಾಯಿತು. ಅಯ್ಯೋ ಮೈಸೂರ ದಂಡು ಬಂತಲ್ಲಾ ಎಂದು ಶತ್ರುಗಳು ತಲ್ಲಣಿಸುವ ಹಾಗೆ ಇವರ ಪರಾಕ್ರಮ ಹೆಸರುಗೊಂಡಿತು. ಸಾಹಸಕರವಾದ ಯಾವ ಕಾರ್ಯ ನಡೆದರೂ ಮೈಸೂರ ದಂಡಿನವರು ಮಾಡಿರಬೇಕೆಂದು ಮಂದಿ ಆಡಿಕೊಳ್ಳುತಿತ್ತು. ಈ ಯುದ್ಧಗಳಿಗೆಲ್ಲಾ ಹನುಮಂತರಾಯನು ಹೋಗಿ ಯಶೋವಂತನಾದನು.

ಸ್ನ ೧೮೧೮ ರಲ್ಲಿ ನಡೆದ ಕೋರಿಗಾವ್ ಯುದ್ಧವಾಗಿ ಇಂಗ್ಲಿಷರಿಗೆ ಜಯವಾದ ಕೂಡಲೆ ಪೇಶ್ವೆಬಾಜೀರಾಯನು ಪೂನೆಯನ್ನು ಬಿಟ್ಟು ತಕ್ಕಷ್ಟು ಪರಿವಾರವೊಡನೆ ಓಡಿಹೋದನು. ಇವನನ್ನು ಕೈಸೆರೆ ಹಿಡಿಯಬೇಕೆಂದು ಇಂಗ್ಲಿಷರು ಬಹಳವಾಗಿ ಪ್ರಯತ್ನ ಮಾಡಿದರು. ಇದು ಸಾಗಲಿಲ್ಲ. ಈ ಕೆಲಸಕ್ಕೆ ಮೈಸೂರು ದಂಡು ಕೂಡಲೆ ಹೋಗಲೆಂದು ಇಂಗ್ಲಿಷ್ ಸೇನಾಪತಿಯು ಅಪ್ಪಣೆ ಕಳುಹಿಸಿದನು ಆಗ ಬೆಳಗಿನ ಜಾವವಾಗಿತ್ತು. ಬಕ್ಷೀರು ರಾಮರಾಯರು ಭೀಮರಾಯರು ಈ ಉಭಯ ವೀರರೂ ಸ್ನಾನವನ್ನು ಮಾಡಿ ಆಹ್ನಿಕವಾದ ಕೂಡಲೆ ಪರಮಭಕ್ತಿಯಿಂದ ಶಿವಪೂಜೆಯನ್ನು ಮಾಡುತಾ ನಿರ್ಮಲವಾದ ಒಂದು ಸ್ಥಳದಲ್ಲಿ ಕೂತಿದ್ದರು. ಸವಾರನೊಬ್ಬ ಬಂದು ಜನರಲ್ ಸಾಹೇಬರ ಅಪ್ಪಣೆಯನ್ನು ತಿಳಿಸಿದನು. ಉಭಯ ಬಕ್ಷಿಗಳೂ ಮಾತನಾಡಲಿಲ್ಲ. ಧ್ಯಾನಾಸಕ್ತರಾಗಿ ಕೂತಿದ್ದರು. ಪುನಃ ಇನ್ನೊಬ್ಬ ಬಂದ, ಮತ್ತೊಬ್ಬ ಬಂದ, ಮಗದೊಬ್ಬ ಬಂದ. ಏನಾದರೂ ಏನಮಾಡಿದರೂ, ಎಷ್ಟು ತಗಾದೆ ಮಾಡಿ ಅರಿಕೇ

ಮಾಡುವುದಕ್ಕೆ ಬಂದರೂ ಮಾತನಾಡಲಿಲ್ಲ. ಈ ವರ್ತಮಾನ ವನ್ನು ಜನರಲ್ ಸಾಹೇಬನು ಕೇಳಿ ಕೈಯಲ್ಲಿ ಹರಿಯದವರಿಗೆ ಬರುವಂಥಾ ಹುಚ್ಚು ಕೋಪದಿಂದ—ಮೈಸೂರ ದಂಡಿನವರು ಬರೀ ಗುಂಪು, ಈ ದೊಂಬಿಯವರಿಂದ ಯಾವ ಸಹಾಯವೂ ಇಲ್ಲ, ಇವರಿಂದ ಸೋಲಾಗುವ ಹೊತ್ತು ಬಂತು ಎಂದು ಒಂದ ಲ್ಲದೆ ಎರಡು ಸಾರಿ ಮೇಲ್ಪಟ್ಟವರಿಗೆ ಬರೆದುಕಳುಹಿಸಿದನು. ಸೂರ್ಯೋದಯಕ್ಕೆ ಸರಿಯಾಗಿ ಆಹ್ನಿಕ ಪೂರೈಸಿತು. ಜನರಲ್ ಸಾಹೇಬನು ಅತಿಕೋಪದಿಂದ ಕೂಗಾಡಿಕೊಂಡ ಸಂಗತಿಯೂ ಕಿವಿಗೆ ಬಿತ್ತು. ಆಗ ಉಭಯರಾಯರೂ ದಿಂಡುಡಿಗೆಯನ್ನುಟ್ಟು ವೀರರವೇಷವನ್ನು ತಾಳಿದರು. ಇವರ ಕುದುರೆಗಳು ಸಿದ್ಧ ವಾದವು. ಬಕ್ಷಿಯವರಿಬ್ಬರೂ ನಿಂತು "ಮೈಸೂರ ದಂಡಿನ ಹೆಸರುವಾಸಿಯನ್ನು ಉಳಿಸುವುದಕ್ಕೆ ಯಾರು ಬರುತೀರಿ? ಧಣಿಯ ಉಪ್ಪಿಗೆ ಪ್ರಾಣವನ್ನು ಕೊಡಲು ಸಿದ್ಧರಾಗಿರುವ ವೀರರು ಯಾರಿದೀರಿ ?" ಎಂದು ಕೂಗಿದರು. ಆಗ ತಮ್ಮ ಪಾದ ದಲ್ಲಿ ಪ್ರಾಣವನ್ನು ಒಪ್ಪಿಸಲು ಕಾದುಕೊಂಡಿವೇವೆ ಎಂದು ಇಪ್ಪತ್ತು ಕುದುರೆಯವರು ಬಂದು ನಿಂತು ಸಲಾಂಮಾಡಿದರು. ಈ ಕುದುರೆಯವರೂ ಇಬ್ಬರೂ ಬಕ್ಷಿಯವರೂ ತಂತಮ್ಮ ಅಶ್ವ ಗಳನ್ನೇರಿ ಹೊರಟರು. ಈ ವೀರರುಗಳಲ್ಲಿ ಹನುಮಂತರಾವ್ ರಣನವರೆಯೂ ಒಬ್ಬನಾಗಿದ್ದನು.

ಅಸ್ತ್ರ ಶಸ್ತ್ರಗಳ ಕೈಗೆ ಸಿಕ್ಕದ ಹಾಗೆ ಓಡಿ ಹೋದ ಪೇಶ್ವೆ ಬಾಜಿರಾಯನು ಮನುಷ್ಯಮಾತ್ರದವರ ಪ್ರವೇಶಕ್ಕೆ ಆಸ್ಪದವಿಲ್ಲ ದಂಥಾ ಘೋರವಾದ ಅರಣ್ಯವನ್ನು ಹೊಕ್ಕು ಯಾರೂ ಕಾಣದ ಹಾಗೆ ಒಂದು ಕಡೆ ಇಳಿದು ಕೊಂಡಿದ್ದನು. ಅಲ್ಲಿ ಒಂದು ಸಣ್ಣ ನದಿ ಹರಿಯುತಿತ್ತು. ಒಂದು ದಿನ ಸೂರ್ಯೋದಯವಾದ ಮೇಲೆ ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು ಶಿವ ಪೂಜೆಯನ್ನು ಮಾಡುತಾ ಕೂತಿದ್ದನು. ಈತನ ಅಂಗರಕ್ಷಣೆಗಾಗಿ ಸಮೀಪದಲ್ಲಿ

ಪಾಯದಳವೂ ಆದರ ಆಚೆ ಕುದುರೆಗಳೂ ದೊರೆಯನ್ನು ಸುತ್ತಿ ಕೊಂಡು ಕತ್ತಿ ಹಿರಿದುಕೊಂಡು ಸಮಯ ಬಂದರೆ ಯುದ್ಧಕ್ಕೆ ತಯಾರಾಗಿ ನಿಂತಿದ್ದರು. ಬಾಜೀರಾಯನು ಕೈಯಲ್ಲಿ ಪಾರ್ಥಿವ ಲಿಂಗವನ್ನು ಇಟ್ಟು ಪರಮಭಕ್ತಿಯಿಂದ ಶಿವಪೂಜೆಯನ್ನು ಒಂದೇ ಮನಸ್ಸಿನಲ್ಲಿ ಮಾಡುತಾ ಕೂತಿದ್ದನು. ಆಗ ಬಕ್ಷಿ ಭೀಮ ರಾಯರೂ ಅವರ ಸಂಗಡ ಹೊರಟಿದ್ದ ಕುದುರೆಯವರೂ ಭರ್‍ರನೆ ರಭಸದಿಂದ ಬಂದು, ಶ್ರೀಮಂತರನ್ನು ಸುತ್ತಿಕೊಂಡು ನಿಂತಿದ್ದ ಸೇನೆಯೊಳಕ್ಕೆ ನುಗ್ಗಿ ಎರಡು ಕೈಗಳಲ್ಲಿಯೂ ಪಟಾಕತ್ತಿಗಳನ್ನು ಹಿಡಿದು ಎರಡು ಕಡೆಯಲ್ಲಿಯೂ ಛಿದ್ರಕಡಿತವನ್ನು ಕಡಿಯುತಾ ಹೋದರು. ಅಕಸ್ಮಾತ್ತಾಗಿ ಪೂನೆದಂಡಿನವರೆಲ್ಲರಿಗೂ ಬಿಜ್ಜು ಬಡಿದಂತಾಯಿತು, ಬಾಜೀರಾಯನ ಅಂಗರಕ್ಷಣೆಯ ಸೇನೆ ಎಲ್ಲಾ ಈ ಏಟನ್ನು ತಡೆಯಲಾರದೆ ಓಡಿಹೋಯಿತು, ಯಾರಿಗೂ ದಿಕ್ಕು ತೋರದ ಹಾಗಾಯಿತು. ಬಕ್ಷಿ ರಾಮರಾಯರೂ ಇನ್ನಿ ಬ್ಬರೂ ಸಹಾ ಥಟ್ಟನೆ ಹಿಂದೆಯೇ ಹೋಗಿ ಬಾಜೀರಾಯನನ್ನು ತಬ್ಬಿಕೊಂಡರು. ಆ ಕೂಡಲೆ ಭೀಮರಾಯರ ಇತರ ದಂಡೂ ಬಂದುಬಿಟ್ಟಿತು. ಅಮೋಘವಾದ ಶಿವಪೂಜೆಯ ಸಾಮಾನುಗಳು ಒಂದನ್ನೂ ಬಿಡದಹಾಗೆ ಕಟ್ಟಿಸಿ ಬಕ್ಷಿ ಭೀಮರಾಯನು ತನ್ನ ವಶಕ್ಕೆ ತೆಗೆದುಕೊಂಡನು, ಉಳಿದವೆಲ್ಲವನ್ನೂ ದಂಡಿನವರು ತೆಗೆದುಕೊಂಡರು. ಹೀಗೆ ಕೈಸೆರೆ ಹಿಡಿದು ಶ್ರೀಮಂತ ಬಾಜೀ ರಾಯನನ್ನು ಮೈಸೂರ ದಂಡಿನವರು ಕರೆದು ತರುತಾ ಇರುವ ಸಂಗತಿಯು, ಯಾವ ಇಂಗ್ಲಿಷ್ ಸರದಾರನು ಈ ಮೈಸೂರ ಬಕ್ಷಿಗಳನ್ನು ರೋಷದಿಂದ ಅಲೆಗಳೆದು ಬರೆದಿದ್ದನೋ ಅಂಥವನಿಗೆ ತಿಳಿಯಿತು. ಆ ಕೂಡಲೆ ಆ ಸೇನಾಪತಿಯು ಪೇಶ್ವೆಯನ್ನೂ ಆ ಉಭಯರಾಯರನ್ನೂ ಎದುರುಗೊಂಡು ವಿಶೇಷ ಮರ್ಯಾದೆ ಯನ್ನು ಮಾಡಿ ತರುವಾಯ ಮೈಸೂರ ದಂಡಿನವರ ಮೇಲೆ ತಾನು ಮೊದಲು ಬರೆದಿದ್ದ ಆಕ್ಷೇಪಣೆಗೆ ಬದಲಾಗಿ ಒಂದಕ್ಕೆ

ಹತ್ತರಷ್ಟು ಹೆಚ್ಚಾಗಿ ಸ್ತೋತ್ರಮಾಡಿ ಮೇಲ್ಪಟ್ಟ ಅಧಿಕಾರಿಗಳಿಗೆ ಬರೆದುಕಳುಹಿಸಿದನು. ಈ ಸಾಹಸ ಕಾರ್ಯವನ್ನು ನೆರವೇರಿಸುವುದರಲ್ಲಿ ಹನುಮಂತರಾವ್ ರಣನವರೆಯೂ ಒಬ್ಬ ಪ್ರಮುಖನಾಗಿದ್ದನು. ಈತನಿಗೆ ಅನೇಕ ಜನ ಇಂಗ್ಲಿಷ್ ಸರದಾರರುಗಳ ಪರಿಚಯವೂ ಸ್ನೇಹವೂ ದೊರೆಯಿತು, ಇವನು ಯಾವ ಮಾತನು ಹೇಳಿವಾಗ್ಯೂ ಅವರು ನಡಿಸುತಿದ್ದರು.

ಈ ಮರಾಟ ಯುದ್ಧಗಳು ನಡೆಯುತಿರುವಾಗ ಇನ್ನೊಂದು ಹೆಚ್ಚುಗಟ್ಟಲೆ ಜರುಗಿತು.

## ೪ ನೇ ಅಧ್ಯಾಯ

## ದುರ್ಗಾಬಾಯಿ

ಈ ರಣರಂಗದಲ್ಲಿ ಒಂದುಕಡೆ ಯುದ್ಧವು ನಡೆಯುತಾ ಇರುವಾಗ ಒಂದು ಕೊನೆಯಲ್ಲಿ ಒಬ್ಬ ಮುಸಲ್ಮಾನ ಸವಾರನು ಇನ್ನೊಬ್ಬ ಸವಾರನನ್ನು ಕುದುರೇ ಮೇಲಿನಿಂದ ತಳ್ಳಿ ಕೆಡವಿಕೊಂಡು ಕೆಳಗೆ ಬಿದ್ದಿದ್ದವನ ಬಟ್ಟೆಯನ್ನು ಕೀಳುತಾ ಕೂಗಿದರೆ ಕತ್ತರಿಸಿ ಬಿಡುತೇನೆಂದು ಕತ್ತಿಯನ್ನು ಝಳಪಿಸುತಾ ಇರುವಾಗ "ಅಯ್ಯೋ ನನ್ನ ಮಾನವನ್ನು ಕಾಪಾಡುವ ಪುಣ್ಯಾತ್ಮರಿಲ್ಲವೇ?" ಎಂದು ಕೂಗು ಹೊರಟಿತು. ಅದೇ ರಂಗದಲ್ಲಿದ್ದ ಹನುಮಂತರಾವ್ ರಣನವರೆಯ ಕಿವಿಗೆ ಈ ಶಬ್ದ ಬಿತ್ತು. ಆಗ ಹನುಮಂತರಾಯನು—ಇದೇನೋ ಧ್ವನಿ ವಿಲಕ್ಷಣವಾಗಿದೆ, ಇದನ್ನು ಪರೀಕ್ಷಿಸಬೇಕೆಂದು, ಆ ಕಡೆಗೆ ಕುದುರೆಯನ್ನು ಹಾರಿಸಿಕೊಂಡು ಹೋಗಿ ಆ ತುರುಕನ ಆಟೋಪವನ್ನು ನೋಡಿ, ಕೆಳಕ್ಕೆ ಬಿದ್ದವರನ್ನು ಹೊಡೆಯಲು ಯತ್ನಿಸುವ ಹೇಡಿ ಇರಬಾರದೆಂದು ಕುದುರೆಯನ್ನು ಓಡಿಸಿಕೊಂಡು ಹೋಗ ಹೋಗುತಲೇ ತನ್ನ ಕೈ ಈಟಿಯಿಂದ ಆ ತುರುಕನನ್ನು ತಿವಿದು ಕೊಂದು ತನ್ನ ಕುದುರೆಯನ್ನು

ಮುಂದಕ್ಕೆ ಬಿಟ್ಟನು. ಆಕ್ಷಣದಲ್ಲಿಯೇ ಕೆಳಗೆ ಬಿದ್ದಿದ್ದ ಸಿಪಾಯಿಯು ತನ್ನ ಕುದುರೆಯನ್ನು ಹತ್ತಿಕೊಂಡು ಮೌನವಾಗಿ ಅವನ ಹಿಂದೆಯೇ ಹೊರಡಲು, ಆ ಸಿಪಾಯಿಯನ್ನು ನೋಡಿ ಅನುಮಾನ ಹುಟ್ಟಿತು. ಕಣ್ಣನ್ನು ನೋಡುವದೆ ಗಂಡಸಿನ ಕಣ್ಣಿಗಿಂತಲೂ ಹೆಚ್ಚು ಹೊಳಪು ಇತ್ತು, ಗಡ್ಡ ಮೀಸೆಗಳಿಲ್ಲದ ಕೆನ್ನೆಯನ್ನು ನೋಡುವದೆ ಗಂಡಸಿನ ಕೆನ್ನೆಗಿಂತ ಅತಿಮೃದುವಾಗಿಯೂ ನುಣುಪಾಗಿಯೂ ಕಾಣಿಸುತಿತ್ತು. ಹಣೆಯನ್ನು ನೋಡುವದೆ ಆ ಮುಂಗುರುಳ ಸುಳಿಗೂದಲೂ ಹುಬ್ಬಿನ ರೋಮರಾಜಿಯೂ ಗಂಡು ಮುಖದಲ್ಲಿರುವುದಕ್ಕಿಂತಲೂ ಅತಿಯಾದ ಸೌಂದರ್ಯವನ್ನು ಬೀರುತಿದ್ದವು. ಆ ಮೂಗನ್ನೂ ಹಲ್ಲು ಬಾಯಿದೆರೆಯನ್ನೂ ನೋಡುವದೆ ಗಂಡಸಿನ ಲಕ್ಷಣಕ್ಕೆ ಮೀರಿತ್ತು. ಆ ಮೈಸೊಬಗನ್ನು ನೋಡುವದೆ ಬಿಳಿದಾಳೇ ಹೂವಿನ ಬಣ್ಣವು ಗಂಡಸಿನ ಮೈ ಬಣ್ಣಕ್ಕೆ ಅತ್ಯಧಿಕವಾಗಿತ್ತು. ಆಗ

ಹನುಮಂತರಾವ್- ನೀನು ಯಾರೈಯ್ಯ?

ಸಿಪಾಯಿ—ಸ್ವಾಮಿ ತಮ್ಮ ಪಾದಸೇವಕ.

ಹನುಮ—ನಿಮ್ಮೂರು ಯಾವುದು? ಯಾರಕಡೆ ಸೇನೆಗೆ ಸೇರಿದವನು?

ಸಿಪಾಯಿ—ನಮ್ಮೂರು ಸಾತಾರೆ. ನಮ್ಮ ತಂದೆಯ ಹೆಸರು ಮೀರ್ ಮೀರಾ ಯಶವಂತ ಭಾಸ್ಕರ ಭೌಸಲೆ. ಇವರು ಒಬ್ಬ ದೊಡ್ಡ ಸರದಾರರಾಗಿದಾರೆ. ಈ ಯುದ್ಧಕ್ಕೆ ನಮ್ಮ ದೊರೆಯ ದಂಡಿನಲ್ಲಿ ಸೇರಿ ನಾನೂ ನಮ್ಮಣ್ಣನೂ ಬಂದೆವು, ಹೀಗೆಯೇ ಮೊದಲು ನಾಲ್ಕೈದು ಕದನಗಳಿಗೆ ಹೋಗಿದ್ದೆ. ಅನೇಕರನ್ನು ಕೊಂದು ಜಯವನ್ನು ಹೊಂದಿದೆ. ಈಗ ಈ ಪಾಪಿಯಾದ ತುರುಕನು ಹಿಂದೆಯೇ ಬಂದು ಪವನ ತಪ್ಪುವಂತೆ ಮಾಡಿ ಮಾನವನ್ನು ಕಳೆಯಲು ಯತ್ನಮಾಡಿದ, ತಾವು ನನ್ನನ್ನು ಕಾಪಾಡಿದಿರಿ.

ಹನುಮಂತ—ಯುದ್ಧ ಮುಗಿಯಿತು. ಶತ್ರುಗಳು ಸೋತು ಓಡಿಹೋದರು. ನಿಮ್ಮ ಕಡೆಯವರೇ ಜಯ ಹೊಂದಿದರು. ನೀನೂ ಬಹಳ ಆಯಾಸಪಟ್ಟಿದ್ದೀಯೆ, ವಿಶೇಷವಾಗಿ ಪೆಟ್ಟಾಗಿದೆ, ಮೈಯಿಂದ ಅಲ್ಲಲ್ಲಿ ರಕ್ತ ಹರಿಯುತಿದೆ. ನಿಮ್ಮೂರಿಗೆ ಹೋಗಿ ಗಾಯವನ್ನು ವಾಸಿಮಾಡಿಕೊ, ನಾನು ಹೇಳಿದಹಾಗೆ ಕೇಳು.

ಸಿಪಾಯಿ—ಮಹಾ ಶೂರರಾದ ತಾವು ಹೇಳಿದಂತೆ ಯಾವಾಗಲೂ ಕೇಳುವ ಸ್ಥಿತಿ ನನಗೆ ಬಂದರೆ ಸಾಕು ಎಂದು ನಾನು ಕೋರುತೇನೆ. ಯುದ್ಧದಲ್ಲಿ ತಾವೂ ಆಯಾಸ ಪಟ್ಟಿದೀರಿ. ನಮ್ಮೂರವರೆಗೆ ತಾವೂ ದಯಮಾಡಬೇಕು. ತಮ್ಮ ಪಾದವನ್ನು ನಾನು ಬಿಡುವುದಿಲ್ಲ.

ಹನುಮ—ನಮ್ಮ ಸೇನೆಯನ್ನು ಬಿಟ್ಟು ನಾನು ಬರುವುದು ಸಮನಲ್ಲ.

ಸಿಪಾಯಿ—ಹೆಚ್ಚಾಗಿ ಅರಿಕೇಮಾಡಲು ನನಗೆ ಸುಸ್ತಾಗುತಿದೆ. ತಾವು ದಯಮಾಡದಿದ್ದರೆ ಶೂರರಾದ ತಮ್ಮ ಕೈ ಹಿಡಿದ ನಾನು, ಶೂರರ ಹೊಟ್ಟೆಯಲ್ಲಿ ಹುಟ್ಟಿದ ನಾನು, ಆತ್ಮಹತ್ಯಕ್ಕೆ ಅಂಜುವುದಿಲ್ಲ.

ಹನುಮ—(ತನ್ನ ಮನಸ್ಸಿನಲ್ಲಿ ಈ ಸೌಂದರ್ಯವು ಪುರುಷರಲ್ಲಿ ಅಸಹಜವಾದ್ದು. "ತಾವು ಹೇಳಿದಂತೆ ಯಾವಾಗಲೂ ಕೇಳುವ ಸ್ಥಿತಿ ನನಗೆ ಬಂದರೆ ಸಾಕು." "ತಮ್ಮ ಪಾದವನ್ನು ನಾನು ಬಿಡುವುದಿಲ್ಲ. ಶೂರರಾದ ತಮ್ಮ ಕೈಹಿಡಿದ ನಾನು" ಹೀಗೆ ಈ ಸಿಪಾಯಿ ಆಡಿದ ಮಾತಿಗೆ ಅರ್ಥವೇನೋ ಸಂದಿಗ್ಧವಾಗಿ ತೋರುತಿದೆ. ಇದು ಸ್ತ್ರೀ ವ್ಯಕ್ತಿಯೇ ಪುರುಷ ವ್ಯಕ್ತಿಯೇ? ಇದನ್ನು ಪರೀಕ್ಷಿಸಿ ಬಿಡೋಣ, ಹೀಗೆಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡು) ನಿನ್ನ ಇಷ್ಟವಿದ್ದಂತೆ ಆಗಲಿ. ನಿನ್ನನ್ನು ನಿಮ್ಮೂರಿಗೆ ಕರೆದುಕೊಂಡು ಹೋಗಿ ಬಿಟ್ಟು ನಾನು

ಹಿಂತಿರುಗಿ ಸಾಯಂಕಾಲದೊಳಗಾಗಿ ಬರುತ್ತೇನೆ, ನಡೆ.

ಹೀಗೆ ಮಾತನಾಡಿಕೊಂಡು ಇವರಿಬ್ಬರೂ ಸಾತಾರೆಗೆ ಹೊರಟರು, ಕ್ಷಣಮಾತ್ರದಲ್ಲಿ ಕುದುರೆಗಳು ಆ ಊರನ್ನು ತಲಪಿದವು. ಆ ಸಿಪಾಯಿಯು ತಮ್ಮ ತಂದೇ ಮನೆಯ ಬಳಿಗೆ ಹೋಗಿ ಕುದುರೆಯನ್ನು ನಿಲ್ಲಿಸಿ, "ಬಾಬಾ" ಎಂದು ಕೂಗಿದನು. ಅದುವರೆಗೆ ಈ ಸಿಪಾಯಿಯು ಅಣ್ಣನಾದ ಮಿರಾಜ್ ಮಿರಾ ಮಾರ್ತಾಂಡ ಯಶವಂತ ಭೌಸಲೆಯು ರಣರಂಗದಲ್ಲಿ ವಿಶೇಷವಾದ ಪರಾಕ್ರಮವನ್ನು ತೋರಿಸಿ ಕದನ ಕಡೆಗಂಡ ಮೇಲೆ ಮನೆಗೆ ಬಂದನು. ವೃದ್ಧರಾದ ತಂದೆ ತಾಯಿಗಳು ಸಂತೋಷಪಟ್ಟರು. ದುರ್ಗ ಬರಲಿಲ್ಲವಲ್ಲಾ ಎಂದು ಕಣ್ಣಿನಲ್ಲಿ ನೀರ ಹಾಕುತಾ ಇರುವ ಸಮಯಕ್ಕೆ "ಬಾಬಾ" ಎಂಬ ಧ್ವನಿ ಕೇಳಿ ಮಿರಾಜ್ ಮಿರಾ ಯಶವಂತನಿಗೆ ಹೋದ ಪ್ರಾಣವೇ ಬಂದ ಹಾಗಾಯಿತು. ಆ ಕ್ಷಣದಲ್ಲಿಯೇ ಆ ವೃದ್ಧನು ಬಾಗಿಲಿಗೆ ಹೋಗಿ ನೋಡಲು ತನ್ನ ಪಂಚಪ್ರಾಣವೂ ಬಂದಂತಾಯಿತು. ನಮ್ಮಪ್ಪಾ, ಬದುಕಿ ಬಂದೆಯ? ಎಂದು ಕುದುರೇ ಬಳಿಗೆ ಹೋಗಿ ಯಶವಂತನು ನಿಂತ ಕೂಡಲೆ, ಆ ಸಿಪಾಯಿಯು ಕುದುರೆಯಿಂದ ಇಳಿದು ತಂದೆಯನ್ನು ಕುರಿತು—ಈ ವೀರರು ಯುದ್ಧದಲ್ಲಿ ನನ್ನ ಪ್ರಾಣವನ್ನು ಉಳಿಸಿದರು. ಅವರಿಗೆ ಮರ್ಯಾದೆಮಾಡಿ ಒಳಕ್ಕೆ ಕರೆದುಕೊಂಡು ನಡೆಯಿರಿ ಎಂದು ಹೇಳಿದನು. ಮನೆಯವರೆಲ್ಲರೂ ಬಂದು ತಕ್ಕ ಮರ್ಯಾದೆಯಿಂದ ಆ ಇಬ್ಬರು ಸವಾರರನ್ನೂ ಒಳಕ್ಕೆ ಕರೆದುಕೊಂಡು ಹೋಗಿ ಬೇಕಾದ ಉಪಚಾರಗಳನ್ನು ಮಾಡಿದರು. ಸಾಯಂಕಾಲದ ಸಮಯವಾಯಿತು. ಆಗ ಹನುಮಂತರಾಯನು ತನ್ನ ದಂಡಿನ ಪಾಳಯಕ್ಕೆ ಹೊರಡಲು ಯತ್ನ ಮಾಡಿದನು. ತಾವು ಮೂರು ದಿವಸವಾದರೂ ಇದ್ದು ಹೋಗಬೇಕು ಎಂದು ಮನೆಯವರೆಲ್ಲರೂ ಬಹುವಾಗಿ ಬಲವಂತಮಾಡಿದರು. ಅದಕ್ಕೆ ಹನುಮಂತರಾಯನು—ನಾನು ನಮ್ಮ ಸೇನಾ

ಪತಿಗಳಿಗೆ ಹೇಳಿ ಬರಲಿಲ್ಲ. ಮುಂದೆ ನಾವು ಮಾಡಬೇಕಾದ ರಾಜಕಾರ್ಯ ಬಹಳವಾಗಿದೆ. ಖಂಡಿತವಾಗಿ ನಾನು ಹೊರಡಲೇ ಬೇಕು. ದುರ್ಗನೆಂದು ತಾವು ಕರೆದು ಆದರಿಸಿದ ಆ ಶೂರನು ತಮ್ಮ ಪುತ್ರನೆಂದು ಈಗ ತಿಳಿಯಿತು. ಈತನು ಕದನದಲ್ಲಿ ಅಧಿಕವಾದ ಪರಾಕ್ರಮವನ್ನು ತೋರಿಸಿದ್ದನ್ನು ಅನೇಕ ವೇಳೆ ನಾನು ಕಣ್ಣಾರ ಕಂಡಿದೇನೆ. ಆತನನ್ನು ತಮ್ಮಲ್ಲಿ ತಂದು ಒಪ್ಪಿಸಿದೇನೆ. ತಮ್ಮ ಮಹಾಪದವಿಯನ್ನೂ ಅದಕ್ಕೆ ತಕ್ಕ ಹಾಗಿರುವ ಸರ್ವೋತ್ತಮವಾದ ಗುಣಗಳನ್ನೂ ನೋಡಿ ಬಹು ಸಂತೋಷವಾಯಿತು. ನಾನು ನಮ್ಮ ದಂಡಿಗೆ ಹೋಗಲು ಅಪ್ಪಣೇ ಕೊಡಿಸಬೇಕು, ಎಂದು ವೃದ್ಧನಾದ ಯಶವಂತರಾವ್ ಭೌಸಲೆಯನ್ನು ಬೇಡಿಕೊಂಡನು. ಆಗ ಮುದುಕನಾದ ಯಶವಂತ ಭೌಸಲೆಯು ಎದ್ದು ನಿಂತುಕೊಂಡು ಹನುಮಂತರಾಯನ ಕೈಯನ್ನು ಹಿಡಿದುಕೊಂಡು ಹೇಳಿದ್ದೇನೆಂದರೆ—

ಯಶವಂತ—ಸ್ವಾಮಿ, ತಮ್ಮೊಡನೆ ಮಾತನಾಡಬೇಕಾದ ವಿಷಯ ಎಷ್ಟೋ ಇದೆ, ಅದಕ್ಕೆಲ್ಲಾ ಈಗ ಸಮಯವಿಲ್ಲ. ತಮ್ಮ ದರ್ಶನವಾದ್ದು ಅರ್ಜುನನ ದರ್ಶನವೆಂದು ತಿಳಿದಿದೇನೆ; ನನ್ನ ಮಗಳನ್ನು ತಮಗೆ ಧಾರೆ ಎರೆದುಕೊಡಬೇಕೆಂದಿದೇನೆ, ತಾವು ಪಾಣಿಗ್ರಹಣಮಾಡಿ ನಮ್ಮ ವಂಶವನ್ನು ಉದ್ಧಾರಮಾಡಬೇಕೆಂದು ಬೇಡಿಕೊಳ್ಳುತೇನೆ.

ಹನುಮ—ಸ್ವಾಮಿ ನನ್ನ ಕುಲಶೀಲಗಳನ್ನು ವಿಚಾರಿಸದೆ ಹೀಗೆ ಅಪ್ಪಣೇಕೊಡಿಸಿದ್ದು ಆಶ್ಚರ್ಯವಾಗಿದೆ. ಇದೂ ಅಲ್ಲದೆ ನನಗೆ ವಯಸ್ಸಾಯಿತು, ಇನ್ನು ಮದುವೆ ಎಂದರೆ ಹಾಸ್ಯಕ್ಕೆ ಕಾರಣವಾಗುವುದು.

ಯಶವಂತ—ಕುಲ ಶೀಲಗಳನ್ನು ವಿಚಾರಿಸದೆ ಹೆಣ್ಣನ್ನು ಕೊಡುವ ವಂಶ ನಮ್ಮದಲ್ಲ. ಅಂಥಾ ಹೀನವಾದ ಸ್ಥಿತಿ ನಮಗೆ ಬರಲಿಲ್ಲ. ರಾಜಾಧಿರಾಜ ಪದವಿಗೆ ಕಲಶ ಪ್ರಾಯರಾಗಿದ್ದ

ಮಹಾಪೇಶ್ವೆಗಳ ಕಾಲವೆಲ್ಲಾ ಆಗಿ ಹೋಯಿತು. ಈ ಹೇಡಿ ಯಾದ ಬಾಜೀರಾಯನ ದರಬಾರು ಇನ್ನೂ ಜರುಗುತಾ ಇದ್ದರೆ ಅಂಥಾ ಹೀನವಾದ ಸ್ಥಿತಿ ನಮ್ಮಗಳಿಗೆ ಬರುತಾ ಇತ್ತೋ ಹೇಗೋ ಹೇಳಲಾರೆ. ಆತನನ್ನು ಕೈಸೆರೆ ಹಿಡಿದು ಮುಂದೆ ಬರುತಿದ್ದ ಆಪತ್ತನ್ನು ತಪ್ಪಿಸಿದ ತಮ್ಮ ಪರಾಕ್ರಮವನ್ನು ಕುರಿತೂ ತಮ್ಮ ಸದ್ವಂಶವನ್ನು ಕುರಿತೂ ನನ್ನ ಮಗ ಮಾರ್ತಾಂಡನು ಬಹು ಶ್ಲಾಘನೆಮಾಡಿ ಹೇಳಿದಾನೆ. ನಮ್ಮ ಕುಲಶೀಲ ಇಂಥಾದ್ದೆಂದು ನಾನು ಹೇಳಬೇಕಾದ್ದಿಲ್ಲ. ನಾವು ಭೌಸಲೆಯವರು. ಉಳಿದ ಅಂಶಗಳನ್ನು ತಾವೇ ಬಲ್ಲಿರಿ. ನನ್ನ ಮಗಳ ಯೋಗ್ಯತೆಯನ್ನೂ ತಾವೇ ಬಲ್ಲಿರಿ. ಅವಳಿಗೆ ರಣರಂಗದಲ್ಲಿ ಉಂಟಾಗಿದ್ದ ಅಪಾಯ ವನ್ನು ತಪ್ಪಿಸಿ ಪ್ರಾಣದಾನವನ್ನು ಮಾಡಿದಿರಿ. ಅವಳು ಇತಃಪರ ನಿಮ್ಮವಳೇ ಆಗಿದಾಳೆ. ಬೇರೇ ಮಾತೇ ಇಲ್ಲ.

ಹನುಮಂತ—ಪುನಃ ತಮಗೆ ಅರಿಕೆ ಮಾಡುತೇನೆ. ಹುಟ್ಟಿದ ಹನ್ನೆರಡು ವರುಷದಿಂದ ಸೇನೆಯ ಚಾಕರಿಯಲ್ಲಿದ್ದು ದೇಹವೆಲ್ಲಾ ಕುಗ್ಗಿ ಹೋಯಿತು. ನನಗೆ ಮದುವೆಯಾಗಿತ್ತು. ಶ್ರೀರಂಗ ಪಟ್ಟಣವನ್ನು ಕುಂಪಣಿಯವರು ತೆಗೆದುಕೊಂಡ ಗಾಗಳದಲ್ಲಿ ನಮ್ಮ ತಾಯಿ, ನನ್ನ ಹೆಂಡತಿ, ಸತ್ತು ಹೋದರು. ಗಂಜಾಮುದಲ್ಲಿದ್ದ ನನ್ನ ಮನೆಯು ಫಿರಂಗಿ ಗುಂಡು ತಗಲಿ ಬಿದ್ದು ನಾಶವಾಯಿತು. ನಾನು ಒಂಟಿಯಾಗಿ ನಿಂತಿದೇನೆ. ಧಣಿಯ ಉಪ್ಪತಿಂದುದಕ್ಕೆ ಸಮಯದಲ್ಲಿ ಎರಡು ಬಗೆಯ ಬಾರದೆಂದು ಚಾಕರಿ ಮಾಡುತಿ ದೇನೆ, ನಾನು ಬಂದ ಕಾರ್ಯ ಮುಗಿಯಿತು. ನಮ್ಮ ಸೇನೆಯಿಂದ ಕುಂಪಣಿಯವರಿಗೆ ಜಯವಾಯಿತು. ಇನ್ನು ಎಂಟು ದಿವಸಕ್ಕೆ ನಮ್ಮ ತುಕಡಿಗಳೆಲ್ಲಾ ಮೈಸೂರಿಗೆ ಹೊರಡುತ್ತೆ. ನಾನು ಊರ ಸೇರಿದ ತರುವಾಯ ಯಾರಾದರೂ ಸಿದ್ಧ ಪುರುಷರ ಸೇವೆಯನ್ನು ಮಾಡುತಾ ದೇಹತ್ಯಾಗವನ್ನು ಮಾಡಬೇಕೆಂದು ನಿಶ್ಚಯಮಾಡಿ ಕೊಂಡಿದೇನೆ.

ಮಾರ್ತಾಂಡ—ಸ್ವಾಮಿ, ನಮ್ಮ ಯಜಮಾನರು ಹೇಳಿದ್ದ ಕ್ಕಿಂತಲೂ ಹೆಚ್ಚಾಗಿ ನಾನು ಅರಿಕೇ ಮಾಡಲಾರೆ. ತಾವು ನನ್ನ ತಂಗಿಗೆ ಪ್ರಾಣದಾನವನ್ನು ಮಾಡಿದಿರಿ, ತಮ್ಮನ್ನು ಬಿಟ್ಟರೆ ಮತ್ತೆ ಯಾರನ್ನೂ ತಾನು ಮುಖ ದರ್ಶನಮಾಡುವುದಿಲ್ಲವೆಂದು ಅವಳು ನಿಷ್ಕರ್ಷೆಮಾಡಿಕೊಂಡಿದ್ದಾಳೆ. ತಾವು ಮಾಡಿರುವ ಶಪಥದಿಂದ ನನ್ನ ತಂಗಿಯ ಬಾಳೆಲ್ಲಾ ಕೆಟ್ಟುಹೋಗುವುದು, ನಮ್ಮ ಮನುವೆ ಯನ್ನು ತಾವು ಮನಸ್ಕರಿಸಬೇಕು.

"ಪ್ರಾಣದಾನವನ್ನು ಮಾಡಿದಿರಿ" ಎಂಬ ಮಾತು ಹನುಮಂತ ರಾಯನ ಕಿವಿಗೆ ಬಿದ್ದ ಕೂಡಲೆ—ಈತನ ತಂಗಿ ಯಾರು? ಅವಳ ಪ್ರಾಣವನ್ನು ನಾನು ಉಳಿಸಿದ್ದು ಯಾವಾಗ? ರಣರಂಗದಲ್ಲಿ ನನಗೆ ಹುಟ್ಟಿದ ಅ. ಮಾನಕ್ಕೆ ಈತನ ಮಾತು ಅಧಿಕವಾದ ಆಧಾರವನ್ನುಂಟುಮಾಡುತಿದೆಯಲ್ಲಾ! ಕೊನೆಗೂ ಇದನ್ನು ಪರೀಕ್ಷಿಸಬೇಕೆಂದು ಯೋಚಿಸಿ,

ಹನುಮಂತ—ನಿಮ್ಮ ತಂಗಿಯ ಪ್ರಾಣದಾನವನ್ನು ನಾನು ಮಾಡಿದೆನೆಂಬ ಮಾತು ಕೇವಲ ಆಶ್ಚರ್ಯವನ್ನುಂಟುಮಾಡುತಿದೆ. ಅದು ನಿಜವಾಗಿದ್ದರೆ ನಿಮ್ಮ ತಂಗಿಯ ಪ್ರಾಣವನ್ನು ನಾನು ಉಳಿಸಿದೆನಾದ ಕಾರಣ ಆಕೆಯು ನನಗೆ ಮಗಳಾದಳು. ಮಗ ಳನ್ನು ವಿವಾಹವಾಗಲೆ? ಇದು ಸರಿಯಲ್ಲ.

ಯಶವಂತ—ಸಮಯ ಬಿದ್ದಾಗ ತಮ್ಮ ರಾಣಿವಾಸದ ಮುಸು ಕನ್ನು ತೆರೆದು ರಾಜಪುತ್ರರ ಸ್ತ್ರೀ ಜನರು ಶತ್ರುಗಳೊಡನೆ ಘೋರ ವಾದ ಯುದ್ಧವನ್ನು ಮಾಡಿದಾರೆಂದು ತಾವು ಬಲ್ಲಿರಿ. ಆದರೆ ಈ ದೇಶದ ಮರಾಟೆಯವರಾದ ನಮ್ಮಲ್ಲಿ ಯುದ್ಧದ ಪ್ರಮೇಯ ಬಂದಾಗೆಲ್ಲಾ ನಮ್ಮ ಸ್ತ್ರೀ ಜನರು ವೀರ ಕಾಶೆಯನ್ನು ಕಟ್ಟಿ ಕದನಕ್ಕೆ ಸಿದ್ಧರಾಗುತಾರೆ. ಅನೇಕ ಸಮಯಗಳಲ್ಲಿ ಸೇನೆಯು ಹಿಮ್ಮೆಟ್ಟಿ ಶತ್ರುಗಳ ಕೈ ಬಲವಾಗುತಾ ಸೋಲುವ ಸಂದರ್ಭ ಬಂದಾಗ, ಮರಾಟೀ ಹೆಂಗಸರು ವಿಪರೀತವಾದ ರೋಷದಿಂದ

ಹಗೆಗಳ ಸೇನೆಯೊಳಕ್ಕೆ ಧೈರ್ಯದಿಂದ ಕುದುರೆಗಳನ್ನು ಓಡಿಸುತಾ ನುಗ್ಗಿ ಶತ್ರುಗಳನ್ನು ಕಡಿದು ಜಯಲಕ್ಷ್ಮಿಯ ಮುಂದಲೆಯನ್ನು ಹಿಡಿದು ಎಳೆದು ತಂದಿದಾರೆ. ಅನೇಕವೇಳೆ ಇದನ್ನು ನಾನು ಕಣ್ಣಾರ ನೋಡಿದೇನೆ. ಇದೇ ಪ್ರಕಾರ ನನ್ನ ಮಗಳಾದ ದುರ್ಗಾ ಬಾಯಿಯೂ ಇವಳ ಅಣ್ಣನಾದ ಮಾರ್ತಾಂಡನೊಡನೆ ಸೇರಿ ಎಷ್ಟೋ ಯುದ್ಧಗಳಿಗೆ ಹೋಗಿ ಜಯವನ್ನು ಹೊಂದಿ ಬಂದಿ ದಾಳೆ, ಯುದ್ಧರಂಗದಲ್ಲಿ ಅವಳನ್ನು ಕಾಪಾಡಿ ತಾವೇ ಇಲ್ಲಿಗೆ ಕರೆದು ತಂದು ಬಿಟ್ಟಿರಿ. ತಮ್ಮೊಡನೆ ವಂಚನೆ ಯಾಕೆ? "ದುರ್ಗ, ಈ ವೀರರ ದರ್ಶನವನ್ನು ಮಾಡಮ್ಮ."

ಹೀಗೆ ತಂದೆ ಕೂಗಿದ್ದನ್ನು ಕೇಳಿ ಆ ಕ್ಷಣದಲ್ಲಿಯೇ ದುರ್ಗಾ ಬಾಯಿಯು ಈಚೆಗೆ ಬಂದಳು. ಹನುಮಂತರಾಯನ ಕಣ್ಣಿಗೆ ಮಿಂಚು ಹೊಳೆದಂತಾಯಿತು. ಗಂಡು ವೇಷದಲ್ಲಿ ಕಾಣಿಸುತಿದ್ದು ದಕ್ಕಿಂತ ಹತ್ತರಷ್ಟು ಸೌಂದರ್ಯವು ಕಣ್ಣನ್ನು ಮಂಜು ಹಿಡಿಯಿ ಸಿತು ಆಗ ಹನುಮಂತರಾಯನು ತನ್ನ ಮನಸ್ಸಿನಲ್ಲಿ—ಆಹಾ! ಈ ಚೆಲುವಾದ ಮುಖವನ್ನೇ ನಾನು ಯುದ್ಧರಂಗದಲ್ಲಿ ಕಂಡದ್ದು. ತುರುಕರವನು ಮಾನಭಂಗ ಮಾಡಲು ಯತ್ನಿಸಿದ್ದದ್ದೂ ಇವ ಳನ್ನೇ. ನಾನು ಅಲ್ಲಿ ಅವನನ್ನು ಕೊಂದು ಕಾಪಾಡಿದ್ದು ಇವಳನ್ನೇ. ಹೀಗೆಂದು ತನ್ನ ಮನಸ್ಸಿನಲ್ಲಿ ಹಲವು ವಿಧವಾದ ಕಳವಳವನ್ನು ಹೊಂದಿ ಆ ಯೌವನಸ್ಥೆಯ ಮುಖವನ್ನು ದೃಷ್ಟಿಸಿ ನೋಡುತಾ ನಿಂತಿರಲು,

ದುರ್ಗ—ನಾನು ಅರಿಕೇಮಾಡಿದ ಮಾತಿಗೆಲ್ಲಾ ತಮಗೆ ಈಗ ಅರ್ಥವಾಗಿರಬಹುದು, ನನ್ನ ಪ್ರಾಣವನ್ನು ಉಳಿಸಿದ ಕಾರಣ ತಾವು ನನಗೆ ತಂದೆಯ ಸಮಾನವೆಂದು ಹೇಳಿದಿರಿ. ಇದು ಒಂದು ಅರ್ಥದಲ್ಲಿ ತಮ್ಮ ಮಾತನ್ನು ಪುಷ್ಟೀಕರಿಸಿದಾಗ್ಯೂ, ನನ್ನ ಮಾನ ವನ್ನು ತಾವು ಕಾಪಾಡಿದ್ದರಿಂದ ತಾವು ನನಗೆ ಪತಿಯಂತಾಯಿತು. ತಮ್ಮ ಮುಖದರ್ಶನವಾದಾಗಿನಿಂದ ಈವರೆಗೆ ನಾನು ಈ ಭಾವನೆ

ಯನ್ನೇ ಇರಿಸಿಕೊಂಡಿದೇನೆ. ತಮ್ಮಂಥಾ ಶೂರರನ್ನು ಬಿಟ್ಟು ಇತರರನ್ನು ಎಂದಿಗೂ ಮದುವೆಯಾಗಲಾರೆ. ನನ್ನ ಪ್ರಾರ್ಥನೆಗೆ ತಾವು ಒಪ್ಪದಿದ್ದರೆ ಈ ದೇಹವನ್ನೂ ಈ ಶಿರಸ್ಸನ್ನೂ ಕ್ಷಣಮಾತ್ರ ದಲ್ಲಿ ಬೇರೆ ಬೇರೆಯಾಗಿ ಮಾಡಲು ನನ್ನ ಕೈಚೂರಿ ನನ್ನಲ್ಲಿಯೇ ಇದೆ. ಆತ್ಮಹತ್ಯದೋಷ ನನಗೆ ಪ್ರಾಪ್ತವಾಗಬಹುದು. ಸ್ತ್ರೀ ಹತ್ಯದೋಷವೇನೋ ತಮ್ಮ ಪಾದವನ್ನು ಬಿಡಲಾರದು.

ಈ ಮಾತುಗಳನ್ನು ಕೇಳಿ ಹನುಮಂತರಾಯನ ಮನಸ್ಸು ಯಾವ ರೀತಿಯಲ್ಲಿಯೂ ಆಡದೆ ಸ್ತಂಭೀಭೂತವಾಗಿ ನಿಂತು ಹೋಯಿತು. ಇವನು ತನ್ನ ಮನದಲ್ಲಿ ನಾನು ಯುದ್ಧರಂಗದಲ್ಲಿ ನೋಡಿದ ಗಂಡಸು ಥಟ್ಟನೆ ಹೆಂಗಸಾದ ನಾಟಕ ವಿಧಾನ ಎಂಥಾದ್ದು ? ಮಾನಸಂರಕ್ಷಣೇ ಮಾಡಿದ್ದರಿಂದ ನಾನು ತನಗೆ ಪತಿಯಾದೆ ಎಂದು ಈ ಯೌವನಸ್ಥೆ ಹೇಳಿದ್ದು ನನಗೆ ವಾಕ್ ಸ್ತಂಭವಾಯಿತಲ್ಲಾ. ಯಾವ ಉತ್ತರ ಹೇಳುವುದಕ್ಕೂ ತೋರದು. ರೂಪದಲ್ಲಿ ಅಪ್ಸರ ಸ್ತ್ರೀಯಾಗಿದಾಳೆ. ಗುಣದಲ್ಲಿ ಸಾಕ್ಷಾತು ಸಾವಿತ್ರಿಯಾಗಿ ತೋರುತಾಳೆ. ಇಂಥಾ ಸ್ತ್ರೀಯು ತಾನಾಗಿ ವರಿಸಿ ಬಂದಾಗ ಬಿಟ್ಟು ಬಿಡುವುದು ಮನುಷ್ಯ ಸ್ವಭಾ ವವಲ್ಲ. ಆಶೆ ಬಾಧಿಸುತ್ತೆ. ಒಂದು ವೇಳೆ ನಾನು ಮುಷ್ಕರ ಮಾಡಿ ಒಲ್ಲೆನೆಂದೇನೇ ಇವಳ ಕಾರ್ಯವು ಇವಳ ಶಪಥವನ್ನು ದೃಢೀಕರಿಸಿದರೆ ನನಗೆ ಪಾಪ ತಪ್ಪಲಾರದು. ಹೀಗೆಂದು ಯೋಚಿಸಿ,

ಹನುಮಂತ—ತಾವುಗಳೆಲ್ಲಾ ಇಷ್ಟು ಹೇಳಿದ ಮೇಲೆ ನಾನು ತಮ್ಮ ಇಷ್ಟಕ್ಕೆ ವಿರೋಧವಾಗಿ ನಡೆಯುವುದಕ್ಕೆ ಆಗುವುದಿಲ್ಲ. ತಮ್ಮ ಅಭಿಪ್ರಾಯವಿದ್ದ ಹಾಗೇ ಆಗಲಿ. ನಾನು ದಂಡಿನ ಪಾಳ ಯಕ್ಕೆ ಹೋಗಿ ಮೂರು ದಿವಸದಲ್ಲಿ ಬರುತೇನೆ. ಆ ಮೇಲೆ ಯಾವ ಮಾತನ್ನೂ ನಿಷ್ಕರ್ಷೆಮಾಡೋಣ.

ಯಶವಂತ—ಎಲ್ಲಾ ಮಾತೂ ಇಲ್ಲಿಗೆ ನಿಷ್ಕರ್ಷೆಯಾದಂತೆ

ತಿಳಿಯಬೇಕು. ಇನ್ನು ಮೂರು ದಿವಸದ ಮೇಲೆ ವಾಪಸು ದಯ ಮಾಡಿಸಿದ ಕೂಡಲೆ ಲಗ್ನ ಬೆಳೆಯುವುದು. ಇದು ಖಂಡಿತವೆಂದು ತಿಳಿಯಿರಿ.

ತರುವಾಯ ಹನುಮಂತರಾಯನು ಎಲ್ಲರ ಅಪ್ಪಣೆಯನ್ನೂ ಪಡೆದು ಹೊರಟನು. ಆಗ ದುರ್ಗಾಬಾಯಿಯು ಎಲ್ಲಿ ತನ್ನ ಆಶೆ ಕೈಗೂಡುವುದಿಲ್ಲವೋ ಎಂದು ಮುಖವನ್ನು ಚಿಕ್ಕದು ಮಾಡಿ ಕೊಳ್ಳಲು, ಕೊನೆಯಲ್ಲಿ ಹನುಮಂತರಾಯನು ಅವಳ ಮುಖ ವನ್ನು ನೋಡಿ ಮುಗುಳು ನಗುವನ್ನು ನಗುತಾ ಹೊರಟನು. ಈ ನಗುವು ಅವಳಿಗೆ ಎಷ್ಟೋ ಧೈರ್ಯವನ್ನು ಹುಟ್ಟಿಸಿತು.

ಆ ಮೇಲೆ ಹನುಮಂತರಾಯನು ದಂಡಿನ ಪಾಳಯಕ್ಕೆ ಹೋಗಿ ಸೇನೆಯು ಮೈಸೂರಿಗೆ ಪ್ರಯಾಣಮಾಡಿ ಹೊರಡಲು ಬೇಕಾದ್ದ ನ್ನೆಲ್ಲಾ ಸಿದ್ಧಮಾಡಿಸಿದನು. ಇಲ್ಲದ ವಾಕ್‌ಪೌರುಷವನ್ನು ಇವನು ಕೊಚ್ಚುವಾಗ ಕೊಚ್ಚಿಬಿಟ್ಟನು. ಅನಂತರ ಮನಸ್ಸು ಮಾತ್ರ ಕಳವಳಗೊಳ್ಳುವುದಕ್ಕೆ ಆರಂಭಿಸಿತು. ಕೂತರೆ ನಿಂತರೆ ಮಲಗಿದರೆ ಇವನ ಕಣ್ಣಿಗೆ ದುರ್ಗಾಬಾಯಿಯ ಮುಖವೇ ಕಾಣಿಸಿದ ಹಾಗಾಗುವುದು. ಅವಳು ನಡೆದುಕೊಂಡು ಹೋದ ದಾರಿ, ಅವಳು ಕೂತು ಸುದಾರಿಸಿಕೊಂಡ ಕಲ್ಲುಬಂಡೆ, ಅವಳು ನೆರಳಿಗಾಗಿ ನಿಂತಿದ್ದ ಮರದ ಬುಡ, ಮುಖ್ಯವಾಗಿ ಅವಳ ಸಂಬಂಧವಾದ ವಿಶಿಷ್ಟ ಪದಾರ್ಥಗಳೂ ಏನೋ ಹೇಳಲಶಕ್ಯವಾದ ಸೌಂದರ್ಯವನ್ನೂ ಸೊಬಗನ್ನೂ ಹೊಂದಿದಂತೆ ಇವನ ಕಣ್ಣಿಗೆ ಕಾಣಿಸುತಿದ್ದವು. "ಯಾಕೆ ಬಾಯಿತಪ್ಪಿ ಮೂರು ದಿವಸದ ಗಡ ಬವನ್ನು ಹೇಳಿದೆನೋ, ಈ ಮೂರು ದಿವಸವನ್ನು ಕಳೆಯುವುದು ಮೂರು ಯುಗಾ ಕಳೆದಂತೆ ಆಗಿದೆಯೆಲ್ಲಾ. ನನ್ನ ಗ್ರಹಚಾರದ ದೆಸೆಯಿಂದ ಇಷ್ಟಕ್ಕೆ ವಿರೋಧವಾದ ಮಾತುಗಳನ್ನಾಡಿಬಿಟ್ಟೆ ನಲ್ಲಾ. ವೀರರಾದ ಯಶವಂತ ಮಾರ್ತಾಂಡರೂ ವೀರಪುತ್ರಿ ಯಾದ ನನ್ನ ಪ್ರಾಣಪದಕವೂ ತಮ್ಮ ಮನಸ್ಸನ್ನು ಬದಲಾಯಿಸಿ

ಕೊಂಡರೆ ನನ್ನ ಗತಿಯೇನು ದೇವರೇ!" ಎಂದು ಚಿಂತಿಸುತ್ತಾ ಹಗಲು ಅನ್ನವನ್ನು ತಿನ್ನದೆ ರಾತ್ರೆ ನಿದ್ರೆಯನ್ನು ಮಾಡದೆ ಪೇಚಾಡುತ್ತಿದ್ದನು. ಮೂರು ದಿವಸವಾಯಿತು. ನಾಲ್ಕನೇ ದಿನ ಬೆಳಗ್ಗೆ ಎದ್ದು ತನಗೆ ಬೇಕಾದ ಆಪ್ತರನ್ನು ಕರೆದುಕೊಂಡು ಬೇಕಾದ ಸಾಮಾನುಗಳನ್ನೂ ತೆಗೆಯಿಸಿಕೊಂಡು ಸಾತಾರೆಗೆ ಹೊರಟನು.

ಅತ್ತ ದುರ್ಗಾಬಾಯಿಗೂ ಇದೇ ವಿಧವಾದ ಮನೋವ್ಯಥೆ ಪ್ರಾಪ್ತವಾಯಿತು. ಎಲ್ಲಿ ತನ್ನ ಆಶೆ ಭಗ್ನವಾಗುವುದೋ ಎಂದು ಯೋಚಿಸುತ್ತಾ ಒಂದು ಬಗೆ ಹುಚ್ಚಿಯ ಹಾಗೆ ಆದಳು. ನಾಲ್ಕನೇ ದಿವಸ ಬೆಳಗಾದ ಎರಡು ಗಳಿಗೆಯೊಳಗಾಗಿ ಹನುಮಂತರಾಯನ ಕಡೆ ಕುದುರೆಗಳು ಯಶವಂತರಾಯನ ಮನೇ ಬಾಗಿಲಲ್ಲಿ ಬಂದು ನಿಂತವು. ಈ ಮಧ್ಯೆ ಆತ ಬರುವ ದಾರಿಯನ್ನು ದುರ್ಗಾಬಾಯಿಯು ನೋಡುತ್ತಾ ಒಳಕ್ಕೂ ಹೊರಕ್ಕೂ ತುಕ್ಕಿ ತುಕ್ಕಿ ಆ ದಾರಿ ಎಲ್ಲಾ ಸವೆದು ಹೋಯಿತು. ಕಡೆಗೆ ಆಶೆ ಕೈಗೂಡಿತು. ಹನುಮಂತರಾಯನಿಗೂ ದುರ್ಗಾಬಾಯಿಗೂ ವಿವಾಹ ಬೆಳೆಯಿತು

## ೫ನೇ ಅಧ್ಯಾಯ

## ಪೇಷ್ವೆಯ ಶಿವಪೂಜೆ ಸಾಮಗ್ರಿ

ಪೇಷ್ವೆ ಬಾಜಿರಾಯನು ಮೈಸೂರ ದಂಡಿನವರ ಮೂಲಕ ಕಂಪನಿಯವರಿಗೆ ಕೈಸೆರೆಯಾಗಿ ಸಿಕ್ಕಿದ ತರುವಾಯ ಮರಾಟೆಯವರ ಯುದ್ಧವೆಲ್ಲಾ ನಿಂತುಹೋಯಿತು. ಅವನ ಶತ್ರುರಾಜರೂ ಮಿತ್ರರಾಜರೂ ಕೂಡ ಇಂಗ್ಲೀಷರೊಡನೆ ಸ್ನೇಹವನ್ನು ಮಾಡಿಕೊಂಡು ಅವರಿಗೆ ಅಧೀನ ರಾಜರಾಗಿರಲು ಒಪ್ಪಿಕೊಂಡರು. ಬಾಜೀರಾಯನ ಸಮಸ್ತ ಐಶ್ವರ್ಯವೂ ಕಂಪನಿ ಸರ್ಕಾರಕ್ಕೆ ಸೇರಿಹೋಯಿತು. ಒಂದೊಂದು ಪಟ್ಟಣವನ್ನು ಹಿಡಿದು ಕೈವಶ

ಮಾಡಿಕೊಂಡ ಕೂಡಲೆ ಮೊದಲ ಕೆಲಸ ಪುರಪ್ರವೇಶ; ಎರಡನೇದು ಶತ್ರುಗಳನ್ನೂ ಆಯಾ ಊರಜನರನ್ನೂ ನಿರಾಯುಧರನ್ನಾಗಿ ಮಾಡುವುದು; ಮೂರನೇದು ಸೋತು ಹೋದ ದೊರೆಯ ಭಂಡಾರವನ್ನು ಹಿಡಿದುಕೊಳ್ಳತಕ್ಕದ್ದು; ನಾಲ್ಕನೇದು ಸೇನೆಯವರು ಊರನ್ನು ಲೂಟಿ ಮಾಡುವುದು, ಸಿಕ್ಕಿದ್ದನ್ನು ದೋಚಿಕೊಂಡು ಹೋಗುವುದು. ಇದೀಗ ಜಯಶೀಲರಾದ ಶತ್ರುಗಳು ಮೊದಲು ಮಾಡುವ ಕೆಲಸ.

ಬಾಜೀರಾಯನ ಐಶ್ವರ್ಯ ಇಷ್ಟೇ ಇತ್ತೆಂದು ಹೇಳುವುದು ಕಷ್ಟವಾಗಿದೆ. ಪಟ್ಟಣ ವಶವಾದ ಮೇಲೆ ಕಂಪನಿ ಸರದಾರರು ಶ್ರೀಮಂತರ ಖಜಾನೆಯನ್ನು ನೋಡುವುದಕ್ಕೆ ಹೋದರು. ಆ ಖಜಾನೆಯ ಕಟ್ಟಡವು ತೊಟ್ಟಿಯೊಳಗೆ ತೊಟ್ಟಿಯಾಗಿ ಅನೇಕ ಅನೇಕ ತೊಟ್ಟಿಗಳಿದ್ದವು. ಕಂಪನಿ ಸರದಾರರು ಮೊದಲನೇ ತೊಟ್ಟಿಯನ್ನು ಪ್ರವೇಶಿಸಿದರು. ಕುದುರೇ ಕಾಲಿಗೆ ಕಟ್ಟುವ ಚಿನ್ನದ ಲಾಳಗಳು ಆ ತೊಟ್ಟಿ ತುಂಬಾ ತುಂಬಿತ್ತು. ಇದೇನೆಂದು ವಿಚಾರ ಮಾಡಲಾಗಿ, ಪೇಷ್ವೆ ಸವಾಯಿ ಮಾಧವರಾಯನ ಆಳಿಕೆಯಲ್ಲಿ ಮರಾಟೆ ಸೇನೆಯು ಉತ್ತರ ದೇಶದಲ್ಲಿದ್ದ ಒಂದು ಕೋಟೆಯನ್ನು ಹಲ್ಲಾ ಮಾಡಿ ಹಿಡಿಯಿತು. ಕುದುರೆಗಳು ಕೋಟೆಯೊಳಕ್ಕೆ ಪ್ರವೇಶಮಾಡಿದವು. ಆದರೆ ಅಶ್ವಗಳಿಗೆ ಓಡುವುದಕ್ಕೆ ಆಗಲಿಲ್ಲ. ಎಷ್ಟು ಹೊಡೆದರೂ ಮುಂರೇಜಿನಿಂದ ಎಷ್ಟು ತಿವಿದರೂ ಕಾಲ ಎತ್ತಿ ಇರಿಸುವುದೇ ಕಷ್ಟವಾಗಿತ್ತು. ಶತ್ರುಗಳ ಏಟು ಬಲವಾಗುತಾ ಬಂತು. ಅತಿ ವೇಗವಾಗಿ ಹೋಗತಕ್ಕ ಮರಾಟೆ ಕುದುರೆಗಳ ಸ್ಥಿತಿ ಹೀಗಾಗಲು ಕಾರಣವೇನೆಂದು ವಿಚಾರಮಾಡಲಾಗಿ, ಆ ಪುರದ ಕೋಟೆಯನ್ನೂ ನೆಲಕಟ್ಟನ್ನೂ ಸೂಜಿಕಲ್ಲಿನಿಂದ ಕಟ್ಟಿದಾರೆಂತಲೂ, ಕುದುರೇ ಕಾಲಿಗೆ ಹಾಕಿರುವ ಲಾಳ ಕಬ್ಬಿಣವಾದ್ದರಿಂದ ಆ ಶಿಲೆಯು ಕುದುರೇ ಕಾಲನ್ನು ಹಿಡಿಯುವುದೆಂತಲೂ ತಿಳಿಯಬಂತು. ಈ ಸಂಗತಿ ಪೇಷ್ವೆಗೆ ತಿಳಿಯಿತು. ಹಾಗಾದರೆ

ಕುದುರೆಗಳಿಗೆ ಬಂಗಾರದ ಲಾಳಗಳನ್ನು ಮಾಡಿಸಿ ಹಾಕಿ ಎಂದು ಅಪ್ಪಣೆಯಾಯಿತು. ಆ ಕ್ಷಣದಲ್ಲಿಯೇ ಬಂಗಾರದ ಲಾಳಗಳು ತಯಾರಾಗಲು ಆರಂಭವಾಯಿತು. ಸ್ವಲ್ಪ ಹೊತ್ತಿನೊಳಗಾಗಿ ಪೇಷ್ವೆಯು ಸಮಾಜದಲ್ಲಿದ್ದ ಸಾಮಾಜಿಕರಲ್ಲಿ ಅನುಭವಶಾಲಿ ಯಾದ ಒಬ್ಬನು—ಒಂದು ಬಗೇ ನೊಂಡೆ ಹುಲ್ಲು ಇದೆ, ಆ ಹುಲ್ಲನ್ನು ಸೂಜಿಕಲ್ಲಿನ ಮೇಲೆ ಹಾಕಿ ಸುಟ್ಟರೆ ಆ ಶಿಲೆಯ ಆಕರ್ಷಣ ಶಕ್ತಿ ಕಡಮೆಯಾಗುವುದು. ಆಗ ಕುದುರೆಗಳ ಕಾಲಿನ ಕಬ್ಬಿಣದ ಲಾಳ ಹಿಡಿಯುವುದಿಲ್ಲವೆಂದು ಸಲಹೆ ಕೊಟ್ಟನಂತೆ. ಹಾಗೆಯೇ ಮಾಡತಕ್ಕದೆಂದು ಪುನಃ ಅಪ್ಪಣೆಯಾಯಿತು. ಅದು ವರೆಗೂ ತಯಾರಾಗಿದ್ದ ಬಂಗಾರದ ಲಾಳಗಳನ್ನು ಏನಮಾಡ ಬೇಕೆಂದು ಕೇಳುವಲ್ಲಿ ನಮ್ಮ ಭಂಡಾರದಲ್ಲಿ ಹಾಕಿರಲಿ ಎಂದು ಸವಾಯಿ ಮಾಧವರಾಯನ ಹುಕ್ಕುಂ ಆಯಿತಂತೆ. ಆ ಬಂಗಾರದ ಲಾಳಗಳೇ ಖಜಾನೆಯ ಮೊದಲನೇ ತೊಟ್ಟಿಯ ತುಂಬಾ ಸುರಿ ದಿದ್ದವು.

ಇಂಗ್ಲಿಷ್ ಸರದಾರರು ಇದನ್ನು ಕಂಡು ಬಹಳ ಆಶ್ಚರ್ಯ ಪಟ್ಟರು. ಎರಡನೇ ತೊಟ್ಟಿಯೊಳಕ್ಕೆ ಹೋದರು. ಚಿನ್ನದಲ್ಲಿಯೂ ಬೆಳ್ಳಿಯಲ್ಲಿಯೂ ಮಾಡಿದ ಮುರುಕು ಕೈಗಾಡಿಗಳು ಆ ತೊಟ್ಟಿ ತುಂಬಾ ತುಂಬಿದ್ದವು. ಇದೇನೆಂದು ವಿಚಾರಿಸಲಾಗಿ—ಶ್ರೀಮಂತ ಪೇಷ್ವೆಯವರ ಅರಮನೆಯಲ್ಲಿ ಆಗಾಗ್ಗೆ ಆಗುತಾ ಇದ್ದ ಬ್ರಾಹ್ಮಣ ಸಮಾರಾಧನೆ ಕಾಲದೊಳು ಹಾಕುತಾ ಇದ್ದ ಎಲೆಗಳ ಸಾಲುಗಳ ಮಧ್ಯೆ ಬಡಿಸುವುದಕ್ಕಾಗಿ ಅಡಿಗೇ ಶಾಲೆಯಿಂದ ಪಕ್ವವಾದ ಪದಾರ್ಥಗಳನ್ನು ಈ ಚಿನ್ನ ಬೆಳ್ಳೀ ಗಾಡಿಗಳ ಮೇಲೆ ಇರಿಸಿ ಕೊಂಡು ಎಳೆದುಕೊಂಡು ಹೋಗುತಿದ್ದರೆಂದೂ, ಆ ತೊಟ್ಟಿ ಯಲ್ಲಿದ್ದುದು ಆ ಗಾಡಿಗಳ ರಾಶಿ ಎಂದೂ ತಿಳಿಯಿತು. ಆಮೇಲೆ ಆ ಸಾಹೇಬ ಜನರು ಮೂರನೇ ತೊಟ್ಟಿಯೊಳಕ್ಕೆ ನುಗ್ಗಿದರು. ಅಲ್ಲಿ ರತ್ನಖಚಿತವಾದ ಕತ್ತಿ ಹಿಡಿ, ಕಠಾರಿ ಹಿಡಿ, ಬಾಕಿನ ಹಿಡಿ,

ರತ್ನದ ಕೆಲಸ ಮಾಡಿದ್ದ ಕುದುರೇ ಕಾಲಿನ ಮುರುಕು ಗಗ್ಗರಿಗಳು, ರತ್ನದ ಕೆಲಸ ಮಾಡಿದಂಥಾ ಚೋಪದಾರರ ಮುರುಕು ಆಸಾಗಳು, ಸೋಟಾಗಳು, ಇವುಗಳ ದೊಡ್ಡ ರಾಸಿ ವಿಂಗಡಿಸದೇ ಹಾಗೆಯೇ ಬಿದ್ದಿತ್ತು. ಇನ್ನು ಮುಂದಿನ ತೊಟ್ಟಿಗಳು ಅನೇಕವಾಗಿದ್ದವು. ಆ ಸರದಾರರು ಇದನ್ನು ನೋಡಿದ ಕೂಡಲೆ—ಈ ಖಜಾನೆಯ ಐಶ್ವರ್ಯವನ್ನು ನೋಡುವುದು ಸಾಧ್ಯವಿಲ್ಲ ಎಂದು ಆ ತೋಷಿಖಾನೆಯ ಸುತ್ತಲೂ ಸೇನೆಯವರನ್ನು ನಿಲ್ಲಿಸಿ ಹೊರಟು ಹೋದರಂತೆ.

ಪೇಷ್ವೆಯ ಭಾಗ್ಯದ ವಿಷಯದಲ್ಲಿ ಹೀಗೆ ಒಂದು ಜನವಾರ್ತೆ ಇದೆ. ಇದು ಅತಿಶಯೋಕ್ತಿ ಎಂದು ಕೆಲವು ಪಿಶುನ ಪ್ರವೀಣರು ಹೇಳಿ ಹಾಸ್ಯಮಾಡಿದಾಗ್ಯೂ ಅಲ್ಪವನ್ನು ಮಹತ್ತಾಗಿ ಹೇಳುವ ಕವೀಶ್ವರರ ಚಮತ್ಕೃತಿಎಂದು ಹೇಳಿಕೊಂಡಾಗ್ಯೂ ಚಿಂತೆ ಇಲ್ಲ. ಅನೇಕ ಕಾರಣಗಳಿಂದ ಈ ದೇಶದ ಐಶ್ವರ್ಯವೆಲ್ಲಾ ದೇಶಾಂತರಗಳಿಗೆ ಸಾಗಿಹೋಗಿ ಬರೀ ಕೈಯಲ್ಲಿ ಚಪ್ಪಾಳೇ ಹಾಕುತಾ ಕೂತಿರುವ ಈ ದೇಶೀಯರಾದ **ಇಂಗ್ಲಿಷು ಶಾಸ್ತ್ರಿಗಳು** ತಾವು ಅರಿಯದೆ ಇದ್ದ ವಿಚಾರದಲ್ಲಿ ಬೇಕಾದ್ದನ್ನು ಹೇಳಿಕೊಳ್ಳಲಿ, ಸ್ವದೇಶ ಪ್ರಯೋಜನವೆಂದು ನಂಬಿ ಪರದೇಶ ಪ್ರಯೋಜನವನ್ನು ಪರೋಕ್ಷವಾಗಿ ಬಯಸುವ ಈಗಿನ ದೇಶಾಭಿಮಾನಿಗಳು ಚಿನ್ನದಿಂದ ಪ್ರಯೋಜನವೇನು ಬೆಳ್ಳಿ ಯಾತಕ್ಕೆ ರತ್ನಗಳನ್ನು ಇಟ್ಟುಕೊಂಡು ಏನುಮಾಡಬೇಕು ಈಗಿನ ಕಾಲಕ್ಕೆ ಕಬ್ಬಿಣವೇ ಮುಖ್ಯವಾದ್ದು ಎಂದು ಎಷ್ಟಾದರೂ ಅಭಿಪ್ರಾಯಪಡಲಿ; ದೇಶದ ಸಂಪತ್ತು ಹೆಚ್ಚಿಸುವುದಕ್ಕೆ ಅಗತ್ಯವಾದ ಅರ್ಥಶಾಸ್ತ್ರ ಜ್ಞಾನವು ನಮ್ಮವರಿಗೆ ಇರಲಿಲ್ಲವೆಂದು ಈ ಕಾಲದ ಮಹಾಪಂಡಿತರು ಬೇಕಾದಷ್ಟು ಹಳಿದು ಮಾತನಾಡಲಿ; ಚಿನ್ನದ ಬೆಲೆ ಚಿನ್ನಕ್ಕೆ ಇದೆ, ಕಬ್ಬಿಣದ ಬೆಲೆ ಕಬ್ಬಿಣಕ್ಕೆ ಇದೆ, ಸಾಸುವೇ ತೋರ ಚಿನ್ನವು ಕುಂಬಳಕಾಯಿ ತೋರ ಕಬ್ಬಿಣದ ಬೆಲೆಗಿಂತ ಹೆಚ್ಚಾಗುವುದು. ಚಿನ್ನವನ್ನು

ಯಾವಾಗಲಾದರೂ ಕಬ್ಬಿಣವಾಗಿ ಮಾಡಿಕೊಳ್ಳಬಹುದು, ಕಬ್ಬಿಣವು ತಟ್ಟನೆ ಚಿನ್ನವಾಗಲಾರದು, ಅತಿಶಯೋಕ್ತಿಯನ್ನು ಎಷ್ಟು ಬಿಟ್ಟು ಮಾತನಾಡಿದಾಗ್ಯೂ ಪೇಷ್ವೆಯ ಭಂಡಾರದಲ್ಲಿ ಮಹತ್ತರವಾದ ಐಶ್ವರ್ಯವಿತ್ತು. ಅದೆಲ್ಲಾ ದೊಡ್ಡ ಗಂಟಾಗಿ ದೇಶಾಂತರಕ್ಕೆ ಸಾಗಿಹೋಯಿತು.

ಭಂಡಾರದ ವಿಚಾರ ಹೀಗಿರಲಾಗಿ ರಾಜಧಾನಿಯಾದ ಪೂನೆಯು ಇಂಗ್ಲಿಷರ ವಶವಾದ ಕೂಡಲೆ ದಂಡಿನವರು ಲೂಟಿಗೆ ಪ್ರಾರಂಭಿಸಿದರು. ಇಂಗ್ಲಿಷರ ಸಹಾಯಕ್ಕಾಗಿ ಹೋಗಿದ್ದ ಮೈಸೂರ ತುಕ್ಕಡಿಯವರಿಗೂ ತಕ್ಕಮಟ್ಟಿಗೆ ದೊರೆಯಿತು. ಹನುಮಂತರಾವ್ ರಣಸವರಿಗೂ ಬೆಲೆಯುಳ್ಳ ಸಾಮಾನು ಬಹಳವಾಗಿ ಸಿಕ್ಕಿತು. ಆದರೆ ಇದೆಲ್ಲಾ ಹಾಗಿರಲಿ. ನದೀ ತೀರದಲ್ಲಿ ಧ್ಯಾನಾಸಕ್ತನಾಗಿ ಕೂತಿದ್ದ ಬಾಜೀರಾಯನ ಶಿವಪೂಜೆಯ ಸಾಮಾನುಗಳನ್ನು ಬಕ್ಷಿ ಭೀಮರಾಯರು ರಾಮರಾಯರು ಇವರುಗಳ ಸಂಗಡ ಹೊರಟ ಕುದುರೆಯವರು ಸಹಾ ಹೋಗಿ ಪರಾಕ್ರಮದಿಂದ ಹಿಡಿದು ಕೊಂಡರಷ್ಟೆ; ಅದೇ ಒಂದು ತೂಕ, ಉಳಿದ ಲೂಟಿ ಎಲ್ಲಾ ಒಂದು ತೂಕ. ಆಗ ಸಿಕ್ಕಿದ ಅಮೂಲ್ಯವಾದ ಕೊಳ್ಳೆಯಲ್ಲಿ ತಮಗೆ ಹಂಚಿಕೊಡಬಹುದೆಂದು ಆ ಕುದುರೇ ವೀರರು ನಿರೀಕ್ಷಿಸಿಕೊಂಡಿದ್ದರು. ಈ ನಿರೀಕ್ಷಣೆಯು ತಕ್ಕಮಟ್ಟಿಗೆ ಹನುಮಂತರಾಯನಿಗೂ ವಿಶೇಷವಾಗಿಯೇ ಇತ್ತು. ಆದರೆ ಉಭಯ ಬಕ್ಷಿಗಳೂ ಯಾರಿಗೂ ಕೊಡದೆ ಅದೆಲ್ಲವನ್ನೂ ತಮ್ಮ ವಶಕ್ಕೆ ತೆಗೆದುಕೊಂಡರು. ಇದರ ವಿಚಾರದಲ್ಲಿ ಹನುಮಂತರಾಯ ಮಾಡಿದ ಚರ್ಚೆಯು ಬಕ್ಷಿಗಳಿಗೆ ಬಹಳ ಅಸಮಾಧಾನವನ್ನುಂಟುಮಾಡಿತು.

ಯುದ್ಧದ ಕಾರ್ಯಗಳೆಲ್ಲಾ ತೀರಿದ ತರುವಾಯ ಮೈಸೂರ ಸೇನೆಯವರು ಇಂಗ್ಲಿಷ್ ಸೇನಾಪತಿಗಳ ಅಪ್ಪಣೆಯನ್ನು ಪಡೆದು ಪಯಾಣಮಾಡಿ ತಮ್ಮೂರ ಸೇರಿದರು. ಇವರುಗಳಿಂದ ತಮ್ಮ

ದೇಶಕ್ಕೆ ಶಾಶ್ವವಾದ ಕೀರ್ತಿ ಸಂಪಾದನೆಯಾಯಿತಲ್ಲಾ ಎಂಬ ಸಂತೋಷದಿಂದ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರವರು ಈ ಸೇನೆಗೂ ಸೇನಾಪತಿಗಳಿಗೂ ಹೆಚ್ಚಿನ ಮರ್ಯಾದೆಯನ್ನು ಮಾಡಿದರು. ಕೃಷ್ಣರಾಜಪ್ರಭುವು ಬಹುಭಕ್ತಿಯಿಂದ ಶಿವಪೂಜೆಯನ್ನು ಮಾಡುತ್ತಿದ್ದರೆಂಬ ಸಂಗತಿಯು ಎಲ್ಲರಿಗೂ ತಿಳಿದಿದೆ. ಒಂದು ದಿವಸ ಬೆಳಗ್ಗೆ ಪ್ರಭುಗಳು ಪಾರ್ಥಿವ ಪೂಜೆಯನ್ನು ಮಾಡುತ ಕೂತಿರುವಾಗ ಬಕ್ಷಿ ರಾಮರಾಯರು ಭೀಮರಾಯರು ಸಹಾ ಸೇರಿ ಪೂನೆ ಪೇಷ್ವೆಯ ಶಿವಪೂಜಾ ಸಾಮಗ್ರಿಗಳೆಲ್ಲವನ್ನೂ ಮಡಿಯಲ್ಲಿಯೇ ತೆಗೆಯಿಸಿಕೊಂಡು ಬಂದು ಮಹಾಸ್ವಾಮಿಯ ಮುಂದೆ ದೊಡ್ಡ ದೊಡ್ಡ ಪರಾತಗಳಲ್ಲಿ ತುಂಬಿ ತುಂಬಾ ಇರಿಸಿ ಮುಜರೇಮಾಡಿ ಅರಿಕೇಮಾಡಿದ್ದೇನೆಂದರೆ:—

ಬಕ್ಷಿ ರಾಮರಾವ್—ಮಹಾಸ್ವಾಮಿ, ಪೂನೆ ಸಂಸ್ಥಾನದ ಶ್ರೀಮಂತ ಬಾಜೀರಾವ್ ಪೇಷ್ವೆಯವರನ್ನು ಅವರ ಶಿವಪೂಜಾ ಕಾಲದಲ್ಲಿ ನಾವು ಕೈಸೆರೆ ಹಿಡಿದೆವು, ಸನ್ನಿಧಿಯಲ್ಲಿರಿಸಿರುವುದೆಲ್ಲಾ ಅವರ ಪೂಜಾಸಾಮಗ್ರಿಗಳು, ಒಪ್ಪಿಸಿಕೊಳ್ಳಬೇಕು.

ದೊರೆ—ಅನೇಕ ಲಕ್ಷ ವರಹ ಬಾಳುವ ಈ ರತ್ನಖಚಿತವಾದ ಸಾಮಾನುಗಳೆಲ್ಲಾ ಯುದ್ಧದಲ್ಲಿ ನಿಮಗೆ ಸಿಕ್ಕಿತು. ಅಂಥಾ ಮರಾಟೀ ಮಹಾ ಸಂಸ್ಥಾನವನ್ನೇ ಒಂದು ನಿಮಿಷದಲ್ಲಿ ಕೈವಶ ಮಾಡಿಕೊಂಡ ನಿಮ್ಮ ಸಾಹಸಕ್ಕೆ ಇದು ಒಂದು ಉಪಹಾರ, ಇದನ್ನು ನೀವು ತೆಗೆದುಕೊಳ್ಳಬೇಕಲ್ಲದೆ ನನಗೆ ಬೇಡ.

ಬಕ್ಷಿ—ಮಹಾಸ್ವಾಮಿ, ಹಾಗೆ ಅಪ್ಪಣೆಯಾಗಕೂಡದು. ನಮ್ಮ ಪರಾಕ್ರಮವೆಲ್ಲಾ ಮಹಾಸ್ವಾಮಿಯವರ ಅನ್ನ ಪ್ರಭಾವದಿಂದ ಉಂಟಾದ್ದು. ಯಾವ ಮೂಲಸ್ಥಾನಬಲದಿಂದ ನಾವು ಇವೆಲ್ಲವನ್ನೂ ಪಡೆದೆವೊ ಅಲ್ಲಿಗೆ ಇದು ಅರ್ಹವಾದ್ದಲ್ಲದೆ ನಮ್ಮಂಥಾ ಬಡವರಿಗೆ ತಕ್ಕದ್ದಲ್ಲ.

ದೊರೆ—ಇದೆಲ್ಲಾ ನಿಮ್ಮದೇ ಸರಿ, ನಮ್ಮ ದೇಶಕ್ಕೂ ಕುಂಪನಿ

ಸರ್ಕ್ಕಾರಕ್ಕೂ ಮಹಾ ವೀರರಾದ ನೀವುಗಳು ಸಂಪಾದಿಸಿಕೊಟ್ಟ ಹೆಸರುವಾಸಿಯನ್ನು ಈ ಅಮೋಘವಾದ ಆಭರಣಗಳಿಗಿಂತ ಒಂದಕ್ಕೆ ಹತ್ತಾಗಿ ನಾವು ಭಾವಿಸುತ್ತೇವೆ. ಇದೆಲ್ಲವನ್ನೂ ನೀವೇ ತೆಗೆದುಕೊಳ್ಳಬೇಕು.

ಬಕ್ಷಿ—ನಾವು ಯಾವ ಕಾರ್ಯವನ್ನು ಮಾಡಬೇಕೋ ಅಂಥಾದ್ದನ್ನು ಮಾಡಿದ್ದಕ್ಕಾಗಿ ಪದೇ ಪದೇ ಉದ್ಘಾಟಿಸೆ ಮಾಡಿ ಅಲ್ಪವನ್ನು ಮಹತ್ತಾಗಿ ಪರಿಗಣಿಸಿ ನನುಗೆ ಒಂದು ಗೌರವವನ್ನು ಕೊಡತಕ್ಕದ್ದು ಈ ಮಹಾ ಪದವಿಗೆ ತಕ್ಕ ಗುಣವಾಗಿವೆ. ಸನ್ನಿಧಾನಕ್ಕೆ ಒಪ್ಪಿಸಿಕೊಳ್ಳಬೇಕು.

ದೊರೆ—(ನಗುತಾ) ಪರಾಕ್ರಮಶಾಲಿಗಳು ಹಠಮಾಡಿದರೆ ಸಾಗುವುದು, ಉಳಿದವರ ಮಾತು ನಡೆಯಲಾರದು. ನೀವು ಹೇಳಿದಂತೆಯೇ ಆಗಲಿ, ಇದನ್ನು ನಾನು ಉಪಹಾರವಾಗಿ ಅಂಗೀಕರಿಸಿದೇನೆ, ಆಗಲಿ.

ಬಕ್ಷಿ—ಹಾಗಾದರೆ ನಾವು ಕೃತಾರ್ಥರಾದೆವು. ಸಾವು ಮಾಡಿದ ಸಾಹಸವೆಲ್ಲಾ ಸಾರ್ಥಕವಾಯಿತು.

ದೊರೆ—ಈಗ ಈ ಸಾಮಾನೆಲ್ಲಾ ನನ್ನದಾಯಿತಷ್ಟೆ ?

ಬಕ್ಷಿ—ಮೊದಲೂ ಸನ್ನಿಧಾನದ್ದೇ, ಈಗಲೂ ಸನ್ನಿಧಾನದ್ದೇ.

ದೊರೆ—ಮೊದಲು ಪೂನೇ ಸಂಸ್ಥಾನದ್ದು. ತರುವಾಯ ಆ ಸಂಸ್ಥಾನವನ್ನೆಲ್ಲಾ ತಮ್ಮ ಹಿಡಿಯಲ್ಲಿ ಹಿಡಿದುಕೊಂಡ ಬಕ್ಷಿಗಳದು. ಈಗ ನನ್ನದು, ಇದಕ್ಕೆ ಒಪ್ಪಿದಿರ ?

ಬಕ್ಷಿ—ಮಹಾಸ್ವಾಮಿ, ಹೇಗಾದರೂ ಆಗಲಿ ಇದು ಸನ್ನಿಧಾನದ್ದು.

ದೊರೆ—ಇದು ನನ್ನದಾದ ಮೇಲೆ ನಾನು ಬೇಕಾದ ಹಾಗೆ ಉಪಯೋಗಿಸಬಹುದಷ್ಟೆ ?

ಬಕ್ಷಿ—ಅದಕ್ಕೆ ಸಂಶಯವೇನಿದೆ ?

ದೊರೆ—ಹಾಗಾದರೆ ಇದೆಲ್ಲವನ್ನೂ ನಿಮಗೆ ಇನಾಮಾಗಿ

ಕೊಟ್ಟದೇನೆ, ತೆಗೆದುಕೊಳ್ಳಿ.

ಬಕ್ಷಿ—ಪದವಿಗೆ ತಕ್ಕ ವಾಣಿ, ವಾಣಿಗೆ ತಕ್ಕ ಔದಾರ್ಯ ಮಹಾಸ್ವಾಮ್ಯಯಲ್ಲಿದೆ. ಆದರೆ ಇನ್ನೊಂದು ಅಂಶವನ್ನು ಅರಿಕೇ ಮಾಡುತ್ತೇನೆ, ಇದೆಲ್ಲಾ ಪುನಃ ಸಂಸ್ಥಾನದ್ದೇ ಅಲ್ಲ; ಅನೇಕ ದೊರೆಗಳದಾಗಿದ್ದು ಅಲ್ಲಿಗೆ ಎಲ್ಲೆಲ್ಲಿಂದಲೋ ಬಂದು ಸೇರಿತ್ತು. ಅದನ್ನು ತಂದು ನಾವು ಇಲ್ಲಿಗೆ ಒಪ್ಪಿಸಿದೆವು. ದೊರೆಗಳ ಪದಾರ್ಥ ದೊರೆಗಳಿಗೆ ಸೇರಿತು. ಎರಡನೇ ಅಂಶವೇನೆಂದರೆ:—

ಮಹಾಸ್ವಾಮಿಯು ಒಂದು ಸಾರಿ ಇದನ್ನು ಸ್ವೀಕರಿಸಿ, ತರುವಾಯ ಅದನ್ನೇ ನಮಗೆ ಹಿಂತಿರುಗಿ ಅಪ್ಪಣೆ ಕೊಡಿಸಿದರೆ, ನಾವು ದತ್ತಾಪಹಾರ ಮಾಡಿದಂತಾಗುವುದಿಲ್ಲವೆ? ಮೂರನೇ ಅಂಶವೇನೆಂದರೆ: ರತ್ನಖಚಿತವಾದ ಕಿರೀಟವನ್ನು ಒಂದು ಎತ್ತಿನ ತಲೆಯ ಮೇಲೆ ಇಟ್ಟರೆ ಶೋಭಿಸೀತೆ? ಪದಾರ್ಥಕ್ಕೆ ತಕ್ಕ ಸ್ಥಳ, ಸ್ಥಳಕ್ಕೆ ತಕ್ಕ ಪದಾರ್ಥ. ಇವುಗಳನ್ನು ನಮಗೆ ಅಪ್ಪಣೆ ಕೊಡಿಸಿದರೆ, ನಾವು ಯಾತಕ್ಕೆ ಉಪಯೋಗಿಸಿಯೇವು? ಅದೆಲ್ಲಾ ಶಿವಪೂಜಾ ಸಾಮಾಗ್ರಿಯಾಗಿದೆ. ಆ ಕೆಲಸಕ್ಕೆ ನಾವು ಅದನ್ನು ಉಪಯೋಗಿಸಿದರೆ ನೋಡಿದವರು ನಗುತಾರೆ. ಅದನ್ನು ಮಾರಿಕೊಂಡು ಜೀವಿಸುವುದಕ್ಕೆ ಹೋದರೆ ಕೊಂಡು ಕೊಳ್ಳುವವರೇ ಇಲ್ಲ. ಗಂಟುಕಟ್ಟಿ ಮನೆಯಲ್ಲಿರಿಸಿದ್ದರೆ ಮಸೀ ಅರಿವೆಯಲ್ಲಿ ಮಾಣಿಕ್ಯ ಕಟ್ಟಿದರೆಂಬ ಮಾತು ನಿಜವಾಗುತ್ತೆ. ಆದ್ದರಿಂದ ಸ್ವಾಮಿಯೇ ಇದನ್ನು ಸ್ವೀಕರಿಸಬೇಕು.

ದೊರೆ—ಭುಜಬಲದಿಂದ ಶತ್ರುರಾಜರನ್ನು ಗೆದ್ದಿರಿ, ವಾಗ್ಬಲದಿಂದ ನನ್ನನ್ನು ಗೆದ್ದಿರಿ. ನಿಮ್ಮ ಮಾತಿಗೆ ಏನು ಉತ್ತರ ಕೊಡೋಣ? ನಿಮ್ಮ ಇಷ್ಟವಿದ್ದಂತೆ ಆಗಲಿ.

ಹೀಗೆ ಕೃಷ್ಣರಾಜ ಪ್ರಭುವು ಅಪ್ಪಣೆ ಕೊಡಿಸಿ ಅಮೌಲ್ಯವಾದ ಆ ಸಾಮಾನುಗಳನ್ನು ಅಂಗೀಕರಿಸಿ ತರುವಾಯ ಆ ವೀರರಿಗೆ ವಿಶೇಷವಾಗಿ ಬೆಲೆಯುಳ್ಳ ಜವಾಹಿರು ಕಂಠಿ ಮೊದಲಾದ್ದನ್ನು

ಕೊಟ್ಟು ಮರ್ಯಾದೆಮಾಡಿದರು.

ಅತ್ತ ಹನುಮಂತರಾವ್ ರಣನವರೆಯು ಪ್ರಸ್ತವಾದ ಮೇಲೆ ಸಾತಾರೆಯಲ್ಲಿ ಹತ್ತು ಹದಿನೈದು ದಿವಸ ಇದ್ದು ಮೈಸೂರು ಸೀಮೆಗೆ ಹೊರಟನು. ಹೆಂಡತಿಯಾದ ದುರ್ಗಾಬಾಯಿಯೂ ಗಂಡನ ಸಂಗಡಲೇ ಪ್ರಯಾಣಮಾಡಿದಳು. ಹನುಮಂತರಾಯನು ದಂಡಿನ ಅಧಿಕಾರಿಯಾದ್ದರಿಂದ ಕೊಳ್ಳೆಯಲ್ಲಿ ಇವನ ಭಾಗಕ್ಕೆ ಬಂದ ಅನೇಕ ಬೆಲೆಯುಳ್ಳ ರತ್ನಪಡಿ ಒಡವೆಗಳನ್ನೂ ಇತರ ಸಾಮಾನುಗಳನ್ನೂ ಗಾಡಿಗಳ ಮೇಲೆ ಹಾಕಿಕೊಂಡು ಹೊರಟನು. ಬರುತಾ ದಾರಿಯಲ್ಲಿ ಸಿಕ್ಕಿದ ಪಟ್ಟಣಗಳಲ್ಲಿ ತಂಗುತಾ ತನಗೆ ಪೂರ್ವಪರಿಚಿತರಾದ ದಂಡಿನ ಸರದಾರರುಗಳನ್ನು ಕಂಡು ಮಾತನಾಡಿ ಅವರಿಂದ ತಕ್ಕ ಮರ್ಯಾದೆಗಳನ್ನು ಹೊಂದುತಾ ಶ್ರೀರಂಗಪಟ್ಟಣಕ್ಕೆ ಬಂದು ಸೇರಿದನು. ಡ್ಯೂಕ್ ವೆಲಿಂಗರ್ಟ್ನ, ಲಾರ್ಡ್ ಹಾರಿಸ್, ಸರ್ ಜಾರ್ಜ ಮಾಲ್ಕಂ, ಎಲ್ ಫ್ಲೀಸ್ಟರ್ನ ಮೊದಲಾದ ದೊಡ್ಡ ಸರದಾರರುಗಳು ಅನೇಕರು ಹನುಮಂತರಾಯನಲ್ಲಿ ಕೇವಲ ಮಿತ್ರ ಭಾವವನ್ನು ತೋರಿಸುತಿದ್ದರು. ಇಂಥಾ ದೊಡ್ಡ ಸಾಹೇಬರುಗಳಲ್ಲಿ ಕೆಲವರು ಸೀಮೆಗೆ ಹೋದಾಗಲೂ ಈತನಿಗೆ ಕಾಗದಗಳನ್ನು ಬರೆಯುತಿದ್ದರು. ಈತ ಇಷ್ಟು ವ್ಯಾಪಕನಾಗಿರುವುದು ಅನೇಕರಿಗೆ ಅಸಮಾಧಾನವನ್ನುಂಟುಮಾಡಿತ್ತು. ಇವನು ಶ್ರೀರಂಗಪಟ್ಟಣಕ್ಕೆ ಬಂದು ಕೆಲವು ದಿವಸ ಅಲ್ಲಿ ವಾಸವಾಗಿದ್ದನು. ಆ ಪಟ್ಟಣವು ದಿನೇ ದಿನೇ ಹಾಳಾಗುತಾ ಬಂದದನ್ನು ಕಂಡು ಅಲ್ಲಿಂದ ಸಂಸಾರ ಸಮೇತವಾಗಿ ಮೈಸೂರಿಗೆ ಬಂದು ವಿಚಾರಮಾಡಿ ಅನುಕೂಲವಾದ ಮನೆಯು ಸರಿಯಾದ ಸ್ಥಳದಲ್ಲಿ ದೊರೆಯದೇ ಹೋದ ಕಾರಣ ಮಂಡೀಪೇಟೆಗೆ ಸಮೀಪವಾಗಿ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿ ವಾಸವಾಗಿರುತಿದ್ದನು.

ನ್ಯಾಯವಾದ ಮಾರ್ಗವನ್ನು ಬಿಡುವುದಿಲ್ಲ. ಅನ್ಯಾಯಕ್ಕೆ

ಹೋಗುವುದಿಲ್ಲ. ಸುಳ್ಳು ಹೇಳುವುದಿಲ್ಲ. ಮೇಲ್ಪಟ್ಟವರಿಗೆ ತೋರಿಸ ಬೇಕಾದ ಮರ್ಯಾದೆಗಿಂತಲೂ ಹೆಚ್ಚಾದ ದೈನ್ಯವನ್ನು ಮೇಲೆ ಹಾಕಿಕೊಂಡು ನಯಗರೆಯುತ್ತಿರಲಿಲ್ಲ. ಕಾಪಟ್ಯ ಲೇಶವೂ ಇಲ್ಲ. ಆಡುವ ಮಾತನ್ನೆಲ್ಲಾ ಖಂಡಿತವಾಗಿ ಆಡುವುದು, ನಶನಶೆ ಇಲ್ಲ, ಈ ಸ್ವಭಾವ ಗುಣಗಳು ಹನುಮಂತರಾಯನಲ್ಲಿದ್ದ ಕಾರಣದಿಂದ ತತ್ತತ್ಕಾಲದಲ್ಲಿ ಇವನಿಂದ ಆಗ ಬೇಕಾದ ಕೆಲಸಗಳನ್ನು ಮಾಡಿ ಸಿಕೊಂಡು ಕೊನೆಗೆ ಇವನನ್ನು ಉಪೇಕ್ಷೆಮಾಡಿ ಬಿಟ್ಟರು. ಯುದ್ಧವೆಲ್ಲಾ ಮುಗಿದ ಕೂಡಲೆ ಇತರ ಸೇನೆಯೊಡನೆ ಇವನು ಬರಲೂ ಇಲ್ಲ. ಮಹಾರಾಜರ ಭೇಟಿಗೆ ಸಮಯವೂ ತಪ್ಪಿ ಹೋಯಿತು. ಇವೇ ಮೊದಲಾದ ಅನೇಕ ಸಂದರ್ಭಗಳಿಂದ ಮೈಸೂರಿನಲ್ಲಿ ಈತನು ಎಷ್ಟು ಹೊಂದಬೇಕಾಗಿತ್ತೋ ಅಷ್ಟು ಮರ್ಯಾದೆ ಈತನಿಗೆ ದೊರೆಯಲಿಲ್ಲ. ಆದಾಗ್ಯೂ ಇವನು ಮೈಸೂರಿನಲ್ಲಿಯೇ ವಾಸಮಾಡಿಕೊಂಡಿದ್ದನು. ಸ್ವಲ್ಪ ದಿವಸದಲ್ಲಿ ಇವನಿಗೆ ಒಂದು ಗಂಡು ಮಗುವೂ ಆಯಿತು.

## ೬ನೇ ಅಧ್ಯಾಯ

# ಅಪ್ರಮೇಯ ಗುಮಾಸ್ತನಾದ್ದು

ಮೇಲೆ ಹೇಳಿದಂತೆ ಅನೇಕ ಸರದಾರರು ಈ ಹನುಮಂತರಾವ್ ರಣನವರಿಗೆ ಕಾಗದಗಳನ್ನು ಬರೆಯುತ್ತಿದ್ದರು. ಅಭಿಮಾನವನ್ನಿಟ್ಟರೆ ಪೂರ್ಣವಾದ ಅಭಿಮಾನವನ್ನು ಇಡುವುದು. ದ್ವೇಷವನ್ನು ಹಿಡಿದರೆ ಕೊನೆಯವರೆಗೂ ಸಾಧಿಸುವುದು. ಉಪಕಾರ ಮಾಡಲು ಆರಂಭಿಸಿದರೆ ಆ ಹೊರೆಯಲ್ಲಿ ಉಪಕೃತನು ದಣಿಯ ಬೇಕಲ್ಲದೆ ತಮಗೆ ತೃಪ್ತಿಯಿಲ್ಲ. ಸಾಧಾರಣವಾಗಿ ಎಲ್ಲರಲ್ಲಿಯೂ ತಾಳ್ಮೆಯನ್ನೂ ಮೃದುಭಾವವನ್ನೂ ತೋರಿಸುವುದು. ಗುಣದಲ್ಲಿಯೇ ಪಕ್ಷಪಾತ. ಇದೆಲ್ಲಾ ಆಗಿನ ಕಾಲದಲ್ಲಿ ಬರುತಾ ಇದ್ದ ಇಂಗ್ಲಿಷ್

ಸರದಾರರ ಸುಗುಣಗಳಾಗಿದ್ದವು. ಇದರಿಂದ ನಮ್ಮ ದೇಶೀಯರು ಇವರುಗಳನ್ನು ವಿಶೇಷವಾಗಿ ನಂಬಿ ಮರ್ಯಾದೆ ತೋರಿಸುತ್ತಿದ್ದರು. ಹನುಮಂತರಾಯನ ಪರಾಕ್ರಮವೂ ಅವನ ನಿಜವಾದ ಗುಣಗಳೂ ಅವರುಗಳ ಮೈತ್ರಿಯನ್ನು ಆಕರ್ಷಿಸಿದವು. ಇವನಿಗೆ ಕೆಲವರು ಮರಾಟಿ ಭಾಷೆಯಲ್ಲಿಯೂ ಕೆಲವರು ಆಗಿನ ಕಾಲದಲ್ಲಿ ರಾಜಭಾಷೆಯಾಗಿ ಅಂಗೀಕಾರವಾಗಿದ್ದ ಫಾರ್ಸಿ ಭಾಷೆಯಲ್ಲಿಯೂ ಕ್ಷೇಮಸಮಾಚಾರಗಳನ್ನು ಬರೆದು ಕಳುಹಿಸುತ್ತಿದ್ದರು. ಅವರುಗಳಿಗೆ ಆಗಾಗ್ಯೆ ಜವಾಬು ಬರೆಯಬೇಕಾದ ಸಮಯ ಬಹಳವಾಗಿ ಬೀಳುತ್ತಿತ್ತು. ಚಿಕ್ಕವಯಸ್ಸಿನಿಂದಲೂ ದಂಡಿನ ಕೆಲಸದಲ್ಲಿಯೇ ಕಾಲವನ್ನು ಕಳೆಯುತ್ತಾ ಇದ್ದ ಹನುಮಂತರಾಯನಿಗೆ ಮರಾಟಿಯಲ್ಲಿ ದಪ್ಪ ದಪ್ಪನಾಗಿ ಸೊಟ್ಟನಾಗಿ ಅಕ್ಷರ ಬರೆಯುವ ಮಟ್ಟಿಗೆ ಬರುತ್ತಿತ್ತು. ಇದು ಹೊರತು ಇನ್ನೇನೂ ಬರವಣಿಗೆ ಬಾರದು. ಲೆಕ್ಕಾಚಾರದಲ್ಲಿ ಪರಿಶ್ರಮ ಕಡಮೆ. ಮನೆಯ ಆದಾಯ ವೆಚ್ಚವೇನೋ ವಿಶೇಷವಾಗಿಯೇ ನಡೆಯುತ್ತಿತ್ತು. ಈತನಿಗೂ ಈತನ ಹೆಂಡತಿಯಾದ ದುರ್ಗಾಬಾಯಿಗೂ ದೈವಭಕ್ತಿ ಹೆಚ್ಚಾಗಿದ್ದ ಕಾರಣ ವ್ರತಕಥೆಗಳೂ ದಾನಧರ್ಮಗಳೂ ಹೆಚ್ಚಾಗಿಯೇ ಮನೆಯಲ್ಲಿ ಜರುಗುತ್ತಿದ್ದವು.

ಇದೂ ಅಲ್ಲದೆ ರತ್ನ ಪರೀಕ್ಷೆಯಲ್ಲಿ ಹನುಮಂತರಾಯನು ಬಹು ಚತುರನಾಗಿದ್ದದರಿಂದ ಅನೇಕ ಜನ ವರ್ತಕರು ರತ್ನ ಪಡಿ ವ್ಯಾಪಾರಕ್ಕಾಗಿ ಈತನ ಮನೆಗೆ ಬರುತ್ತಾ ವ್ಯಾಪಾರವನ್ನು ಮಾಡುತ್ತಾ ಇದ್ದರು. ಈತನ ಸ್ವಂತ ಕೆಲಸದ ಸ್ವಭಾವ ಹೀಗೆ ಇದ್ದ ಕಾರಣ ಪಾರ್ಸಿ ಕಾಗದಗಳಿಗೆ ಪಾರ್ಸಿಯಲ್ಲಿಯೂ ಮರಾಟಿ ಕಾಗದಗಳಿಗೆ ಮರಾಟಿಯಲ್ಲಿಯೂ ಜವಾಬನ್ನು ಬರೆಯಲು ಎರಡು ಭಾಷೆಯಲ್ಲಿಯೂ ಬುದ್ಧಿವಂತರಾದ ಮುತ್ಸದ್ದಿೀರನ್ನು ಬೇರೆ ಬೇರೇ ಇರಿಸಿಕೊಳ್ಳಬೇಕಾಗಿತ್ತು. ಮನೆಯ ಆದಾಯ ವೆಚ್ಚದ ಲೆಕ್ಕ ಪತ್ರಗಳನ್ನು ಬರೆಯಲು ಬೇರೇ ಒಬ್ಬ ಗುಮಾಸ್ತನನ್ನು

ಇರಿಸಿಕೊಳ್ಳಬೇಕಾಗಿತ್ತು. ಹೀಗೆ ಮೂರು ವಿಧದ ಮುನಷಿಗಳನ್ನು ಇರಿಸಿಕೊಂಡು ಅವರ ಯೋಗ್ಯತಾನುಸಾರವಾದ ಸಂಬಳವನ್ನು ಕೊಡುವುದು ತಿಣ್ಣವಾಗಿತ್ತು. ಇದೂ ಅಲ್ಲದೆ ದೊಡ್ಡ ಸರದಾರರಿಗೆ ಬರೆಯತಕ್ಕ ಕಾಗದಗಳ ವಿಷಯವೆಲ್ಲಾ ಕೇವಲ ರಹಸ್ಯವಾಗಿರಬೇಕಾಗಿತ್ತು. ಈ ರಾಜಕಾರ್ಯಕ್ಕೂ ಮನೆಯ ಆಡಳಿತದ ಲೆಕ್ಕ ಪತ್ರಗಳಿಗೂ ಬಹು ನಂಬಿಕೆಯಾದ ಸೋಸಿದ ಜನರು ಇರಬೇಕಲ್ಲದೆ ಸಿಕ್ಕಿದವರನ್ನು ಇರಿಸಿಕೊಳ್ಳುವುದಕ್ಕಾಗುವುದಿಲ್ಲ. ಇದಕ್ಕೆ ತಕ್ಕ ಜನರನ್ನು ಹುಡುಕುತಾ ಸರಿಯಾದವರು ಯಾರೂ ಸಿಕ್ಕದೇ ಹೋದಕಾರಣ ಹನುಮಂತರಾಯನು ಬಹಳವಾಗಿ ಪೇಚಾಡುತಾ ಇದ್ದನು.

ಹೀಗಿರುವಲ್ಲಿ ಈತನ ಸ್ಥಿತಿಯನ್ನು ತಿಳಿದು ತಕ್ಕ ಗುಮಾಸ್ತೆಯನ್ನು ಹುಡುಕುತಾ ಇದ್ದ ಒಬ್ಬ ಮಿತ್ರನು :—

ಮಿತ್ರ—ರಾವಜಿ ಸಾಹೇಬ್, ತಮ್ಮ ಕೆಲಸಗಳನ್ನೆಲ್ಲಾ ನೆರವೇರಿಸುವುದಕ್ಕೆ ಕಡೇ ಪಕ್ಷಕ್ಕೆ ಫಾರ್ಸಿ, ಮರಾಟಿ ಈ ಎರಡು ಭಾಷೆಗಳನ್ನಾದರೂ ಚೆನ್ನಾಗಿ ತಿಳಿದವರು ಬೇರೆ ಬೇರೇ ಇರಬೇಕು, ಇಂಗ್ರೀಜಿ ಭಾಷೆಯಲ್ಲಿ ಕಾಗದ ಪತ್ರಗಳನ್ನು ನಡಿಸತಕ್ಕ ಯೋಗ್ಯತೆಯು ನಮ್ಮ ಜನರಿಗೆ ಯಾರಿಗೂ ಇಲ್ಲ. ಅಂಥವರು ಸಿಕ್ಕುವುದೂ ಇಲ್ಲ. ಅಂಥಾ ಭಾರೀ ದುಬಾಷಿಗಳು ಯಾರಾದರೂ ಸಿಕ್ಕಿದರೆ ಅವರ ಯೋಗ್ಯತೆಗೆ ತಕ್ಕ ಹಾಗೆ ಮುನ್ನೂರು ವರಹ, ನಾನೂರು ವರಹ ಸಂಬಳವನ್ನು ಕೊಟ್ಟು ಅವರನ್ನು ಇರಿಸಿಕೊಳ್ಳೋಣವು ದೊಡ್ಡ ಆನೆ ಕಟ್ಟಿದಂತಾಗುವುದು. ಮನವಾರ್ತೆ ಕೆಲಸಕ್ಕಂತೂ ಒಬ್ಬ ಬೇಕೇ ಬೇಕು.

ಹನುಮಂತರಾವ್—ನೀನು ಹೇಳಿದ್ದೆಲ್ಲಾ ನಿಜ. ಈ ಯೋಚನೆಯೇ ನನಗೆ ಹಗಲು ರಾತ್ರಿಯೂ ಬಾಧಿಸುತ್ತಿದೆ.

ಮಿತ್ರ—ಒಬ್ಬ ದೇಶಸ್ಥ ಬ್ರಾಹ್ಮಣನನ್ನು ಇರಿಸಿಕೊಂಡರೆ ಕಾಗದ ಪತ್ರಗಳಿಗೂ ಖಾಸಗಿ ಲೆಕ್ಕಕ್ಕೂ ಅವನು ಸಾಕು. ಫಾರ್ಸಿ

ಕಾಗದಗಳಿಗೆ ಯಾರಾದರೂ ಮುಸಲ್ಮಾನರು ದೊರೆಯುತಾರೆ. ಆಗಾಗ್ಗೆ ಕೆಲಸಾ ತೂಗಿಸಿಕೊಂಡು ಅವರಿಗೆ ಏನಾದರೂ ಕೈಲಿಆಸೆ ಬಾಯಾಸೆ ಮಾಡುತಾ ಇದ್ದರೆ ಸಾಕಾಗಿದೆ.

ಹನುಮ—ನೀನು ಹೇಳಿದ ಹಾಗೆ ಆಗಬಹುದು. ಒಂದು ವಿಷಯ ಮಾತ್ರ ಅನುಮಾನವಾಗಿ ಕಾಣುತ್ತೆ. ಹಿಂದವಿ ಕಾಗದಗಳು ಹೇಗೆಯೋ ಫಾರ್ಸಿ ಕಾಗದಗಳೂ ಹಾಗೆಯೇ ದೊಡ್ಡ ಸರದಾರರುಗಳಿಗೆ ಬರೆಯತಕ್ಕದ್ದಾಗಿದೆ. ಅನೇಕ ರಹಸ್ಯ ವಾದ ವಿಚಾರಗಳನ್ನು ಅವರೂ ಬರೆಯುತಾರೆ. ನಾನೂ ಬರಿಸ ಬೇಕಾಗುವುದು. ಟಿಪ್ಪುಸುಲ್ತಾನ ಅಡಗಿ ಹೋದರೂ ಈ ಪುಡಿ ತುರುಕರ ಪ್ರತಾಪ ಅಡಗಿಲ್ಲ. ಅಂಥವರನ್ನು ನಂಬಿ ನಾನು ಕೆಲಸಗಳನ್ನು ಮಾಡುವುದು ಹೇಗೆ? ನಮ್ಮ ಕಾಗದಗಳ ಗುಟ್ಟೂ ರಾಜಕೀಯ ಸಂಗತಿಗಳೂ ಹೊರಕ್ಕೆ ಬಂದರೆ ನನ್ನನ್ನು ಯಾರು ನಂಬಿಯಾರು? ತುರುಕರನ್ನು ಇಟ್ಟುಕೊಳ್ಳತಕ್ಕದ್ದೇನೋ ನನಗೆ ಸರಿಯಾಗಿ ತೋರುವುದಿಲ್ಲ. ಈ ವಿಷಯದಲ್ಲಿ ಬಹು ಮುಖ ಸುತ್ತಾಗಿದೆ.

ಮಿತ್ರ—ಹಾಗಾದರೆ ನಿಮ್ಮ ಕೆಲಸಕ್ಕೆ ತಕ್ಕ ಮನುಷ್ಯ ನಮ್ಮ ಶ್ರೀರಂಗಪಟ್ಟಣಕ್ಕೆ ಬಂದಿದಾನೆ. ಫಾರ್ಸಿಯಲ್ಲಿ ಅವನಿಗೆ ಇರುವ ಪಾಂಡಿತ್ಯವನ್ನು ದೊಡ್ಡ ಮೌಲ್ವಿಗಳೆಲ್ಲಾ ಶ್ಲಾಘಿಸುತಾರೆ. ಹಿಂದವಿಯಲ್ಲಿಯೂ ಕನ್ನಡದಲ್ಲಿಯೂ ಒಳ್ಳೇ ಬುದ್ಧಿವಂತ. ಲೆಕ್ಕಾ ಚಾರ ಮಾಡುವುದನ್ನು ಬಹಳ ಚೆನ್ನಾಗಿ ಬಲ್ಲವನು. ಇದಲ್ಲದೆ ಒಳ್ಳೇ ನಂಬಿಕೆಯಾದ ಮನುಷ್ಯ.

ಹನುಮ—ಅಂಥವನೇ ನನಗೆ ಬೇಕು. ಅವನನ್ನು ಅಗತ್ಯ ವಾಗಿ ಕರೆದುಕೊಂಡು ಬನ್ನಿ.

ಮಿತ್ರ—ಕರೆದು ತಂದೇನು. ಆದರೆ ಅವನಲ್ಲಿ ಎರಡು ದೋಷ ಗಳುಂಟು. ಅವನಿಗಿರುವ ಯೋಗ್ಯತೆಗೆ ೫ ವರಹ ಸಂಬಳಕ್ಕಿಂ ತಲೂ ಕಡಮೆಯಾಗಿ ಬರಲಾರ.

ಹನುಮ—ನಾನು ಅವನಿಗೆ ೫ ವರಹ ಸಂಬಳ ಕೊಟ್ಟರೂ ಕೊಡುತೇನೆ. ಚಿಂತೆ ಇಲ್ಲ. ಅವನು ನಮಗೆ ದೊರಕುವಂತೆ ಉಪಾಯವನ್ನು ಮಾಡಿ ಯೋಗ್ಯತೆಗೆ ತಕ್ಕ ಸಂಬಳವನ್ನು ಕೇಳಿದರೆ ಅದೇನೂ ದೋಷವಲ್ಲ. ಇನ್ನೊಂದೇನೋ ಅನುಮಾನವಾಗಿ ಹೇಳಿದಿರಲ್ಲ, ಅದೇನು?

ಮಿತ್ರ—ಅವನು ಜಾತಿಯಲ್ಲಿ ಬ್ರಾಹ್ಮಣ. ಇದೇ ಎರಡನೇ ದೋಷ.

ಹನುಮ—ಆತ ಬ್ರಾಹ್ಮಣನಾದರೆ ಆಕ್ಷೇಪಣೆ ಏನು? ಮತ್ತೂ ಅನುಕೂಲವೇ

ಮಿತ್ರ—ಹಾಗಲ್ಲ ಬ್ರಾಹ್ಮಣರು ನಿಮಗೆ ಮೋಸ ಮಾಡಿದರು ಎಂದು ನೀವು ಸಮಯ ಬಂದಾಗೆಲ್ಲಾ ಹೇಳುತ್ತಲೇ ಇರುತೀರಿ. ಇದರಿಂದ ಬ್ರಾಹ್ಮಣ ಜಾತಿಯಲ್ಲಿಯೇ ನಿಮಗೆ ದ್ವೇಷವಿದೆ ಎಂದು ನಾನು ತಿಳಿದುಕೊಂಡಿದೇನೆ.

ಹನುಮ—ರಾಮ, ರಾಮ! ಅವರಲ್ಲಿ ನನಗೆ ದ್ವೇಷವುಂಟೆ? ಎಂದಿಗೂ ಇಲ್ಲ.

ಮಿತ್ರ–ನೀವು ಮಾತನಾಡುವಾಗಲೆಲ್ಲಾ ಬ್ರಾಹ್ಮಣರ ಮೇಲಿನ ಆಕ್ಷೇಪಣೆ ಹೆಚ್ಚಾಗಿರುವುದು. ಅವರು ಹೀಗೆ, ಹಾಗೆ, ಅವರು ನನಗೆ ಮೋಸ ಮಾಡಿದರು, ಅವರಿಂದ ನಾನು ಕೆಟ್ಟೆ ಎಂದು ಅನೇಕ ವೇಳೆ ನನ್ನೊಡನೆ ಹೇಳಿದೀರಿ. ಇದು ನಿಜವೋ ಸುಳ್ಳೋ ?

ಹನುಮ—ನಾನು ಬ್ರಾಹ್ಮಣರನ್ನೆಲ್ಲಾ ಅನ್ನುವುದಿಲ್ಲ. ಅವರಿಲ್ಲದಿದ್ದರೆ ಮುಂದೆ ನಮಗೆ ಯಾವ ಕೆಲಸವೂ ನಡೆಯುವುದಿಲ್ಲ. ನಮ್ಮ ಛತ್ರಪತಿ ಶಿವಾಜಿ ಮಹಾರಾಜರು ಸಹಿತ ಬ್ರಾಹ್ಮಣರಿಂದಲೇ ಮುಂದಕ್ಕೆ ಬಂದದ್ದು. ನಾವು ಇದ್ದರೆ ಬುದ್ಧಿ ಕಲಿಸುವುದಕ್ಕೆ ಅವರು ಬೇಕು, ನಾವು ಸತ್ತರೆ ಗತಿ ಕಾಣಿಸುವುದಕ್ಕೆ ಅವರು ಬೇಕು. ಅವರ ಮೇಲೆ ನನಗೆ ದ್ವೇಷವೇನೂ ಇಲ್ಲ. ನಾನು

ಬದುಕಿ ಬಾಳಿದ್ದು ಅವರಿಂದಲೇ. ಭೋಸಲೆ ಮನೆತನದವರೆಲ್ಲರೂ ಅವರಲ್ಲಿ ಎಷ್ಟೋ ಭಕ್ತಿಯನ್ನಿಟ್ಟುಕೊಂಡು ಇದಾರೆ. ಆದರೆ ನಾವು ಅವರನ್ನು ನಂಬಿದಷ್ಟೂ ಮೋಸ ಮಾಡಬಹುದೆ? ಸಾಹು ಮಹಾರಾಯರನ್ನು ಮೂಲೆಗೆ ಕೂರಿಸಿ ಅವರ ರಾಜ್ಯವನ್ನೆಲ್ಲಾ ಆಕ್ರಮಿಸಿ ತಾವೇ ತಾವಾಗಿ ಕೂತುಕೊಂಡವರು ಬ್ರಾಹ್ಮಣ ರಲ್ಲವೆ? ರಾಜ್ಯವಿಚಾರದ ಮಾತು ಹಾಗಿರಲಿ, ನನ್ನ ಮಟ್ಟಿಗೆ ಹೇಳುತೇನೆ. ಮೊದಲಿಂದ ನಾನು ಬಕ್ಷಿಯವರ ತುಕಡಿಯಲ್ಲಿಯೇ ಇದ್ದೆ. ಅವರಲ್ಲಿಯೇ ಕೆಲಸಾ ಮಾಡಿ ಮುಪ್ಪಾದೆ. ಪ್ರಾಣದ ಮೇಲಿನ ಆಶೆ ಇಲ್ಲವೆ ಎಷ್ಟೋ ಸಾಹಸ ಪಟ್ಟು ಕೆಲಸಗಳನ್ನು ಮಾಡಿದೆ. ಕಡೆಗೆ ನದೀತೀರದಲ್ಲಿ ಕೂತಿದ್ದ ಶ್ರೀಮಂತರನ್ನು ಹಿಡಿಯಲು ಹೋದ ೨೨ ಕುದುರೆಗಳೊಳು ಉಳಿದ ೭ ಕುದುರೆ ಗಳಲ್ಲಿ ನನ್ನದೊಂದು. ಮೊದಲು ಬಾಜೀರಾಯರ ಸಮೀಪಕ್ಕೆ ಹೋಗಿ ನಿಂತವ ನಾನು. ತರುವಾಯ ಬಕ್ಷಿಯವರು ಬಂದರು. ಶ್ರೀಮಂತರನ್ನು ಕೈಸೆರೆ ಹಿಡಿದೆವು. ಎಪ್ಪತ್ತೆರಡು ಕೋಟಿ ರೂಪಾ ಯಿನ ಸೀಮೆಯೇ ನಮ್ಮ ಕೈಗೆ ಸಿಕ್ಕಿತು. ಅವರ ಶಿವಪೂಜೇ ಸಾಮಾನೆಲ್ಲಾ ಬಕ್ಷಿಯವರ ವಶವಾಯಿತು. ಅದು ಲೂಟೀ ಮಾಲಲ್ಲವೆಂತಲೂ ಅದನ್ನು ನಮಗೆ ಹಂಚುವುದಿಲ್ಲವೆಂತಲೂ ಹೇಳಿಬಿಟ್ಟರು. ನಮಗೆ ಇನ್ನೇನು ಆಶೆ ಇದೆ? ಕೊನೆಗೆ ತುಕಡಿ ಅಧಿಕಾರಿಗಳಿಗೆಲ್ಲಾ ಹುಜೂರಲ್ಲಿ ಭೇಟಿ ಮಾಡಿಸಿ ಮರ್‍ಯಾದೆ ಮಾಡಿಸಿದರು. ಅವರೆಲ್ಲಾ ಬ್ರಾಹ್ಮಣರಾದ್ದರಿಂದ ಖಿಲ್ಲತ್ತುಗಳೂ ಇನಾಮುಗಳೂ ದೊರೆತವು. ನಾನು ಮರಾಟೆಯವನಾದ್ದರಿಂದಲ್ಲವೆ ನನ್ನನ್ನು ಕೇಳುವವರೇ ಇಲ್ಲದಂತಾಯಿತು?

ಮಿತ್ರ—ದಿಳ್ಳೀ ಜನಾನಿಯಲ್ಲಿ ಹುಟ್ಟಿ ಬೆಳೆದು ಜನಾನಿಯವರ ಮೂಲಕ ದಿಳ್ಳೀ ಷಹಸಾದೆಯಿಂದ ರಾಜ್ಯವನ್ನು ಹೊಂದಿದ ಸಾಹು ಮಹಾರಾಯನ ದರಬಾರು ಕಟ್ಟ ಕಡೆಗೆ ಯಾವ ಗತಿಗೆ ಇಳಿಯಿತು ಬಲ್ಲಿರ? ದೇಶದ ಆಡಳಿತವನ್ನೆಲ್ಲಾ ಪರಶುರಾಮ

ಪಂತರ ಮೂಲಕ ನಡಿಸುತಿರಲಿಲ್ಲವೆ? ದಕ್ಷಿಣದಲ್ಲಿ ಹೈದರಾಬಾದಿನವರು, ಉತ್ತರದಲ್ಲಿ ದಿಳ್ಳಿಯವರು, ಈ ಮಧ್ಯೆ ಅನೇಕವಾಗಿ ಹುಟ್ಟಿಕೊಂಡಿದ್ದ ಪುಂಡು ಪಾಳಯಗಾರರು, ಇವರೆಲ್ಲಾ ಸೇರಿ ಅಲ್ಪ ಸ್ವಲ್ಪವಾಗಿ ಉಳಿದಿದ್ದ ಮರಾಟಿ ಸೀಮೆಯನ್ನು ಪೂರ್ತಿಯಾಗಿ ನುಂಗಿಕೊಳ್ಳುವುದರಲ್ಲಿ ಸಿದ್ಧರಾಗಿದ್ದರು. ಅಂಥಾ ಕಷ್ಟ ಕಾಲದಲ್ಲಿ ಬೇಕಾದ ಸೇನೆಯನ್ನು ಕಟ್ಟಿ, ರಾಜ್ಯಭಾರವನ್ನು ಬಿಗಿಯಾಗಿ ಇಟ್ಟುಕೊಳ್ಳುವುದಕ್ಕೆ ಇನ್ನು ಯಾರೂ ಗತಿ ಇರಲಿಲ್ಲ. ಆಗ ಸಾಹು ಮಹಾರಾಯನು ಭೀತನಾಗಿ ನಮ್ಮ ರಾಜ್ಯವನ್ನು ಉಳಿಸಿಕೊಳ್ಳುವುದಕ್ಕೆ ಯಾರಿಗೆ ಯೋಗ್ಯತೆ ಇದೆಯೋ ಯಾರು ಹೆಚ್ಚಾದ ಸೇನೆಯನ್ನು ತಯಾರಾಗಿ ಇಟ್ಟಿದಾರೆಯೋ ಅವರನ್ನು ನನ್ನ ಪೇಷ್ವೆಯಾಗಿ ನೇಮಿಸಿ ರಾಜ್ಯದ ವೈವಟ್ಟನ್ನು ಅವರ ಕೈಗೆ ಬಿಡುತೇನೆ ಎಂದು ಹೇಳಲಾಗಿ, ರಾಜ್ಯಕ್ಕೆ ದಕ್ಷನಾಗಿ ನಾನು ನಿಂತುಕೊಳ್ಳುತೇನೆಂದು ಯಾರೂ ಬರಲಿಲ್ಲ. ಬಾಳಾಜಿ ವಿಶ್ವನಾಥಪಂತ ಮಾತ್ರ ಸಾಹುವನ್ನು ಕುರಿತು—ಮಹಾರಾಜಾಧಿರಾಜ್. ಅರವತ್ತು ಸಾವಿರ ಕುದುರೆಗಳಿಗೆ ಜೀನು ಹಾಕಿ ಸವಾರರು ಏರಿಕೊಂಡು ಯುದ್ಧಕ್ಕೆ ಹೊರಡಲು ಈ ಕ್ಷಣ ಸಿದ್ಧವಾಗಿದಾರೆ, ಬಾರಗೀರು ಸೇರಿ ಇದಕ್ಕೆ ಎರಡರಷ್ಟು ಫೌಜು ಇದೆ. ಅಪ್ಪಣೆಯಾದರೆ ಯಾವ ದಂಡಿನ ಮೇಲಾದರೂ ಯುದ್ಧಕ್ಕೆ ನಿಲ್ಲಲು ಸಿದ್ಧವಾಗಿದೇನೆ. ರಾಜ್ಯಭಾರಕ್ಕಾಗಿ ನಾನು ಮಾಡಿರುವ ಏರ್ಪಾಡು ಚಿತ್ತಕ್ಕೆ ಗೊತ್ತೇ ಇದೆ ಎಂದು ಅರಿಕೆಮಾಡಿದನು. ಇದನ್ನು ಕೇಳಿ ಸಾಹು ಮಹಾರಾಯನು ಚೆನ್ನಾಗಿ ಯೋಚನೆಮಾಡಿ ಬಾಳಾಜಿ ವಿಶ್ವನಾಥಪಂತ ಒಬ್ಬನೇ ಆಡಳಿತವನ್ನು ನಡಿಸಲು ಯೋಗ್ಯನಲ್ಲವೆ ಮತ್ತೆ ಯಾರಿಗೂ ಆ ಸಾಮರ್ಥ್ಯವಿಲ್ಲವೆಂದು ನಿರ್ಧರ ಮಾಡಿಕೊಂಡು ಬಾಳಾಜಿಪಂತನನ್ನು ತನ್ನ ಪೇಷ್ವೆ (ಮಂತ್ರಿ) ಯಾಗಿ ನೇಮಿಸಲಿಲ್ಲವೆ? ತರುವಾಯ ರಾಜರ ಕಾಟ ಕಾಯಗಳು ಹೆಚ್ಚುತಾ ಬಂದ ಹಾಗೆಲ್ಲಾ ಬಿಗಿಯಾದ ದರಬಾರನ್ನು ನಡಿಸುವುದಕ್ಕೆ

ಅಗತ್ಯವಾದ ಏರ್ಪಾಡುಗಳನ್ನು ಮಾಡಿ ಬಾರಾಭಾಯಿಗಳನ್ನು ನೇಮಿಸಿ ಮರಾಟೆ ಸಂಸ್ಥಾನವನ್ನು ವಿಸ್ತರಿಸಿ ಉದ್ಧಾರಮಾಡಿದವರು ಪೇಷ್ವೆಗಳಲ್ಲವೆ? ಶಕ್ತಿಯೂ ಪರಾಕ್ರಮವೂ ಇದ್ದ ಕಡೆಗೆ ರಾಜ್ಯಲಕ್ಷ್ಮಿಯೂ ಸೇರಿದಳು. ಈ ಸಾಮರ್ಥ್ಯವನ್ನು ಇತರರು ಯಾಕೆ ತೋರಿಸಬಾರದಾಗಿತ್ತು, ಯಾಕೆ ರಾಜ್ಯವನ್ನು ಕಟ್ಟಬಾರದಾಗಿತ್ತು? ಈ ಪೇಷ್ವೆಗಳ ದೆಸೆಯಿಂದ ನಮ್ಮ ಹಿಂದೂಸ್ಥಾನ ದೇಶಕ್ಕೇ ಶಾಶ್ವತವಾದ ಕೀರ್ತಿ ಬಂತಲ್ಲ. ಈ ಹಿಂದಿನ ಕಥೆಯನ್ನೆಲ್ಲಾ ಮರೆತು ನೀವೂ ತಿಳಿಯದವರಂತೆಯೇ ಪೇಷ್ವೆಗಳನ್ನಾಡಬಹುದೆ? ನಿಮ್ಮ ಸ್ವವಿಷಯದಲ್ಲಿ ತಾನೇ ಆಯಿತು, ಬಕ್ಷಿಯವರು ನಿಮಗೆ ಮಾಡಿದ್ದೇನು? ಮೊದಲಿನಿಂದಲೂ ನಿಮ್ಮನ್ನು ಮುಂದಕ್ಕೆ ತಂದವರು ಅವರೇ ಅಲ್ಲವೆ? ಲೂಟಿಯಾದ್ದರಲ್ಲಿಯೂ ಪೇಷ್ವೆಯ ಶಿವಪೂಜೇ ಸಾಮಾನು ಹೊರತು ಉಳಿದ ಕೊಳ್ಳೆಯನ್ನೆಲ್ಲಾ ಸೇನೆಯವರಿಗೇ ಬಿಟ್ಟು ಬಿಟ್ಟರಲ್ಲವೇ? ಆ ಶಿವಪೂಜೇ ಸಾಮಾನನ್ನೂ ಕೂಡ ತಾವು ಇಟ್ಟುಕೊಳ್ಳದೆ ವಿಶಿಷ್ಟವನ್ನೂ ದೊರೆಗಳಿಗೇ ಒಪ್ಪಿಸಿದರು.

ಹನುಮ—ಶಿವಪೂಜೇ ಸಾಮಾನು ಕೋಟಿ ರೂಪಾಯಿ ಬಾಳತಕ್ಕದ್ದೆಂದರೂ ಬಾಯಿ ನೋಯುತ್ತೆ. ಅಷ್ಟೊಂದು ಅಮೋಘವಾದ್ದು. ಅದನ್ನು ಹುಜೂರಲ್ಲಿ ಬಕ್ಷಿಯವರು ಒಪ್ಪಿಸಿದರೆಂದು ಯಾರು ಹೇಳಿದರು?

ಮಿತ್ರ—ಇದನ್ನು ಕಣ್ಣಾರ ಕಂಡವರು ಹೇಳಿದರು. ಯುದ್ಧದ ವೀರರುಗಳಿಗೆ ಅರಮನೆಯಲ್ಲಿ ಬಹುಮಾನವಾಯಿತಷ್ಟೆ. ಬಕ್ಷಿಯವರು ಹೊರತು ಇನ್ನು ಯಾರಾದರೂ ಬ್ರಾಹ್ಮಣರು ಇದ್ದರೆ? ಬಕ್ಷಿಯವರು ಸಿಫಾರಸು ಮಾಡಿದವರೆಲ್ಲಾ ಮರಾಟೆಯವರು ಮುಸಲ್ಮಾನರು. ದಂಡಿನವರ ಸಂಗಡ ಎಲ್ಲರಂತೆಯೇ ನೀವೂ ಬಂದಿದ್ದರೆ ನಿಮ್ಮ ಕೀರ್ತಿಯು ಆಗ ದರಬಾರಿನಲ್ಲಿ ಹೊಗಳಲ್ಪಡದೇ ಇರುತಿತ್ತೆ? ಸಮಯ ಮೀರಿ ಹೋಯಿತು, ಯತ್ನವಿಲ್ಲ.

ಹನುಮ—ಬಕ್ಷಿಯವರ ಮೇಲೆ ನಾನೇನೂ ದೋಷಾರೋಪಣೆ ಮಾಡಲಿಲ್ಲ. ಒಬ್ಬರಿಗೆ ಹೇಳಿದ ಮಾತಲ್ಲ. ಬ್ರಾಹ್ಮಣರೆಲ್ಲರೂ ತಮ್ಮ ಜನರನ್ನೇ ಮುಂದಕ್ಕೆ ತರುತಾರೆ. ಇತರ ಜಾತಿಯವರು ವೃದ್ಧಿಗೆ ಬರಬೇಕೆಂದು ಅವರ ಮನಸ್ಸಿನಲ್ಲಿಲ್ಲ.

ಮಿತ್ರ—ನೀವು ಹೇಳುವುದಕ್ಕೂ ಕಾರ್ಯದಲ್ಲಿ ನಡೆಯುವುದಕ್ಕೂ ವ್ಯತ್ಯಾಸವಿದೆ. ಸರ್ವಾಧಿಕಾರವೂ ಬ್ರಾಹ್ಮಣರದೇ ಆಗಿದೆ ಎಂದು ನೀವೇ ಒಪ್ಪಿಕೊಳ್ಳುತೀರಿ. ಹಾಗಾದರೆ ಬೇಕಾದ ಕೆಲಸವನ್ನು ಅವರು ಮಾಡಬಹುದು, ಹೌದೋ ಅಲ್ಲವೊ?

ಹನುಮ—ಅದೇ ಪ್ರಕಾರ ಎಲ್ಲಾ ಅಧಿಕಾರವೂ ಅವರದೇ ಆಗಿವೆಯಷ್ಟೆ.

ಮಿತ್ರ—ಹಾಗಾದರೆ ನಿಮಗೆ ಅಧಿಕಾರ ಹೇಗೆ ಬಂತು? ಇನ್ನೂ ಅನೇಕ ಬ್ರಾಹ್ಮಣರಿದಾರಲ್ಲ. ಅವರಿಗೆಲ್ಲಾ ಹುದ್ದೆಗಳೂ ಸರ್ಕಾರಿ ಜೀವನೋಪಾಯಗಳೂ ಇದೆಲ್ಲಾ ಹೇಗೆ ದೊರೆಯಿತು? ಸಮಸ್ತ ಅಧಿಕಾರ ಸಂಪತ್ತೂ ಅವರ ಕೈಯಲ್ಲಿರುವಾಗ ಇತರ ವರ್ಣದವರನ್ನು ಅವರು ಸರ್ಕಾರದ ನೌಕರಿಯಿಂದ ತೆಗೆದುಬಿಡಬಹುದಷ್ಟೆ. ಯಾಕೆ ತೆಗೆಯಲಿಲ್ಲ?

ಹನುಮ ಎಲ್ಲಾ ಇತರ ಜಾತಿಯವರನ್ನೂ ಸರ್ಕಾರದ ನೌಕರಿಯಿಂದ ತೆಗೆದು ಬಿಡುವ ಸಾಮರ್ಥ್ಯ ಅವರಿಗಿಲ್ಲ. ಆದ್ದರಿಂದ ತೆಗೆಯಲಿಲ್ಲ. ಹಾಗೆಮಾಡಿದರೆ ಒಂದು ನಿಮಿಷದಲ್ಲಿ ಬ್ರಾಹ್ಮಣ ಜಾತಿಯೇ ಹುಟ್ಟಲಿಲ್ಲ ಎನಿಸಿಬಿಟ್ಟೇವು. ದೊರೆತನ ಮಾಡುವರು ಸುಮ್ಮನಿದ್ದಾರೆ?

ಮಿತ್ರ—ಹಾಗಾದರೆ ಸರ್ವಾಧಿಕಾರವೂ ಅವರ ಕೈಲಿದೆ ಎಂಬ ಮಾತು ಸುಳ್ಳಾಯಿತಲ್ಲ? ದೊರೆತನ ಮಾಡುವವರು ಬೇರೆ ಇದಾರೆ ಎಂದ ಮೇಲೆ ಸಮಸ್ತ ಶಕ್ತಿಯೂ ಅವರಲ್ಲಿದ್ದಂತಾಯಿತು. ನಮ್ಮ ಹಿಂದುಸ್ಥಾನದಲ್ಲಿ ಯಾವ ದೇಶವನ್ನು ನೋಡಿಕೊಂಡು ಹೋದರೂ ಬ್ರಾಹ್ಮಣರಿಗೆ ದೊರೆತನವಿಲ್ಲ. ಬ್ರಾಹ್ಮಣೇತರರೇ

ಅರಸರಾಗಿದಾರೆ. ಕ್ಷತ್ರಿಯರು ಅರಸಾಗಬೇಕು, ಬ್ರಾಹ್ಮಣರು ಮಂತ್ರಿಯಾಗಬೇಕು. ಹೀಗೆಯೇ ಪುರಾಣಾದಿಗಳಲ್ಲಿಯೂ ಹೊಗಳಿ ಹೋಗಿದೆ. ಹೀಗಿರುವಲ್ಲಿ ಬ್ರಾಹ್ಮಣರ ಮೇಲೆ ದೋಷಾರೋಪಣೆ ಮಾಡುವುದು ಹೇಗೆ? ಇದರಲ್ಲಿ ಕೆಲವು ಸೂಕ್ಷ್ಮಾಂಶಗಳಿವೆ. ಅದು ನೋಡಿ ತಿಳಿಯತಕ್ಕ ಸಂಗತಿಯಲ್ಲದೆ ಬರೀ ಪೊಳ್ಳುಮಾತಿನಿಂದ ತಿಳಿಯತಕ್ಕದ್ದಲ್ಲ. ರಾಜ್ಯಭಾರ ಕ್ರಮವನ್ನು ನಡಿಸಿ ಆಳುವುದಕ್ಕೆ ಬುದ್ಧಿ ಶಕ್ತಿಯೇ ಮುಖ್ಯವಾದ್ದು. ಇದಕ್ಕೆ ಒಳ್ಳೇ ಪಂಡಿತರಾಗಬೇಕು. ಬೇರೇ ಮಾರ್ಗವಿಲ್ಲ. ಅಕ್ಷರ ವ್ಯಾಸಂಗದಿಂದಲೇ ಜೀವನ ಮಾಡತಕ್ಕವರು ಬ್ರಾಹ್ಮಣರು. ಗ್ರಂಥ ವ್ಯಾಸಂಗದಿಂದ ಬುದ್ಧಿ ಹೆಚ್ಚುವುದು. ಹೀಗೆ ವೃದ್ಧಿಯನ್ನು ಹೊಂದುತಾ ಇರುವ ಬುದ್ಧಿಶಕ್ತಿಯು ತಂದೆಯಿಂದ ಮಗನಿಗೂ ಮಗನಿಂದ ಮೊಮ್ಮಗನಿಗೂ ತಲತಲಾಂತರಕ್ಕೂ ವ್ಯಾಪಿಸುತಾ ಬರುವುದು. ಹೀಗೆ ಹುಟ್ಟುತಾ ಬಂದದರ ಜೊತೆಗೆ ಆಯಾ ತಲೆಯವರು ಸ್ವತಃ ಸಂಪಾದಿಸಿದ ಶಕ್ತಿಯೂ ಸೇರಿಕೊಂಡು ಒಂದಕ್ಕೆ ನಾಲ್ಕಾಗಿ ವೃದ್ಧಿಯಾಗುತಾ ಬರುವುದು. ರಾಜ್ಯಭಾರವೆಂಬ ದೊಡ್ಡ ತೊಡಕಿನ ಯಂತ್ರವನ್ನು ನಡಿಸಲು ಬಹಳ ಬುದ್ಧಿವಂತರೇ ಅಗತ್ಯವಾದರಿಂದ ಈ ದೇಶದಲ್ಲಿ ಬ್ರಾಹ್ಮಣರಿಗೆ ಸರ್ಕಾರಿ ಉದ್ಯೋಗಗಳು ದೊರೆಯಲು ಕಾರಣವಾಯಿತು. ಅನೂಚಾನವಾಗಿ ಹಾಗೆಯೇ ನಡೆದು ಬರುತಾ ಇದೆ.

ಹನುಮ—ಇತರ ಜಾತಿಯವರಲ್ಲಿ ಯೋಗ್ಯರು ಇಲ್ಲವೊ?

ಮಿತ್ರ—ವಿಶೇಷನಾಗಿಲ್ಲ, ಸ್ವಲ್ಪಮಟ್ಟಿಗಾದರೂ ಇದಾರೆ. ಇತರ ಜಾತಿಯವರಲ್ಲಿರತಕ್ಕ ವಿದ್ಯಾವಂತರು ಯಾರಿಗೆ ಸರ್ಕಾರಿ ಉದ್ಯೋಗಗಳು ದೊರೆತಿಲ್ಲ? ಬೆಟ್ಟು ಮಡಿಸಿ ಹೇಳಿ. ಬುದ್ಧಿವಂತರಾದವರು ಬಹುಮಟ್ಟಿಗೆ ಮುಂದಕ್ಕೆ ಬಂದೇ ಬರುತಾರೆ. ಇದೂ ಅಲ್ಲದೆ ಅಧಿಕಾರದಲ್ಲಿರತಕ್ಕ ಬ್ರಾಹ್ಮಣರು ಯಾರುತಾನೆ ಜಾತಿ ಪಕ್ಷಪಾತದಿಂದ ಇತರರಿಗೆ ಉದ್ಯೋಗಗಳನ್ನು ಮಾಡಿಕೊಟ್ಟಿ

ದಾರೆ? ಬ್ರಾಹ್ಮಣರು ಸರ್ಕಾರಿ ಉದ್ಯೋಗಗಳಿಗೆ ಬರಲು ದಾರಿ ಮೂರಾಗಿದೆ, ಯೋಗ್ಯತಾ ವಿಷಯ ಮೊದಲನೇದು, ಉದ್ಯೋಗಸ್ಥರ ಸಂಬಂಧಿಗಳು ಸೇರತಕ್ಕದ್ದು ಎರಡನೇದು, ತಾನು ಉದ್ಯೋಗದಲ್ಲಿರುವಾಗ ತನ್ನ ಸಂಬಂಧಿಗಳಿಗೆ ಜೀವನೋಪಾಯವನ್ನು ಕಲ್ಪಿಸಿಕೊಡಬೇಕೆಂಬ ಆಸೆಯು ಮನುಷ್ಯ ಸಾಮಾನ್ಯರೆಲ್ಲರಿಗೂ ಇದೆ. ಯಾವ ವಿಧದಲ್ಲಿಯಾದರೂ ಸರಿಯೆ ಸ್ವಜನಾಭಿಮಾನವಿರತಕ್ಕದ್ದು ಸಹಜವಾಗಿದೆ. ಜೀವಲೋಕವನ್ನು ರಕ್ಷಿಸಬೇಕು, ಧರ್ಮವನ್ನು ರಕ್ಷಿಸಬೇಕು, ಸ್ವಧರ್ಮವನ್ನು ರಕ್ಷಿಸಬೇಕು, ಸ್ವಜನರನ್ನು ರಕ್ಷಿಸಬೇಕು. ಈ ನಾಲ್ಕು ಕಾರ್ಯಗಳೂ ತನ್ನ ಕರ್ತವ್ಯವೆಂದು ಶ್ರೀರಾಮನು ರಾಮಾಯಣದಲ್ಲಿ ಹೇಳಿದಾನೆ. ಆತ್ಮಸಂರಕ್ಷಣೆ ಮನುಷ್ಯನಿಗೆ ಮೊದಲನೇ ಕೆಲಸ, ಸ್ವಜನರ ಸಂರಕ್ಷಣೆ ಅವರವರ ಅಂತಸ್ತಿನ ಪ್ರಕಾರ ಆತ್ಮಸಂರಕ್ಷಣೆಗೆ ಸಂಬಂಧಪಟ್ಟದ್ದಾಗಿಯೇ ಇದೆ.

ಆ ಸ್ವಜನಾಭಿಮಾನವೇ ನೀವು ಈಗ ಆಡುವ ಮಾತಿಗೆ ಮುಖ್ಯವಾದ ಆಧಾರವಲ್ಲವೆ? ಅಂಥಾ ಅಭಿಮಾನ ನಿಮಗೂ ಇದ್ದೇ ಇದೆ. ಅದು ಸರ್ವರಿಗೂ ಇರಬೇಬೇಕು. ಅದು ಇಲ್ಲದಿದ್ದರೆ ಆ ಲೋಪವನ್ನು ಒಂದು ದುರ್ಗುಣದಲ್ಲಿ ಗಣನೆಮಾಡಬೇಕು. ಮನೇ ಗೆದ್ದು ಮಂದೇ ಗೆಲ್ಲು ಎಂದು ಗಾದೆ ಇದೆ. ನಾನು ಹೇಳುವ ಗುಣಕ್ಕೆ ಹೃದಯ ಮಾರ್ದವವು ಮುಖ್ಯವಾಗಿ ಆಧಾರವಾದ್ದು. ತಾನು ದೌಲತ್ತು ಮಾಡುತ್ತಿರುವಾಗ ತನ್ನ ಅಣ್ಣ ತಮ್ಮಂದಿರು ತಿರಕೊಂಡು ತಿನ್ನಲಿ ಎನ್ನುವ ಪುರುಷನಲ್ಲಿ ಹೃದಯ ಮಾರ್ದವವಿಲ್ಲವೆಂದೇ ಹೇಳಬೇಕು. ಈ ಗುಣವಿಲ್ಲದ ಮನುಷ್ಯ ಅಧಿಕಾರಮಾಡಲು ಯೋಗ್ಯನೇ ಅಲ್ಲ. ಅಂಥವನ ಅಧಿಕಾರದಿಂದ ಇತ್ತ ಸ್ವಾಮಿಗಾಗಲಿ ಅತ್ತ ಪ್ರಜೆಗಳಿಗಾಗಲಿ ಯಾವ ಪ್ರಯೋಜನವೂ ಆಗಲಾರದು. ಈ ಪ್ರಕಾರ ಪ್ರತಿ ಮನುಷ್ಯನಿಗೂ ಇರಬೇಕಾದ ಸ್ವಜನಾಭಿಮಾನದ ದೆಶೆಯಿಂದ ಬ್ರಾಹ್ಮ

ಣಾಧಿಕಾರಿಗಳ ಸಂಬಂಧಿಗಳು ಉದ್ಯೋಗದಲ್ಲಿ ಸೇರುವರು.

ಹನುಮ—ಬ್ರಾಹ್ಮಣರ ಪ್ರಾಬಲ್ಯಕ್ಕೆ ಎರಡು ಕಾರಣಗಳ ನ್ನಂತೂ ಹೇಳಿದಿರಿ; ಮೂರನೇ ಕಾರಣ ಯಾವುದು?

ಮಿತ್ರ—ಅದನ್ನು ಹೇಳುತೇನೆ ಕೇಳಿ. ಯಾರಿಗಾದರೂ ಸರಿಯೆ. ಸ್ವಜಾತಿಯ ಜನರು ಸಮೀಪದಲ್ಲಿ ಬಂದು ಸೇರುವಷ್ಟು ಅನ್ಯಜಾತಿಯವರು ಬಂದು ಸೇರುವುದಿಲ್ಲ. ಬ್ರಾಹ್ಮಣನು ಅಧಿ ಕಾರಕ್ಕೆ ಬಂದರೆ ಬ್ರಾಹ್ಮಣರೇ ಸಮೀಪ ವೃತ್ತಿಯಲ್ಲಿ ಬಂದು ಸೇರುತಾರೆ. ಅವರು ಮಾಡುವ ಉಪಚಾರ, ಸ್ತೋತ್ರ, ಅನು ಸರಣೆ, ಇದೆಲ್ಲಾ ಎಂಥಾ ಕಠಿಣವಾದ ಮನಸ್ಸನ್ನಾದರೂ ಕರಗಿಸು ವುದು. ಅಂಥವರಿಗೆ ಆ ಅಧಿಕಾರಿಯು ಸರ್ಕಾರದಲ್ಲಿ ಜೀವಿಕವನ್ನು ಕಲ್ಪಿಸಿಕೊಡುವನು. ಇಷ್ಟರಮಟ್ಟಿನ ಸಾಮೀಪ್ಯವನ್ನು ಸ್ವಜಾತಿ ಯವರು ವಿನಾ ಅನ್ಯಜಾತಿಯವರು ಹೊಂದುವುದು ದುಸ್ತರ. ಆದ್ದರಿಂದ ಬ್ರಾಹ್ಮಣರು ಹೊರತು ಇತರರಿಗೆ ಆ ಅಧಿಕಾರಿಯಿಂದ ಉದ್ಯೋಗ ದೊರೆಯಲು ಸಮಯ ಕಡಮೆಯಾಗುವುದು. ಈ ಗುಣವೆಲ್ಲಾ ಸಮಸ್ತ ಜಾತಿಯವರಲ್ಲಿಯೂ ಸಹಜ ಧರ್ಮವಾಗಿದೆ. ಈ ಮೂರು ಕಾರಣ ವಿನಾ ಜಾತಿಯನ್ನೇ ಮುಖ್ಯವಾಗಿ ಇಟ್ಟು ಕೊಂಡು ಅಬ್ರಾಹ್ಮಣರನ್ನು ಬಿಟ್ಟು ಬ್ರಾಹ್ಮಣರಿಗೇ ಯಾರು ಉದ್ಯೋಗವನ್ನು ಕೊಟ್ಟಿದಾರೆ ಹೇಳಬಲ್ಲಿರ? ಇದರಲ್ಲಿ ಯೋಗ್ಯತಾ ವಿಚಾರವೇ ಮುಖ್ಯವಾದ್ದು. ಯೋಗ್ಯರಾದ ಅಬ್ರಾಹ್ಮಣರು ದೊಡ್ಡ ಪದವಿಗೆ ಬರಲು ಬ್ರಾಹ್ಮಣರ ಸಹಾಯವಿಲ್ಲದೇ ಇಲ್ಲ.

ಹನುಮ—ನೀವು ಸಾವಿರ ಹೇಳಿದರೂ ಸರಿಯೆ, ನಿಮ್ಮ ಮಾತೆಲ್ಲಾ ನಿಶ್ಚಯವಾಗಿರಬಹುದು. ಆ ಒಂದು ಜಾತಿಯವರೇ ಎಲ್ಲವನ್ನೂ ಆಕ್ರಮಿಸಿದಾರೆ ಎಂದು ನೀವು ಒಪ್ಪಿಕೊಳ್ಳಬೇಕು?

ಮಿತ್ರ—ನಾನು ಇಷ್ಟು ಹೇಳಿದ್ದೂ ಹೊಳೆಯಲ್ಲಿ ಹುಣಸೇ ಹಣ್ಣನ್ನು ಕದರಿದಂತಾಯಿತು. ಕ್ಷತ್ರಿಯರು, ವೈಶ್ಯರು, ಶೂದ್ರರು, ಬಲಗೈಫಣ ಹದಿನೆಂಟು ಯಡಗೈಫಣ ಒಂಭತ್ತು, ಫಣ ಕಟ್ಟಿಗೆ

ಸೇರದೇ ಇರತಕ್ಕ ದಗ್ಗಲೋರು ಠಾಕರರು ಇತರ ಕಾಡುಜನರು, ಜೈನರು, ಬೌದ್ಧರು, ತುರುಕರು, ಯೂರೋಪು ದೇಶೀಯರು, ಚಟ್ಟೇಗಾರರು ಇವರೇ ಮೊದಲಾಗಿ ಎಲ್ಲರಿಗೂ ಬ್ರಾಹ್ಮಣ ಜಾತಿಯವರ ಮೇಲೆ ದ್ವೇಷವಿದೆ ಎಂದು ಹೇಳಬಹುದಲ್ಲವೆ? ಇವರೆಲ್ಲರ ಸಂಖ್ಯೆಯನ್ನೂ ಬ್ರಾಹ್ಮಣರ ಸಂಖ್ಯೆಯನ್ನೂ ಹೋಲಿಸಿ ನೋಡಲಾಗಿ ಬ್ರಾಹ್ಮಣೇತರರು ಒಂದಕ್ಕೆ ನೂರರಷ್ಟು ಹೆಚ್ಚಾಗಿದಾರೆ. ಇದೂ ಅಲ್ಲದೆ ಆಳತಕ್ಕ ದೊರೆಗಳು ಕೂಡ ಭಾರೀ ಗುಂಪಿಗೆ ಸೇರಿದವರಾಗಿದಾರೆ. ಎಲ್ಲರೂ ಸೇರಿ ಸ್ವಲ್ಪವಾಗಿರುವ ಈ ಹಾರವರೆಲ್ಲರನ್ನೂ ಸರ್ಕಾರದ ಕೆಲಸದಿಂದ ತೆಗೆದು ಎಲ್ಲಕ್ಕೂ ಬ್ರಾಹ್ಮಣೇತರರನ್ನೇ ನೇಮಿಸಿಕೊಳ್ಳಬಹುದಲ್ಲಾ. ಯಾಕೆ ಹಾಗೆ ಮಾಡಬಾರದು?

ಹನುಮ—ಅದಕ್ಕೂ ಕಾಲ ಬರಬೇಕು.

ಮಿತ್ರ—ಈಗ ಕಾಲ ಬಂದಿದೆ, ಮೊದಲು ನೀವು ದಾರೀ ತೋರಿಸಿ, ನಿಮ್ಮ ಮನೆವಾರ್ತೆಗೆ ಹಾರವನನ್ನು ಬಿಟ್ಟು ಯಾರಾದರೂ ಒಬ್ಬ ಯೋಗ್ಯನಾದ ಇತರ ಜಾತಿಯವನನ್ನ ನೇಮಿಸಿಕೊಂಡು ಸುಖವಾಗಿರಿ.

ಹನುಮ—ಅದೆಲ್ಲಾ ಸಾಗುವಮಾತಲ್ಲ. ಏನೋ ಮಾತು ಬಂತು ಮಾತು ಹೋಯಿತು. ಇಲ್ಲಿಗೆ ಬಿಡಿ. ನೀವು ಹೇಳಿದ ಬ್ರಾಹ್ಮಣ ನಮ್ಮ ಮನೆವಾರ್ತೆಗೆ ಇರುವಂತೆ ನೇಮಿಸಿಕೊಡಿ.

ಮಿತ್ರ—ಈಗಲೇ ಆ ಜಾತಿಯವರನ್ನು ಕಂಡರೆ ವಿಷಾ ಕಾರುತೀರಿ. ಅವನು ನಿಮ್ಮ ನೌಕರಿಗೆ ಬಂದ ಕೂಡಲೆ ಅವನ ಪ್ರಾಣವನ್ನೇ ತೆಗೆದುಬಿಟ್ಟೀರೋ ಏನೋ ನಾನು ಹೇಳಲಾರೆ. ಅನ್ಯಾಯವಾಗಿ ಆ ಬ್ರಾಹ್ಮಣ ವಧೆಯ ಪಾತಕಕ್ಕೆ ನಾನು ಭಾಗಿಯಾಗಬೇಕಾಗುವುದು. ಇನ್ನೂ ನೀವು ತಿಳಿದುಕೊಳ್ಳಬೇಕಾದ್ದು ಎಷ್ಟೋ ಇದೆ. ಮುಖ್ಯವಾಗಿ ಹಿಂದೂಸ್ಥಾನಕ್ಕೆ ಬಂದಿರುವ ಸರ್ವೋತ್ತಮವಾದ ಕೀರ್ತಿಯೂ ನಾಗರಿಕತೆಯೂ ಯಾರಿಂದ ಉಂಟಾದ್ದು

ಎನ್ನುವದನ್ನು ವಿಚಾರಿಸಿ ತಿಳಿದುಕೊಳ್ಳಿ, ಆ ಮೇಲೆ ನಾನು ವಿವರಿಸಿ ಹೇಳುತ್ತೇನೆ.

ಹನುಮ—ಈ ವಿಷಯವನ್ನು ಇಲ್ಲಿಗೆ ಬಿಡಿ. ನೀವು ಹೇಳುವದೂ ನಿಜವೇ ಸರಿ. ನಾನೇನೋ ಬಾಯಿ ದುಡುಕಿದೆ. ಆತನನ್ನು ಕರೆದು ತಂದುಕೊಡಿ.

ಹೀಗೆ ಮಾತು ಮುಗಿದ ತರುವಾಯ ಒಂದು ದಿವಸ ಆ ಮಿತ್ರನು ಅಪ್ರಮೇಯನನ್ನು ಕರೆದುತರಲು ಒಪ್ಪಿಕೊಂಡನು. ಅದುವರೆಗೆ ಈ ಅಪ್ರಮೇಯನು ಶ್ರೀರಂಗಪಟ್ಟಣಕ್ಕೆ ಬಂದಿದ್ದನಷ್ಟೆ. ಗುಂಡಲ ಪೇಟೆಯನ್ನು ಬಿಟ್ಟು ಬಹಳ ದಿವಸವಾಯಿತು. ಆಗಿನ ಕಾಲಕ್ಕೆ ತಕ್ಕಹಾಗೆ ಒಳ್ಳೇ ಯೋಗ್ಯತೆಯೇನೋ ಸಂಪಾದನೆಯಾಯಿತು. ಅದಕ್ಕೆ ತಕ್ಕಹಾಗೆ ಗೌರವವೂ ವರಮಾನವೂ ದೊರಕಲಿಲ್ಲ. ಇಷ್ಟೆಲ್ಲಾ ಆದ ಮೇಲೆ ಊರಿಗೆ ಹೋಗಿ ಸುಮ್ಮನೇ ಕೂತು ಕೊಳ್ಳುವುದು ಅವಮಾನವಲ್ಲವೆ? ಹೀಗೆಲ್ಲಾ ಯೋಚಿಸಿಕೊಳ್ಳುತ್ತಾ ಇದ್ದ ಅಪ್ರಮೇಯನನ್ನು ಹನುಮಂತರಾಯನ ಮಿತ್ರನಾದ ಕೃಷ್ಣ ಜೋಯಿಸನು ಕಂಡು ಇದ್ದ ಸಂಗತಿಯನ್ನು ತಿಳಿಸಿ ಅವನನ್ನು ಒಡಂಬಡಿಸಿ ಮೈಸೂರಿಗೆ ಕರೆದು ತಂದು ಹನುಮಂತರಾಯನ ಭೇಟೀ ಮಾಡಿಸಿದನು.

ಎಂಥವರ ಪರಾಕ್ರಮವನ್ನು ದೊಡ್ಡವರಿಂದ ಕೇಳಿದಾಗೆಲ್ಲಾ, ಬಖೈರುಗಳಲ್ಲಿ ಓದಿದಾಗೆಲ್ಲಾ, ರಣರೋಷವನ್ನು ತಾಳುತಾಯಿದ್ದ ಅಪ್ರಮೇಯನ ಎದುರಿಗೆ ಅಂಥಾ ವೀರರೇ ಮೂರ್ತಿವತ್ತಾಗಿ ಬಂದು ನಿಂತಿರುವಾಗ್ಗೆ, ಅವನ ಆಶ್ಚರ್ಯಕ್ಕೂ ಆನಂದಕ್ಕೂ ಪಾರಖುಂಟೆ? ಮೊದಲೇ ಹನುಮಂತರಾಯನ ಮತ್ತು ಈತನ ವೀರಪತ್ನಿಯಾದ ದುರ್ಗಾಬಾಯಿಯ ಅತಿಶಯವಾದ ಪರಾಕ್ರಮವನ್ನು ಕೇಳಿ ಭ್ರಮೆಗೊಂಡಿದ್ದ ಆ ಬ್ರಾಹ್ಮಣನಿಗೆ ಚಿತ್ತ ಆನಂದ ಪರವಾಯಿತು. ಇವನ ಯೋಗ್ಯತೆಯನ್ನೂ ಬುದ್ಧಿ ಚಾತುರ್ಯವನ್ನೂ ಮೊದಲೇ ಮಿತ್ರನಾದ ಕೃಷ್ಣಜೋಯಿಸನಿಂದ ತಿಳಿದು

ಕೊಂಡಿದ್ದ ಹನುಮಂತರಾಯನಿಗೂ ವಿಶೇಷವಾಗಿ ಪ್ರೀತಿ ಹುಟ್ಟಿತು. ಮೇಲಾಗಿ ಆ ಬ್ರಾಹ್ಮಣನ ವಿನಯ ಸಂಪತ್ತು ದಿನೇ ದಿನೇ ಆ ಪ್ರೀತಿಯನ್ನು ವೃದ್ಧಿ ಮಾಡಿಕೊಳ್ಳತಕ್ಕದ್ದಾಗಿತ್ತು. ಹೀಗೆ ಥೂಳಿದರ್ಶನದಲ್ಲಿಯೇ ಸ್ವಾಮಿ ಭೃತ್ಯರಿಬ್ಬರಿಗೂ ಪರಸ್ಪರ ಅಭಿಮಾನ ಹುಟ್ಟಿತು. ಇದು ಮುಖಪುಣ್ಯವೆಂದು ಕೆಲವರು ಹೇಳುತಾರೆ. ಇದಕ್ಕೆ ಕಾರಣವೇನೆಂದು ವಿಚಾರಮಾಡಿದರೆ ಶಾರೀರಶಾಸ್ತ್ರ ಭೌತಿಕ ಶಾಸ್ತ್ರ ವೇದಾಂತಶಾಸ್ತ್ರ ಇವುಗಳ ಸೂಕ್ಷ್ಮ ವಾದ ಅಂಶಗಳನ್ನು ಭೇದಿಸಬೇಕಾಗುವುದು. ಸಜಾತೀಯವಾದ ಪರಮಾಣುಗಳು ಎರಡು ಶರೀರದಲ್ಲಿಯೂ ವ್ಯಾಪನೆಯಾಗಿ ಏಕ ರೀತಿಯಾದ ಚಿತ್ತವೃತ್ತಿಯನ್ನುಂಟುಮಾಡುವವೆಂದು ಹೇಳ ಬಹುದೆ? ಉಭಯರಲ್ಲಿಯೂ ಪರಸ್ಪರ ಸಮ್ಮೇಳನವಾಗುವ ತೇಜಸ್ಸು ಏಕರೀತಿಯಾದ ಫಲವನ್ನುಂಟುಮಾಡಿದೆಯೆ? ಉಭ ಯರಿಗೂ ಏಕರೀತಿಯಾದ ಅಭಿಪ್ರಾಯಗಳೂ ಮನೋಭಾವಗಳೂ ಇರುವುದರಿಂದ ಸುಖ ದುಃಖ ಸಂತಾಪಾದಿಗಳೂ ಒಂದೇ ಆಗಿ ಮನಸ್ಸಿಗೆ ಮನಸ್ಸು ಹೊಂದುವಂತೆ ಮಾಡುವವೇ? ಇಲ್ಲ, ಜನ್ಮಾಂತರ ಕರ್ಮ ಫಲವೇ; ಇದನ್ನು ಪರೀಕ್ಷಿಸಿ ಸಿದ್ಧಾಂತ ಮಾಡುವುದು ಆಯಾ ಶಾಸ್ತ್ರಜ್ಞರ ಕೆಲಸವಾಗಿದೆ. ಸಾಧಾರಣ ರಾದವರಿಗೆ ಕಾರಣ ಗೊತ್ತಿಲ್ಲದಿದ್ದರೂ ಫಲಾನುಭವವೇನೋ ಅನುಭವ ಸಿದ್ಧವಾಗುವುದು, ಅಂತೂ ಅವರಿಬ್ಬರಿಗೂ ಮೈತ್ರಿ ಉಂಟಾಯಿತು. ಇದೇ ವಿಧವಾದ ಕಾರಣಕ್ಕಾಗಿ ಯಜಮಾನಿ ಯಾದ ದುರ್ಗಾಬಾಯಿಯಲ್ಲಿಯೂ ಅಪ್ರಮೇಯನಿಗೆ ಇದೇ ರೀತಿಯಾಗಿ ಭಕ್ತಿಯುಂಟಾಯಿತು.

ಮನೆಯ ಆಡಳಿತವೇ ಆಗಲಿ, ದೇಶಾಂತರಗಳಲ್ಲಿರುವ ದೊಡ್ಡ ಸರದಾರರುಗಳಿಗೆ ಬರೆಯತಕ್ಕ ರಹಸ್ಯವಾದ ವಿಷಯವೇ ಆಗಲಿ, ರತ್ನಪಡಿ ವ್ಯಾಪಾರದಲ್ಲಿಯಾಗಲಿ, ಇತರ ಲೇವಾದೇವಿಯಲ್ಲಿ ಯಾಗಲಿ, ಹನುಮಂತರಾಯನು ಅಪ್ರಮೇಯನ ಮಾತುವಿನಾ

ಏನನ್ನೂ ಮಾಡುತಿರಲಿಲ್ಲ. ವಾರಕ್ಕೆ ಎರಡು ಅಥವಾ ಮೂರು ಸಾರಿ ದೊಡ್ಡ ಸರದಾರರಿಗೆ ಕಾಗದ ಬರೆಯತಕ್ಕ ಬರವಣಿಗೆ ಕೆಲಸ ವಿದ್ದೇ ಇರುತಿತ್ತು. ಗುಮಾಸ್ತನ ಮರ್ಯಾದೆಯಾದ ಒಕ್ಕಣೆ ಯನ್ನೂ ಅವನು ಬರೆಯತಕ್ಕ ಭಾವ ಗರ್ಭಿತವಾದ ವಾಕ್ಯರಚನೆ ಯನ್ನೂ ನೋಡಿ ಯಜಮಾನ ಕೊಂಡಾಡುತಿದ್ದದಲ್ಲದೆ, ಅನೇಕ ದೊಡ್ಡ ಮನುಷ್ಯರಿಂದ ಬರುತಾಯಿದ್ದ ಜವಾಬುಗಳಲ್ಲಿ ಈ ಲೇಖಕನ ಪ್ರೌಢಿಮೆಯ ಶ್ಲಾಘನೆಯೂ ಇರುತಿತ್ತು.

## ೭ನೇ ಅಧ್ಯಾಯ

## ಶಿವಾಚಾರದವರ ಪ್ರಾಬಲ್ಯ

ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರವರ ಅರಮನೆಯಲ್ಲಿ ಪೂರ್ವಾಚಾರವಾಗಿ ಬಂದ ಕಾರಣಗಳಿಂದ ಅನೇಕಜನ ಶಿವಾ ಚಾರದವರು ಹೆಣ್ಣು ಗಂಡು ಆದಿಯಾಗಿ ಸೇವಾವೃತ್ತಿಗೆ ಸೇರಿ ದ್ದರು. ಎಂಥಾ ದೊಡ್ಡವರಿಗೇ ಆಗಲಿ ತಮ್ಮ ಸಮೀಪದಲ್ಲಿದ್ದು ಕೊಂಡು ಪಾದಸೇವೆಯನ್ನು ಮಾಡುವ ಭೃತ್ಯರಲ್ಲಿ ಅಭಿಮಾನವ ನ್ನಿಟ್ಟುಕೊಂಡಿರುವುದು ಮನುಷ್ಯ ಸ್ವಭಾವವಾಗಿದೆ. ಈ ಕೈಸದ್ದ ಕದ ಜನರಿಗೆ ಅರಮನೆಯಲ್ಲಿ ಬೇರೇ ಇಲಾಖೆಯೇ ಇವೆ. ಇದಕ್ಕೆ ಅವಸರದ ಹೋಬಳಿ ಇಲಾಖೆ ಎಂದು ಹೆಸರು. ಯಾವವಿಷಯ ವನ್ನಾಗಲಿ ಸಮೀಪದಲ್ಲಿರುವ ಪರಿಚಾರಕರು ಸಮಯವನ್ನು ನೋಡಿಕೊಂಡಿದ್ದು ಮನಸ್ಸಿಗೆ ಅಂಟುವ ಹಾಗೆ ಒಂದೊಂದು ಮಾತನ್ನು ಹೇಳುವರು. ಆ ಮಾತು ಕಿವಿಯಮೇಲೆ ಬಿದ್ದ ಕೂಡಲೆ ಆ ಚೋರಿಗೆ ಬುದ್ಧಿ ಎಳೆಯುವುದು. ಪೂರ್ವಾರಭ್ಯ ದೊರೆಗೆ ಶೈವಭಕ್ತಿಯು ದಿನೇ ದಿನೇ ಹೆಚ್ಚುತಾ ಬಂತು. ಶಿವ ಭಕ್ತರ ಒಡೆಯರೂ ಗುರುಪೀಠದವರೂ ಆಗಾಗ್ಗೆ ಬಂದು ಅರಮನೆಯಲ್ಲಿ ಸತ್ಕಾರವನ್ನೂ ಮರ್ಯಾದೆಯನ್ನೂ ಹೊಂದುತಾ

ಇದ್ದರು. ಈ ಶೈವಪೀಠದವರು ಹೀಗೆ ಪ್ರಬಲಕ್ಕೆ ಬರುತಿರಲಾಗಿ, ಉತ್ತರದೇಶದಿಂದ ನಿರ್ವಾಣಪ್ಪೈಯ್ಯನವರು ಎಂಬ ಒಬ್ಬ ವೀರ ಶೈವರ ಗುರುಗಳು ಮೈಸೂರಿಗೆ ಬರಬೇಕೆಂದು ಅರಮನೆಗೆ ಶ್ರೀಮುಖ ಬರಸಿದರು. ಶಿವನೈಯ್ಯನೆಂಬ ಶಿವಾಚಾರದ ಅರಮನೇ ಪ್ರಮುಖನ ಸಿಫಾರಸುಗಳೂ ಬಂದವು. ತಮ್ಮ ಆಗಮನವನ್ನು ಸೂಚಿಸತಕ್ಕ ಆಜ್ಞಾಪತ್ರಿಕೆಯು ಆ ಸ್ವಾಮಿಗಳಿಂದ ಬಂತು. ಅದನ್ನು ಮಹಾಸ್ವಾಮಿಗಳ ಸನ್ನಿಧಾನದಲ್ಲಿ ಒಪ್ಪಿಸಿದರು. ಒಳಗೆ ಹೋದರೆ ರಾಣಿವಾಸದವರ ಜನಾನಿ, ಹೊರಗೆ ಬಂದರೆ ಶಿವನೈಯ್ಯನವರ ಮರದಾನಿ, ಸುತ್ತಮುತ್ತ ಅವಸರದ ಹೋಬಳಿಯವರ ಗಜಾಲು, ಇದೆಲ್ಲಾ ದೊರೆಯ ಮನಸ್ಸನ್ನು ಸೆರೆಹಿಡಿಯಿತು. ಆ ವೀರಶೈವರ ಸ್ವಾಮಿಗಳು ಮೈಸೂರಿಗೆ ಬಂದರು. ಬರೀ ಪುರಪ್ರವೇಶದಲ್ಲಿ ಯೇನಾಯಿತು? ವಿಶಿಷ್ಟ ಮರ್ಯಾದೆಗಳೊಡನೆ ಅವರು ಪಲ್ಲಕ್ಕಿಯಲ್ಲಿ ನಿರ್ವಾಣವಾಗಿ ಕುಳಿತು ಬೀದಿಯಲ್ಲಿ ಮೆರವಣಿಗೇ ಮಾಡಿಕೊಂಡು ಬಂದು ಅಟ್ಟಹಾಸದಿಂದ ರಾಜಮಂದಿರವನ್ನು ಪ್ರವೇಶ ಮಾಡಿ ಅಡ್ಡಬಿದ್ದ ಸಿಸುಮಕ್ಕಳ ತಲೆಯ ಮೇಲೆ ಪಾದವನ್ನು ಪಾಲಿಸುತಾ ಕೈಮುಗಿದ ಸಿಸುಮಕ್ಕಳ ತಲೆಯನ್ನು ಕೈಯಿಂದ ತಡವರಿಸುತಾ ದೊರೆಯನ್ನು ಕಂಡು—"ವಸಗೆ ಏನಪ್ಪಾಜಿ, ಪರಸಾದಾ ಸಲ್ಲಿಸಿದರೇನಪ್ಪಾಜಿ?" ಎಂದು ಕುಶಲಪ್ರಶ್ನೆಯನ್ನು ಮಾಡಿ ಭದ್ರಪೀಠದಲ್ಲಿ ಕುಳಿತು ಸಿಸುಮಕ್ಕಳಿಗೆ ಉಬ್ಬತ್ತಿಯ ಗಟ್ಟಿಯನ್ನು ನೀಡುತಾ ಹೊಗಳಿಸಿಕೊಳ್ಳದ ಮೇಲೆ ಹುಟ್ಟಿ ಪ್ರಯೋಜನವೇನು? ಮಠಕ್ಕೆ ಏನು ಗೌರವ ಬಂದ ಹಾಗಾಯಿತು? ಈ ಪ್ರಕಾರ ನಿರ್ವಾಣದ ಸ್ವಾಮಿಗಳು ಮೆರೆವಣಿಗೆಯಿಂದ ಅರಮನೆಗೆ ದಯಮಾಡಿಸಬೇಕೆಂತ ಗೊತ್ತಾಯಿತು.

ಒಂದು ದಿನ ರಾತ್ರಿ ಅಂಬಾವಿಳಾಸದಲ್ಲಿ ದರಬಾರು ನಡೆಯುತಾ ಇರುವಾಗ ವಿಶೇಷವಾದ ಇನ್ನೊಂದು ಸಂಗತಿ ಜರುಗಿತು.

ಪ್ರಜೆಗಳ ಇಂಗಿತವನ್ನೂ ಪೂರ್ವಾಚಾರಗಳನ್ನೂ ಪರಸ್ಪರ ಮರ್ಯಾದೆ ಗಳನ್ನೂ ಚೆನ್ನಾಗಿ ಅರಿತಿದ್ದ ಚತುರರಾದ ಪ್ರಭುವು ದರಬಾರಿನಲ್ಲಿ ನಿರ್ವಾಣದ ಅಯ್ಯನವರ ಮೆರೆವಣಿಗೇ ವಿಚಾರವನ್ನು ಪ್ರಸ್ತಾಪಿಸಿ ದರು. ಇವರು ಬಹು ದೊಡ ವರು ಜ್ಞಾನಿಗಳು ಎಂದು ಅವಸರದ ಹೋಬಳಿ ಗುರಿಕಾರ ನಂಜ್ಯೈಯ್ಯನೆಂಬುವನು ಹೇಳಿದನು. ಆಗ ಅಲ್ಲಿದ್ದ ಬ್ರಾಹ್ಮಣರೂ ಜೈನರೂ ಇತರ ಮತದ ಪಂಡಿತರೂ ಸಹಾ ತಂತಮ್ಮೊಳಗೆ ಪಿಸಪಿಸಗುಟ್ಟಿಕೊಂಡು ಪಾರಿಜಾತ ಕೇಶವ ನೆಂಬ ಹಾಸ್ಯಗಾರನನ್ನು ಎತ ಕಟ್ಟಿದರು. ಆಗ,

ಪಾರಿಜಾತ ಕೇಶವ—ಮಹಾಸ್ವಾಮಿ, ಮೂರು ದಿವಸವಾ ದರೂ ರಜ ಅಪ್ಪಣೆಯಾಗಬೇಕು, ಊರಿಗೆ ಹೋಗಿ ನಿರ್ವಾಣ ದಯ್ಯನವರು ಬರುವುದರೊಳಗಾಗಿ ನಮ್ಮ ಪುರೋಹಿತರನ್ನು ಕರೆದುತರುತೇನೆ.

ದೊರೆ—ನಿನಗೆ ಪುರೋಹಿತರು ಯಾಕೋ?

ಪಾರಿಜಾತ—ನನಗೆ ಪ್ರಾಯಶ್ಚಿತ್ತ ಮಾಡಿಸುವುದಕ್ಕೆ.

ದೊರೆ—ಯಾತಕ್ಕೋಸ್ಕರ ಪ್ರಾಯಶ್ಚಿತ್ತ?

ಪಾರಿಜಾತ—ನಿರ್ವಾಣದ ಸ್ವಾಮಿಗಳು ಬಹಳ ದೊಡ್ಡವರು, ಸಭೆಗೆ ದಯಮಾಡುವರು. ಆ ದಿವಸ ನಾವೆಲ್ಲರೂ ದರ್ಬಾರಿಗೆ ಬಂದು ಅವರ ಭೇಟಿಮಾಡಿಕೊಳ್ಳಬೇಕು. ತರುವಾಯ ಮನೆಗೆ ಹೋಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುವುದು. ನಮ್ಮ ಕುಲ ಪುರೋಹಿತರೇ ಬಂದು ಯಾವ ಕಾರ್ಯವನ್ನೂ ಮಾಡಬೇಕು. ಉಳಿದವರಿಗೆಲ್ಲಾ ಪುರೋಹಿತರು ಇಲ್ಲಿಯೇ ಸಿಕ್ಕುತಾರೆ. ನಮ್ಮ ವರು ಸಿಕ್ಕುವುದಿಲ್ಲ.

ದೊರೆ—ಆ ಸ್ವಾಮಿಗಳ ದರ್ಶನ ಮಾಡಿದರೆ ಪ್ರಾಯಶ್ಚಿತ್ತ ವಾಗಬೇಕೇನೋ?

ಪಾರಿ – ಮಹಾಸ್ವಾಮಿ, ಅನೇಕ ಜನ ಮಹಾಪಂಡಿತರಿದಾರೆ; ವಿಚಾರ ಮಾಡಬಹುದು.

ದೊರೆ—ಇವನ ಹರಟೆಗೆ ಅರ್ಥವೇನು ಶಾಸ್ತ್ರಿಗಳೆ ?

ರಾಜೇಶ್ವರಶಾಸ್ತ್ರಿಗಳು—ಮಹಾಸ್ವಾಮಿ, ಪಾರಿಜಾತ ಕೇಶವ ಹೇಳುವ ಮಾತು ನಿಜ. ದೊಡ್ಡ ಶಾಸ್ತ್ರಿಗಳಿದಾರೆ, ದಿಗ್ದಂತಿಗಳು. ಅವರನ್ನು ವಿಚಾರಿಸಬಹುದು.

ದೊರೆ—ಏನು ಶಾಸ್ತ್ರಿಗಳೆ, ಸ್ವಾಮಿಗಳ ದರ್ಶನ ಮಾಡಿದರೆ ನೀವೆಲ್ಲಾ ಪ್ರಾಯಶ್ಚಿತ್ತಮಾಡಿಕೊಳ್ಳುತೀರ?

ಶಾಸ್ತ್ರಿಗಳು—ಒಂದು ಕಾಲದಲ್ಲಿ ವಿನಾ ಉಳಿದ ಯಾವ ಕಾಲದಲ್ಲಿಯಾಗಲಿ ನಗ್ನರಾದ ಸ್ತ್ರೀ ಅಥವಾ ಪುರುಷರನ್ನು ನೋಡ ಕೂಡದು. ಹಟಾತ್ತಾಗಿ ಹಾಗೆ ಸಂಭವಿಸಿದರೆ ಆ ಕೂಡಲೆ ಕಣ್ಣನ್ನು ಮುಚ್ಚಿಕೊಂಡು ಮೂರು ಸಾರಿ ನಾರಾಯಣ ಸ್ಮರಣೆಯನ್ನು ಮಾಡಿ ಪ್ರಾಯಶ್ಚಿತ್ತ ಮಾಡಿಕೊಂಡು ಭೋಜನ ಮಾಡಬೇಕು. ಕೊನೇಪಕ್ಷ ಬಡವರಾದರೆ ಆ ದಿವಸ ಸಾಯಂಕಾಲದ ವರೆಗೂ ಉಪವಾಸವಾಗಿದ್ದು ಸ್ನಾನಮಾಡಿ ದೇವರ ದರ್ಶನವನ್ನು ಮಾಡಿದ ಮೇಲೆ ಭೋಜನ ಮಾಡಬೇಕು. ತತ್ರಾಪಿ ಪ್ರಭುಗಳಿಗೆ ನಗ್ನರ ದರ್ಶನವೇ ಕೂಡದೆಂದು ಶಾಸ್ತ್ರವಿದೆ.

ಹೀಗೆಂದು ಅರಿಕೇಮಾಡಿ ಧರ್ಮಶಾಸ್ತ್ರದ ಪಂಕ್ತಿಯನ್ನು ಶಾಸ್ತ್ರಿಗಳು ತೋರಿಸಿದರು.

ಆಗ ದೊರೆಯ ಮನಸ್ಸು ಬಹಳ ಕಲಕಿ ಹೋಯಿತು. ನಿರ್ವಾಣದಯ್ಯನವರು ದೊಡ್ಡ ಮಹಾತ್ಮರೆಂದು ಶಿವಭಕ್ತ ಮಹಾಸಭೆಯವರು ಎಷ್ಟೋ ವಿಧದಲ್ಲಿ ಅರಿಕೇ ಮಾಡಿದಾರೆ. ಅವರನ್ನು ಅರಮನೆಗೆ ಬರಮಾಡಿಕೊಳ್ಳದಿದ್ದರೆ ಶಿವನೈಯ್ಯ ಮೊದಲಾದವರೆಲ್ಲರಿಗೂ ಬಹಳ ಅಸಮಾಧಾನವಾಗುವುದು. ಅವರು ಅರಮನೆಗೆ ಬಂದರೆ ಅವರ ದರ್ಶನ ಮಾಡದೇ ಇರುವದು ಹೇಗೆ? ಅಂಥವರ ದರ್ಶನವು ಅಶಾಸ್ತ್ರೀಯವೆಂದು ಮಹಾ ಪಂಡಿತರು ತೋರಿಸಿದ ಧರ್ಮಶಾಸ್ತ್ರದ ಪಂಕ್ತಿಯನ್ನು ಮೀರುವುದು ಹೇಗೆ? ಇದೆಲ್ಲಾ ಪ್ರಭುವಿನ ಮನಸ್ಸಿಗೆ ಬಹಳ ಅಸಮಾಧಾನವನ್ನುಂಟುಮಾಡಿತು.

ಆಗ ದೊರೆಯು ಚೆನ್ನಾಗಿ ಪರ್ಯಾಲೋಚನೆ ಮಾಡಿ—ನಿರ್ವಾಣದ ಸ್ವಾಮಿಗಳು ಅರಮನೆಗೆ ಬರುವಾಗ ವಸ್ತ್ರವನ್ನು ಧರಿಸಿಕೊಂಡೇ ಬರಬೇಕು, ಇಲ್ಲವಾದರೆ ಅವರು ಅರಮನೆಗೆ ಬರಬೇಕಾದ್ದಿಲ್ಲ. ಈ ನಮ್ಮ ಅಪ್ಪಣೆಯನ್ನು ಈ ದಿವಸವೇ ಹೋಗಿ ಆ ಸ್ವಾಮಿಗಳಿಗೆ ಅರಿಕೇ ಮಾಡತಕ್ಕದ್ದೆಂದು ನಂಜಪ್ಪನೆಂಬ ಗುರಿಕಾರನಿಗೆ ಅಪ್ಪಣೆ ಕೊಟ್ಟರು.

ಇದು ಆದ ಮೂರು ದಿವಸದ ಮೇಲೆ ಸ್ವಾಮಿಗಳ ಮೆರವಣಿಗೆಯ ಮರ್ಯಾದೆಗಾಗಿ ಅಗತ್ಯವಾದ ಎಲ್ಲಾ ಸಲಕರಣೆಗಳೂ ಸಿದ್ಧವಾದವು. ಕಾರ್ಣಾಟಕ ಪಲ್ಲಕ್ಕಿಯಲ್ಲಿ ಸ್ವಾಮಿಗಳು ಬೆತ್ತಲೆಯಾಗಿ ಬಂದು ಕೂತುಕೊಂಡರು. ಓಲಗ ತಾಳಮೇಳಗಳು ಅರಮನೆಯ ಸಮಸ್ತವಾದ ಬಿರುದುಗಳು ಇವೆಲ್ಲವೂ ಅವಸರದ ಹೋಬಳಿಯವರ ಮುಖಾಂತರ ಬಂದು ವದಗಿದವು. ರಾಜ ಮರ್ಯಾದೆ ಎಲ್ಲಾ ಬಂತು. ಸ್ವಾಮಿಗಳು ಮೆರವಣಿಗೆ ಹೊರಟರು. ಕೊಂಬಾಯಿತು, ನೋಟಾ ನೋಡುವುದಕ್ಕೆ ಬೀದಿಯಲ್ಲಿ ಬಂದು ನಿಂತಿದ್ದವರೆಲ್ಲಾ ವಿಶೇಷವಾಗಿ ಕೂಗು ಮಾಡುವುದಕ್ಕೂ ಗದ್ದಲ ಮಾಡುವುದಕ್ಕೂ ಆರಂಭಿಸಿದರು. ಪೇಟೆಯಲ್ಲಿ ಬಂದು ನಿಂತಿದ್ದ ಹೆಂಗಸರೆಲ್ಲಾ ಮನೆಗಳೊಳಕ್ಕೆ ಓಡಿಹೋದರು. ಶಿವಾಚಾರದವರು ವಿನಾ ಉಳಿದ ಜಾತಿಯವರೆಲ್ಲಾ ಮನಸ್ಸು ಬಂದಹಾಗೆ ಎದುರು ಎದುರಿಗೇ ಮಾತಾಡುತಾ ಅಸಮಾಧಾನ ಪಡುತಾ ಬಂದರು. ಜನಗಳ ಗುಂಪು ಅತಿಯಾಗಿ ಪ್ರಬಲವಾಯಿತು. ಕಂದಾಚಾರದ ಜವಾನರು ಅಡಗುಮೆಟ್ಟುವುದು ಅಸಾಧ್ಯವಾಯಿತು. ಮೈಸೂರ ದೊಡ್ಡ ಪೇಟೇವರೆಗೆ ಪಲ್ಲಕ್ಕಿ ಬರುವುದು ದುಸ್ತರವಾಯಿತು. ಕಡೆಗೆ ಜನಸಂಘ ಹೆಚ್ಚಾಗಿ ಸ್ವಾಮಿಗಳ ಪಲ್ಲಕ್ಕಿಯು ಮುಂದಕ್ಕೆ ಹೋಗಕೂಡದೆಂದು ತಡೆದುಬಿಟ್ಟರು. ಹೀಗೆ ಪ್ರತಿಭಟಿಸಿದ ಗುಂಪಿನಲ್ಲಿ ತುರುಕರು ಸಹಾ ಇದ್ದರು. ದಿಕ್ಕು ದಿಕ್ಕಿನಿಂದಲೂ ಕಲ್ಲು ಮೊದಲಾದ್ದು ಬಂದು ಬೀಳಲು

ಕೊನೆ ಮೊದಲಿಲ್ಲವಾಯಿತು. ಬಟ್ಟೆ ಉಟ್ಟುಕೊಂಡರೆ ಮುಂದಕ್ಕೆ ಬಿಡುತ್ತೇವೆ ಇಲ್ಲವಾದರೆ ಸ್ವಾಮಿಗಳು ಹಿಂತಿರುಗಿ ಹೊರಟು ಹೋಗಬೇಕೆಂದು ಜನರು ಹಠಮಾಡಿದರು. ಎದುರಿಸುವುದಕ್ಕೆ ಬಂದ ಶಿವಾಚಾರದವರನೇಕರಿಗೆ ಬಹಳವಾಗಿ ಪೆಟ್ಟುಬಿತ್ತು. ಈ ಗದ್ದಲದ ಸಂಗತಿಯೆಲ್ಲಾ ಹುಜೂರಿಗೆ ಮುಟ್ಟಿತು. ವಿಶೇಷವಾಗಿ ಆಗ್ರಹ ಬಂತು. ಆಗ

ದೊರೆ—ವಸ್ತ್ರವನ್ನು ಧರಿಸಿಕೊಂಡು ಬಂದರೇ ಬರಬೇಕು, ಇಲ್ಲದಿದ್ದರೆ ಹೊರಡಕೂಡದೆಂದು ನಮ್ಮ ಅಪ್ಪಣೆಯಾಗಿತ್ತಷ್ಟೆ. ಹಾಗೆಮಾಡದೆ ಸ್ವಾಮಿಗಳು ಬರೀ ಮೈಯಲ್ಲಿ ಯಾಕೆ ಹೊರಟರು? ನಮ್ಮ ಅಪ್ಪಣೆ ಪ್ರಕಾರ ನಡೆಯದೆ ಇಷ್ಟೊಂದು ಆಭಾಸಕ್ಕೆ ಕಾರಣವಾಯಿತು.

ಕಟ್ಟಿಗೆ ತಿಮ್ಮಯ್ಯ—ಮಹಾಸ್ವಾಮಿ, ಹಾಗೆ ಅಪ್ಪಣೆಯಾದ್ದೇನೋ ನಿಜ. ಪಾದದ ಸಮೀಪದಲ್ಲಿಯೇ ನಾನೂ ನಿಂತಿದ್ದೆ. ಆದರೆ ಇಲ್ಲಿ ಹುಕ್ಕುಂ ಆದ ಸಂಗತಿಯು ಆ ಸ್ವಾಮಿಗಳಿಗೆ ಗೊತ್ತಾಗಲಿಲ್ಲವೆಂದು ತಿಳಿಯಬರುತ್ತೆ.

ದೊರೆ—ಹಾಗೆ ಹೋಗಿ ಅಯ್ಯನವರಿಗೆ ತಿಳಿಸುವಂತೆ ನಂಜಪ್ಪನಿಗೆ ಅಪ್ಪಣೆ ಮಾಡಿದ್ದೆವು. ಹಾಗೆ ಮಾಡದೆ ಇಷ್ಟು ಗಲಾಟೆಯನ್ನೂ ಅವನು ತಂದಿಟ್ಟನು.

ಹೀಗೆಂದು ಬಹಳವಾಗಿ ಕೋಪಬಂತು. ಇದೆಲ್ಲಾ ಅವಸರದ ಹೋಬಳಿ ಶಿವಾಚಾರದವರ ಪಿತ್ತಲಾಟದಿಂದ ನಡೆದಿದೆ ಎಂದು ವಿಶೇಷವಾಗಿ ಮನಸ್ಸಿಗೆ ತಟ್ಟಿತು. ಅವರಲ್ಲಿ ಕೆಲವರನ್ನು ಅರಮನೆಗೆ ಬಿಡಬೇಡಿ ಎಂದು ಅಪ್ಪಣೆಯಾಯಿತು. ಯಾರಿಗೂ ಹೇಳದೆ ನಿರ್ವಾಣದ ಸ್ವಾಮಿಗಳು ತಮ್ಮೂರದಾರಿ ಹಿಡಿದರು. ಯಾರೂ ಮಹಾಸ್ವಾಮಿಯವರ ಎದುರಿಗೆ ನಿಲ್ಲುವುದು ಕಷ್ಟಕ್ಕೆ ಬಂತು. ಆಗ ಶಿವಾಚಾರದವರ ಪ್ರಾಬಲ್ಯ ಕಡಮೆಯಾಯಿತು. ನಾಮ ತೀರ್ಥದ ತೊಟ್ಟಿಯ ಮಡಿ ಕೆಲಸಕ್ಕೆಲ್ಲಾ ಶ್ರೀ ವೈಷ್ಣವರು

ನೇಮುಕವಾದರು. ಖಾಸಾ ಅಡಿಗೆ ಬ್ರಾಹ್ಮಣರೇ ಮಾಡಬೇಕೆಂದು ಅಪ್ಪಣೆಯಾಯಿತು. ದಿನೇ ದಿನೇ ಶಿವಭಕ್ತ ಜನಗಳಮೇಲೆ ಕೋಪ ಹೆಚ್ಚುತಾ ಬಂತೇ ಹೊರತು ಕಡಮೆಯಾಗಲಿಲ್ಲ.

ಹೀಗೆ ಕೆಲವು ವರುಷ ನಡೆಯಿತು. ಮಹಾರಾಜರ ಖಾಸಾ ಸೇವಾವೃತ್ತಿಯಲ್ಲಿ ನಾಲ್ಕೈದು ಜನ ಶಿವಾಚಾರದವರು ವಿನಾ ಉಳಿದವರೆಲ್ಲರೂ ಶ್ರೀ ವೈಷ್ಣವರಾದರು. ಗುರುಗಳಿಂದ ಹಿಡಿದು ಅಡಿಗೆ ಪರಿಚಾರಕರ ತನಕಾ ತಿರುಮಣ್ಣು, ತಿರುಪುಟ್ಟಿ, ತಿರುವಾಯ ಮುಡಿಯೇ ಆಯಿತು. ಮಹಾರಾಜರ ಕುಲಗುರುಗಳಾದ ಪರಕಾಲಸ್ವಾಮಿಗಳ ಮಹತ್ತು ದಿನೇ ದಿನೇ ಹೆಚ್ಚಾಗುತಾ ಬಂತು. ದೊರೆಯು ಗಂಧದ ಬಟ್ಟನ್ನು ಬಿಟ್ಟು ಯಾವಾಗಲೂ ಶ್ರೀ ಚೂರ್ಣದ ತಿಲಕವನ್ನೇ ಹಾಕಿಕೊಳ್ಳಲು ಕೇವಲ ಶ್ರದ್ಧೆಯುಳ್ಳವರಾದರು. ಶಿವಾಚಾರದವರ ತಲೆಯನ್ನು ಕಂಡರೆ ಪ್ರಭುಗಳಿಗೆ ಅತ್ಯಂತಕೋಪ ಬರುವಂತೆ ಆಯಿತು.

ಈ ಪ್ರಕಾರ ಹಲವು ವರುಷ ನಡೆಯಿತು. ತರುವಾಯ ಇನ್ನೊಂದು ಸಂಗತಿ ಜರುಗಿತು. ಮೈಸೂರಿಗೆ ೧೫ ಮೈಲಿ ದೂರದಲ್ಲಿರುವ ಗರ್ಗೇಶ್ವರಿ ತಿರಮುಕೂಡಲು ಈಪ್ರಾಂತದಲ್ಲಿ ಆಬ್ಬಾಗಲು, ಶ್ರೀರಂಗ ರಾಜಪುರ ಮೊದಲಾದ ಕೆಲವು ಜೋಡೀಗ್ರಾಮಗಳನ್ನು ಕೆಲವು ಶ್ರೀ ವೈಷ್ಣವ ಬ್ರಾಹ್ಮಣರಿಗೆ ಮಹಾರಾಜರು ಇನಾಮಾಗಿ ಕೊಟ್ಟಿದ್ದರು. ಅವರಲ್ಲಿ ಐಶ್ವರ್ಯವಂತನಾದ ಒಬ್ಬ ಜೋಡೀದಾರನು ಬಹು ಅಟ್ಟಹಾಸದಿಂದ ತನ್ನ ಮನೆಯಲ್ಲಿ ಮದುವೆಮಾಡಿ ಖಾಸ್ಸವಾರಿಯು ಒಂದು ದಿವಸ ಅಲ್ಲಿಗೆ ದಯಮಾಡಬೇಕೆಂದು ಕೇಳಿಕೊಂಡನು. ಅದಕ್ಕೆ ಒಪ್ಪಿ ಮಿತವಾದ ಪರಿವಾರದೊಡನೆ ಆ ಗ್ರಾಮಕ್ಕೆ ಸವಾರಿ ದಯಮಾಡಿತು. ಅಲ್ಲಿ ರಾಜಯೋಗ್ಯವಾದ ಇತರ ಮರ್ಯ್ಯಾದೆಗಳೆಲ್ಲಾ ಜರುಗಿದ ತರುವಾಯ, ಅಲ್ಲಿಯೇ ಆರೋಗಣೆಗೆ ದಯಮಾಡಬೇಕು ಎಲ್ಲಾ ಸಿದ್ಧವಾಗಿದೆ ಎಂದು ಆ ಜೋಡೀದಾರರು ವಿನಯವಾಗಿ ಅರಿಕೆ ಮಾಡಿದರು. ಪ್ರಜೆಗಳ

ವಿಷಯದಲ್ಲಿಯೂ ವಿದ್ವಾಂಸರ ವಿಷಯದಲ್ಲಿಯೂ ಹಸುಮಗು ವಿನಂತೆ ಸುಲಭರಾಗಿದ್ದ ಆ ಮಹಾಪ್ರಭುವು ಆಗಬಹುದೆಂದು ಅಪ್ಪಣೆ ಕೊಡಿಸಿದರು. ಎಲ್ಲಾ ಸಿದ್ಧವಾಯಿತು. ಪಾದ ಪ್ರಕ್ಷಾ ಳಣೆಗಾಗಿ ಸ್ನಾನದಮನೆಗೆ ಸವಾರಿ ದಯಮಾಡಿ ಬಚ್ಚಲ ಬಾಯಿ ಯಲ್ಲಿ ಹಾಕಿದ್ದ ಒಂದು ಕಲ್ಲಿನಮೇಲೆ ಪ್ರಭುಗಳು ನಿಂತು ಕೊಂಡರು. ಶಿವಾಚಾರದ ಪರಿಚಾರಕರು ಪಾದವನ್ನು ತೊಳೆ ಯುತಿರುವಾಗ ದೃಷ್ಟಿ ಆ ಕಲ್ಲಿನ ಮೇಲೆ ಬಿತ್ತು. ಇದೇನು ಈ ಕಲ್ಲು ಚೌಕನಾಗಿಯೂ ನೀರು ಹೋಗುವುದಕ್ಕೆ ಒಳಲೇ ಆಕಾ ರಕ್ಕೂ ಇವೆ; ಇದರ ಮೇಲೆಲ್ಲಾ ಒಂದೇ ರೀತಿಯಾದ ಚಿತ್ರ ಕೆತ್ತಿದೆ, ಇದು ಎಂಥಾಕಲ್ಲು? ಎಂದು ಅಪ್ಪಣೆಯಾಯಿತು. ಅದು ವರೆಗೂ ಸುಮ್ಮನೇ ಇದ್ದ ಶಿವಾಚಾರದ ಪರಿಚಾರಕರಲ್ಲಿ ಮಗ್ಗೆ ಲಿಂಗಣ್ಣನೆಂಬುವನು — ಮಹಾಸ್ವಾಮಿ ಪರಾಕು, ಚಿತ್ತಕ್ಕೆ ಆಯಾಸಕೆಲಸವಿಲ್ಲ. ಈ ಕಲ್ಲು ಯಾವುದೋ ಶಿವಲಿಂಗದ ಪಾಣಿ ಪಟ್ಟಲು, ಅದರಮೇಲೆ ಸಣ್ಣಗೆ ಏಕರೀತಿಯಾಗಿ ಕೆತ್ತಿರುವ ಚಿತ್ರ ವೆಲ್ಲಾ ಅಷ್ಟೂ ಅಷ್ಟು ಶಿವಲಿಂಗ ಎಂದು ಅರಿಕೆ ಮಾಡಿದನು. ಆಕ್ಷಣದಲ್ಲಿಯೇ ಕೃಷ್ಣರಾಜ ಒಡೆಯರವರು ಅಲ್ಲಿ ಕೂತುಕೊಂಡು ಪರೀಕ್ಷೆಮಾಡಿದರು; ಲಿಂಗಣ್ಣ ಹೇಳಿದ ಮಾತು ನಿಜವಾಯಿತು. ವೈಷ್ಣವರಲ್ಲಿ ಎಷ್ಟು ಅಭಿಮಾನವಿದ್ದಾಗ್ಯೂ ಹಗಲು ಸಾಯಂಕಾಲ ಸಹಾ ಏಕಚಿತ್ತಮನೋಭಾವದಿಂದ ಪಾರ್ಥಿವ ಪೂಜೆಯನ್ನು ಮಾಡುತಿದ್ದ ಆ ಪರಮಶಿವಭಕ್ತನಾದ ದೊರೆಗೆ ಬಹು ಪಶ್ಚಾ ತ್ತಾಪ ಉಂಟಾಯಿತು. ಅಯ್ಯಯ್ಯೋ ಮಹಾದೇವ! ನಾನು ಇನ್ನೆಂಥಾ ಶಿವದ್ರೋಹಿ, ದೈವದ್ರೋಹಿ! ಶಿವನೇ ನಿನ್ನ ತಲೆಯ ಮೇಲೆ ನಾನು ಕಾಲ ಇಟ್ಟು ತುಳಿದೆನಲ್ಲಾ! ಇನ್ನು ಯಾವ ನರಕ ನನಗೆ ಕಾದಿದೆಯೋ ಕಾಣೆನಲ್ಲಾ! ಸ್ವಾಮಿ! ನಂಜುಂಡೇ ಶ್ವರಾ, ನೀನೇ ಕಾಪಾಡು, ಎಂದು ತಟ್ಟನೆ ಎದ್ದು ಆ ಕಲ್ಲಿನ ಪಾಣಿವಟ್ಟಲಿಗೆ ಪ್ರದಕ್ಷಿಣೆ ನಮಸ್ಕಾರವನ್ನು ಮಾಡಿ, ಅತ್ಯಾಗ್ರಹ

ದಲ್ಲಿ ಕೈ ಕಾಲುಗಳು ತುಟಿ ಬಾಯಿಗಳು ಅದರುತ್ತಾ ಇರುವಾಗ್ಯೆ, ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಯಾರ ಸಂಗಡಲೂ ಮಾತನಾಡವೆ ಜೋಡುಕುದುರೇ ಸಾರೋಟನ್ನು ಏರಿ ಪರಿವಾರ ದೊಡನೆ ಸವಾರಿಯು ಮೈಸೂರಿಗೆ ಬಿಜೆಮಾಡಿತು. ಮಾರನೇ ದಿವಸದಿಂದ ಶ್ರೀ ವೈಷ್ಣವರ ಜಾತಿಯವರ ಮೇಲೆ ಕೋಪಬಂತು. ಒಂದೊಂದು ಜಾತಿಯವರ ದೋಷ ಒಂದೊಂದು ವಿಧವಾಗಿ ಪರಿಣಮಿಸಿ ನನ್ನ ಕೋಪವನ್ನು ಹೆಚ್ಚಿಸುತಿದಾರಲ್ಲಾ ಎಂದು ವಿಶೇಷವಾದ ಪರಿತಾಪ ಹುಟ್ಟಿತು. ಇಂಥಾ ಸಮಯ ದೊರತೀತೇ ಎಂದು ಕಾದಿದ್ದ ಶಿವಭಕ್ತರ ಪ್ರಾಬಲ್ಯವು ಮೊದಲಿಗಿಂತಲೂ ಹೆಚ್ಚಾಯಿತು. ರಹಸ್ಯವಾದ ರಾಜಕೀಯ ವಿಚಾರಕ್ಕೂ ಇವರೇ ಪ್ರಮುಖರಾಗಿ ನಿಂತರು.

## ೮ ನೇ ಅಧ್ಯಾಯ

## ದೇಪಣ್ಣ

ವರ್ಣದಲ್ಲಿ ಅಷ್ಟು ಬಿಳಪಲ್ಲದಿದ್ದರೂ ಸುಂದರನಾದ ಪುರುಷ, ಓದಿದ ಪಾಂಡಿತ್ಯ ಅಷ್ಟು ಇಲ್ಲದಿದ್ದರೂ ಬರವಣಿಗೆಯನ್ನು ಹೇಳಿ ಬರಿಸುವ ಒಕ್ಕಣೆಯು ಒಳ್ಳೆ ಪ್ರೌಢ, ಗ್ರಂಥ ಪರಿಚಯವಿಲ್ಲ ದಿದ್ದರೂ ಒಳ್ಳೇ ಆಲೋಚನಾಪರ, ಐಶ್ವರ್ಯವಂತನಲ್ಲದಿದ್ದರೂ ಗಂಭೀರಸ್ಥ; ಮಿತಭಾಷಿಯಾದರೂ ಕಪಟಿಯಲ್ಲ. ಹೀಗೆ ಹಲವು ಸುಗುಣಗಳು ಸೇರಿಕೊಂಡಿರತಕ್ಕ ಒಬ್ಬ ಪುರುಷನಿದ್ದನು. ಇವನ ಹೆಸರು ದೇಪಣ್ಣ, ದೇವು ಎಂತಲೂ ಕರೆಯುತಿದ್ದರು. ಈತನ ಮನೆಯು ಮೈಸೂರ ಹಳೇ ಅಗ್ರಹಾರದಲ್ಲಿ ದೀವಟಿಗೇ ಬೀದಿಗೆ ಸಮೀಪವಾಗಿತ್ತು. ಮತದಲ್ಲಿ ಶಿವಭಕ್ತ. ಹೆಗ್ಗಡಪೇವನಕೋಟೇ ತಾಲ್ಲೋಕು ಮಗ್ಗೆ ಪ್ರಾಂತದಿಂದ ಬಂದವನು. ಈತನು ಅರಮನೆ ಯಲ್ಲಿ ಕೇವಲ ಸಣ್ಣ ಕೆಲಸಕ್ಕೆ ಸೇರಿದನು. ಇವನು ತನ್ನ ಬುದ್ಧಿ

ಶಕ್ತಿಯಿಂದಲೂ ವಿಚಕ್ಷಣೆಯಿಂದಲೂ ತನ್ನ ಕೆಲಸದಿಂದಲೂ ಪ್ರಭುಗಳ ದಯಕ್ಕೆ ಪಾತ್ರನಾದನು. ಶಿವಭಕ್ತ ಜನರು ಮೊದಲು ಖಾಸಾ ವಿಶ್ವಾಸಕ್ಕೂ ತರುವಾಯ ಆಗ್ರಹಕ್ಕೂ ಶ್ರೀ ವೈಷ್ಣವರು ತರುವಾಯ ವಿಶ್ವಾಸಕ್ಕೂ ಆಮೇಲೆ ಅಸಮಾಧಾನಕ್ಕೂ ಪುನಃ ಶಿವಾಚಾರದವರು ಖಾಸಾ ಅಭಿಮಾನಕ್ಕೂ ಪಾತ್ರರಾದ ಸಮಯಗಳಲ್ಲಿ ಕೂಡ, ಈ ದೇಪಣ್ಣನಲ್ಲಿ ಏಕರೀತಿಯಾದ ಪ್ರಭುಕಟಾಕ್ಷವಿತ್ತು. ಈತನಲ್ಲಿದ್ದ ನಂಬಿಕೆಯು ಶಿವಾಚಾರದವರು ಎರಡನೇ ಸಾರಿ ಪ್ರಾಬಲ್ಯಕ್ಕೆ ಬಂದ ತರುವಾಯ ಒಂದಕ್ಕೆ ನಾಲ್ಕರಷ್ಟು ಹೆಚ್ಚಿತು. ಈ ದೇಪಣ್ಣನಿಗೆ ದಿನಕ್ರಮೇಣ ಒಂದು ಇಲಾಖೆಯ ಬಕ್ಷಿಗಿರಿಯಾಯಿತು. ಆಗಸುಗಳಲ್ಲಿ ಕೆಲವರು ಹಿಂದೆ ಮಾಡಿದ ದ್ರೋಹದಿಂದ ಅಪರ ಜಾತಿಯವರಲ್ಲಿ ನಂಬಿಕೆ ತಪ್ಪಿಹೋಯಿತು. ಬ್ರಾಹ್ಮಣರಲ್ಲಿ ಶ್ರೀ ವೈಷ್ಣವರಪಾಡು ಮೇಲೆ ಹೇಳಿದಂತಾಯಿತು. ಹಿಂದಿದ್ದ ದೇಶಸ್ಥ ಬ್ರಾಹ್ಮಣರಾಯರುಗಳೆಲ್ಲಾ ಖಿಲವಾಗುತಾ ಬಂದಿದ್ದರು. ಉಳಿದ ಬ್ರಾಹ್ಮಣರು ಪಂಚಾಂಗದ ಹಾರವೈಯ್ಯಗಳಾಗಿದ್ದರು. ಮುಸಲ್ಮಾನರಲ್ಲಿ ಅಷ್ಟರ ಯೋಗ್ಯರು ಯಾರೂ ಇರಲಿಲ್ಲ. ಇದೂ ಅಲ್ಲದೆ ದೇಪಣ್ಣನು ಯಾವಾಗಲೂ ಸಮೀಪ ವೃತ್ತಿಯಲ್ಲಿರತಕ್ಕ ಜನರಿಗೆ ಸೇರಿ ದೊರೆಯಲ್ಲಿ ನಂಬಿಕೆಯನ್ನು ಸಂಪಾದನೆ ಮಾಡಿಕೊಂಡಿದ್ದನು.

ಯಾವುದು ಏನಾದರೂ ಆಗಲಿ, ದೌಲತ್ತನ್ನು ಕಂಪನಿ ಸರ್ಕಾರದವರು ಜಪ್ತಿ ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡರಲ್ಲಾ ಎಂಬ ವ್ಯಸನ ಬಹಳವಾಗಿ ಅಂಟಿತ್ತು. ಹೇಗಾದರೂ ತಮ್ಮ ದೇಶವನ್ನು ತಮ್ಮ ಕೈಗೆ ತೆಗೆದುಕೊಂಡು ಪ್ರಜೆಗಳಲ್ಲಿಯೂ ಇತರ ರಾಜವಾಡೆಯವರಲ್ಲಿಯೂ ತಮ್ಮ ಗೌರವವನ್ನು ಉಳಿಸಿಕೊಳ್ಳಬೇಕೆಂಬುವುದು ದೊರೆಯ ಮನಸ್ಸಿಗೆ ಚೆನ್ನಾಗಿ ನಾಟಿಹೋಗಿತ್ತು. ಯೋಗ್ಯರಾಗಿ ಸಮರ್ಥರಾದ ಜನರು ಯಾರು ಕೈಗೆ ಸಿಕ್ಕಿದರೂ ಅವರಲ್ಲಿ ಈ ಸಂಗತಿಯನ್ನು ರಹಸ್ಯವಾಗಿ ಪ್ರಸ್ತಾಪಿಸುತಾ ತಮ್ಮ ಇಷ್ಟ

ಈಡೇರುವುದಕ್ಕೆ ತಕ್ಕ ತರದೂದನ್ನು ಮಾಡುತಿದ್ದರು. ಈ ರಹಸ್ಯವಾದ ರಾಜಕಾರ್ಯಕ್ಕೆ ಸೇರಿದವರಲ್ಲಿ ದೇಪಣ್ಣ ಒಬ್ಬ ಪ್ರಮುಖನಾಗಿದ್ದನು. ಅಂಬಾವಿಳಾಸವೆಂಬ ತೊಟ್ಟಿಯಲ್ಲಿ ಸಾಯಂಕಾಲವಾದ ಮೇಲೆ ದಿನಚರಿ ದರ್ಬಾರೆಲ್ಲಾ ನಡೆಯುತಿತ್ತು. ರಾತ್ರಿ ೯–೧೦ ಗಂಟೆಯಾದ ಮೇಲೆ ಅಪ್ಪಣೇ ಪ್ರಕಾರ "ದೇಪು" ಎಂದು ಕಟ್ಟಿಗೆಯವನು ಕೂಗಿದ ಕೂಡಲೆ ಸನ್ನಿಧಾನದಲ್ಲಿದ್ದ ಇತರ ಜನರೆಲ್ಲರೂ ಮುಜರೆಮಾಡಿ ಹೊರಟು ಹೋಗಲು ಸೂಚನೆ ಎಂದು ಭಾವಿಸಿ ಆಚೆಗೆ ತೆರಳುತಿದ್ದರು. ದೇಪಣ್ಣನವರು ಒಳಕ್ಕೆ ಹೋಗಿದಾರೆಂದರೆ ಮತ್ತೆ ಯಾರನ್ನೂ ಒಳಕ್ಕೆ ಬಿಡಕೂಡದೆಂದು ಅರ್ಥ.

ಇಂಥಾ ರಾಜಕಾರ್ಯಗಳನ್ನು ಅಲ್ಪಜನರು ಸಾಧಿಸಲಾರರು. ಮಹಾಸಿಂಹನ ಗಂಟಲೊಳಕ್ಕೆ ಹೋಗಿ ಸಿಕ್ಕಿಕೊಂಡಿದ್ದ ತುತ್ತನ್ನು ಕೈಹಾಕಿ ಈಚೆಗೆ ತೆಗೆಯುವುದು ದುಸ್ತರವಾದ ಕೆಲಸ. ಸಿಂಹದ ಗಂಟಲಿಗೆ ಸಿಂಹದ ಕೈಯನ್ನೇ ಹಾಕಿಸಿ ಅದನ್ನು ಈಚೆಗೆ ತೆಗೆಯಿಸುವ ಪ್ರಯತ್ನ ಮಾಡಬೇಕು. ಕಂಪನಿ ಸರ್ಕಾರದವರು ಅಲ್ಪ ಕಾರಣದ ಮೇಲೆ ದೌಲತ್ತನ್ನು ಜಪ್ತಿಮಾಡಿ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿರುವ ರಾಜ್ಯವನ್ನು ಕಂಪನೀ ಸರದಾರರ ಮೂಲಕವಾಗಿಯೇ ಬರಮಾಡಿಕೊಳ್ಳುವ ಪ್ರಯತ್ನವೇ ಕ್ಷೇಮಕರವೆಂದು ಯೋಚಿಸಿ ಅದಕ್ಕೆ ತಕ್ಕ ಉಪಾಯವನ್ನು ಹೂಡಲು ತೊಡಗಬೇಕಾಯಿತು. ಇಂಥಾ ರಾಜಕೀಯವಾದ ಮಂತ್ರಾಲೋಚನೆಯಲ್ಲಿ ದೇಪಣ್ಣನು ಕೇವಲ ನಿಸ್ಸೀಮನಾಗಿದ್ದನು. ಸಾಹೇಬಜನರನ್ನು ಕಟ್ಟಿಕೊಳ್ಳಲು ಅವರಲ್ಲಿ ವಿಶೇಷವಾದ ಬಳಕೆಯುಳ್ಳ ಈ ಸೀಮೆಯ ಜನರನ್ನೂ, ಭಾರೀ ಬ್ರಿಟಿಷ್ ಸರದಾರರನ್ನು ಕಟ್ಟಿಕೊಳ್ಳಲು ಮುಖಂಡರಾದ ಕೆಲವು ಸಾಹೇಬಜನರನ್ನೂ ತಮ್ಮ ಕಡೆ ತಿರುಗಿಸಿಕೊಳ್ಳಬೇಕಾದ್ದು ಅಗತ್ಯವಾದ ರಾಜಕಾರ್ಯವಾಗಿತ್ತು. ಇಂಥಾ ಕೆಲಸಕ್ಕೆ ಅನುಕೂಲವಾಗಿದ್ದ ಅನೇಕ ಜನರು ದಿನ

ಕ್ರಮೇಣ ಕಾಲವಶರಾದರು. ಉಳಿದವರಲ್ಲಿ ಹನುಮಂತರಾವ್
ರಣನವರೆಯೇ ಕೇವಲ ವ್ಯಾಪಕನಾಗಿದ್ದನು. ಇವನಲ್ಲಿ ದೇಪ
ಣ್ಣನು ಹೆಚ್ಚಾದ ಸ್ನೇಹವನ್ನು ಬೆಳೆಯಿಸಿದನು. ಇವೇ ರಾಜಕಾರ್ಯ
ಸಾಧನೆಗಾಗಿ ಡಾಕ್ಟರ್ ಕ್ಯಾಂಬೆಲ್ ಸಾಹೇಬ, ಕುಂಟಕನಿಂಘೆಂ
ಸಾಹೇಬ ಮೊದಲಾಗಿ ಈ ಸೀಮೆಯಲ್ಲಿದ್ದ ಇತರ ಸಾಹೇಬ
ಜನರು ಕೃಷ್ಣರಾಜ ಒಡೆಯರ ಸದ್ಗುಣಗಳಿಗೆ ಮರುಗಿ ಇವರಿಗೆ
ಉಪಕಾರ ಮಾಡಲು ಸೀಮೆಯಲ್ಲಿ ತಕ್ಕಂಥಾ ದೊಡ್ಡ ಮನುಷ್ಯ
ರನ್ನು ಕೈವಶಮಾಡಿಕೊಂಡರು. ಇದೆಲ್ಲಾ ಕೇವಲ ರಹಸ್ಯವಾಗಿ
ಜರುಗುತಿತ್ತು.

## ೯ ನೇ ಅಧ್ಯಾಯ

# ಸಿಸ್ತುಗಾರಿಕೆಯ ಫಲ

ದೇಪಂಣನಿಗೆ ಹಿರೀ ಹೆಂಡತಿ ಸತ್ತುಹೋದಳು. ಕೆಲವು ದಿವ
ಸದ ಮೇಲೆ ಕೃಷ್ಣರಾಜ ಪ್ರಭುಗಳು ಬಲವಂತ ಮಾಡಿ ಆತನಿಗೆ
ಎರಡನೇ ಮದುವೆಯನ್ನು ಮಾಡಿಸಿದರು. ಈ ಮಧ್ಯಕಾಲದಲ್ಲಿ
ಹಿಂದೆ ಹೇಳಿದ ಕುಲಗಾಣದ ನಾಗರತ್ನಾಸಾನಿಯ ಸ್ನೇಹಪ್ರಾಪ್ತ
ವಾಯಿತು. ವ್ಯಭಿಚಾರವು ಯಾವ ಕಾಲದಲ್ಲಿಯೂ ದೂಷ್ಯ
ವಾದ್ದೇ, ಆದರೆ ಇದು ಗಂಡಸರಲ್ಲಿ ಕ್ಷಮಾರ್ಹವಾಗಿಯೂ ಹೆಂಗ
ಸರಲ್ಲಿ ಪ್ರಮಾದ ಜನಕವಾಗಿಯೂ ಭಾವಿಸಲ್ಪಟ್ಟಿದೆ. ಇದಕ್ಕೆ
ಅನೇಕ ಕಾರಣಗಳುಂಟು. ಆದರೆ ಪುರುಷರು ಬಲಿಷ್ಠರಾಗಿಯೂ
ಸ್ವಭಾವದಲ್ಲಿ ದುಡುಕು ಉಳ್ಳವರಾಗಿಯೂ ಇರುವುದರಿಂದ
ಜಿತೇಂದ್ರಿಯತ್ವವು ಇವರಲ್ಲಿ ಕಡಮೆ. ಸ್ವಭಾವವನ್ನರಿತು ತಕ್ಕ
ಸಂಸ್ಥೆಗಳನ್ನು ಏರ್ಪಡಿಸದಿದ್ದರೆ ಜನ ಸಮುದಾಯದ ಬಾಳಿಗೇ
ದೊಡ್ಡ ವಿಪತ್ತು ಸಂಭವಿಸುವ ಅನುಭವದಿಂದಲೂ ಭೀತಿಯಿಂ
ದಲೂ ಪರ್ಯಾಲೋಚನೆಯಿಂದಲೂ ನಮ್ಮ ಹಿಂದೂಸ್ಥಾನದಲ್ಲಿ

ವ್ಯಭಿಚಾರದಿಂದ ಹುಟ್ಟುವ ಕೇಡನ್ನು ಕಡಮೆ ಮಾಡುವುದಕ್ಕಾಗಿ ವೇಶ್ಯಾಂಗನೆಯರ ಒಂದು ಜಾತಿಯನ್ನೇ ಅಂಗೀಕಾರ ಮಾಡಿ, ಅದಕ್ಕೆ ಬೇಕಾದ ನಿಬಂಧನೆಗಳನ್ನು ಮಾಡಿಟ್ಟರು. ಈ ಜಾತಿಗೆ ದೇವದಾಶಿಗಳೆಂಬ ಒಂದು ಗಂಭೀರವಾದ ಹೆಸರನ್ನೂ ಕೊಟ್ಟರು. ಗಾನ ನರ್ತನ ಅಭಿನಯವೇ ಮೊದಲಾದ ಮೋಹಕ ವಿದ್ಯೆಗಳು ಅವರ ವೃತ್ತಿಗೆ ಸಹಕಾರಿಗಳಾಗಿ ಅವರಲ್ಲಿ ವೃದ್ಧಿ ಹೊಂದಿದವು. ಪಾಪ ಪುಣ್ಯ ವಿಚಾರದಲ್ಲಿ ಈ ಸಂಸ್ಥೆಯು ಅಷ್ಟು ಶ್ಲಾಘನೆಗೆ ಅರ್ಹವಿಲ್ಲದಿದ್ದಾಗ್ಯೂ ತಾತ್ಕಾಲಿಕವಾದ ಐಹಿಕ ಸಂಬಂಧವಾದ ಕೇಡುಗಳನ್ನು ಕಡಮೆ ಮಾಡಲು ಇದು ಅನುಕೂಲವಾದ ಏರ್ಪಾಡಾಗಿದೆ. ಜನರ ಬಾಳಿಗೆ ಇದು ಇರಲೇಬೇಕೆಂದು ಇದಕ್ಕಾಗಿ ಧರ್ಮಶಾಸ್ತ್ರ ಸಹ ಹುಟ್ಟಿದೆ.

ಪೂರ್ವದ ಗ್ರೀಸ್ ಜನರಲ್ಲಿಯೂ ಲ್ಯಾಟಿನ್ ಜನರಲ್ಲಿಯೂ ಇಂಥಾ ಒಂದುಜಾತಿ ಒಂದು ವಿಧವಾಗಿ ಇದ್ದೇ ಇತ್ತು. ಈಚೆಗೆ ಹೊಸದಾಗಿ ವೃದ್ಧಿಗೆ ಬಂದು ಜನರ ಕ್ಷೇಮಾರ್ಥವಾದ ಸಂಸ್ಥೆಗಳು ಘನೀಭೂತವಾಗಿ ನಿಲ್ಲುವುದಕ್ಕೆ ಮುಂಚೆ ಇತರ ನಾಗರಿಕತೆಗಳನ್ನು ವೃದ್ಧಿಮಾಡಿ ಐಶ್ವರ್ಯವಂತರಾದ ನವೀನ ಪಾಶ್ಚಾತ್ಯರಲ್ಲಿ ಕೂಡ ಯಾವ ನಿಬಂಧನೆಯೂ ಇಲ್ಲದೆ ಇಂಥಾ ದುರ್ಮಾರ್ಗ ಸ್ತ್ರೀಮಂಡಲಿಯು ವೃದ್ಧಿಯಾಗಿರುವುದು ಎಲ್ಲರ ಅನುಭವಕ್ಕೂ ವೇದ್ಯವೇ ಇದೆ. ಆದಿಯಲ್ಲಿ ಇದು ಹುಟ್ಟುವುದಕ್ಕೆ ಮೂಲ ಹೇಗಾದರೂ ಇರಲಿ. ದುರ್ಮಾರ್ಗರಿಂದ ಸಜ್ಜನರಿಗೆ ಕೇಡಾಗದಿರಲೆಂದು ಹುಟ್ಟಿರುವ ಈ ಜಾತಿಯವರಲ್ಲಿ ನೀತಿಯ ಕಟ್ಟನ್ನು ಸಡಿಲಮಾಡಿಕೊಂಡ ಜನರು ಲೋಲುಪ್ತರಾಗುವರು. ಸೂಳೆಗಾರಿಕೆಯು ಹೀಗೆ ವೃದ್ಧಿಗೆ ಬಂತು. ಇಂಗ್ಲಿಷ್ ವಿದ್ಯಾಭ್ಯಾಸವು ಹೆಚ್ಚಾಗಿ ಹರಡುವುದಕ್ಕೆ ಮುಂಚೆ ಇದ್ದ - ದೊಡ್ಡ ಮನುಷ್ಯರನೇಕರು ಬಹಿರಂಗವಾಗಿ ಸೂಳೆಯರನ್ನು ಇಟ್ಟುಕೊಂಡು ಲೋಲುಪ್ತರಾಗುತಿದ್ದರು. ಅನೇಕರು ಈಗಲೂ ಹಾಗೆಯೇ ಇದಾರೆ.

ಪೂರ್ವದಲ್ಲಿ ಇದರೊಳು ಗೌರವಕ್ಕೆ ಹಾನಿಯೇನೂ ಉಂಟಾಗುತಿ ರಲಿಲ್ಲ. ಮತ್ತು ಕೆಲವುಕಡೆ ಸೂಳೆಯರನ್ನು ಇರಿಸಿಕೊಂಡಿದಾ ರೆಂಬ ಪ್ರವಾದವು ಗೌರವಕ್ಕೆ ಒಂದು ಅಂಗವೆಂದು ಭಾವಿಸುತಿ ದ್ದರು. ಈ ವಾಡಿಕೆಯನ್ನು ಅನುಸರಿಸಿ ದೇಪಂಣನು ಕುಲಗಾ ಣದ ನಾಗರತ್ನ ಎಂಬುವ ನಾಯಿಕಸಾನಿಯನ್ನು ಇರಿಸಿಕೊಂಡು ಅವಳಿಗೆ ಭಾರಿಯಾದ ಒಡವೆಗಳನ್ನೂ ಬೆಲೆಯಾದ ಅನೇಕ ಸೀರೆ ಗಳನ್ನೂ ತೆಗೆದು ಕೊಟ್ಟು ಕೇಳಿದಷ್ಟು ದ್ರವ್ಯವನ್ನು ಕೊಡುತಾ ಇದ್ದನು.

ಆದರೆ ಜಾತಿಗೇ ಸ್ವಭಾವವಾಗಿ ಬಂದ ಶ್ವಾನಬುದ್ಧಿಯನ್ನು ತಪ್ಪಿಸುವುದು ಅಸಾಧ್ಯ. ಆ ಹೆಂಗಸು ಅವಸರದ ಹೋಬಳಿ ಬಸಪ್ಪನಲ್ಲಿ ಅಂತರಂಗವಾದ ನಡತೆಯನ್ನು ಇರಿಸಿಕೊಂಡಿದ್ದಳು. ಮನಸ್ಸು ಬದಲಾಯಿಸಿದ ಭಾವವು ಮಾತಿನಿಂದಲೂ ನಡತೆ ಯಿಂದಲೂ ಅನುಮಾನವನ್ನು ಹುಟ್ಟಿಸುತಾ ಬಂತು. ದಿನದಿನಕ್ಕೆ ವಿರಸ ಅಂಕುರಿಸುತಿತ್ತು! ಬುದ್ಧಿಶಾಲಿಯಾದ ದೇಪಣ್ಣನು ಇದರ ಅರ್ಥವನ್ನು ತಿಳಿದುಕೊಂಡು ಅಸಮಾಧಾನವನ್ನು ಪ್ರಕಾಶ ಮಾಡದೇ ಸುಮ್ಮನಿರುತಾ, ಅಲ್ಲಿನ ನಿಜವಾದ ಸ್ಥಿತಿಯನ್ನು ತಿಳಿ ಯಲು ವಾಡಿಕೆಯಲ್ಲದ ವೇಳೆಯಲ್ಲಿ ಅಕಸ್ಮಾತ್ತಾಗಿ ತಾನೇ ಬರುತಾ, ಶೋಧನೆಗಾಗಿ ನಂಬಿಕೆಯಾದ ಜನರನ್ನು ಯಾವ ಸೂಚನೆಯೂ ಇಲ್ಲವೆ ಮುಂದಾಗಿ ಕಳುಹಿಸುತಾ, ಆಪ್ತರಾದ ಕೆಲವು ಗೂಢಚಾರರಿಗೆ ಉಪಾದಾನದವರ ವೇಷವನ್ನು ಹಾಕಿಸಿ ಕಳುಹಿಸುತಾ, ಸೂಳೇಮನೇ ಚಾಕರಿಗೆ ಹೊಸ ಜನರನ್ನು ನೇಮಿ ಸುತಾ, ಅವೇಳೆಯಲ್ಲಿ ಹೊಂಚು ಕಾಯಿಸುತಾ, ಅಲ್ಲಿ ನಡೆಯುವ ಸಮಾಚಾರವನ್ನು ತಿಳಿದುಕೊಳ್ಳುತಾ ಬಂದನು. ದಿನೇ ದಿನೇ ಅನುಮಾನ ಹೆಚ್ಚುತಾ ಬಂತು. ಗುಟ್ಟೆಲ್ಲಾ ಗೊತ್ತಾಗುತಾ ಬಂತು. ಆ ನಾಯಿಕಸಾನಿಯ ಮನೆಯಲ್ಲಿ ಬಸಪ್ಪನು ಇದ್ದ ಸುಳುವನ್ನು ತಿಳಿದು ಒಂದು ದಿನ ದೇಪಣ್ಣನು ತಾನೇ ಅವಳ

ಮನೆಗೆ ತಟ್ಟನೆ ಹೋದನು. ಬೀದೀಬಾಗಿಲು ಹಾಕಿತ್ತು. ಒಳಗೆ ಹಾಡುವ ಲಾವಣಿಗಳು ಚಾಪಡಿಗಳು ಹಾಕುವ ಲಬ್ಲಿಗಳೂ ಏಕವಾಗಿ ಕೇಳುತಾ ಬಂದವು. ಕೂಗಿದ್ದಕ್ಕೆ ಬಾಗಿಲನ್ನು ತೆಗೆಯಲೇಬೇಕು. ಏನಮಾಡಬೇಕು? ಅವರ ಮನೆಯಲ್ಲಿ ಧಾನ್ಯ ತುಂಬುವ ಒಂದು ಗಳಗೆ ಇತ್ತು. ಬಸಪ್ಪನವರು ಅದರೊಳಗೆ ಇಳಿದು ಕೂತುಕೊಂಡರು. ಅವರ ಮೇಲುಗಡೆ ಬಾಯನ್ನು ಕಸಕಡ್ಡಿ ಹಾಕಿ ಕೂಡಲೆ ಮುಚ್ಚಿ ಬಾಗಿಲನ್ನು ತೆಗೆದರು. ಅನುಮಾನಕ್ಕೆ ಮತ್ತೆ ಯಾವ ಕಾರಣವೂ ಇಲ್ಲದಂತೆ ಮಾಡಿದರು. ಅವಸರದಲ್ಲಿ ಮಾಡುವ ಕೆಲಸ. ಏನಾದರೂ ಒಂದು ಲೋಪ ಇದ್ದೇ ಇರುವುದು. ಬಾಗಿಲ ಹೊರ ನಡುಮನೆಯಲ್ಲಿ ಬಿಟ್ಟಿದ್ದ ಪಾದರಕ್ಷೆಯನ್ನು ಮುಚ್ಚಿಡಬೇಕೆಂದು ತೋರಲಿಲ್ಲ. ಅಲ್ಲಿನ ಸ್ಥಿತಿಯನ್ನು ತಿಳಿದುಕೊಂಡು ಸಾಯಂಕಾಲ ೮–೯ ಗಂಟೆವರೆಗೂ ದೇಪಣ್ಣ ಅಲ್ಲಿಯೇ ಕೂತನು. ಗಳಗೆಯೊಳಗಿನ ಬೂತಕ್ಕೆ ಜಲಮಲ ಕಟ್ಟಿ ಹೊಟ್ಟೆ ಉಬ್ಬರಿಸಿಕೊಂಡಿತು. ಉಸಿರು ಬಿಡುವುದಕ್ಕೂ ಎಳೆಯುವುದಕ್ಕೂ ಮಾರ್ಗವಿಲ್ಲದೆ ಬಹಳ ಸಂಕಟ ಉಂಟಾಯಿತು. ಆ ದಿವಸ ಬಸಪ್ಪನ ಪುಣ್ಯ ಚೆನ್ನಾಗಿತ್ತು. ದೇಪಣ್ಣನನ್ನು ಕರೆದು ತರಲು ಹುಜೂರಲ್ಲಿ ಅಪ್ಪಣೆಯಾಗುತಿದೆ ಎಂದು ಕಟ್ಟೆಗೆಯವರು ಓಡಿಬಂದರು. ಆತನು ಕೂಡಲೆ ಹೊರಟು ಹೋದನು. ಬಸಪ್ಪನ ಪ್ರಾಣ ಉಳಿಯಿತು.

ಹೀಗೆಯೇ ಇನ್ನೊಂದು ದಿವಸ ಪರೀಕ್ಷಾರ್ಥವಾಗಿ ದೇಪಣ್ಣ ಬಂದಾಗ ಗುರಿಕಾರ ಬಸಪ್ಪನವರಿಗೆ ಮೂಲೆಯಲ್ಲಿರಿಸಿದ್ದ ಒಂದು ಹಳೇ ಹಾಸಿಗೆಯ ಸುರಳಿಯಲ್ಲಿ ಮುಪ್ಪತ್ತು ಗಳಿಗೆ ವಾಸವಾಯಿತು. ಹೀಗೆ ಅನೇಕವೇಳೆ ಪರೀಕ್ಷೆಯನ್ನು ಮಾಡಿದಾಗೆಲ್ಲಾ ಕೆಟ್ಟು ಹೋದ ನಂಬಿಕೆ ವಿಚಾರವು ದಿನೇ ದಿನೇ ದೃಢವಾಗುತಾ ಬಂತು.

ಮನುಷ್ಯ ಸ್ವಭಾವ ಇದ್ದ ಹಾಗೆಯೇ ಇದ್ದೀತೆ? ಅಜಮಾ

ಯಿಷಿ ಹೆಚ್ಚಿದ ಹಾಗೆಲ್ಲಾ ಕ್ರೋಧವೂ ಹೆಚ್ಚಿತು. ಈ ಬಸಪ್ಪ ನನ್ನು ಹಿಡಿಸಿ ಚೆನ್ನಾಗಿ ಪಿಡಿಗುದ್ದಿನ ಸೇವೆಯನ್ನು ಮಾಡಿಸಲೇ ಬೇಕೆಂದು ನಿಷ್ಕರ್ಷೆ ಮಾಡಿಕೊಂಡು ನಾಲ್ಕುಜನ ಲಟ್ಠರಾದ ತುರುಕರನ್ನು ಕರೆದುಕೊಂಡು ಬಂದು ಅವರನ್ನು ಬಾಗಿಲಲ್ಲಿ ಕೂರಿಸಿ ಮುಂಚಿತವಾಗಿಯೇ ಸುಳುವನ್ನು ತಿಳಿದಿದ್ದ ದೇಪಣ್ಣನು ಆ ಮನೆಯೊಳಕ್ಕೆ ನುಗ್ಗಿದನು. ಆ ಗಾಬರಿಯಲ್ಲಿ ಇನ್ನು ಯಾವ ವಿಧದಲ್ಲಿಯೂ ಮುಚ್ಚುವುದಕ್ಕೆ ಸಾಧ್ಯವಿಲ್ಲದೇ ಹೋಯಿತು. ಬಸಪ್ಪನಿಗೆ ಒಂದು ಸೀರೆಯನ್ನು ಸುತ್ತಿ ಹೊಗೆಹಿಡಿದು ಕತ್ತಲೆ ಯಾಗಿದ್ದ ಅಡಿಗೆ ಮನೆಯಲ್ಲಿ ಕೂರಿಸಿದರು. ಬೇಕಾದ ಏರ್ಪಾಡು ಗಳನ್ನು ಮೊದಲೇ ಮಾಡಿದ್ದ ದೇಪಣ್ಣನು ಸ್ವಲ್ಪ ಹೊತ್ತು ಇದ್ದು ಹೊರಟುಹೋದನು. ಅವನು ಹೋದರೇನಾಯಿತು? ಗುರಿಕಾರ ಬಸಪ್ಪನವರು ಅರಮನೆಯ ಚಾಕರಿಗೆ ಹೋಗುವ ವೇಳೆ ಬಂತು. ಹೊರಟಾನೆ, ಬಾಗಿಲಲ್ಲಿರುವ ಯಮದೂತರು ಇವನನ್ನು ಕೈಲಾಸಕ್ಕೆ ಕಳುಹಿಸುತಾರೆ. ಹೊರಡದೇ ಇದ್ದಾನೆ, ಅರಮನೇ ಕೆಲಸ ನಿಂತು ಪುಕಾರಾಗಿ ರಾಜಾಗ್ರಹಕ್ಕೆ ಪಾತ್ರನಾಗ ಬೇಕಾಗುತ್ತೆ. ದಿಕ್ಕೇ ತೋರಲಿಲ್ಲ. ಸಮಯ ಬಂದಾಗ ಇಲ್ಲದ ಉಪಾಯ ತೋರುವುದುಂಟು. ಈ ನಾಯಕಸಾನಿಯ ಮನೇ ಹಿಂಭಾಗದಲ್ಲಿ ಒಬ್ಬ ಕ್ಷೌರಿಕನ ಮನೆಯ ಅಂಗಳವಿತ್ತು. ಸೂಳೇ ಮನೆಯ ಅಡಿಗೇ ಮನೆಯೊಳಗಿನಿಂದ ಆ ಅಂಗಳಕ್ಕೆ ಒಂದು ಕಿಟಕಿ ಇತ್ತು. ಆ ಕಿಟಕಿಯಿಂದ ನಾಗರತ್ನಾಸಾನಿಯು ನಾಪಿತನ ಹೆಂಡತಿಯನ್ನು ಕೂಗಿ ಒಂದು ಕತ್ತರಿಯನ್ನೂ ಒಂದು ಕತ್ತಿ ಯನ್ನೂ ಇಸುಕೊಂಡಳು. ರಾತ್ರೆ ೮ ಘಂಟೆಯಾಗಿತ್ತು. ಬಹು ಸೊಂಪಾಗಿ ಬೆಳೆಯಿಸಿ ಸಾಕಿಸಲಹಿಕೊಂಡಿದ್ದ ದಪ್ಪನಾದ ತನ್ನ ಮೀಸೆಯನ್ನೂ ಜುಟ್ಟನ್ನೂ ಬಸಪ್ಪನು ಕತ್ತರಿಸಿಕೊಂಡನು. ತನ್ನ ಮಗುವಿನ ಕತ್ತನ್ನು ತಾನೇ ಕುಯಿದಷ್ಟು ದುಃಖಬಂತು. ಯತ್ನ ವಿಲ್ಲ. ಕೊನೆಗೆ ಉಳಿದ ಮೋಟನ್ನು ಕತ್ತಿಯಿಂದ ಬೋಳಿಸಿ

ಕೊಂಡನು. ತರುವಾಯ ದಪ್ಪವಾಗಿ ಬೆಳೆದಿದ್ದ ಹುಬ್ಬನ್ನೂ ಬೋಳಿಸಿಕೊಂಡನು. ಆ ನಾಯಿಕಸಾನಿಯು ಹಣೆಗೆ ಸುಣ್ಣದಿಂದ ಎರಡು ಬಿಳೀ ನಾಮವನ್ನೂ ಕುಂಕುಮದಿಂದ ಒಂದು ಕೆಂಪು ನಾಮವನ್ನೂ ಹಾಕಿದಳು. ಆಮೇಲೆ ಬಸಪ್ಪನು ಅವಳ ಮನೆಯಲ್ಲಿದ್ದ ಹರಕು ಮಗುಟದ ತುಂಡನ್ನು ಲಂಗೋಟಿಯ ಹಾಗೆ ಸೊಂಟಕ್ಕೆ ಕಟ್ಟಿ, ಚೊಕ್ಕಟವಾಗಿ ತೊಳೆದ ಎರಡು ಕೊಡಗಳನ್ನು ತೆಗೆದುಕೊಂಡು, ನಾರಾಯಣ ನಾರಾಯಣ, ಎನ್ನುತಾ ಬೀದಿ ಬಾಗಿಲಿನಿಂದ ಈಚೆಗೆ ಹೊರಟನು. ಸಿಕ್ಕಿದರೆ ಸಾಕೆಂದು ಕಾದುಕೊಂಡು ಕೂತಿದ್ದ ನಾಲ್ಕುಜನ ರಾಹುತರು ಇವನನ್ನು ಹಿಡಿದುಕೊಂಡು ನೀನು ಯಾರು, ಎಲ್ಲಿಗೆ ಹೋಗುತೀಯೆ? ಎಂದು ಕೇಳಿದರು. ಅದಕ್ಕೆ ಬಸಪ್ಪನು—ಅಯ್ಯೋ ಸಾಬರೆ, ನಾನು ಸಾತಾನಿ ಅಳಸಿಂಗರ್ರೈಯ್ಯ, ಈ ನಾಯಕಸಾನಿಯ ಮನೆಗೆ ನೀರ ಹಾಕುತೇನೆ, ಎಂದನು. ನಾವು ಇಲ್ಲಿಯೇ ಕಾದುಕೊಂಡು ಕೂತಿದೇವಲ್ಲ, ನೀನು ಯಾವ ಬಾಗಿಲಿನಿಂದ ಒಳಕ್ಕೆ ಹೋದೆ ಎಂದು ರಾಹುತರು ಕೇಳಿದರು. ಬಸಪ್ಪನು—ಸಾಬರೆ ಈ ಮನೆಗೆ ಹಿಂದುಗಡೆ ಒಂದು ಬಾಗಿಲು ಇದೆ, ನಾನು ಅಲ್ಲಿಂದ ಬಂದೆ, ಎಂದನು. ಅದಕ್ಕೆ ಆ ಭಟರು—ಹಾಗಾದರೆ ಅವಸರದ ಹೋಬಳಿ ಗುರಿಕಾರ ಬಸಪ್ಪ ಒಳಗೆ ಇದಾನೆಯೆ? ಎಂದು ಕೇಳಿದರು. ಒಬ್ಬ ಕೆಂಪಗೆ ಇದಾನೆ, ದಪ್ಪವಾದ ಮೀಸೆಯವನು, ತುಂಬಾ ಜುಟ್ಟುಳ್ಳವನು, ಇವನೇ ಹವುದೋ ಅಲ್ಲವೊ? ಇವನೇ ಆದರೆ ಆ ಮನುಷ್ಯ ಒಳಗೆ ಕೂತಿದಾನೆ. ಅವನು ಅರಮನೆಗೆ ಹೊರಡುವ ಹೊತ್ತಾಯಿತು; ಹಿತ್ತಲ ಬಾಗಿಲಿನಿಂದ ಗುಟ್ಟಾಗಿ ಹೊರಟು ಹೋಗಬೇಕೆಂದು ಪ್ರಯತ್ನಮಾಡುತಾ ಇದಾನೆ; ಹಿತ್ತಲ ಬಾಗಿಲಲ್ಲಿ ನೀವು ಕಾದುಕೊಂಡಿದ್ದರೆ ಖಂಡಿತವಾಗಿಯೂ ಸಿಕ್ಕುತಾನೆ, ಗಾಡ ಅಲ್ಲಿಗೆ ಹೋಗಿ ಎಂದು ಅವರಿಗೆ ಹೇಳಿ ಆ ಕತ್ತಲೆಯಲ್ಲಿ ತಲೆಯನ್ನು ತಪ್ಪಿಸಿಕೊಂಡು ಹೊರಟು ಹೋದನು. ಈ ಆಳು

ಗಳು ಬೆಳಗಾಗುವವರೆಗೂ ಹಿತ್ತಲಬಾಗಿಲಿಗೂ ಬೀದಿ ಬಾಗಿಲಿಗೂ ಯಾಡೆ ಇಡುತ್ತಲೇ ಇದ್ದರು. ಯಾರೂ ಬರಲಿಲ್ಲ. ಬೆಳಗಾದ ಮೇಲೆ ರೋಷದಿಂದ ಆ ಸೂಳೇ ಮನೆಯ ಅಡಿಗೇಮನೆ ಮೊದಲು ಮಾಡಿಕೊಂಡು ಎಲ್ಲಾ ಕಡೆಯಲ್ಲಿಯೂ ಹುಡುಕಿದರು. ಒಂದು ಗಂಡು ಪ್ರಾಣಿಯೂ ಸಿಕ್ಕಲಿಲ್ಲ. ಈ ಭಟರು ಈ ಮಾತನ್ನು ದೇಪಣ್ಣನಿಗೆ ತಿಳಿಸಿಬಿಟ್ಟರು.

ತರುವಾಯ ಗುರಿಕಾರ ಬಸಪ್ಪನು ಅರಮನೆಗೆ ಹೋಗುವುದು, ಧಣಿಯರ ಭೇಟೀ ಮಾಡಿಕೊಳ್ಳದೆ ಹರಿಕಾರರ ಕೈಯಲ್ಲಿ ಅಂಬಾ ವಿಳಾಸಕ್ಕೆ ವರದಿಯನ್ನು ಹೇಳಿ ಕಳುಹಿಸುವುದು, ಹೀಗೆ ೮—೧೦ ದಿವಸ ನಡೆಯಿತು. ಆಮೇಲೆ ಒಂದು ದಿನ ಆಸ್ಥಾನ ಮಂಡಲಿ ಯೆಲ್ಲಾ ಸೇರಿರುವಾಗ,

ದೊರೆ—ಅವಸರದ ಹೋಬಳಿ ಬಸಪ್ಪ ಎಲ್ಲಿ? ೮–೧೦ ದಿವಸ ದಿಂದ ಕಾಣಿಸಲಿಲ್ಲ.

ಬಸಪ್ಪ—ಮಹಾಸ್ವಾಮಿ, ಹಾಜರು.

ದೊರೆ—ಇದೇನೋ ಗುರುತೇ ಸಿಕ್ಕದ ಹಾಗೆ ಮಾಡಿಕೊಂಡಿ ದ್ದೀಯೆ?

ಬಸಪ್ಪ—ಮಹಾಸ್ವಾಮಿ, ನಮ್ಮವ್ವ ತೀರಿಹೋದಳು.

ದೊರೆ—ನಿನಗೆ ಯಾವ ಅವ್ವ ಇದ್ದಳೋ? ವೀರಣಗೆರೆ ಮಾದನ ಮಗನಲ್ಲವೇನೋ ನೀನು? ನಿಮ್ಮವ್ವಗಿವ್ವ ಎಲ್ಲರೂ ಸತ್ತು ಎಷ್ಟೋ ಯುಗವಾಯಿತಲ್ಲೋ?

ಬಸಪ್ಪ—ನಮ್ಮ ಸಾಕು ಅಜ್ಜಿ ತೀರಿಹೋದಳು.

ದೊರೆ—ನಿನಗೆ ಯಾವ ಅಜ್ಜಿ ಬಂದಳು? ನೀನು ನಮ್ಮ ಬಿಡದಿ ಗುರಿಕಾರನ ಮನೆಯಲ್ಲಿ ಬೆಳೆದೆ, ಬಿಡದಿ ಅನ್ನ ತಿಂದು ದಪ್ಪನಾದೆ. ನಿಶ್ಚಯವಾಗಿ ಬಗಳೊ; ತಲೆಯನ್ನು ಯಾಕೆ ಬೋಳಿಸಿಕೊಂಡೆ, ಮಿಾಸೆಯನ್ನು ಯಾಕೆ ಬೋಳಿಸಿಕೊಂಡೆ?

ನಕಲಿಕೇಶವ—ಮಹಾಸ್ವಾಮಿ, ಅಪ್ಪಣೇ ಕೊಡುವುದೇನೋ

ಸುಲಭ. ಉತ್ತರ ಹೇಳುವುದು ಪ್ರಾಣಸಂಕಟ. ಕೇಳುವವರಿಗೆ ಹೇಳುವವರು ಅಡಿಯಾಳು. ಕೆಲವರಿಗೆ ತಂದೆ ತಾಯಿ ಸತ್ತರೆ ವಪನ; ಕೆಲವರಿಗೆ ಸೂಳೆಯರ ಮನೆಗೆ ಹೋದರೆ ವಪನ; ಕೆಲವರಿಗೆ ತಿರುಪತಿಗೆ ಹೋದರೆ ಎರಡು ಬಗೆ ವಪನ. ನಮ್ಮ ಬಸಪ್ಪ ಶಿವಬಕ್ತ, ತಿರುಪತಿ ವಪನವಿಲ್ಲವಷ್ಟೇ. ಇವ ಹುಟ್ಟುವುದಕ್ಕೆ ಮುಂಚೆ ತಂದೆ ತಾಯಿಗಳು ಸತ್ತರು. ಮಷಾಣದ ವಪನವಿಲ್ಲ ವಷ್ಟೆ. ಏನೋ ಮಹಾಸ್ವಾಮಿ, ಉಪ್ಪು ಹುಳಿ ತಿನ್ನುವ ಶರೀರ, ಹುಡುಗ ಪ್ರಾಯದವನು, ಕುಲಗಾಣದ ನಾಗರತ್ನಾಸಾನಿ ಲಕ್ಷಣ ವಾಗಿದಾಳೆ. ಮೂರು ವಪನದಲ್ಲಿ ಮಧ್ಯದ ವಪನವೇ ಲೇಸು ಎಂದ.

ಆಗ ಸವಾರಿ ಒಳಕ್ಕೆ ದಯಮಾಡಿ ಕೂಡಲೇ ಅಂಬಾವಿಲಾಸಕೆ ಯಥಾ ಪ್ರಕಾರ ಬಿಜಮಾಡಿಸಿತು ಈ ಮಧ್ಯೆ ಒಳಗೆ ಈ ಬಸಪ್ಪನ ಕಥೆಯೆಲ್ಲಾ ವಿಸ್ತಾರವಾಗಿ ಅರಿಕೆಯಾದಂತೆ ತೋರುತ್ತೆ. ಸವಾರಿ ಹಿಂತಿರುಗಿ ಬರುವಾಗಲೇ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಆಗ್ರಹದಿಂದ ಬಿಜಮಾಡಿಸಿತು. ಆಕ್ಷಣವೇ ಅವಸರದ ಹೋಬಳಿ ಬಸಪ್ಪನ ಮುಖವನ್ನು ನೋಡುತಾ,

ದೊರೆ—ನಾಯಿಯನ್ನು ಕೊಂಡುಹೋಗಿ ದಂಡಿಗೇ ಮೇಲೆ ಕೂರಿಸಿದರೆ ಅದು ಮಾಡುವ ಕೆಲಸಾ ಮಾಡವೇ ಬಿಟ್ಟೀತೆ? ಇಂಥಾ ನೀಚರನ್ನು ನಾನು ಇರಿಸಿಕೊಂಡೆ. ಬಿಡದಿ ಅನ್ನ ಕೊಬ್ಬನ್ನು ಹೆಚ್ಚಿಸಿತು. ಇವನಿಗೆ ಏನು ಕೇಡುಬಂತು? ಹೆಂಡತಿ ಮಕ್ಕಳು ಎಲ್ಲಾ ಇದಾರೆ. ಇಂಥಾ ಪೋಕರಿಗಳು ಅರಮನೆಯಲ್ಲಿ ಹೆಚ್ಚಿದ್ದರಿಂದಲ್ಲವೆ ನನ್ನ ದೌಲತ್ತಿಗೆ ಊನ ಬಂತು? ಕುಂಪಣಿ ಯವರಿಗೆ ಬರೆದು ನಿಮ್ಮನ್ನೆಲ್ಲಾ ಗಡೀಪಾರು ಮಾಡಿಸುತೇನೆ. ಅವನನ್ನು ಕತ್ತಹಿಡಿದು ದಬ್ಬು, ಆನೇ ಬಾಗಿಲಲ್ಲಿ ಬಿಡಬೇಡಿ. ನ್ಯಾಯವಿಲ್ಲ ನೀತಿಇಲ್ಲ, ಈ ನೀಚರ ಬಾಳು ಹಂದಿ ನಾಯಿ ಗಿಂತಲೂ ಕಡೆಯಾಯಿತು.

ಹೀಗೆ ತುಂಬಾ ಆಗ್ರಹಮಾಡಿ ಪ್ರಭುಗಳು ಒಳಕ್ಕೆ ಎದ್ದು ಬಿಜಮಾಡಿದರು. ಅವಸರದ ಹೋಬಳಿ ಗುರಿಕಾರ ಬಸಪ್ಪನ ಮೇಲೆ ದೊರೆಗೆ ಇದ್ದ ಅಭಿಮಾನಕ್ಕೂ ಅವನಿಗೆ ಇದ್ದ ಅಹಂಕಾರಕ್ಕೂ ಕೊನೆಯಲ್ಲಿ ಅವನಿಗೆ ರಾಜಸಭೆಯಲ್ಲಿ ಆದ ಮಾನ ಭಂಗಕ್ಕೂ ಎಲ್ಲರೂ ಆಶ್ಚರ್ಯಪಟ್ಟು ಹೋದರು. ಪ್ರಭುಚಿತ್ತ ಹೀಗೆಯೇ ಸರಿ ಎಂದು ಹೇಳುವುದಕ್ಕೆ ಆಗದು. ಒಂದೊಂದು ವೇಳೆ ಗಾಳಿಗೆ ಹಿಡಿದ ದೀಪದಂತೆ ಚಿತ್ತ ಚಂಚಲವಾದರೂ ಕೊನೆಯಲ್ಲಿ ಸರಿಯಾದ ದಾರಿಯಲ್ಲಿ ನಿಲ್ಲುತಾ ಇದ್ದದ್ದು ಕೃಷ್ಣರಾಜ ಒಡೆಯರ ಪೂರ್ವಾರ್ಜಿತ ಪುಣ್ಯವೆಂದು ಹೇಳಬೇಕು. ಬಸಪ್ಪನು ಮನಸ್ಸಿನೊಳಗೇ ದುಃಖಪಟ್ಟುಕೊಳ್ಳುತಾ ಮುಖವನ್ನು ಜೋಲು ಹಾಕಿಕೊಂಡು ತಲೇಬಗ್ಗಿಸಿಕೊಂಡು, ಯಾರಿಗೆ ಕತ್ತೆತ್ತಿ ಮುಖವನ್ನು ತೋರಿಸುವುದಕ್ಕೂ ನಾಚಿಕೊಂಡು ಮನೆಗೆ ಹೋದನು. ತರುವಾಯ ಒಂದೆರಡು ತಿಂಗಳವರೆಗೂ ಹೊರಗೆ ಮುಖವನ್ನು ಇಡದೆ ಮನೆಯಲ್ಲಿಯೇ ಇರುತಾ ತನಗೆ ಪರಮಾಪ್ತರಾದ ಠಾಕರ್, ಲಚ್ಮನಿ, ಮಾನು, ಮಾದ, ವೆಂಕಟನಾರಿ, ಅಂಚೇಕಪನಯ್ಯ ಇವರೇ ಮೊದಲಾದ ದುಷ್ಟ ಮಂತ್ರಿಗಳ ಸಭೆಯನ್ನು ಸೇರಿಸಿ ಬಹಳವಾಗಿ ಆಲೋಚನೆ ಮಾಡಿದನು. ದೇಪಣ್ಣನ ಪ್ರಾಬಲ್ಯವು ಇಷ್ಟು ಅನಾಹುತವನ್ನು ತಂದಿಟ್ಟಿತು. ದೌಲತ್ತನ್ನು ತರಿಸಿ ಕೊಡುತ್ತೇನೆಂದು ನಟಿಸುತಾ ಈ ದೇಪು ಮಾಡುವ ಪ್ರಯತ್ನವು ಇವನ ಉಚ್ಛ್ರೀಯಕ್ಕೆ ಕಾರಣ. ಈ ಕೆಲಸವನ್ನು ಕೈಗೂಡಿಸಿ ಕೊಡುವುದಕ್ಕೆ ಅನುಕೂಲವಾಗಿರುವ ದೊಡ್ಡ ಸರದಾರರನ್ನು ಹೊಂದಿಸಲು ಹನುಮಂತರಾವ್ ರಣನವರೆಯು ಉದ್ಯುಕ್ತನಾಗಿದಾನೆ. ಇವನ ಬಲವು ದೇಪುವಿಗೆ ತಪ್ಪುವಂತಾದರೆ ಉಳಿದದ್ದೆಲ್ಲಾ ಹಂಚೀಕಡ್ಡಿಯ ಚಪ್ಪರದಂತೆ ಮಗುಚಿಕೊಳ್ಳುವುದು. ಈ ದಾರಿಯನ್ನು ಹಿಡಿದು ಶತ್ರುನಿವಾರಣ ಮಾಡತಕ್ಕದ್ದೇ ಸರಿಯಾದ ಮಾರ್ಗವೆಂದು ಸಿದ್ಧಾಂತವಾಯಿತು.

ಅತ್ತ ದೇಪಣ್ಣನು ಬಸಪ್ಪನನ್ನು ಹಿಡಿಯಲು ತಾನುಮಾಡಿದ್ದ ಯತ್ನಸಾಗದೇ ಹೋದ್ದನ್ನು ತಿಳಿದು, ಕಡೆಗೂ ಪರೀಕ್ಷಿಸಿ ನೋಡೋಣವೆಂದು ರಾಹುತರ ಕೈಗೆ ಬಸಪ್ಪ ಸಿಕ್ಕದೇಹೋದ ಮರುದಿವಸ ಏನೂ ಅರಿಯದವನಂತೆ ನಾಗರತ್ನಾಸಾನಿಯ ಮನೆಗೆ ಹೋದನು. ಈತನ ವಿಷಯವಾಗಿ ದಿನ ದಿನಕ್ಕೂ ಕಡಮೆಯಾಗುತಾ ಬರುತಿದ್ದ ಗೌರವವೂ ನಟನೆಯೂ ವಿಶ್ವಾಸದ ವೇಷವೂ ಆದರದ ಜಾಲವೂ ಶುದ್ಧವಾಗಿ ತಣ್ಣಗಾಗಿತ್ತು. ಈತ ಹೋದರೆ ಮೊದಲುತಾನೇ ಬಂದು ನಗುತಾ ಹಾಸ್ಯವಾಡುತಾ ಬಾಗಿಲನ್ನು ತೆಗೆಯುತಾ ಇದ್ದ ನಾಗರತ್ನಾಸಾನಿಯು ದೇಪ್ಣಣ ಒಳಕ್ಕೆ ಹೋಗಿ ಹಜಾರದಲ್ಲಿ ಕೂತುಕೊಂಡ ಒಂದು ಗಳಿಗೆ ಯಾದರೂ ಈಚೆಗೆ ಬರಲಿಲ್ಲ. ತರುವಾಯ ಬಂದು ಮುಖವನ್ನು ಗಂಟುಹಾಕಿಕೊಂಡು ಯಾವಮಾತನ್ನೂ ಆಡದೆ ತೋಳಮೇಲೆ ಕೆನ್ನೆಯನ್ನು ವಸಿಗಿಕೊಂಡು ದೂರವಾಗಿ ಕೂತುಕೊಂಡಳು. ಈ ಸೂಳೆಯ ತಾಯಿಯಾದ ಪಾರ್ವತಿ ಎಂಬ ವೃದ್ಧವೇಶಿಯು ಒಳಗೆ ಕೂತು ಒಂದುವೇಳೆ ಆಳುಗಳನ್ನು ಒಂದುವೇಳೆ ತನ್ನ ಮಗಳನ್ನೂ ಕುರಿತು ಕೋಪಮಾಡಿಕೊಂಡು ಹಾರಾಡುವಳಂತೆ ನಟಿಸುತಾ ತನ್ನಷ್ಟಕ್ಕೆ ತಾನೇ ಹರಟಿಕೊಂಡದ್ದು ಹೇಗೆಂದರೆ:

"ಅದ್ಯಾಕೆ ಮಾತನಾಡಬೇಡವೆಂದು ಅಡಗು ಮೆಟ್ಟೀಯೇ, ಅಂಥಾ ಗುಟ್ಟೇನು? ನಮ್ಮ ನಮ್ಮ ಹಟ್ಟೀಗೆ ಒಬ್ಬರೂ ಬರ ಕೂಡದೆಂದು ಅಂಕೇ ಮಾಡಿದರೆ ಅದು ಹೆಂಗೆ ಆದಾತು? ನಮ್ಮ ಮನೆಗೆ ಬರೋರು ಬರಲೇಬೇಕು, ಹೋಗೋರು ಹೋಗಲೇ ಬೇಕು. ಇದಕ್ಕೆಲ್ಲಾ ಕಟ್ಟುಮಾಡೋವ ಮೊದಲು ತನ್ನ ಹೆಂಡತಿಗೆ ಮಾಡಲಿ, ನಾವು ಪದಸ್ತೇರು, ಗರತೀರು ಕೆಟ್ಟು ಹೋದೆವೆ? ನಮುಗೆ ಬೆಳಗ್ಗೆ ಒಬ್ಬ ಗಂಡ. ಮಧ್ಯಾಹ್ನ ಒಬ್ಬ ಗಂಡ, ಸಾಯಂಕಾಲ ಒಬ್ಬ ಗಂಡ, ರಾತ್ರೆ ಒಬ್ಬ ಗಂಡ. ಆಯಾ ಕಾಲದಲ್ಲಿ ಬಂದ ಸಿಸ್ತುಗಾರನೇ ನಮಗೆ ಆಗಿನಮಟ್ಟಿಗೆ ದೇವ

ರೆಂದು ಆದರಿಸುತೇವೆ. ಹಾಗಲ್ಲದೆ ಒಬ್ಬನ ಕೈ ಹಿಡಿಯುವುದು, ಇನ್ನೊಬ್ಬನಿಗೆ ಹುಬ್ಬುಹಾಕುವುದು, ಮತ್ತೊಬ್ಬನಿಗೆ ಆಶೆ ಹುಟ್ಟಿಸುವುದು, ಮತ್ತೊಬ್ಬನ ಹಣಕ್ಕೆ ಹಲ್ಲು ಕಿರಿಯುವುದು, ಮಗದೊಬ್ಬನಿಗೆ ಮನಸೋಲುವುದು, ಹೀಗೆ ಮಾಡುವುದಕ್ಕೆ ನಾವೇನು ಗರತೀರು ಕೆಟ್ಟುಹೋದೆವೆ? ಇಷ್ಟೊಂದು ಕಟ್ಟುಮಾಡಿ ನಮಗೆ ಯಾರೇನ ಹೊರಿಸಿಕೊಟ್ಟವರೆಯೋ ನಾಕಾಣೆ? ಇಂಥಾ ಕಟ್ಟಲೆಗಳನ್ನು ಮಾಡತಕ್ಕವರೆಲ್ಲಾ ಅವರವರ ಮನೆಯಲ್ಲಿಯೇ ಇರಲಿ, ನಮಗೆ ಬೇಡ. ಬಹು ಚೆನ್ನಾಯಿತು! ಎಲ್ಲಿಯೂ ನಡೆಯದ ಸಿಸ್ತುಗಾರಿಕೆ ನಮ್ಮ ಹಟ್ಟಿಯಲ್ಲಿಯೇ ನಡೆಯೋ ಹಂಗೈತೆ. ಹಗಲು ಸತ್ತರೆ ಅಕ್ಕಿ ಇಲ್ಲ ಇರುಳು ಸತ್ತರೆ ಎಣ್ಣೆ ಇಲ್ಲ. ಇಂಥಾ ಬಾಳನ್ನು ತಾನು ಬಾಳಿಸುವುದು, ಇತರ ಪುಣ್ಯಾತ್ಮರನ್ನು ನಂಬಿ ಬದುಕೋಣವೆಂದರೆ ಅದಕ್ಕೂ ಮಾರ್ಗವಿಲ್ಲ. ಮೊನ್ನೆ ಮಾಡಿದ ಕೆಲಸ ಮರೆತುಹೋಯಿತೋ ಕಾಣೆ ತಿರುಗಿ ಬರುವುದಕ್ಕೆ ನಾಚಿಕೆ ಇಲ್ಲವೋ ಕಾಣೆ," ಹೀಗೆಂದು ಹೀನಮಾನವಾಗಿ ಬಗೆ ಬಗೇ ಮಾತುಗಳನ್ನು ಆ ಮುದುಕಿ ಆಡಿದಳು. ಇದೆಲ್ಲವನ್ನೂ ಸುಮ್ಮನೆ ಕೂತು ಕೇಳುತಾ ಇದ್ದ ದೇಪಣ್ಣನು ಗಂಭೀರಸ್ಥನಾದ್ದರಿಂದ ಕೋಪವನ್ನು ತೋರಿಸದೆ ಯಾರ ಸಂಗಡಲೂ ಯಾವ ಮಾತನ್ನೂ ಆಡದೆ ಎದ್ದು ಮನೆಗೆ ಹೊರಟುಹೋದನು. ಈ ವೇಶಿಯ ಪುಣ್ಯಸ್ವರೂಪವೇ ಆಚೆಗೆ ತೊಲಗಿದ ಹಾಗಾಯಿತು. ಇತ್ತ ನಂಬಿದ ವಿಟ ಹೋದ, ಅತ್ತ ಕಳ್ಳವಿಟ ಹೋದ, ಮುಂದಿನ ಸ್ಥಿತಿ ಗೊತ್ತೇ ಇದೆ. ದೇಪಣ್ಣನ ಮನಸ್ಸಿಗೆ ಬಹಳ ಜಿಗುಪ್ಸೆ ಹುಟ್ಟಿತು. ಸೂಳೆಗಾರಿಕೆಯು ಕೇವಲ ಮಾನಭಂಗವಾಗುವ ಕೆಲಸವೆಂದು ಆತನ ಮನಸ್ಸಿಗೆ ಆಗ ತೋರಿತು. ಆಗಿನಿಂದ ಈ ಹವ್ಯಾಸವನ್ನೇ ಬಿಟ್ಟುಬಿಟ್ಟನು.

## ೧೦ ನೇ ಅಧ್ಯಾಯ

# ಜವಾಹಿರು ಪರೀಕ್ಷೆ

ದೇಪಣ್ಣನಿಗೂ ಹನುಮಂತರಾವ್ ರಣನವರಿಗೂ ವಿಶೇಷವಾದ ಮೈತ್ರಿಯು ದಿನೇ ದಿನೇ ಬೆಳೆಯುತಾ ಬಂತು. ಮುಖ್ಯವಾದ ರಾಜಕಾರ್ಯ ನೆರವೇರುವುದಕ್ಕೆ ಬೇಕಾದ ಏರ್ಪಾಡುಗಳೆಲ್ಲಾ ವಿಶೇಷವಾಗಿ ನಡೆದವು. ಇಂಗ್ಲಿಷ್ ಸರದಾರರುಗಳು ಈ ಕಾರ್ಯದಲ್ಲಿ ಬಹು ಶ್ರದ್ಧೆಯಿಂದ ಉಜ್ಜುಗಿಸಿದರು. ಅವರುಗಳಲ್ಲಿ ಪ್ರಮುಖರಾದ ಕೆಲವು ದಂಡಿನ ಸಾಹೇಬಜನರಿಗೂ ಸರ್ ಜಾರ್ಜ್ ಮಲ್‌ಕಂ ಸಾಹೇಬ, ಎಲಿಫಿನ್ಸ್ಟನ್ ಸಾಹೇಬ ಇವರುಗಳಿಗೂ ಪದೇ ಪದೇ ರಹಸ್ಯವಾದ ಕಾಗದಗಳನ್ನು ಹನುಮಂತರಾಯನ ಹೆಸರಿನಿಂದ ಅಪ್ರಮೇಯನು ಬರೆಯುತಿದ್ದನು. ಈ ಕಾರ್ಯಗೌರವ ಒಂದುಕಡೆ ಜರಗುತಾ ಇತ್ತು.

ಇದು ಹಾಗಿರಲಿ. ಜವಾಹಿರು ಪರೀಕ್ಷೆಯಲ್ಲಿ ಹನುಮಂತರಾಯನು ಬಹು ನಿಪುಣನೆಂದು ಹಿಂದೆಯೇ ಸೂಚಿಸಿವೆಯಷ್ಟೆ. ಮೈಸೂರಿನ ರತ್ನಪಡಿ ವ್ಯಾಪಾರದ ವರ್ತಕರೆಲ್ಲಾ ಹೆಚ್ಚಾಗಿ ಈತನ ಮನೆಯಲ್ಲಿ ಸೇರುತಿದ್ದರು. ಬೇಕಾದ ರತ್ನಗಳಿಗೆ ಈತನಿಂದ ಬೆಲೆ ಕಟ್ಟಿಸಿಕೊಂಡು ಹೋಗುತಿದ್ದರು. ಉತ್ತಮವಾದ ರತ್ನಗಳನ್ನು ಹನುಮಂತರಾಯನು ಅಂದಾಜುನೋಡಿ ತಾನೇ ಕ್ರಯಕ್ಕೆ ತೆಗೆದುಕೊಂಡು ಅವುಗಳನ್ನು ನಫೆಗೆ ಮಾರುತಿದ್ದನು. ತನ್ನ ಸಮೀಪಕ್ಕೆ ರತ್ನಗಳು ಬಾರದೇ ಇದ್ದಾಗ್ಯೂ ಅವು ಇರುವ ಕಡೆಗಾದರೂ ತಾನೇ ಹೋಗಿ ನೋಡುವ ಆಸೆಯೂ ವಾಡಿಕೆಯೂ ಈತನಲ್ಲಿ ಅತಿಯಾಗಿತ್ತು.

ಶ್ರೀರಂಗಪಟ್ಟಣದ ಲೂಟಿಯಲ್ಲಿಯೂ ಪೂನೆ ಕೊಳ್ಳೆಯಲ್ಲಿಯೂ ಮೈಸೂರು ಸೀಮೆಯ ಸೇನೆಯವರು ಹೆಚ್ಚಾಗಿ ಅಮೌಲ್ಯವಾದ ರತ್ನಪಡಿ ಒಡವೆಗಳನ್ನು ಹೊತ್ತುಕೊಂಡು ಬಂದು ಮೈಸೂರಲ್ಲಿ

ಮಾರುತಿದಾರೆಂದೂ, ಮೈಸೂರ ವರ್ತಕರು ಅವುಗಳನ್ನು ಸುಲಭ ವಾದ ಕ್ರಯಕ್ಕೆ ಕೊಂಡುಕೊಂಡು ದೇಶಾಂತರಗಳಿಗೆ ಕಳುಹಿಸಿ ಭಾರಿ ಆದಾಯವನ್ನು ಸಂಪಾದಿಸುತಾರೆಂದೂ ಪ್ರವಾದ ಹರಡಿ ಕೊಂಡಿತ್ತು. ಈ ವ್ಯಾಪಾರಕ್ಕಾಗಿ ಗುಜರಾತಿ ಮಾರ್ವಾಡಿ ವರ್ತಕರೂ ಗೋಸಾಯಿಗಳೂ ಮೈಸೂರ ಪಟ್ಟಣದಲ್ಲಿ ಬಂದು ನೆಲಸಿದರು. ಮೈಸೂರಲ್ಲಿ ಉತ್ತಮವಾದ ರತ್ನಪಡಿ ನಗಗಳು ಕೆಲವು ಬಹಿರಂಗವಾಗಿಯೂ ಕೆಲವು ಅಂತರಂಗವಾಗಿಯೂ ಕ್ರಯವಾಗುತ್ತೆಂಬ ವದಂತಿ ಅಲ್ಲಲ್ಲಿ ವ್ಯಾಪಿಸಿತ್ತು.

ಮೈಸೂರಲ್ಲಿ ಇಂಗ್ರೀಜಿ ಹಯಾತ್‌ಸಾಬಿ ಎಂಬ ಒಬ್ಬ ಮುಸಲ್ಮಾನ ಇದ್ದನು. ಇವನಿಗೆ ಕಾಸಿಂಬಿ ಎಂಬ ಅತ್ತೆ ಇದ್ದಳು. ಈ ಹಯಾತನ ಕೈ ಕೆಳಗೆ ೮-೧೦ ಜನ ತುಂಟರು ಸೇರಿಕೊಂಡು ಕಾಸಿಂಬಿಯನ್ನು ಕರೆದುಕೊಂಡು ಹಳ್ಳಿಗಳಿಗೆ ಹೋಗುತಿದ್ದರು. ಇವರೆಲ್ಲಾ ಫಕೀರರ ವೇಷದಲ್ಲಿ ಆಯಾ ಹಳ್ಳಿಯ ಮಾರೀ ಚಾವಡಿಗಳ ಬಳಿ ಇಳಿದುಕೊಂಡು ಹಗಲು ಹೊತ್ತು ಅಲ್ಲಿನ ಜನರ ಪರಿಚಯವನ್ನೆಲ್ಲಾ ಸಂಪಾದಿಸಿ ಅಲ್ಲಿ ಯಾರು ತಿರುಳುಳ್ಳವರೆಂಬುವುದನ್ನು ಗೊತ್ತುಮಾಡಿಕೊಳ್ಳುತಿದ್ದರು. ಈ ಫಕೀರರಲ್ಲಿ ಕೆಲವರು ಮಣಿಯ ಸರವನ್ನು ಹಿಡಿದು ಬಾಯಲ್ಲಿ ಪಿಟಗುಟ್ಟುತಾ ಕೇವಲ ಮಹಾತ್ಮರಂತೆ ನಟಿಸುತಿದ್ದರು. ಇನ್ನು ಕೆಲವರು ತಮಟೆಯನ್ನು ಹಿಡಿದು ಬಾರಿಸುತಾ ಹಿಂದೂಸ್ಥಾನಿ ಪದಗಳನ್ನು ಹೇಳುವರಂತೆ ತಾವು ಮಾಡಬೇಕಾದ ಕೆಲಸಗಳನ್ನೆಲ್ಲಾ ತಮ್ಮ ಕಡೆ ಜನರಿಗೆ ತಿಳಿಸುತಾ ಇದ್ದರು. ಈ ಗುಂಪಿನಲ್ಲಿ ದೊಡ್ಡದಾಗಿ ಗಡ್ಡವನ್ನು ಬಿಟ್ಟುಕೊಂಡು ಉದ್ದವಾದ ಫಕೀರರ ಟೋಪಿಯನ್ನು ಇಟ್ಟುಕೊಂಡು ಕೈಯಲ್ಲಿ ಎರಡು ನವಿಲುಗರೀ ದೊಂದೆಯನ್ನು ಹಿಡಿದು ಬಹು ಗಂಭೀರವಾಗಿ ಮಧ್ಯೆ ಹಯಾತ್‌ಸಾಬಿಯು ಹೋಗುತಿದ್ದನು. ಈ ಹಯಾತ್‌ಸಾಬಿಯು ಏನೂ ಅರಿಯದ ಹಳ್ಳಿಗೌಡರ ತಲೆಯಮೇಲೆ ತನ್ನ ನೌಲುಗರೀ ದೊಂದೆಯನ್ನು

ಇರಿಸಿ ಹರಸುವುದು, ಎಲ್ಲಾ ರೋಗಕ್ಕೂ ಇಲ್ಲದ ಮಂತ್ರವನ್ನು ಹಾಕುವನಂತೆ ನಟಿಸುತಾ ಆ ಮೂಢಜನರ ಭಕ್ತಿಯನ್ನೂ ನಂಬಿಕೆಯನ್ನೂ ಸಂಪಾದಿಸಿಕೊಂಡು ಅವರಲ್ಲಿ ಬಲವಂತವಾಗಿ ಮನೆ ಮನೆಗೂ ಅಕ್ಕಿ ರಾಗಿಯನ್ನೂ ದುಡ್ಡನ್ನೂ ಕೇಳುವುದು, ಹೀಗೆ ದಾಂದಳೆಮಾಡಿ ಊರ ಜನರಲ್ಲಿ ನಂಬಿಕೆ ಸಂಪಾದಿಸಿ ಕೊಳ್ಳುತಿದ್ದನು. ಈ ಫಕೀರರೆಲ್ಲಾ ರಾತ್ರೆ ಹೊರಟುಹೋಗಿ ಕಾಡಿನಲ್ಲಿ ಕಣ್ಣುಮರೆಯಾಗುತಿದ್ದರು. ಇವರು ತೆರಳಿಹೋದ ಮಾರನೇದಿನ ರಾತ್ರೆ ಇನ್ನೊಂದು ತಂತ್ರ ನಡೆಯುತಿತ್ತು.

ಇಂಗ್ರೀಜಿ ಹಯಾತ್‌ಸಾಬಿಯ ಅತ್ತೆ ಕಾಸಿಂಬಿಯು ದಪ್ಪ ನಾಗಿ ತೊಂಬೆಗಾತ್ರ ಇದ್ದಳು, ಇವಳಿಗೆ ತಲೇಕೂದಲು ತೊಡೆ ಯಿಂದ ಕೆಳಕ್ಕೆ ಬಡಿಯುವಷ್ಟು ಉದ್ದವಾಗಿಯೂ ತುಂಬಾಗಿಯೂ ಇತ್ತು. ಇವಳು ಮೈಗೆ ಅಂಟಿಕೊಂಡು ದೇಹದ ಮೇಲಿನ ಚರ್ಮವೋ ಎನ್ನುವಹಾಗೆ ಕಾಣುವ ಹಣೀಗೆ ಷರಾಯಿಯನ್ನು ಅದಕ್ಕೆ ಅಂಟಿದಹಾಗೆ ಇರುವ ಕವಚವನ್ನೂ ಹಾಕಿಕೊಳ್ಳುತಿದ್ದಳು. ಇದನ್ನು ಇವಳು ತೊಟ್ಟು ನಿಂತುಕೊಂಡರೆ ಬರೀ ಮೈಯಲ್ಲಿ ದಾಳೆಯೋ ಎನ್ನುವಹಾಗೆ ಕಾಣುತಿತ್ತು. ಈ ಉಡುಪನ್ನು ಹಾಕಿಕೊಂಡು ತಲೇಕೂದಲನ್ನು ಗಂಟುಹಾಕದೆ ಬಿಚ್ಚಿ ಇಳಿಯ ಬಿಟ್ಟು ಗುಗ್ಗುಳದ ಹುಡಿತುಂಬಿದ ಚೀಲವನ್ನು ಕತ್ತಿಗೆ ತಗಲ ಹಾಕಿಕೊಂಡು ಕೃಷ್ಣಪಕ್ಷದಲ್ಲಿ ಮುಖ್ಯವಾಗಿ ಮೋಡಕಟ್ಟಿರುವ ದಿವಸಗಳ ರಾತ್ರೆ ಐದು ಗಳಿಗೆಯಮೇಲೆ ಹಳ್ಳಿಗಳಲ್ಲಿ ಊರ ಬಾಗಿಲಿನಿಂದ ನುಗ್ಗಿ ತಲೆಯಮೇಲೆ ಎಣ್ಣೆಯನ್ನೂ ದೊಡ್ಡದಾಗಿ ಬತ್ತಿಯನ್ನೂ ಹಾಕಿ ದೀಪಾಹತ್ತಿಸಿರುವ ಸರಾವೆಯನ್ನು ಹೊತ್ತು ಕೊಂಡು ಆಗಾಗ್ಗೆ ಗುಗ್ಗುಳದ ಹುಡಿಯನ್ನು ಹಿಡಿ ಹಿಡಿಯಲ್ಲಿ ತೆಗೆದು ಎರೆಚುತಾ ಆ ಸರಾವೆಯಲ್ಲಿನ ದೀಪದಿಂದ ಧಗಧಗನೆ ಉರಿ ಏಳಿಸುತಾ "ಕುಲಿಲಿಲಿ" ಎಂದು ಕೂಗಿಕೊಳ್ಳುತ್ತಾ— ನಾನು ಉರಿಮಾರಮ್ಮ; ಹೊಟ್ಟೆ ತಣ್ಣಗೆಮಾಡಿ, ಕಾಣಿಕೆ ಕೊಡಿ,

ಇಲ್ಲದಿದ್ದರೆ ಊರನ್ನು ಸುಡುತ್ತೇನೆ, ಊರನ್ನು ತಿನ್ನುತ್ತೇನೆ" ಎಂದು ಗಟ್ಟಿಯಾಗಿ ಅರಚಿಕೊಳ್ಳುತಾ ಗ್ರಾಮದ ಬೀದಿಗಳಲ್ಲೆಲ್ಲಾ ಓಡಿಯಾಡುತಿದ್ದಳು. ಇದನ್ನು ಕಂಡು ಆ ಪೂರಲ್ಲಿರುವ ಗಂಡಸರು ಹೆಂಗಸರು ಮಕ್ಕಳು ಸಹಾ ಹೆದರಿಕೊಂಡು ಒಟ್ಟಿಗೆ ಗ್ರಾಮವನ್ನು ಬಿಟ್ಟು ಓಡಿಹೋಗಿ ರಾತ್ರಿಯೆಲ್ಲಾ ತಂತಮ್ಮ ಹೊಲಗಳಲ್ಲಿಯೋ ತೋಟಗಳಲ್ಲಿಯೋ ಕಾಲವನ್ನು ಕಳೆದು ಬೆಳಗಾದಮೇಲೆ ಊರೊಳಕ್ಕೆ ಬರುತಿದ್ದರು. ಹೀಗೆ ಜನರು ಊರ ಬಿಟ್ಟು ರಾತ್ರೆಹೊತ್ತು ಓಡಿ ಹೋದಕಾಲದಲ್ಲಿ ಇಂಗ್ರಿಜಿ ಹಯಾತ್ ಸಾಬಿ ಕಡೆ ಗುಂಪಿನವರು ಯಾರೂ ಇಲ್ಲದ ಮನೆಗಳಿಗೆ ನುಗ್ಗಿ ಎಲ್ಲವನ್ನೂ ಲೂಟೀಮಾಡಿ ತೆಗೆದುಕೊಂಡು ಯಾರಿಗೂ ಸಿಕ್ಕದ ಹಾಗೆ ಹೊರಟು ಹೋಗುತಿದ್ದರು. ಆ ಹಳ್ಳಿಯವರು ಬೆಳಗಾದ ಮೇಲೆ ಬಂದು ಊರೆಲ್ಲಾ ಕೊಳ್ಳೆಯಾಗಿ ಹೋದ್ದನ್ನು ಕಂಡು ದುಃಖಪಡುತಿದ್ದರು. ಹೀಗೆ ಆಗಾಗ್ಗೆ ನಡೆಯುತಾ ಇತ್ತು. ಈ ಕಳ್ಳರು ಯಾರೂ ಕೈಗೆ ಸಿಕ್ಕುತಾ ಇರಲಿಲ್ಲ. ಇಂದು ಈ ತಾಲ್ಲೋಕಿನ ಗ್ರಾಮದಲ್ಲಿ ನಾಳೆ ಬೇರೆ ತಾಲ್ಲೋಕಿನ ಗ್ರಾಮದಲ್ಲಿ ಇಂಥಾ ಲೂಟಿಯು ನಡೆಯುತಾಯಿತ್ತು. ಇದನ್ನು ಹಿಡಿದು ಅಡಗಿಸುವುದಕ್ಕಾಗಿ ಸರ್ಕಾರದವರು ಮೂರು ನಾಲ್ಕು ತಾಲ್ಲೋಕಿನ ಖಿಲ್ಲೇದಾರರನ್ನು ನೇಮಿಸಿದರು. ಅವರು ತಮ್ಮಕಡೆ ಗೂಢಚಾರರನ್ನು ಬಿಟ್ಟು ದೊಡ್ಡದಾಗಿ ಪ್ರಯತ್ನ ಮಾಡಿದ್ದರಿಂದ ಹಳ್ಳಿಗಳಲ್ಲಿ ಇಂಥಾಕೃತ್ಯ ನಡೆಯುವುದು ನಿಂತುಹೋಯಿತು. ಇಷ್ಟೇ ಹೊರತು ಅಪರಾಧಿಗಳು ಬೇರೆ ಸಿಕ್ಕಲಿಲ್ಲ, ಅವರಿಗೆ ಶಿಕ್ಷೆಯೇನೂ ಆಗಲಿಲ್ಲ.

ಈ ಮಹಾ ಕಳ್ಳರು ತಮ್ಮ ಕೈವಾಡವನ್ನು ಇನ್ನೊಂದು ವಿಧದಲ್ಲಿ ತೋರಿಸಿ ಸಂಪಾದನೆ ಮಾಡುತಾ ಬಂದರು. ಅದು ಹೇಗೆಂದರೆ: ದಿವಾನ ಪೂರ್ಣಯ್ಯನವರು ಕಾವೇರಿ ಕಾಲುವೆಯನ್ನು ಮೈಸೂರಿಗೆ ತರಬೇಕೆಂದು ದೊಡ್ಡದಾಗಿ ಪ್ರಯತ್ನ

ಮಾಡಿದರು. ಕನ್ನಂಬಾಡಿ ಬಳಿ ಹರಿಯುವ ಕಾವೇರಿ ನದಿ ಯಿಂದ ದಕ್ಷಿಣದಿಕ್ಕಿಗೆ ಆನೆಂದೂರು ನಾಲೆ ಎಂದು ಇದೆ. ಆ ನಾಲೆಯನ್ನು ಮೈಸೂರವರೆಗೂ ಬಡಾಯಿಸಿ ಭಾರಿಯಾಗಿ ಕಾಲುವೆ ಮಾಡಿಸಿದರು. ಈ ಕಾಲುವೆನೀರು ಮೈಸೂರ ಕೋಟೆಯ ಕಂದಕದ ಸುತ್ತಲೂ ಹರಿಯುವಂತೆ ಮಾಡಿಸಿದರು. ಹೆಚ್ಚು ನೀರು ಮೈಸೂರ ದೊಡ್ಡಕೆರೆಗೆ ಬೀಳುವಹಾಗೆ ಏರ್ಪಾಡಾಗಿತ್ತು. ಮೈಸೂರ ಕೋಟೆಯ ಪೂರ್ವ ದಿಕ್ಕಿನ ಕಂದಕದಬಳಿ ನೀರ ಬಾಗಿಲು ಎಂಬ ಕೋಟೇ ಬಾಗಿಲಿದೆ. ಆ ಬಾಗಿಲ ಕೆಳಗಡೆ ಸೋಪಾನವನ್ನೂ ಸ್ನಾನಗಟ್ಟವನ್ನೂ ಸಂಧ್ಯಾಮಂಟಪನ್ನೂ ಕಟ್ಟಿಸಿ ಹನ್ನೆರಡುಕ್ಷೇತ್ರ ಸಾಲಿಗ್ರಾಮುವನ್ನು ಆ ನೀರಿಗೆ ಹಾಕಿಸಿ ವರಾಹ ತೀರ್ಥವೆಂದು ಮೈಸೂರ ಶ್ವೇತವರಾಹ ಸ್ವಾಮಿಯ ಸೇವಾರ್ಥಕ್ಕಾಗಿ ಹೆಸರಿಟ್ಟರು. ಈ ಮೈಸೂರ ಊರ ಮಧ್ಯೆ ಈ ಪೂರ್ಣಯ್ಯನ ನಾಲೆ ಎಂಬುವುದು ಹರಿಯುತಿತ್ತು. ಮೈಸೂರು ಷಹರುತಿಟ್ಟಿನ ಮೇಲೆ ಇದೆ. ಆದಕಾರಣ ಈ ಷಹರಿನ ಒಳಗೆ ಈ ನಾಲೆಯು ಬಹಳ ಆಳವಾಗಿತ್ತು. ಮೈಸೂರಿನ ಉತ್ತರದ ಕೊನೆಯಲ್ಲಿ ಈ ನಾಲೆಗೆ ರಜಪೂತಘಾಟು ಎಂದು ಹೆಸರು. ಪೂರ್ಣಯ್ಯನವರು ಚರಿತ್ರೆಗಳಲ್ಲಿ ಹೆಸರುಗೊಂಡಿರುವ ಮಹಾ ಪರಾಕ್ರಮಶಾಲಿಗಳಾದ ರಜಪೂತರನ್ನು ಉತ್ತರದೇಶದಿಂದಲೂ ಟಿಪ್ಪುಸುಲ್ತಾನನ ಸೇನೆಯಲ್ಲಿದ್ದು ಹತಶೇಷರಾಗಿದ್ದವರನ್ನು ಶ್ರೀರಂಗಪಟ್ಟಣದಿಂದಲೂ ಕರೆಯಿಸಿ, ರಜಪೂತರ ತುಕಡಿಗಳನ್ನು ಬೇರೇಮಾಡಿ ಆ ಸಿಪಾಯಿಜನರಿಗೆ ಊರಿಗೆ ದೂರವಾಗಿ ಕೇರಿ ಯನ್ನು ಬೇರೆ ಕಟ್ಟಿಸಿಕೊಟ್ಟರು. ಈ ಕೇರಿಯ ಪಕ್ಕದಲ್ಲಿಯೇ ಮೇಲೆ ಕಂಡ ನಾಲೆ ಹರಿಯುತಾಇತ್ತು. ಆ ಭಾಗದ ನಾಲೆಗೆ ರಜಪೂತಘಾಟ್ ಎಂದು ಹೆಸರಾಗಿತ್ತು. ಈಚೆಗೆ ಮೈಸೂರು ಸೀಮೆಯನ್ನು ಕಂಪನಿ ಸರ್ಕಾರದವರು ಜಪ್ತಿಮಾಡಿ ಆಡಳಿತ ವನ್ನು ತಮ್ಮ ಕೈಗೆ ತೆಗೆದುಕೊಂಡು ಮಹಾರಾಜರಲ್ಲಿದ್ದದಂಡನ್ನು

ಕಡಮೆಮಾಡಿದರು. ಆಗ ಈ ರಜಪೂತರ ತುಕ್ಕಡಿಯು ಕಡಮೆಯಾಯಿತು. ಆ ಜನರು ದಿಕ್ಕು ಕೆಟ್ಟು ಹೊರಟು ಹೋದರು. ಅಲ್ಲಿದ್ದ ಮನೆಗಳೆಲ್ಲಾ ಹಾಳಾದವು. ಕಳ್ಳರು ಆ ಕಡೆ ಸೇರಿಕೊಂಡು ಅಲ್ಲಿಗೆ ಯಾರು ಬಂದರೂ ಹಗಲುಹೊತ್ತೇ ಉಪನಯನ ಮಾಡಿ ಕಳುಹಿಸುತಿದ್ದರು.

ಇಂಗ್ರೀಜಿ ಹಯಾತ್‌ಸಾಬಿಯು ಈ ರಜಪೂತವಾಡಿಯಲ್ಲಿ ಒಂದು ಹಾಳುಮನೆಯನ್ನು ಸಂಪಾದಿಸಿಕೊಂಡು ತನ್ನ ವಶದಲ್ಲಿರಿಸಿಕೊಂಡನು. ಆ ಕಾಲದಲ್ಲಿ ಐಶ್ವರ್ಯವಂತರಾದ ಅರಸುಗಳು, ಅಹಲೇಕಾರರು, ದೊಡ್ಡ ಅಧಿಕಾರಿಗಳು, ಭಾರಿ ವರ್ತಕರು, ಗೋಸಾಯಿಗಳು ಇವರೆಲ್ಲಾ ಮೈಸೂರಲ್ಲಿದ್ದರು. ಆಗ ಮೈಸೂರು ದೇಶವು ವಿಶೇಷ ಸುಭಿಕ್ಷವಾಗಿತ್ತು. ಜನರೆಲ್ಲಾ ಸುಖವಾಗಿ ಜೀವನ ಮಾಡತಕ್ಕವರಾಗಿದ್ದರು. ಮೈಸೂರ ಷಹರಿನಲ್ಲಿ ಶ್ರೀ ಕೃಷ್ಣರಾಜಪ್ರಭುವಿನ ದಯದಿಂದ ಜನರ ಉಪಪತ್ತಿಯು ಮತ್ತೂ ಹೆಚ್ಚಾಗಿತ್ತು. ಎಲ್ಲಾ ವ್ಯಾಪಾರಗಳ ಜೊತೆಯಲ್ಲಿ ಜವಾಹಿರು ವ್ಯಾಪಾರವೂ ಚೆನ್ನಾಗಿ ನಡೆಯುತ್ತಿತ್ತು. ಇಂಥಾ ಸಂದರ್ಭದಲ್ಲಿ ಹೇಗಾದರೂ ಮಾಡಿ ತಕ್ಕ ಪ್ರಯೋಜನವನ್ನು ಭಾರಿಯಾಗಿ ಹೊಂದಬೇಕೆಂದು ಇಂಗ್ರೀಜಿ ಹಯಾತಸಾಬಿ ಗೊತ್ತುಮಾಡಿಕೊಂಡನು. ತರುವಾಯ ಇವನು ಪ್ರತಿದಿನವೂ ಒಳ್ಳೇ ಉಡುಪನ್ನು ಹಾಕಿಕೊಂಡು ಒಳ್ಳೇ ಒಂದು ಶಾಲುಜೋಡಿಯನ್ನು ಮಡಿಸಿ ಹೆಗಲಮೇಲೆ ಹಾಕಿಕೊಂಡು ದೊಡ್ಡ ದೊಡ್ಡ ಅಧಿಕಾರಿಗಳ ಮನೆಗೂ ಸಾಹುಕಾರರುಗಳ ಮನೆಗೂ ಎರಡಕ್ಕೆ ಮೂರಕ್ಕೆ ತಪ್ಪದೆ ಹೋಗಿ ಅವರಿಗೆ ಸಲಾಂಮಾಡುತಿದ್ದನು. ಯಾರೋ ದೊಡ್ಡ ಉಂದ ಮನುಷ್ಯನೆಂದು ತಿಳಿದು ಜನರು ಇವನಿಗೆ ಮರ್ಯಾದೆಮಾಡಿ ಹತ್ತಿರ ಕೂರಿಸಿಕೊಳ್ಳುತಿದ್ದರು. ಹೀಗೆ ಅವರವರ ಮನೆಗೆ ಎರಡು ಮೂರು ತಿಂಗಳು ಹೋಗಿ ಬರುತ್ತಾ ಪರಿಚಯವನ್ನೂ ನಂಬಿಕೆಯನ್ನೂ ಹೆಚ್ಚಿಸಿಕೊಳ್ಳುತಾ ಇದ್ದನು.

ಹೀಗಿರುವಲ್ಲಿ ಪುಟ್ಟ ನಂಜಪ್ಪಾಜಿ ಎಂಬ ಒಬ್ಬ ದೊಡ್ಡ ಅರಸಿನ ಮನೆಗೆ ಹೋಗಿ ಒಂದುದಿನ ಮಾತನಾಡುತಾ ಕೂತಿರುವಾಗ,

ಪುಟ್ಟನಂಜಪ್ಪಾಜಿ—ಏನು ಸಾಹೇಬರೆ, ಇಷ್ಟು ದಿವಸದಿಂದ ನಮ್ಮ ಮನೆಗೆ ಬರುತಾ ಇದೀರಿ; ನಮ್ಮಿಂದ ನಿಮಗೆ, ಯಾವ ಉಪಕಾರವೂ ಆಗಿಲ್ಲ. ನನ್ನ ಕೈಲಾಗತಕ್ಕದ್ದು ಏನಾದರೂ ಇದ್ದರೆ ನಡೆದುಕೊಳ್ಳುತೇನೆ, ಹೇಳಿ.

ಇಂಗ್ರೀಜಿ ಹಯಾತ್‌ಸಾಬಿ—ಬುದ್ಧಿ ತಾವು ದೌಲತ್ತು ಮಾಡ ತಕ್ಕವರು, ತಮ್ಮಿಂದ ನಮಗೆ ಆಗಬೇಕಾದ ಕೆಲಸ ಎಷ್ಟೋ ಇವೆ. ಅದು ಹಾಗಿರಲಿ. ಏಕಾಂತವಾಗಿ ತಮ್ಮ ಸನ್ನಿಧಾನದಲ್ಲಿ ಅರಿಕೇ ಮಾಡತಕ್ಕ ಒಂದು ಮಾತಿತ್ತು.

ಪುಟ್ಟನಂಜ—ಈಗ ಯಾರೂ ಇಲ್ಲವಷ್ಟೇ, ಆ ರಹಸ್ಯವೇನಿ ದ್ದಾಗ್ಯೂ ನನ್ನಲ್ಲಿ ಹೇಳಿ.

ಇಂಗ್ರೀಜಿ ಹಯಾತ್‌ಸಾಬಿ—ಈ ಊರಿಗೆ ಒಬ್ಬ ಮುಸಲ್ಮಾ ನರ ಹೆಂಗಸು ಬಂದಿದಾಳೆ. ಇನ್ನೂ ವಯಸ್ಸು ಚಿಕ್ಕದು, ಒಳ್ಳೇ ರೂಪವತಿ, ಇವಳು ಉತ್ತರ ದೇಶದವಳು, ಈಕೇ ಗಂಡ ದಂಡಿ ನಲ್ಲಿ ಭಾರಿ ತುಕಡೀದಾರನಾಗಿದ್ದು ನಾಗಪುರದ ಯುದ್ಧದಲ್ಲಿ ಪೆಟ್ಟು ತಗಲಿ ತೀರಿಹೋದ. ಅವನು ಕದನಗಳಲ್ಲಿ ವಿಶೇಷವಾಗಿ ಕೊಳ್ಳೇ ಹೊಡೆದು ಅಮೌಲ್ಯವಾದ ಜವಾಹಿರುಗಳನ್ನು ಸಂಪಾ ದನೆ ಮಾಡಿದನು. ಎಂಟು ಹತ್ತು ಲಕ್ಷ ರೂಪಾಯಿ ಬಾಳುವ ಒಡವೆ ಎಂದರೆ ಬಾಯಿ ನೋಯುವುದು. ಇವಳ ವೈದಂದಿರು ಬಹಳ ತುಂಟರು. ಈ ನಗಗಳನ್ನು ತಮಗೆ ಕೊಡಬೇಕು, ಇಲ್ಲ ವಾದರೆ ಸರ್ಕಾರಕ್ಕೆ ತಿಳಿಸಿ ಅವೆಲ್ಲವನ್ನೂ ಅವರು ಕಿತ್ತುಕೊಳ್ಳುವ ಹಾಗೆ ಮಾಡಿ ಆ ಹೆಂಗಸಿಗೆ ಸಜಾಮಾಡಿಸುತೇವೆಂದು ಮನಸ್ಸು ಬಂದಹಾಗೆ ಅವಳಿಗೆ ಅವರು ಹಿಂಸೆಯನ್ನು ಕೊಟ್ಟರು. ಆದ ಕಾರಣ ಇವಳು ಆ ಪೈಕಿ ಉತ್ತಮವಾದ ನಗಗಳನ್ನು ತೆಗೆದು ಕೊಂಡು ಯಾರೂ ಅರಿಯದ ಹಾಗೆ ಗಂಡು ವೇಷಾ ಹಾಕಿ

ಕೊಂಡು ಈ ಸೀಮೆಗೆ ಬಂದಳು. ಇಳಿಯುವುದಕ್ಕೆ ಕೂಡ ಸ್ಥಳ ವಿಲ್ಲದೆ ನೀರಿಂದ ಈಚೆಗೆ ಬಿದ್ದ ಮೀನಿನ ಹಾಗೆ ಪೇಚಾಡುತ್ತಿದ್ದಳು. ನನಗೆ ಈ ವರ್ತಮಾನ ತಿಳಿಯಿತು. ಗಂಡು ವೇಷದಲ್ಲಿದ್ದ ಆ ಸ್ತ್ರೀಯ ಸ್ಥಿತಿಯನ್ನೆಲ್ಲಾ ಕೇಳಿ ಕನಿಕರದಿಂದ ಆಕೆಯನ್ನು ನನ್ನ ಮನೆಯಲ್ಲಿರಿಸಿಕೊಂಡಿದೇನೆ. ಅವಳ ಸೋದರಮಾವನ ಊರಾದ ರಾಯವೇಲೂರಿಗೆ ಹೋಗಬೇಕೆಂದು ಇದಾಳೆ. ಅವಳಿಗೆ ವೆಚ್ಚಕ್ಕಿಲ್ಲ. ಉಡುವುದಕ್ಕೆ ಗಟ್ಟಿಯಾದ ಬಟ್ಟೆ ಸಹಾ ಇಲ್ಲ. ಅವಳು ನನ್ನನ್ನು ಕೂಡ ನಂಬಿ ಆ ಒಡವೆಗಳನ್ನು ಕೊಡುವುದಿಲ್ಲ. ಲೂಟಿಯಲ್ಲಿ ಸಿಕ್ಕಿದ್ದು, ಹೇಗೆ ಹೋಗಿ ಹೇಗೆ ಬರುವುದೋ ಎಂಬ ಭೀತಿ ಉಂಟಾಗಿದೆ. ಯಾರಾದರೂ ತಮ್ಮಂಥಾ ದೊಡ್ಡ ಮನುಷ್ಯರ ಕೈಗಾದರೆ ಕೊಡುತ್ತೇನೆ ಎನ್ನುತ್ತಾಳೆ. ಆ ನಗಗಳ ಮೇಲೆ ಖಾಯಷ್ ಇದ್ದರೆ ಪರಾಂಬರಿಕೆ ಮಾಡಬಹುದು.

ಪುಟ್ಟನಂಜ—ಆ ನಗಗಳೆಲ್ಲಾ ಒಟ್ಟು ಎಷ್ಟು ರೂಪಾಯಿ ಬಾಳಬಹುದು?

ಇಂಗ್ರೀಜಿ ಹಯಾತ್ ಸಾಬಿ—ಅದಕ್ಕೆಲ್ಲಾ ಬೆಲೆ ಕಟ್ಟುವುದು ಸಾಧ್ಯವಿಲ್ಲ. ಈ ಉರ ವರ್ತಕರು ಚಿನವಾರರ ಕಟ್ಟೆಯಲ್ಲಿ ಒಂದೊಂದು ರತ್ನಕ್ಕೆ ಸಾವಿರ ಎರಡು ಸಾವಿರ ಕಟ್ಟುತ್ತಾರೆ. ಇನ್ನು ಆ ಒಡವೆಗಳ ಬೆಲೆ ಎಷ್ಟು ಎಂತ ಕಟ್ಟಬಹುದು? ಬೆಲೆಯ ಮಾತು ಹಾಗಿರಲಿ, ತಾವು ಆಕೆ ಮುಖ ಸಂಧಿಸಿದ ಹೊತ್ತು ಸರಿಯಾಗಿದ್ದರೆ, ಆ ನಗಗಳನ್ನೆಲ್ಲವನ್ನೂ ಎಷ್ಟಕ್ಕೆಂದರೆ ಅಷ್ಟಕ್ಕೆ ಕೊಟ್ಟು ಬಿಡಲು ಅವಳು ಕಬೂಲಿದಾಳೆ. ಸದ್ಯ ಅವಳ ಕೈಗೆ ಅಷ್ಟು ಹಣ ಸಿಕ್ಕಿದರೆ ಸಾಕು ಎಂದು ಕೂತಿದಾಳೆ, ಅವಳ ಗಮನವೆಲ್ಲಾ ಪ್ರಯಾಣದಮೇಲಿದೆ.

ಪುಟ್ಟನಂಜ—ಹಾಗಾದರೆ ಆ ನಗಗಳನ್ನು ಯಾವಾಗ ತರುತೀರಿ, ಯಾವಾಗ ನೋಡೋಣ?

ಇಂಗ್ರೇಜಿ ಹಯಾತ್‌ಸಾಬಿ—ಇದರಲ್ಲಿ ಇನ್ನೊಂದು ಕಷ್ಟ

ಬಂದಿದೆ. ಅವಳು ಯಾರನ್ನೂ ನಂಬಿ ನಗಗಳನ್ನು ಕೈಗೆ ಕೊಡು ವುದಿಲ್ಲ. ಬೇಕಾದವರು ತಾನಿದ್ದ ಮನೆಗೆ ಬಂದು ಹಣ ಕೊಟ್ಟು ನಗ ತೆಗೆದುಕೊಳ್ಳಲಿ ಎನ್ನುತಾಳೆ. ಹಿಂದಕ್ಕೆ ಅವಳಿಗೆ ಯಾರೋ ಮೋಸ ಮಾಡಿದಾರೆಂದು ಕಾಣುತ್ತೆ. ಆದ್ದರಿಂದ ಎಲ್ಲರಲ್ಲಿಯೂ ಅಪನಂಬಿಕೆ ಹುಟ್ಟಿದೆ.

ಪುಟ್ಟನಂಜ—ಹಾಗಾದರೆ ಅವಳೇ ಇಲ್ಲಿಗೆ ಬರಲಿ.

ಇಂಗ್ರೀಜಿ ಹಯಾತ್‌ಸಾಬಿ—ಅದೂ ಆಗದಂತೆ; ತಾನು ಈಗ ಇಳಿದುಕೊಂಡಿರುವ ಮನೆಗೂ ಯಾರೂ ಬರಕೂಡದಂತೆ.

ಪುಟ್ಟನಂಜ—ಹಾಗಾದರೆ ನಗಗಳನ್ನು ನೋಡುವುದು ಹೇಗೆ?

ಇಂಗ್ರೀಜಿ ಹಯಾತ್‌ಸಾಬಿ—ತಾವು ಅಪ್ಪಣೆ ಕೊಡಿಸಿದ್ದು ನಿಜ. ನಗ ನೋಡದೆ ಹಣ ಕೊಡುವುದು ಹೇಗಾದೀತು? ನೀರಲ್ಲಿ ಎಮ್ಮೆ ನಿಲ್ಲಿಸಿಕೊಂಡು ಕ್ರಯ ಕಟ್ಟಿದಂತಾಗುತ್ತೆ. ನಾನು ಇನ್ನೊಂದು ವೇಳೆ ಅವಳನ್ನು ಕಂಡು ಮಾತನಾಡಿ ಬರುತೇನೆ.

ಹೀಗೆ ಹೇಳಿ ಅರಸಿಗೆ ಆಸೆಯನ್ನು ಹುಟ್ಟಿಸಿ ಹಯಾತ್ ಖಾನನು ಹೊರಟು ಹೋಗಿ ೧೦-೧೫ ದಿವಸವಾದರೂ ಬರಲಿಲ್ಲ. ಭಾರಿ ನಗ ಸುಲಭವಾಗಿ ಸಿಕ್ಕುವುದೆಂಬ ಆಶೆಯು ಅರಸಿನವರನ್ನು ಬಾಧಿಸುತ್ತಾ ಇತ್ತು. ಕೊನೆಗೆ ಹಯಾತನನ್ನು ಕರೆಕಳುಹಿಸಿ ದರು. ಅದರಂತೆ ಹಯಾತ ಬಂದು,

ಇಂಗ್ರೀಜಿ ಹಯಾತ್‌ಸಾಬಿ—ಆ ಹೆಂಗಸು ಮೂರ್ಖತನ ಮಾಡಿಕೊಂಡು ಕುಂತಿದಾಳೆ. ಇವಳ ಹೆಸರು ಚಾಂದ್‌ಬಿ. ನಾನು ಇನ್ನೊಂದು ಉಪಾಯವನ್ನು ಹೇಳಿದೆ. ನನಗೆ ಬೇರೆ ಒಂದು ಮನೆ ಇದೆ. ಅದರಲ್ಲಿ ಜನ ಯಾರೂ ವಾಸವಾಗಿಲ್ಲ. ಒಂದು ದಿನ ರಾತ್ರೆ ತಾವು ಅಲ್ಲಿಗೆ ದಯಮಾಡಿದರೆ ಆ ಹೆಂಗಸನ್ನು ಅಲ್ಲಿಗೆ ಕರೆದು ತರುತೇನೆ. ತಮ್ಮ ಸಂಗಡ ಸದ್ಯಕ್ಕೆ ೧೫೦೦ ರೂಪಾಯಿ ತಂದಿರಿ. ಹೆಚ್ಚು ಕಡಮೆಯಾದರೆ ನೋಡಿ ಕೊಳ್ಳೋಣ. ನಗಗಳನ್ನು ತಮ್ಮ ವಶಕ್ಕೆ ಕೊಡಿಸಿಬಿಡುತೇನೆ.

ಇದಕ್ಕೆ ಅರಸಿನವರು ಒಪ್ಪಿದರು. ಒಂದು ಗೊತ್ತಾದ ದಿವಸ ಸಾಯಂಕಾಲ ೮ ಗಂಟೆಯ ಮೇಲೆ ಇವರು ಇಂಗ್ರೀಜಿ ಹಯಾತ್ ಸಾಬರೊಡನೆ ಹೊರಟರು. ಅರಸಿನವರಿಗೆ ನಡೆದು ಅಭ್ಯಾಸ ವಿಲ್ಲ. ಎಷ್ಟು ಹೋದರೂ ಮನೆ ಸಿಕ್ಕದು. ಕಡೆಗೆ ಹಯಾತನು ರಜಪೂತಘಾಟಿನಲ್ಲಿ ತಾನು ತೆಗೆದುಕೊಂಡಿದ್ದ ಹಾಳು ಮನೆಗೆ ಕರೆದುಕೊಂಡು ಹೋದನು. ಒಳಗೆ ಒಳ್ಳೇದಾದ ರತ್ನಗಂಬಳಿ ಲೋಡು ಹಾಕಿತ್ತು. ಒಂದು ಕೈಯ್ಯೆಣ್ಣೆ ದೀಪ ಸಣ್ಣಗೆ ಉರಿ ಯುತ್ತಿತ್ತು. ಇವರುಗಳು ಹೋಗಿ ಕೂತುಕೊಂಡ ಕೂಡಲೆ, ಬೆಳ್ಳಗೆ ಲಕ್ಷಣವಾಗಿರತಕ್ಕ ಒಬ್ಬ ಹೆಂಗಸಿನ ಮುಖವು ಒಳಗಡೇ ಕೊಠಡಿಯಿಂದ ಈಚೆಗೆ ಚೆನ್ನಾಗಿ ಇಣಿಕಿ ನೋಡಿ ತಟ್ಟನೆ ಒಳಕ್ಕೆ ಹೋಯಿತು. ಅರಸಿನವರ ಕಣ್ಣಿಗೆ ಮಿಂಚು ಹೊಳೆದ ಹಾಗಾಯಿತು. ಇವರಿಗೆ ನಗಗಳ ಆಶೆಯು ಕಳವಳಕ್ಕೆ ಪತ್ತರಷ್ಟು ಇನ್ನೊಂದು ವಿಧವಾದ ಕಳವಳ ಹುಟ್ಟಿತು. ಆಗ,

ಇಂಗ್ರೀಜಿ ಹಯಾತ್‌ಸಾಬಿ–ಚಾಂದ್‌ಬಿ, ರಾಜಾ ಸಾಹೇಬರು ದಯಮಾಡಿದಾರೆ, ನಗಗಳನ್ನು ಕೊಡಿ, ತೋರಿಸುತೇನೆ.

ಚಾಂದ್‌ಬಿ—ನಾನು ನಿಮ್ಮ ಕೈಯ್ಯಲ್ಲಿ ಕೊಡುವುದಿಲ್ಲ. ರಾಜಾ ಸಾಹೇಬರ ಕೈಗೇ ಕೊಡುತೇನೆ. ಅವರು ನನಗೆ ಅನ್ನ ಕೊಟ್ಟು ಕಾಪಾಡಬೇಕು. ಹಣ ತಂದಿದಾರೆಯೋ?

ಇಂಗ್ರೀಜಿ ಹಯಾತ್‌ಸಾಬಿ—ಈಗಿನ ಮಟ್ಟಿಗೆ ೧೫೦೦ ರೂಪಾಯಿ ತಂದಿದಾರೆ, ಬಾಕಿ ಏನಾದರೂ ನಾಳೆ ಕಳುಹಿಸು ತಾರೆ. ಅದಕ್ಕೆ ನಾನು ಜಾಮೀನು. ನಗಗಳನ್ನು ಅವರಿಗೆ ತೋರಿಸಬಹುದಮ್ಮ.

ಈ ಮಾತನ್ನು ಕೇಳಿದ ಕೂಡಲೆ ಒಳಗಿದ್ದ ಚಾಂದ್‌ಬಿ ಎಂಬ ತುರುಕರ ಸೂಳೆಯು ಅರಸಿನವರ ಮುಂದೆ ಬಂದು ನಿಂತು ಮುಸುಕನ್ನು ತೆರೆದಂತೆ ಮಾಡುವುದು ಪುನಃ ಹಾಕಿಕೊಳ್ಳುವುದು, ಅರಸಿನವರ ಮುಖವನ್ನು ನೋಡಿ ಪ್ರೇಮಸೂಚಕವಾದ ಹುಸಿ

ನಗುವನ್ನು ನಗುವುದು, ಅಷ್ಟರಲ್ಲಿಯೇ ಪಕ್ಕಕ್ಕೆ ತಿರುಗಿಕೊಳ್ಳು ವುದು, ಹೀಗೆಲ್ಲಾ ಮಾಡುತಾ, ರೂಪಾಯಿಯನ್ನು ಮೊದಲು ಕೊಟ್ಟರೆ ಒಡವೆಯನ್ನು ಆಮೇಲೆ ಕೊಡುತೇನೆ ಎಂದಳು. ಅರಸಿನ ವರು ಬೂಬಿಸಾನಿಯ ಮುಖವನ್ನು ನೋಡುತಾ ತಾವೂ ನಗು ನಗುತಾ ರೂಪಾಯಿಯನ್ನು ಚೀಲದಿಂದ ಸುರಿದರು. ಇಂಗ್ರೀಜಿ ಹಯಾತ್‌ಸಾಬಿಯು ಹಣವನ್ನು ಎಣಿಸಿ ಬೂ ಬಿ ಸಾ ನಿ ಗೆ ಕೊಟ್ಟನು. ತರುವಾಯ ಅವಳು ನಗಗಳನ್ನು ಒಂದೊಂದಾಗಿ ತೆಗೆದು ತೋರಿಸಿದಳು. ಇವುಗಳನ್ನು ನೋಡಿ ಅರಸಿನವರಿಗೆ ಬಹು ಸಂತೋಷವಾಯಿತು. ಇವುಗಳೆಲ್ಲವನ್ನೂ ಬಟ್ಟೆಯಲ್ಲಿ ಗಂಟಕಟ್ಟಿ ಕಂಕುಳ ಕೆಳಗೆ ಇರಿಸಿಕೊಂಡು ಮೇಲಕ್ಕೆ ಎದ್ದರು. ಲೆಕ್ಕಾಚಾರ ಮಾಡಿಸಿ ಬಾಕಿ ಹಣವನ್ನು ನಾಳೆ ಕೊಡುತೇನೆ ಎಂದು ಹೇಳಿದರು. ಅವುಗಳೆಲ್ಲಾ ನಿಜವಾದ ಜವಾಹಿರುಗಳಾ ಗಿದ್ದವು. ಆಗ ಚಾಂದ್‌ಬಿಯು—ತಾವು ರಾಜಾ ಸಾಹೇಬರು, ಮುಂದಾದರೂ ನನ್ನನ್ನು ತಾವು ಕಾಪಾಡಬೇಕು, ಎಂದಳು. ಆ ಸಮಯಕ್ಕೆ ಇಂಗ್ರೀಜಿ ಹಯಾತ್‌ಸಾಬಿಯು–ರಾಜಾಸಾಹೇಬರೆ, ತಾವು ಎಲ್ಲಾ ತಿಳಿದವರು. ನಮ್ಮ ಮಾನವನ್ನು ಕಾಪಾಡ ಬೇಕು. ಮೊದಲೇ ಈ ಮಾಲುಗಳು ಲೂಟಿಯಲ್ಲಿ ಸಿಕ್ಕಿದವು ಎಂದು ಅರಿಕೆ ಮಾಡಿದೇನೆ. ಇಂಥಾ ಮಾಲುಗಳನ್ನು ಪತ್ತೆ ಮಾಡಬೇಕೆಂದು ಸರ್ಕಾರದ ಕಳ್ಳಭಂಟರು ಹೊಂಚುಹಾಕುವು ದುಂಟು. ಆದ್ದರಿಂದ ನೋಡಿಕೊಂಡು ಇದನ್ನು ತೆಗೆದುಕೊಂಡು ಹೋಗಬೇಕು, ಎಂದು ಸೂಚನೆಕೊಟ್ಟನು.

ಅರಸಿನವರು ಆ ಹಾಳ ಮನೆಯನ್ನು ಬಿಟ್ಟು ಹೊರಟರು. ಅದರಲ್ಲಿ ಉರಿಯುತಾ ಇದ್ದ ದೀಪ ಆರಿಹೋಯಿತು. ಅದು ಕತ್ತಲೇ ಕಾಲ ಮೋಡ ಹಾಕಿತ್ತು. ಎಲ್ಲಿಯೂ ಅಂಧಕಾರ ವ್ಯಾಪಿಸಿತ್ತು. ಅರಸಿನವರಿಗೆ ದಿಕ್ಕೇ ತೋರಲಿಲ್ಲ, ಸ್ವಲ್ಪದೂರ ಹೋದರು. ದಾರಿ ಸಿಕ್ಕಲಿಲ್ಲ. ಮನಸ್ಸಿಗೆ ಭೀತಿಯುಂಟಾ

ಯಿತು. ಯಾವ ಕಡೆ ಹೋಗಬೇಕೋ ಗೊತ್ತಾಗದೆ ಮೆಲ್ಲಗೆ ತಡವರಿಸಿಕೊಂಡು ಹೋಗುತಿರುವಾಗ ಹಯಾತಸಾಬಿ ಕಡೆಯವರು ಕರಿ ಬಟ್ಟೆಯನ್ನು ಹಾಕಿಕೊಂಡಿದ್ದ ೩-೪ ಜನ ಥಟ್ಟನೆ ಬಂದು ಅರಸಿನವರನ್ನು ಹಿಡಿದುಕೊಂಡು "ಲಗಾವ್" ಎಂದರು. ಎಲ್ಲರೂ ಅರಸನನ್ನು ಗುದ್ದುವುದಕ್ಕೆ ಮೊದಲುಮಾಡಿದರು. ಕಂಕುಳಲ್ಲಿದ್ದ ಗಂಟು ಎಲ್ಲಿಯೋ ಆ ಎಳೆದಾಟದಲ್ಲಿ ಬಿದ್ದು ಹೋಯಿತು. ಏಟು ಜೋರಾಯಿತು. "ಅಯ್ಯೋ ಸತ್ತೆ" ಎಂದು ಅರಸಿನವರು ಅರಚಿಕೊಂಡರು. ಕಳ್ಳತನಮಾಡಿದ್ದೀಯೆ, ನಡೆ ಚಾವಡಿಗೆ ಎಂದು ಆ ಘಾತಕರು ಹೊಡೆಯುವುದಕ್ಕೆ ಮೊದಲು ಮಾಡಿದರು. ಆಗ ಪುಟ್ಟನಂಜಪ್ಪಾಜಿಯು ತನ್ನಲ್ಲಿದ್ದ ರತ್ನದ ಉಂಗುರ ಉಡಿದಾರ ಕೈ ಕಪ್ಪ ವಜ್ರದ ಹತ್ತ ಕಡಕು ಶಾಲು ಇತರ ಬಟ್ಟೆಗಳು ಇವುಗಳೆಲ್ಲವನ್ನೂ ಕೊಟ್ಟು ಪ್ರಾಣವನ್ನು ಉಳಿಸಿ ಕೊಂಡು ಅರ್ಧ ರಾತ್ರೆಗೆ ಮನೆಗೆ ಹೋಗಿ ಸೇರಿದನು. ಒಡವೆ ಗಂಟೂ ಹೋಯಿತು. ರೂಪಾಯಿಯೂ ಹೋಯಿತು. ಲೂಟಿಯಲ್ಲಿ ಸಿಕ್ಕಿದ ಮಾಲೆಂದು ಮೊದಲೇ ಗೊತ್ತಾಗಿತ್ತು. ಈ ಫಿರ್ಯಾದನ್ನು ಸರ್ಕಾರಕ್ಕೆ ಹೇಳಲು ಹೋದವರೇ ಸಿಕ್ಕಿಕೊಳ್ಳು ತಾರೆ. ಆದ್ದರಿಂದ ಈ ಸಮಾಚಾರವನ್ನು ಯಾರಿಗೂ ಹೇಳದೆ ಅರಸು ಗುಟ್ಟಾಗಿ ಮನೇ ಸೇರಿಕೊಂಡು ಸುಮ್ಮನಾದನು.

ಈ ಪ್ರಕಾರ ಇಂಗ್ರೇಜಿ ಹಯಾತ್‌ಸಾಬರು ಅನೇಕರಿಗೆ ಸುಲಿಗೇ ಸೇವೆಯನ್ನು ಮಾಡಿದರು. ಅನೇಕ ಸರ್ಕಾರದ ಉದ್ಯೋಗಸ್ಥರು ಹೀಗೆಯೇ ಮೋಸಹೋದರು. ಲೂಟೀ ಮಾಲನ್ನು ಕೊಂಡುಕೊಳ್ಳಲು ಹೋಗಿದ್ದೆ, ಹೀಗೆ ಮೋಸವಾಯಿತು ಎಂದು ಯಾರಲ್ಲೂ ಹೇಳಿಕೊಳ್ಳುವುದಕ್ಕೂ ಮಾರ್ಗವಿಲ್ಲವಾಯಿತು. ಒಳಗೆ ಯಾರಲ್ಲಿ ಹೇಳಿ ಕೊಂಡಾಗ್ಯೂ ಹೇಳಿಕೊಂಡವರಿಗೆ ಅವಮಾನ. ಆದ್ದರಿಂದ ಆಶೆ ಬಾಧಕರೆಲ್ಲರಿಗೂ ತಕ್ಕ ಪ್ರಾಯಶ್ಚಿತ್ತವೇ ಆಯಿತು. ಈ ವರ್ತಮಾನವು ಮೈಸೂರಲ್ಲಿ

ಜನಜನಿತವಾಗಿ ಹರಡಿಕೊಂಡಿತು. ಯಾರ ಫಿರ್ಯಾದೂ ಇಲ್ಲದೆ ಸರ್ಕಾರದವರು ಇದಕ್ಕೆ ಪ್ರವೇಶ ಮಾಡಲು ಖಾಯಿದೆ ಇಲ್ಲದ್ದ ರಿಂದ, ಈ ಹಾವಳಿ ಅಡಗುವುದು ಹೇಗೆ?

ಇದೇ ಸಂದರ್ಭದಲ್ಲಿ ಇನ್ನೊಂದು ಚಮತ್ಕಾರವಾದ ಸಂಗತಿ ನಡೆಯಿತು. ಮೈಸೂರ ಅಗ್ರಹಾರದಲ್ಲಿ ಆಸಪತ್ರೆ ತಿಮ್ಮಯ್ಯ ನೆಂಬುವನು ಮೋಸಕ್ಕೂ ತಟವಟಕ್ಕೂ ಹೆಸರು ಪಡೆದಿದ್ದನು. ಬುದ್ಧಿ ಇಲ್ಲದವರು ಈ ಮೋಸಕ್ಕೆ ಒಳಪಟ್ಟರು, ತನ್ನಂಥವನಾ ದರೆ ಈ ದಗವನ್ನು ಕಂಡುಹಿಡಿಯುತಿದ್ದೆ ಎಂದು ಆ ತಿಮ್ಮಯ್ಯನು ಕೆಲವು ಜನರಲ್ಲಿ ಪ್ರತಿಷ್ಠೆಯನ್ನು ಕೊಚ್ಚಿಕೊಂಡನು. ಇದು ಇಂಗ್ರೀಜಿ ಹಯಾತನಿಗೆ ತಿಳಿಯಿತು. ಇಂಥವನಿಗೆ ದಗಕೊಟ್ಟರೆ ತಾನು ಹುಟ್ಟಿದ್ದು ಸಾರ್ಥಕವೆಂದು ಹಯಾತಸಾಬಿ ಯೋಚಿಸಿ, ಈ ತಿಮ್ಮಯ್ಯನ ಮನೆಗೆ ಬಂದು ಯಥಾಪ್ರಕಾರದ ಅನುಸರಣೆಗೆ ಮೊದಲು ಮಾಡಿದನು. ಆಗ

ಆಸಪತ್ರೆ ತಿಮ್ಮಯ್ಯ—ಏನು ಸಾಬರೆ, ನನಗೆ ಕೆಲವು ಜವಾ ಹಿರನ್ನು ಕೊಡಿಸಬಾರದೆ ?

ಇಂಗ್ರೀಜಿ ಹಯಾತ್‌ಸಾಬಿ—ಅಗತ್ಯವಾಗಿ ಕೊಡಿಸುತೇನೆ.

ಆಸಪತ್ರೆ ತಿಮ್ಮಯ್ಯ—ಜನರು ನಿಮ್ಮ ವಿಚಾರದಲ್ಲಿ ಏನೇನೋ ಹೇಳುತಾರೆ. ಇದೆಲ್ಲಾ ನಿಮ್ಮ ಬುದ್ಧಿವಂತಿಕೆಯನ್ನೂ ಅಂಥಾ ಮೋಸಹೋದವರ ಹೆಡ್ಡತನವನ್ನೂ ತೋರಿಸುವುದು.

ಇಂಗ್ರೀಜಿ ಹಯಾತ್‌ಸಾಬಿ—ಅನ್ಯಾಯವಾಗಿ ನನ್ನನ್ನು ದೂಷಣೆಮಾಡುತಾರೆ. ಸಾವಿರ ರೂಪಾಯಿಯ ಒಡವೆಯನ್ನು ನೂರು ರೂಪಾಯಿಗೆ ಕೊಟ್ಟುಬಿಟ್ಟದೇನೆ, ಅದನ್ನು ಕಾಪಾಡಿ ಕೊಳ್ಳಲಾರದೆ ನನ್ನನ್ನು ದೂಷಿಸಿದರೆ ಏನುಮಾಡಲಿ ?

ಆಸಪತ್ರೆ—ನಾನು ರಜಪೂತಘಾಟಿಗೂ ಜೋಡು ತೆಂಗಿನ ಮರದ ತಿಟ್ಟಿಗೂ ಬರತಕ್ಕವನಲ್ಲ. ನನ್ನ ಮನೆಗೆ ಹಗಲು ಹೊತ್ತು ಒಡವೆಗಳನ್ನು ತೆಗೆದುಕೊಂಡು ಬರಬೇಕು; ಹಣಾ

ತೆಗೆದುಕೊಂಡು ಹೋಗಬೇಕು. ಇದಕ್ಕೆ ಸಮ್ಮತಿ ಇದೆಯೋ ?

ಇಂಗ್ರೀಜಿ ಹಯಾತ್‌ಸಾಬಿ—ಈ ಮಾತು ಹೇಳಿದರಲ್ಲಾ, ನಾನು ಒಪ್ಪಿದೆ, ಇದರಿಂದ ನಾನು ಮೋಸಗಾರನೊ ನನ್ನನ್ನು ದೂಷಿಸುವವರು ಮೋಸಗಾರರೊ ಎಂಬುವುದು ತಿಳಿಯುತ್ತೆ. ಹಾಗಾದರೆ ನಾನು ಯಾವಾಗ ಬರಲಿ? ಆ ಹೆಂಗಸು ಹೈದರಾಬಾದು ಸೀಮೆಗೆ ಹೊರಟು ನಿಂತಿದಾಳೆ. ತಾವು ಎಷ್ಟು ಜಾಗ್ರತೆ ಮಾಡಿದರೆ ಅಷ್ಟು ಉತ್ತಮ. ಆ ಹೆಂಗಸನ್ನು ನಾನು ಕರೆದುತರಬೇಕಾಗುವುದು. ಅವಳು ತಾನೆ ಖುದ್ದು ಎಲ್ಲಾ ಆಡಳತವನ್ನೂ ನಡಿಸುತಾಳೆ. ಇತರರನ್ನು ನಂಬುವುದಿಲ್ಲ. ಆದರೆ ಆಕೆ ಜನಾನಿ ಹೆಂಗಸು, ಮರೆಯಾಗಿ ಕೂತುಕೊಳ್ಳಬೇಕು, ಅದಕ್ಕೆ ಬೇರೆ ಇಂಗಡವಾದ ಒಂದು ಕೊಠಡಿಯನ್ನು ಬಿಡಿಸಿದ್ದರೆ ಸಾಕು.

ಆಸಪತ್ರೆ—ಇಷ್ಟು ದೊಡ್ಡ ಮನೆಯಲಿ ಅಷ್ಟಕ್ಕೆ ಏರ್ಪಾಡು ಮಾಡಲಾರೆನೆ? ಅಗತ್ಯವಾಗಿಯೂ ಹಾಗೇ ಆಗಲಿ. ಮುಂದಿನ ಶನಿವಾರ ಮಧ್ಯಾಹ್ನ ಮೂರು ಗಂಟೆಗೆ ನೀವು ಬಂದು ಬಿಡಿ, ನಾನು ಅಷ್ಟರೊಳಗಾಗಿ ಹಣವನ್ನು ಜೊತೆಮಾಡಿ ಇರಿಸುತೇನೆ.

ಈ ಮಾತಿಗೆ ತಿಮ್ಮಯ್ಯ ಒಪ್ಪಿಕೊಂಡನು; ತರುವಾಯ ೧೦೦೦ ರೂಪಾಯಿಯನ್ನು ತಿಮ್ಮಯ್ಯ ಜೊತೆಮಾಡಿ ಇರಿಸಿಕೊಂಡನು. ಶನಿವಾರ ಬಂತು. ಹಗಲು ಮೂರು ಗಂಟೆಗೆ ಸರಿಯಾಗಿ ಇಂಗ್ರೀಜಿ ಹಯಾತಖಾ೯ಸಾಬರು ದಯಮಾಡಿದರು. ಅವರಸಂಗಡಲೇ ಚಾಂದ್‌ಬಿಯವರ ಸವಾರಿಯೂ ಮೇನಾದಲ್ಲಿ ಕೂತುಕೊಂಡು ಬಂತು. ಅದಕ್ಕೆ ಬುರಕಿ ಹಾಕಿತ್ತು. ಮೇನಾ ಇಳಿದ ಕೂಡಲೆ ಎರಡು ಹೆಜ್ಜೆ ಇಟ್ಟು ಒಳಕ್ಕೆ ಹೋಗಬಹುದಾದ ಒಂದು ಕೊಟಡಿಯನ್ನು ತೆರಪುಮಾಡಿಸಿದ್ದರು. ಚಾಂದ್‌ಬಿಯು ಅದರಲ್ಲಿ ಬಂದು ಕೂತುಕೊಂಡು ಹೊರಬಾಗಿಲನ್ನು ಹಾಕಿಕೊಂಡಳು. ತಿಮ್ಮಯ್ಯನೂ ಹಯಾತ್‌ಸಾಬಿಯೂ ಒಳಗಡೆ ಹಜಾರದಲ್ಲಿ ಕೂತುಕೊಂಡರು. ಆಗ ನಗವನ್ನು ತೆಗೆಯಿರಿ ಎಂದು

ತಿಮ್ಮಯ್ಯ ಹೇಳಿದನು. ಮೊದಲು ಹಣವನ್ನು ತೋರಿಸಬೇಕಂತೆ ಎಂದು ಹಯಾತಸಾಬಿಯು ಹೇಳಿದನು. ಒಂದು ಸಾವಿರ ರೂಪಾಯನ್ನು ತಿಮ್ಮಯ್ಯ ಕೆಳಗೆ ಸುರಿದು ಎಣಿಸಿ ಗುಡ್ಡೆ ಗುಡ್ಡೆಯಾಗಿ ಇರಿಸಿದನು. ಆಗ ಚಾಂದ್‌ಬಿಯು ನಗಗಳೆಲ್ಲವನ್ನೂ ತೆಗೆದು ಈಚೆಗೆ ಕೊಟ್ಟಳು. ರತ್ನದ ನೋಟ ಬಲ್ಲ ತಿಮ್ಮಯ್ಯನು ಒಡವೆಗಳನ್ನು ಚೆನ್ನಾಗಿ ನೋಡಿದನು. ಪುಡಿಗಳು ನಿರ್ದೋಷವಾಗಿದ್ದವು. ಅವುಗಳಿಗೆ ಹತ್ತು ಹದಿನೈದು ಸಾವಿರ ರೂಪಾಯಿನ ಅಂದಾಜು ತೋರಿತು. ಇಂಥಾದ್ದು ಒಂದುಸಾವಿರ ರೂಪಾಯಿಗೆ ಸಿಕ್ಕಿತಲ್ಲಾ ಎಂದು ಬಹುಸಂತೋಷವಾಯಿತು. ಹೀಗೆ ನೋಡುತಿರುವಾಗ ಚಾಂದ್‌ಬಿಯು "ದಾದಾ" ಎಂದು ಒಳಗೆ ನಿಂತು ಕೂಗಿದಳು. ಒಡವೆಯನ್ನೆಲ್ಲಾ ಅಲ್ಲಿ ಬಿಟ್ಟು ಹಯಾತಸಾಬಿ ಒಳಕ್ಕೆ ಹೋಗಿ ಕೂಡಲೇ ಹೊರಕ್ಕೆಬಂದು—ಸ್ವಾಮಿ ಹೆಂಗಸಿನಸಂಗಡ ಪೇಚಾಡುವುದು ಕಷ್ಟವಾಗಿದೆ. ಇಂದು ಶನಿವಾರ ಒಡವೆಯನ್ನು ಮಾರುವುದಿಲ್ಲ, ನಾಳೆ ಕೊಡುತೇನೆ, ಹಣವನ್ನು ಅದುವರೆಗೂ ತಾವೇ ಇರಿಸಿಕೊಂಡಿರಬಹುದು ಎನ್ನುತಾಳೆ, ಎಂದನು. ಅದಕ್ಕೆ ತಿಮ್ಮಯ್ಯನು—ಹಾಗೇ ಆಗಬಹುದು, ನಾಳೆವರೆಗೆ ನಿಮ್ಮಒಡವೆ ನಿಮ್ಮಲ್ಲಿರಲಿ, ನಮ್ಮ ಹಣ ನಮ್ಮಲ್ಲಿರಲಿ, ಎಂದನು. ಆಗ ಹಯಾತಸಾಬಿಯು—ಹಣವು ಎಣಿಕೆಯಾಗಿದೆಯಷ್ಟೆ, ಪುನಃ ಎಣಿಸಬೇಕಾದ ಅಗತ್ಯವಿಲ್ಲ, ನನ್ನ ಚೀಲದಲ್ಲಿ ಹಾಕಿ ನನ್ನ ಅರಗಿನ ಮೊಹರುಮಾಡಿ ತಮ್ಮ ವಶದಲ್ಲಿಯೇ ಇಟ್ಟಿರುತೇನೆ; ನಗ ಕೊಟ್ಟರೆ ತಾವು ಈ ಹಣದ ಚೀಲವನ್ನು ಕೊಡಬಹುದು, ಇಲ್ಲಿಗೆ ಒಪ್ಪಂದ ಖಂಡಿತವಾಯಿತಷ್ಟೆ, ಎಂದು ಹೇಳಿದನು. ಇದಕ್ಕೆ ಎಲ್ಲರೂ ಒಪ್ಪಿದರು. ಪುನಃ ಚಾಂದ್‌ಬಿಯು "ದಾದಾ" ಎಂದು ಕೂಗಿದಳು. ಹಯಾತಸಾಬಿಯು ಪುನಃ ಒಳಕ್ಕೆ ಹೋಗಿ ಈಚೆಗೆ ಬಂದು—ಈ ಹೆಂಗಸಿನ ಸಹವಾಸದಲ್ಲಿ ನಮಗೆ ಮಾನ ಉಳಿಯುವುದಿಲ್ಲ; ಹಣದ

ಚೀಲಕ್ಕೆ ಮೊಹರು ಸರಿಯಾಗಿರುತ್ತದೆಯೋ ಇಲ್ಲವೇ ಎಂದ ನೋಡಬೇಕಂತೆ, ತೋರಿಸಿ ತರುತೇನೆ ಎಂದನು. ತಿಮ್ಮಯ್ಯನು ಆಗಲಿ ಎಂದು ಒಪ್ಪಿದಕೂಡಲೆ ಮೊಹರಾದ ಹಣದ ಚೀಲವನ್ನು ಒಳಕ್ಕೆ ತೆಗೆದುಕೊಂಡು ಹೋಗಿ ಆ ಹೆಂಗಸಿಗೆ ತೋರಿಸಿ ತರುವಾಯ ಹಣದ ಚೀಲವನ್ನು ಈಚೆಗೆ ತಂದು ತಿಮ್ಮಯ್ಯನ ಮುಂದೆ ಇರಿಸಿಬಿಟ್ಟನು. ಹಯಾತಸಾಬಿಯೂ ಆ ಹೆಂಗಸೂ ಆಗಲೇ ಎದ್ದು ತಮ್ಮ ಮನೆಗೆ ಹೊರಟುಹೋದರು. ತಿಮ್ಮಯ್ಯನು ಮೊಹರಾದ ಆ ಹಣದ ಚೀಲವನ್ನು ತನ್ನ ಪೆಟಾರಿಯಲ್ಲಿರಿಸಿ ಬೀಗಾ ಹಾಕಿ ಬೀಗದಕ್ಕೈಯನ್ನು ತನ್ನವಶದಲ್ಲಿಯೇ ಇರಿಸಿಕೊಂಡಿದ್ದನು. ಆ ದಿನ ಕಳೆಯಿತು. ಹಯಾತನು ನಗಗಳನ್ನು ತರಲಿಲ್ಲ. ಮೂರುದಿವಸವಾಯಿತು ಇಲ್ಲ, ಹದಿನೈದು ದಿನ, ತಿಂಗಳು, ಮೂರು ತಿಂಗಳು, ಆರು ತಿಂಗಳು ಕಳೆದಾಗ್ಯೂ ನಗದ ಮಾತೂ ಇಲ್ಲ, ನಾಣ್ಯದ ಮಾತೂ ಇಲ್ಲ, ಹಯಾತ್‌ಸಾಬರ ಮುಖವೇ ಇಲ್ಲ. ತಿಮ್ಮಯ್ಯ ಹೋಗಿ ಮೂರುಸಾರಿ ಅವನನ್ನು ಹುಡುಕಿದನು, ಸಿಕ್ಕಲಿಲ್ಲ. ತಿಮ್ಮಯ್ಯನಲ್ಲಿ ಹಣವಿರಲಿಲ್ಲವಾದ ಕಾರಣ ೧೦೦೦ ರೂಪಾಯಿಯನ್ನು ಸಾಹುಕಾರರಲ್ಲಿ ಶೇಕಡ ೧ ರೂಪಾಯಿ ಬಡ್ಡಿಗೆ ತಂದಿದ್ದನು. ದಿನೇದಿನೇ ಬಡ್ಡಿ ಬೆಳೆಯುತಾ ಇತ್ತು. ಕೊಟ್ಟವರು ಹಣಕ್ಕೆ ತಗಾದೆ ಮಾಡಲು ಆರಂಭಿಸಿದರು. ಆಗ ತಿಮ್ಮಯ್ಯನು ತನ್ನ ಸಾಲವನ್ನಾದರೂ ತೀರಿಸಿಬಿಡೋಣ ಬಡ್ಡಿಯನ್ನು ಅನ್ಯಾಯವಾಗಿ ಯಾಕೆ ತೆರಬೇಕು ಎಂದು ಅದೇ ಥೈಲಿಯನ್ನು ಸಾಹುಕಾರನ ಮನೆಗೆ ತೆಗೆದುಕೊಂಡು ಹೋಗಿ ಅವನ ಮುಂದೆ ಚೀಲದ ಮೊಹರನ್ನು ಒಡೆದು ಹಣವನ್ನು ಈಚೆಗೆ ಸುರಿದನು. ಆ ರೂಪಾಯಿ ಎಲ್ಲಾ ಹೋಗಿ ಆರು ಕಾಸಿನ ಬಿಲ್ಲೆಯಾಗಿತ್ತು. ಮೋಸ ಪೂರ್ತಿಯಾಯಿತು. ತಿಮ್ಮಯ್ಯನು ಸಾಹುಕಾರನ ಎದುರಿಗೆ ಯಾವ ಮಾತನ್ನೂ ಆಡದೆ—ಕಾಣದೆ ಇದನ್ನು ತಂದೆ. ರೂಪಾಯಿಯನ್ನು ಕಳುಹಿಸುತೇನೆಂದು ಹೇಳಿ

ಹೊರಟು ಹೋದನು. ಹಯಾತಸಾಬಿಯಲ್ಲಿದ್ದ ಮಂತ್ರ ಶಕ್ತಿ ಇನ್ನು ಎಂಥಾದ್ದೋ ತಿಳಿಯದು. ಆಸಪತ್ರೆ ತಿಮ್ಮಯ್ಯನಿಗೆ ಈ ವಿಧವಾದ ಮೋಸವಾಯಿತೆಂದು ಊರಲ್ಲೆಲ್ಲಾ ಹರಡಿಕೊಂಡಿತು. ಎಲ್ಲರೂ ಬಹಳ ಆಶ್ಚರ್ಯಪಟ್ಟರು.

ಈ ಸಮಾಚಾರವು ಊರಲ್ಲಿ ಎಲ್ಲರಿಗೂ ತಿಳಿದ ಹಾಗೆಯೇ ಅವಸರದ ಹೋಬಳಿ ಗುರಿಕಾರ ಬಸಪ್ಪನಿಗೂ ತಿಳಿಯಿತು. ಇಂಥಾ ಕೆಲಸವನ್ನು ಮಾಡಬೇಕಾದರೆ ಇಂಗ್ರೀಜಿ ಹಯಾತ ಸಾಬಿಯು ಬಹು ಘಟಕನಾಗಿರಬೇಕು; ನಮ್ಮ ಕಾರ್ಯ ನೆರವೇರ ಬೇಕಾದರೆ ಇಂಥವರಿಂದ ಹೊರತು ಮತ್ತೆ ಯಾರಿಂದಲೂ ಆಗ ಲಾರದು ಎಂದು ಬಸಪ್ಪ ನಿಷ್ಕರ್ಷೆ ಮಾಡಿಕೊಂಡು, ಆ ತುರುಕನ ಸ್ನೇಹವನ್ನು ವಿಶೇಷವಾಗಿ ಬೆಳಿಸಿದನು. ಕೆಲವು ದಿವಸವಾದ ಮೇಲೆ ಇಂಗ್ರೀಜಿ ಹಯಾತಖಾನನು ಹನುಮಂತರಾವ್ ರಣನ ವರೆಯಲ್ಲಿ ಆಶ್ರಯ ಮಾಡಲು ಆರಂಭಿಸಿದನು. ಬಸಪ್ಪನ ಕಡೇ ದುಷ್ಟರೆಲ್ಲರೂ ಈ ಹಯಾತನ ಒಳಸಹಾಯಕ್ಕೆ ನಿಂತುಕೊಂಡರು. ಚಾಂದ್‌ಬಿಯಲ್ಲಿರುವ ಜವಾಹಿರನ್ನು ತಾನು ಸುಲಭವಾದ ಕ್ರಯಕ್ಕೆ ಕೊಡಿಸುವ ಮಾತನ್ನು ಹಯಾತಖಾನನು ಹನುಮಂತ ರಾಯನಲ್ಲಿ ಪ್ರಸ್ತಾಪ ಮಾಡಿದರೆ ತನ್ನ ಮೋಸವು ಹೊರಕ್ಕೆ ಬೀಳ ಬಹುದೆಂದು ತಿಳಿದು ಬರೀ ಅನುಸರಣೆಯಲ್ಲಿ ಕಾಲವನ್ನು ಕಳೆ ಯುತಾ ಇದ್ದನು. ಇವನ ವಿನಯ, ಇವನ ಮಾತಿನ ಚಮತ್ಕಾರ, ಇವನ ದೈನ್ಯ, ಇವನ ಕಾಪಟ್ಯ ಇದೆಲ್ಲಾ ಹೋಕೆ ಇಲ್ಲದೆ ಧಾರಾ ಳವಾದ ಮನಸ್ಸುಳ್ಳ ಹನುಮಂತರಾಯನ ಮನಸ್ಸನ್ನು ಜೈಸಿತು. ಹಯಾತ ನಿಜವಾಗಿ ಯೋಗ್ಯನೆಂದು ಹನುಮಂತರಾಯ ತಿಳಿದು ಕೊಂಡಿದ್ದನು.

ಹೀಗಿರಲಾಗಿ ಈ ಹಯಾತ, ಬಸಪ್ಪ, ಇವರ ಗುಂಪಿನವರೆ ಲ್ಲರೂ ಸೇರಿ ಬಸಪ್ಪನ ಮುಖ್ಯೋದ್ದೇಶ ನೆರವೇರುವುದಕ್ಕೆ ಒಂದು ನೀಲೀ ಸಮಾಚಾರವನ್ನು ಹುಟ್ಟಿಸಿದರು; ಏನೆಂದರೆ, "ಶ್ರೀರಂಗ

ಪಟ್ಟಣದಿಂದ ಹಿಡಿದು ದಿಳ್ಳೀ ಪಂಜಾಬುವರೆಗೂ ನಡೆದ ಮರಾಟಿ ಯುದ್ಧದಲ್ಲಿಯೂ, ಶ್ರೀರಂಗಪಟ್ಟಣದ ಕೊಳ್ಳೀಯಲ್ಲಿಯೂ, ಪೂನೇ ಕೊಳ್ಳೀಯಲ್ಲಿಯೂ, ಮೈಸೂರ ದಂಡಿನವರು ಲೂಟೀ ಮಾಡಿ ಜವಾಹಿರನ್ನೂ ಚಿನ್ನ ಬೆಳ್ಳಿ ಮೊದಲಾದ್ದನ್ನೂ ಹೆಚ್ಚಾಗಿ ಸಾಗಿಸಿಕೊಂಡು ಬಂದಿದಾರೆಂತಲೂ, ಈ ಲೂಟೀ ಐಶ್ವರ್ಯವೆಲ್ಲಾ ಕಂಪೆನಿ ಸರ್ಕಾರಕ್ಕೆ ಸೇರತಕ್ಕದ್ದೆಂತಲೂ ಅಂಥಾ ಮಾಲು ಯಾರಲ್ಲಿದ್ದರೂ ಸರಿಯೆ ಅವರನ್ನು ಮಾಲುಗಳ ಸಮೇತವಾಗಿ ಹಿಡಿದು ಬೊಂಬಾಯಿಗೆ ಕಳುಹಿಸ ಬೇಕೆಂತಲೂ ಕಲ್ಕತ್ತಾ ಸರ್ಕಾರದಿಂದ ಮೈಸೂರ ಸರ್ಕಾರಕ್ಕೆ ಬರೆದು ಬಂದಿದೆ, ಅದಕ್ಕಾಗಿ ಕಂದಾಚಾರದ ಜವಾನರೂ ಕಳ್ಳ ಭಂಟರೂ ಸೇರಿ ವೇಷವನ್ನು ಮರಿಸಿಕೊಂಡು ಉಪಾಯವಾಗಿ ಒಳಗುಟ್ಟನ್ನು ಕಂಡು ಹಿಡಿಯುತಾ ಇದಾರೆ" ಎಂದು ಸುಳ್ಳು ವರ್ತಮಾನವನ್ನು ಹುಟ್ಟಿಸಿದರು. ಇದು ಹನುಮಂತರಾಯನಿಗೂ ತಿಳಿಯಿತು. ಉತ್ತರದೇಶದಲ್ಲಿ ಕೊಳ್ಳೀ ಹೊಡೆದ ಮಾಲು ಇವನಲ್ಲಿಯೂ ಇತ್ತಷ್ಟೆ. ಮನಸ್ಸಿನಲ್ಲಿ ಭೀತಿಯುಂಟಾಯಿತು: ಇದು ನಿಜವೇ ಸುಳ್ಳೆ? ಹೇಗೆ ಕಂಡು ಹಿಡಿಯುವುದು? ಸಾಧಾರಣ ಜನರನ್ನು ಕೇಳೋಣವೇ ಅವರಿಗೆ ಸರ್ಕಾರಿ ರಹಸ್ಯ ಗೊತ್ತಾಗುವುದಿಲ್ಲ. ಸರ್ಕಾರದ ಉದ್ಯೋಗಸ್ಥರನ್ನು ಕೇಳೋಣವೇ, ಅದು ನಿಜವಾದರೆ ನಮ್ಮ ಕತ್ತನ್ನು ಕುಯಿರಿ ಎಂದು ನಾವಾಗಿ ಕೇಳಿಕೊಂಡಂತೆ ಆಗುವುದು. ಇದರ ನಿಶ್ಚಯವನ್ನು ತಿಳಿದಿರಬಹುದಾದ ಇಂಗ್ಲಿಷ್ ಸರದಾರರನ್ನು ಕೇಳತಕ್ಕದ್ದು ಅನುಮಾನಕ್ಕೆ ಆಸ್ಪದ ಮತ್ತು ಅವಮಾನಕ್ಕೆ ಕಾರಣ. ಈ ದುಃಖಗಳೆಲ್ಲವನ್ನೂ ಇತರರಲ್ಲಿ ಹೇಳಿ ಬುದ್ಧಿಶಾಲಿಗಳಲ್ಲಿ ಸಲಹೆ ಕೇಳುವುದು ಅಲೌಕಿಕ. ಹೀಗೆ ಏನು ಮಾಡುವುದಕ್ಕೂ ತೋರಲಿಲ್ಲ. ಆಗ ತನ್ನಲ್ಲಿ ಕೇವಲ ಗೌರವವನ್ನಿಟ್ಟುಕೊಂಡು ನಂಬಿಕೆಯುಳ್ಳವನಾಗಿಯೂ ಬುದ್ಧಿವಂತನಾಗಿಯೂ ಇದ್ದ ತನ್ನ ಮುನಷಿಯಾದ ಅಪ್ರಮೇಯನಲ್ಲಿ ಹನು

ಮಂತರಾಯನು ಈ ವಿಷಯವನ್ನು ಕುರಿತು ಆಲೋಚನೆ ಮಾಡಿದನು. ಆಗ ಅಪ್ರಮೇಯನು—ರಾಯರೆ, ತಾವು ದೊಡ್ಡ ಸರದಾರರು, ಎಷ್ಟೋ ನೋಡಿದವರು, ಅನೇಕ ರಾಜಕಾರ್ಯಗಳನ್ನು ಬಲ್ಲವರು. ನಾನು ತಮಗೆ ಅರಿಕೆಮಾಡಲು ಶಕ್ತನಲ್ಲ. ಯುದ್ಧಗಳಲ್ಲಿ ಊರುಗಳು ಕೊಳ್ಳೆಯಾಗುವುದು ಯುಗಾಂತರಗಳಿಂದಲೂ ವಾಡಿಕೆಯಾಗಿದೆ. ರಾಮಾಯಣ ಭಾರತಾದಿ ಪುರಾಣಗಳಲ್ಲಿ ಕೂಡ ಈ ವಿಷಯ ಹೇಳಿದೆ. ಅಂಥಾ ಅವಾಂತರ ಕಾಲಗಳಲ್ಲಿ ಕೊಳ್ಳೇ ಮಾಡುವುದು ಅಪರಾಧವೆಂದು ಎಲ್ಲಿಯೂ ವಿಧಾಯಕವಾಗಿಲ್ಲ. ಕಂಪೆನಿ ದಂಡಿನವರೇ ಎಷ್ಟು ಊರುಗಳನ್ನು ಲೂಟಿ ಮಾಡಿದಾರೆ? ಆಗೆಲ್ಲಾ ಅಪರಾಧವೆನ್ನಿಸಿಕೊಳ್ಳದ್ದು ಈಗ ಹೇಗೆ ಆದೀತು? ಕಂಪೆನಿ ಸರ್ಕಾರದವರು ದಂಡಿನವರ ವಿಷಯದಲ್ಲಿ ಅಂಥಾ ಅಪ್ಪಣೆಯನ್ನು ಮಾಡಿದ್ದರೆ, ಇದು ಈ ಸೀಮೆಗೇ ಅಲ್ಲದೆ ಎಲ್ಲಾ ಕಡೆಗೂ ವ್ಯಾಪಿಸಬೇಕು. ಇಲ್ಲಿ ವರ್ತಮಾನವಿರುವ ಹಾಗೆ ಉತ್ತರದೇಶದಲ್ಲಿಯೂ ಇದ್ದರೆ ತಮಗೆ ಎಲ್ಲಿಂದಲಾದರೂ ಕಾಗದಗಳು ಬಂದೇ ಬರಬೇಕಲ್ಲವೆ? ಹಾಗೆ ಯಾವುದೂ ಬಂದಿಲ್ಲ. ಮತ್ತು ನಮ್ಮ ಮೈಸೂರು ಒಂದು ದೊಡ್ಡ ಸಂಸ್ಥಾನವಾಗಿದೆ. ನಮ್ಮ ದೊರೆಗಳು ಕಂಪೆನೀ ಸಂಸ್ಥಾನೀಕರ ಸಹಾಯಕ್ಕಾಗಿ ತಮ್ಮ ದಂಡನ್ನು ಕಳುಹಿಸಿದ್ದರು. ಈ ದಂಡಿನಿಂದ ಹೆಚ್ಚಾದ ಜಯವುಂಟಾಯಿತೆಂದು ಕಂಪೆನಿ ಸರ್ಕಾರದವರು ಚೆನ್ನಾಗಿ ಬಲ್ಲರು. ಇದರಿಂದ ನಮ್ಮ ರಾಜರಲ್ಲಿ ಕಂಪೆನಿಯವರಿಗೆ ಅಧಿಕವಾದ ಮರ್ಯಾದೆ ಇರಲೇಬೇಕು. ಹೀಗಿರುವಲ್ಲಿ—ನಿಮ್ಮ ಸೇನೆಯವರು ಯುದ್ಧದಲ್ಲಿ ಲೂಟೀ ಮಾಡಿಕೊಂಡು ಬಂದಿದಾರೆ, ಅವರನ್ನು ಹಿಡಿದು ಕಳುಹಿಸಿ ಎಂದು ಕಂಪೆನಿಯವರು ಮರಾಟಿ ಯುದ್ಧಗಳಲ್ಲಿ ತಮಗೆ ಎಷ್ಟೋ ಸಹಾಯಮಾಡಿದ ಕೃಷ್ಣರಾಜ ಪ್ರಭುಗಳಿಗೆ ಬರಿಸಿದರೆ ಅದು ನಮ್ಮ ದೊರೆಗೆ ಅಗೌರವ ಮಾಡಿದಂತಾಗುವುದೆಂದು ದೂರ ದೃಷ್ಟಿಯುಳ್ಳ ಇಂಗ್ಲಿಷ್ ಸರದಾರರು ಯೋಚಿ

ಸದೇ ಇರಲಾರರು.

ಈ ಸಾಹೇಬ ಜನರು ಬಹು ಜಾಣರು. ರಾಜಕಾರ್ಯಗಳೆಲ್ಲ ವನ್ನೂ ವಿಶೇಷ ರಹಸ್ಯದಿಂದ ನಡಿಸತಕ್ಕ ಸಮರ್ಥರು. ಹಾಗೆ ಕಂಪೆನಿಯವರು ನಮ್ಮ ಸರ್ಕಾರಕ್ಕೆ ಬರೆದಿದ್ದರೆ ಆ ಗುಟ್ಟು ಈಚೆಗೆ ಬಂದ ಬಗೆ ಹೇಗೆ? ಇಂಥಾ ವರ್ತಮಾನವನ್ನು ಗುಟ್ಟಾಗಿ ಇಡದೆ ಬಹಿರಂಗ ಮಾಡಿದರೆ, ಲೂಟೀ ಮಾಲನ್ನು ಹುಡುಕುವು ದಕ್ಕೆ ಸರ್ಕಾರದವರು ಬಂದಾಗ ಅದು ಕೈಗೆ ಸಿಕ್ಕೀತೆ?

ಈ ಸಂದರ್ಭದಲ್ಲಿ ಇನ್ನೊಂದು ಸೂಕ್ಷ್ಮಾಂಶವನ್ನು ತಾವು ಯೋಚಿಸಬೇಕು. ಯುದ್ಧ ಸಂಬಂಧದ ಕೊಳ್ಳೆಯನ್ನು ತಂದ ವರು ತಾವು ಒಬ್ಬರೇ ಅಲ್ಲವಷ್ಟೇ. ತಮ್ಮ ಸೇನಾಪತಿಗಳಾದ ಬಕ್ಷಿ ರಾಮರಾಯರು ಬಕ್ಷಿ ಭೀಮರಾಯರು ಪೇಷ್ವೆ ಬಾಜೀರಾಯರ ಶಿವಪೂಜೆ ಸಾಮಾನುಗಳನ್ನು ತಂದರೆಂದು ಪ್ರವಾದವಿದೆಯಷ್ಟೆ. ಅದಕ್ಕಾಗಿ ಆ ಬಕ್ಷಿಗಳನ್ನು ಮೊದಲು ಹಿಡಿದುಕೊಂಡು ಹೋಗ ಬೇಕಷ್ಟೆ. "ತಾವು ಯಾಕೆ ಭಯಪಡುತ್ತೀರಿ? ಬಕ್ಷೀರು ತಲೆತಪ್ಪಿಸಿ ಕೊಂಡರೆ ತಾವೂ ತಪ್ಪಿಸಿಕೊಂಡ ಹಾಗೆಯೇ ಸರಿ. ಹೇಗೆ ಹೇಗೆ ಆಲೋಚನೆ ಮಾಡಿ ನೋಡಿದರೂ ಈ ವರ್ತಮಾನವೇ ಸುಳ್ಳು ಎನ್ನುವುದಕ್ಕೆ ಆಧಾರ ಸಿಕ್ಕುತಾ ಇವೆ." ಈ ಪ್ರಕಾರ ಆಲೋಚ ನಾಪರನಾದ ಅಪ್ರಮೇಯನು ತಿಳಿಸಿದನು. ಇದು ಹನುಮಂತ ರಾಯನ ಮನಸ್ಸಿಗೆ ಅಂಟಿತು. ಆದರೂ ಅವರ ಮಾನಕ್ಕೆ ಉಪ ಹತಿಯುಂಟಾಗುವುದೆಂಬ ಭೀತಿಯು ದಿನೇ ದಿನೇ ಮಾನಿಷ್ಠರನ್ನು ಕೊಲ್ಲುತ್ತಲೇ ಇರುವುದು. ಇದು ಕುಟ್ಟೇ ಹುಳುವಿನಹಾಗೆ ಈತನ ಮನಸ್ಸಿನಲ್ಲಿ ಕೊರೆಯುತ್ತಲೇ ಇತ್ತು. ಈ ಮಧ್ಯೆ ಇವರ ಮಾವನಾದ ಯಶವಂತ ಭೌಸಲೆಗೆ ತುಂಬಾ ಆಲಸ್ಯವೆಂದೂ ಮಗಳಾದ ದುರ್ಗಾಬಾಯಿಯನ್ನು ಕಳುಹಿಸಬೇಕೆಂದೂ ಕರೆಯುವುದಕ್ಕೆ ಬಂದರು. ಅದರಂತೆ ಹನುಮಂತರಾಯನು ಹೆಂಡತಿಯನ್ನು ತೌರುಮನೆಗೆ ಕಳುಹಿಸಿ ಕೊಟ್ಟನು. ಮನೆಯಲ್ಲಿ ಇನ್ನು ಯಾರೂ

ಮಾತು ಕೊಡಲಾಡುವುದಕ್ಕೆ ಇಲ್ಲದೆ ಈತನು ಏಕಾಂಗಿಯಾದ್ದ ರಿಂದ ಮನಸ್ಸಿನಲ್ಲಿ ನಾಟಿಕೊಂಡಿದ್ದ ಯೋಚನೆಯು ತಾನೇತಾ ನಾಗಿ ಕೂತಿತು. ದುರ್ಗಾಬಾಯಿಯು ಹೊರಟು ಹೋದ ಮೇಲೆ ಅಪ್ರಮೇಯನು ರಾತ್ರೆ ಕಾಲದಲ್ಲಿ ಯಜಮಾನನ ಮನೆಯಲ್ಲಿಯೇ ಮಲಗಿ ಕೊಳ್ಳುತಿದ್ದನು. ಈ ಮಧ್ಯೆ ಇಂಗ್ರೀಜಿ ಹಯಾತಖಾನನ ಅನುಸರಣೆ ಬಲವಾಯಿತು.

ಹೀಗಿರುವಲ್ಲಿ ಒಂದುದಿನ ಈ ಹಯಾತನು ಹನುಮಂತ ರಾಯನನ್ನು ಕುರಿತು—ಸಾಹೇಬರೆ, ತಮಗೆ ನನ್ನ ಮೇಲೆ ಇರುವ ಅಭಿಮಾನಕ್ಕೆ ತಕ್ಕ ಹಾಗೆ ಒಂದು ಉಪಕಾರವನ್ನು ಮಾಡ ಬೇಕು. ತಮ್ಮಿಂದ ಬಡವನಾದ ನಾನು ಬದುಕಬೇಕಾಗಿದೆ. ಈ ಸಮಯದಲ್ಲಿ ತಾವು ಕೈಬಿಟ್ಟರೆ ನಾನು ಶುದ್ಧವಾಗಿ ಕೆಟ್ಟು ಹೋಗುತೇನೆ. ನಾನು ಕೆಟ್ಟವನೆಂತಲೇ ತಿಳಿದುಕೊಂಡು ಸಹಾಯ ಮಾಡಿ, ಇಷ್ಟು ದಿವಸಗಳಿಂದ ತಮ್ಮ ಸೇವೆಯಲ್ಲಿ ನಾನು ಇವೇನೆಯಷ್ಟೇ. ಏನಾದರೂ ದುರ್ನಡತೆಯನ್ನು ತಾವು ತಿಳಿಯೋಣವಾಯಿತೆ? ಒಂದು ವೇಳೆ ನನ್ನಲ್ಲಿ ಅಂಥಾ ದುರ್ನಡತೆ ಇದ್ದಾಗ್ಯೂ ತಮ್ಮಂಥಾ ಸತ್ಪುರುಷರ ಸಹವಾಸವು ಅಂಥಾ ದೋಷವೇನಿದ್ದರೂ ಅದನ್ನು ನಾಶಮಾಡುವುದು. ಆ ನಂಬಿಕೆ ನನಗೆ ಇದೆ, ಎಂದು ಚಮತ್ಕಾರವಾಗಿ ದೈನ್ಯವನ್ನು ತೋರಿಸಿ ಕೊಂಡು ಮಾತನಾಡಿದನು. ಹನುಮಂತರಾಯನು ತನ್ನಿಂದ ಯಾವ ಉಪಕಾರವಾಗಬೇಕೆಂದು ಕೇಳಿದನು. ಅದಕ್ಕೆ ಹಯಾ ತನು—ಸ್ವಾಮಿ ತಮಗೆ ಅರಿಕೇ ಮಾಡಲು ಭಯವಾಗುತ್ತೆ. ಆದರೂ ಧೈರ್ಯಮಾಡುತ್ತೇನೆ. ಹೈದರಾಬಾದಿನಿಂದ ಒಬ್ಬ ನವಾ ಬರ ಮಗ ಬಂದಿದಾನೆ. ಅವನು ತಂದಿದ್ದ ಹಣವೆಲ್ಲಾ ವೆಚ್ಚ ವಾಗಿ ಹೋಯಿತು. ಆತನಲ್ಲಿ ಒಂದು ಕಂಠೀಸರವಿದೆ, ಅದನ್ನು ಮಾರಬೇಕೆಂದಿದಾನೆ. ತಾವು ಅದನ್ನು ನೋಡಿ ಬೆಲೆ ಕಟ್ಟಿಕೊಟ್ಟರೆ ತರುವಾಯ ನಾನು ಅದನ್ನು ವಿಕ್ರಯ ಮಾಡಿಸುತೇನೆ. ನಗದ

ಮೇಲೆ ಕ್ರಯ ಕಟ್ಟಲು ಇಲ್ಲಿನ ವರ್ತಕರಿಗೆ ಚೆನ್ನಾಗಿ ಬಾರದು, ಅಡ್ಡಾದಿಡ್ಡಿಯಾಗಿ ಕೇಳುತಾರೆ. ಇದು ಕೇವಲ ರಹಸ್ಯವಾಗಿ ಆಗಬೇಕಾದ ಕೆಲಸವಾಗಿದೆ. ನಾಳೆ ಸಾಯಂಕಾಲ ನಾಲ್ಕು ಗಂಟೆಯ ಮೇಲೆ ದಯಮಾಡಿದರೆ ರತ್ನ ಪರೀಕ್ಷೆಗೆ ಕಾಲ ಸರಿಯಾಗಿರುತ್ತೆ. ಈ ಕೆಲಸ ತಮ್ಮಿಂದ ಹೊರತು ಮತ್ತೆ ಯಾರಿಂದಲೂ ನಡೆಯುವುದಿಲ್ಲ, ಹೀಗೆಂದು ಹೇಳಿದನು. ಅದಕ್ಕೆ ಹನುಮಂತರಾಯನು ರತ್ನದ ಒಡವೆ ಎಂದರೆ ಹೇಗಾದರೂ ಅದನ್ನು ನೋಡಬೇಕೆಂಬ ಆಶೆಯುಳ್ಳವನಾದ್ದರಿಂದ, ಹಯಾತ ಹೇಳಿದ ಮಾತಿಗೆ ಒಪ್ಪಿ ತಾನು ಮಾರನೇ ದಿವಸ ಸಾಯಂಕಾಲ ನಾಲ್ಕು ಗಂಟೆಗೆ ಬರುವುದಾಗಿ ಮಾತುಕೊಟ್ಟನು. ಈತನನ್ನು ಹಯಾತನು ಮುಂಡಿವೊಹಲ್ಲೆಯಲ್ಲಿ ಒಂದು ದೊಡ್ಡ ಮನೆಗೆ ಕರೆದುಕೊಂಡು ಹೋದನು. ಅಲ್ಲಿ ಲೋಡು ತಿವಾಸಿಗೆ ಹಾಕಿಕೊಂಡು ಜರಬಾಗಿ ಕೂತಿದ್ದ ಒಬ್ಬ ತುರುಕನು ಇವರಿಗೆ ಕೇವಲ ಗೌರವವನ್ನು ತೋರಿಸಿ ಕೂರಿಸಿಕೊಂಡು ಕುಶಲ ಪ್ರಶ್ನೆಗಳನ್ನು ಮಾಡಿ ದೇಶಾಂತರದ ವರ್ತಮಾನವನ್ನು ಪ್ರಸ್ತಾಪ ಮಾಡುವುದರಲ್ಲಿಯೇ ಸಾಯಂಕಾಲ ೭-೮ ಘಂಟೆಯಾಗುವಂತೆ ಮಾಡಿದನು. ಅದು ಕೃಷ್ಣಪಕ್ಷ, ಕಗ್ಗತ್ತಲೆ ಕವಿದುಕೊಂಡಿತ್ತು. ಆ ಸಮಯದಲ್ಲಿ ಕಂಠೀಸರ ಮಾರುವ ಪ್ರಸ್ತಾಪವನ್ನು ಎತ್ತಿದರು. ನಗವನ್ನು ಈಚೆಗೆ ತೆಗೆದರು. ಕತ್ತಲೆಯಲ್ಲಿ ಜವಾಹಿರು ನಗಗಳ ನೋಟ ಸಿಕ್ಕುವುದಿಲ್ಲ. ಬೆಳಕಿನಲ್ಲಿ ನೋಡಿ ಹೇಳಬೇಕೆಂದು ಹನುಮಂತರಾಯನು ಹೇಳಿದನು. ಹಾಗಾದರೆ ನಗವನ್ನು ತಾವು ತೆಗೆದುಕೊಂಡು ಹೋಗಿ ನಾಳೆ ಬೆಳಗ್ಯೆ ನೋಡಿ ಕ್ರಯ ಕಟ್ಟಿ ಕಳುಹಿಸಬಹುದೆಂದು ನವಾಬ ಹೇಳಿದನು. ತನಗೆ ಹೊಸ ಪರಿಚಿತನಾಗಿರುವ ದೊಡ್ಡ ಮನುಷ್ಯನ ನಗವನ್ನು ತೆಗೆದುಕೊಂಡು ಹೋಗುವುದು ಹೇಗೆ ಎಂಬದಾಗಿ ಹನುಮಂತರಾಯ ಅನುಮಾನಪಟ್ಟು ನಗವನ್ನು ತಾನು ತೆಗೆದುಕೊಳ್ಳುವುದಿಲ್ಲವೆಂದೂ ಬೇಕಾದರೆ

ಮೂರನೇದಿವಸ ಪ್ರಾತಃಕಾಲ ಅದನ್ನು ಕಳುಹಿಸಿ ಕೊಡಬಹು ದೆಂದೂ ಸಹಾ ಆ ನವಾಬನಿಗೆ ಖಂಡಿತವಾಗಿ ಹೇಳಿದನು. ಅದಕ್ಕೆ ಹಯಾತನು ನಗವನ್ನು ತಾನು ಇರಿಸಿಕೊಂಡಿರುವುದಾ ಗಿಯೂ ಬೆಳಗಾದ ಮೇಲೆ ಹನುಮಂತರಾಯನಿಗೆ ತಂದು ತೋರಿಸುವುದಾಗಿಯೂ ಹೇಳಿದನು. ಮಾತು ಅಲ್ಲಿಗೆ ಮುಗಿ ಯಿತು.

ಹಯಾತಖಾನನೂ ಹನುಮಂತರಾಯನೂ ಆ ಮನೆ ಬಿಟ್ಟು ಹೊರಟರು. ಕತ್ತಲೆಯಾಗಿತ್ತು. ಮೆಲ್ಲಗೆ ಹಾದೀ ತಪ್ಪಿಸಿ ಪೂರ್ಣಯ್ಯನ ನಾಲೇ ಪಕ್ಕದ ದಾರಿಯಲ್ಲಿ ಹಯಾತನು ಹೊರಟು, ಹಾಗೆಯೇ ತನಗೆ ಜಲಶಂಕೆಗಾಗಿ ಅವಸರವಾಗಿದೆ ಮುಂದೆ ನಡೆಯಿರಿ, ಬರುತೇನೆಂದು ಹನುಮಂತರಾಯನಿಗೆ ಹೇಳಿದನು. ಹನುಮಂತರಾಯನು ಹತ್ತು ಹೆಜ್ಜೆ ಹೋಗುವಷ್ಟ ರಲ್ಲಿ ಹಯಾತ ಮಾಯವಾದನು. ಓಡಿ ಹೋದಾನು ಹಿಡಿಯಿರಿ ಎಂದು ಯಾರೋ ಕೂಗಿದರು. ಆ ಕ್ಷಣದಲ್ಲಿಯೇ ೮–೧೦ ಜನ ಹನುಮಂತರಾಯನ ಸಮೀಪಕ್ಕೆ ಬಂದರು. ಕೂಡಲೆ ಉಳಿದ ಜನರು ಅವನನ್ನು ಹಿಡಿದುಕೊಂಡರೆಂದು ಊಹಿಸಿ ಚಾವಡಿಗೆ ಎಳೆದುಕೊಂಡು ಬನ್ನಿ ಎಂದು ಇನ್ನೊಂದು ಕೂಗು ಕೇಳಿಸಿತು. ಕತ್ತಲೆಯಲ್ಲಿ ಇದೆಲ್ಲಾ ಹನುಮಂತರಾಯನಿಗೆ ಭೂಪತಿ ಮಾತ್ರೆ ಯಾಯಿತು. ಅದುವರೆಗೆ ತಾನು ಭಯಪಡುತಾ ಇದ್ದ ಅಪಾಯವು ತನಗೆ ಆಗ ಸಂಭವಿಸಿತು, ಆಪತ್ಕಾಲ ಪ್ರಾಪ್ತವಾಯಿತು. ಇನ್ನು ಶತ್ರುಗಳ ಕೈಗೂ ಕಂದಾಚಾರದವರ ಹಿಂಸೆಗೂ ಸಿಕ್ಕಿ ಪ್ರಾಣ ಬಿಡುವುದಕ್ಕಿಂತ ಒಂದು ಕೈ ನೋಡತಕ್ಕದ್ದೇ ಮೇಲೆಂದು ಯೋಚಿಸಿ, ಹನುಮಂತರಾಯನು ಯಾವಾಗಲೂ ತನ್ನ ಸೊಂಟ ದಲ್ಲಿರತಕ್ಕ ಪಟಾಕತ್ತಿಯನ್ನು ತಟ್ಟನೆ ತೆಗೆದುಕೊಂಡು ಬಹಳ ರೋಷಾವೇಶದಿಂದ "ಯಾರು ಬರುತೀರೋ ಬನ್ನಿರೆಲಾ, ಇವತ್ತು ನಿಮ್ಮ ತಲೆ ಹೋದ್ದು ಒಂದು, ನನ್ನ ತಲೆ ಹೋದ್ದು ಒಂದು"

ಎಂದು ಕೂಗಿ ಪಟಾತಿರುಗಿಸುತಾ ನಿಂತುಕೊಂಡನು. ಪಿತೂರಿ ಮಾಡಿಕೊಂಡು ಇವನನ್ನು ಹಿಡಿಯಬೇಕೆಂದು ಬಂದು ಸೇರಿ ಕೊಂಡಿದ್ದ ಘಾತುಕರೆಲ್ಲಾ ಹತ್ತು ಹದಿನೈದು ಜನಗಳವರೆಗೆ ಇದ್ದರು. ಹೇಗಾದರೂ ತಾವು ಹೆಚ್ಚು ಮಂದಿ ಇದೇವೆ, ಈ ಮುದಕನನ್ನು ಹಿಡಿಯುವುದೇನು ಕಷ್ಟ ಎಂದು ಎಲ್ಲರೂ ಇವನ ಸುತ್ತಲೂ ನಿಂತು ಮೇಲೆ ಬೀಳುವುದಕ್ಕೆ ಬಂದರು. ಪ್ರಯೋಜನ ವೇನು? ಪ್ರಾಣದ ಮೇಲೆ ಆಶೆ ಇಲ್ಲದೆ ಕಾಲರುದ್ರನ ಹಾಗೆ ಕತ್ತಿ ಯನ್ನು ತಿರುಗಿಸುತಾ ಇರುವ ಆ ಶೂರನಿಗೆ ಇವರು ಈಡಾದಾರೆ? ಆ ದೀಪಕ್ಕೆ ಈ ಈಚಲ ಹುಳುಗಳು ನಿಂತಾವೆ? ಅವರೆಲ್ಲರಿಗೂ ಕತ್ತಿ ಏಟುಬಿತ್ತು. ಕೆಲವರು ಬಿದ್ದುಬಿಟ್ಟರು. ಪೆಟ್ಟುತಿಂದು ಅನೇಕರು ಓಡಿಹೋದರು. ಆ ಘಾತುಕರೆಲ್ಲಾ ಹೋದರೆಂದು ತಿಳಿದು, ಪುನಃ ಯಾರು ಎಲ್ಲಿ ಮೇಲೆ ಬಂದು ಬಿದ್ದಾರೋ ಎಂಬ ಭಯದಿಂದ ಪಟಾವನ್ನು ಹಾಗೆಯೇ ತಿರುಗಿಸುತ್ತಲೇ ಹನುಮಂತ ರಾಯ ಹೊರಟುಹೋದನು. ಆ ಕತ್ತಲೆಯಲ್ಲಿ ಎಲ್ಲಿಗೆ ಹೋದನೋ ಯಾರಿಗೂ ಗೊತ್ತಾಗಲಿಲ್ಲ.

ಈ ಯಜಮಾನನ ಮನೆಯಲ್ಲಿಯೇ ರಾತ್ರೆ ಮಲಗಿಕೊಳ್ಳುತಿದ್ದ ಅಪ್ರಮೇಯನು ರಾತ್ರೆಯೆಲ್ಲಾ ರಾಯರು ಮನೆಗೆ ಬರಲಿಲ್ಲವಲ್ಲಾ ಎಂದು ಪೇಚಾಡುತಾ ನಿದ್ರೆಯನ್ನು ಮಾಡಲಿಲ್ಲ. ಬೆಳಗಾಯಿತು, ಯಜಮಾನ ಬರಲಿಲ್ಲ, ಎಲ್ಲೆಲ್ಲಿಯೋ ಹುಡುಕಿದ, ಸಿಕ್ಕಲಿಲ್ಲ, ಗಾಬರಿಯಾಯಿತು, ಲೂಟೀ ಮಾಲುಗಳ ವಿಷಯವಾಗಿ ಆ ರಾಯನಿಗೆ ಮೊದಲೇ ಏನೋ ಭಯವಿತ್ತು. ಆ ವರ್ತಮಾನ ನಿಜವಾಯಿತೆ? ಸರ್ಕಾರದವರು ಏನಾದರೂ ಹಿಡಿದುಕೊಂಡು ಹೋದರೆ? ಹಾಗಿದ್ದರೆ ತುಂಬಾ ದೊಡ್ಡ ಮನುಷ್ಯನಾದ ಆತನಿಗೆ ಅವಮಾನ ಪ್ರಾಪ್ತವಾಗಬಹುದೆ? ಇಂಗ್ರೀಜಿ ಹಯಾತ್‌ಖಾನ ಸಾಯಂಕಾಲದಲ್ಲಿ ಬಂದು ಕರೆದುಕೊಂಡು ಹೋದನಲ್ಲವೆ? ಎಂದು ಯೋಚಿಸಿ ಹಯಾತನ ಮನೆಗೆ ಹೋಗಿ ವಿಚಾರ ಮಾಡೆ

ಲಾಗಿ ಅವನು ಊರಲ್ಲಿಲ್ಲ, ವೇಲೂರಿಗೆ ಹೋಗಿ ಎಂಟು ದಿವಸ ವಾಯಿತು ಎಂದು ಅವನ ಮನೆಯವರು ಹೇಳಿದರು. ಅಪ್ರ ಮೇಯನ ಮನಸ್ಸಿಗೆ ಅನುಮಾನ ತಟ್ಟಿತು. ಮುನ್ನಾ ದಿವಸ ಸಾಯಂಕಾಲ ಯಜಮಾನನನ್ನು ಸ್ವತಃ ಬಂದು ಕರೆದುಕೊಂಡು ಹೋದ ಮನುಷ್ಯ ವೇಲೂರಿಗೆ ಹೋಗಿ ಎಂಟು ದಿವಸವಾಯಿ ತೆಂದರೆ ನಂಬುವ ಮಾತಲ್ಲ. ಗಾಬರಿ ಹೆಚ್ಚಾಯಿತು, ಹನುಮಂತ ರಾಯನು ಯಾರ ಯಾರ ಮನೆಗೆ ಹೋಗುತಿದ್ದನೋ ಅಲ್ಲೆಲ್ಲಾ ಹುಡುಕಿ ವಿಚಾರಿಸಿದ್ದಾಯಿತು, ಸಿಕ್ಕಲಿಲ್ಲ. ಕೊತ್ವಾಲ ಚಾವಡಿ ಯಲ್ಲಿ ವಿಚಾರಿಸಿದನು. ಅಲ್ಲಿನವರು ತಮಗೆ ತಿಳಿಯದೆಂದು ಹೇಳಿ ದರು. ಆರು ಮೋಹಲೇ ಚಾವಡಿಯಲ್ಲಿಯೂ ಹೀಗೆಯೇ ಹೇಳಿ ದರು. ಸರ್ಕಾರದವರು ಹಿಡಿದುಕೊಂಡು ಹೋಗಿದ್ದರೆ ಯಾವು ದಾದರೂ ಒಂದು ಚಾವಡಿಯಲ್ಲಿರಬೇಕು. ಹಾಗಿಲ್ಲದ ಮೇಲೆ ಹಯಾತಖಾನನ ಕೃತ್ರಿಮದಿಂದಲೇ ಏನೋ ನಡೆದಿರಬೇಕು. ಬಕ್ಷೀ ದೇಪಣ್ಣ ಹನುಮಂತರಾಯನಿಗೆ ಪರಮಾಪ್ತನಷ್ಟೇ ಆತ ನಲ್ಲಿ ತಿಳಿಸಿತು, ಆತನು ಕೂಡಲೆ ಅಲ್ಲಲ್ಲಿ ಹುಡುಕುವುದಕ್ಕೆ ಜನ ರನ್ನು ಕಳುಹಿಸಿದನು. ದಿಕ್ಕುದಿಕ್ಕಾ ಜನ ಹುಡುಕುವುದಕ್ಕೆ ಹೋಯಿತು, ದೊರೆಯಲಿಲ್ಲ. ಹೇಗೆ ಯೋಚಿಸಿದರೂ ಏನೇನು ಮಾಡಿದರೂ ಸಂಗಡ ಕರೆದುಕೊಂಡು ಹೋದ ಇಂಗ್ರೀಜಿ ಹಯಾತಖಾನನ ಮೇಲೆ ಅನುಮಾನ ಹೆಚ್ಚುತಾ ಬಂತು. ಹನುಮಂತರಾಯನಿಗೆ ಶ್ರೀರಂಗಪಟ್ಟಣದಲ್ಲಿ ದೊಡ್ಡ ಸ್ನೇಹಿತರು ಹೆಚ್ಚಾಗಿದ್ದರು. ಅಲ್ಲಿಗೆ ಹೋಗಿ ನೋಡಿಕೊಂಡು ಬರಬೇಕೆಂದು ಅಪ್ರಮೇಯನು ಯೋಚಿಸುತಾ ಇದ್ದನು

ಮೂರನೇ ದಿನ ಪ್ರಾತಃಕಾಲ ಸುಮಾರು ೯ ಗಂಟೇ ಸಮಯ ದಲ್ಲಿ ಯಾವುದೋ ಒಂದು ಗಂಡು ಶವವು ರಜಪೂತ ಘಾಟಿನ ನಾಲೆಯಲ್ಲಿ ತೇಲುತಾ ಇದೆಯೆಂತಲೂ ಆ ಹೆಣವನ್ನು ನೀರಿನಿಂದ ತೆಗೆದು ತಡಿಗೆ ಹಾಕಿದಾರೆಂತಲೂ ಅದು ಯಾರ ಹೆಣವೊ

ಗೊತ್ತಾಗಲಿಲ್ಲವೆಂತಲೂ ಜನರು ಅಲ್ಲಲ್ಲಿ ಮಾತನಾಡಿಕೊಳ್ಳುತಾ ಇದ್ದರು. ಇದು ಅಪ್ರಮೇಯನ ಕಿವಿಗೆ ಬಿತ್ತು. ಇವನು ಆ ಕ್ಷಣ ದಲ್ಲಿಯೇ ರಜಪೂತ ಘಾಟಿಗೆ ಹೋದನು. ಆ ಕಂದಕದ ಒಳಗೂ ಮೇಲುಗಡೇ ತಡಿಯಲ್ಲಿಯೂ ಮೆಟ್ಟಲಮೇಲೂ ಸಹಾ ಎಳ್ಳ ಎರಚಿದರೆ ಕೆಳಕ್ಕೆ ಬೀಳದಷ್ಟು ಜನ ನೆರೆದಿದ್ದರು. ಹೆಣವು ತುಕಡಿದಾರ ಹನುಮಂತರಾಯರಂತೆ ಎಂದು ಅಲ್ಲಿ ಅನೇಕರು ಮಾತನಾಡಿಕೊಳ್ಳುತಾ ಇದ್ದರು. ಈ ಮಾತು ಕಿವಿಗೆ ಬಿದ್ದ ಕೂಡಲೆ ಅಪ್ರಮೇಯನಿಗೆ ಗಾಬರಿ ಹೆಚ್ಚಾಯಿತು. ಇವನು ಆಗಲೇ ಕಂದಕದೊಳಕ್ಕೆ ಇಳಿದನು. ಜನರು — ಇನ್ನೇನು ಹನುಮಂತರಾಯರ ಗುಮಾಸ್ತರೇ ಬಂದರು, ಇನ್ನು ಆಸಾಮಿ ಇಂಥವನೆಂದು ಪತ್ತೆ ಆದಹಾಗೆಯೇ, ಎಂದುಕೊಳ್ಳುತಿದ್ದರು. ಇವನು ಶವದ ಬಳಿಗೆ ಹೋದನು. ಅಲ್ಲಿ ಕಂದಾಚಾರದವರೂ ಸರಮಾನ ಮೊದಲಾದ ಅಧಿಕಾರಿಗಳೆಲ್ಲಾ ಇದ್ದರು. ಈ ಶವ ನಿಮ್ಮ ಯಜಮಾನರದೆಂದು ಜನರೆಲ್ಲಾ ಕೂಗುತಾರಲ್ಲ, ನೀನು ನೋಡಯ್ಯ, ಎಂದು ಸರಮಾನರು ಹೇಳಿದರು. ಅಪ್ರಮೇಯನು ಆ ಶವವನ್ನು ಮುಟ್ಟಿ ತಿರುಗಿಸಿ ತಿರುಗಿಸಿ ಚೆನ್ನಾಗಿ ಅಜಮಾ ಯಿಷಿ ಮಾಡಿ ನೋಡಿದನು. ಹಣೆ, ಮೂಗು, ತುಟಿಗಳು, ಗಡ್ಡ ಇದೆಲ್ಲಾ ಕತ್ತಿಯಿಂದ ಕತ್ತರಿಸಿದ ಹಾಗೆ ಕೊಚ್ಚಿ ಹೋಗಿತ್ತು. ಆದ್ದರಿಂದ ಮುಖದಿಂದ ಮನುಷ್ಯ ಗೊತ್ತಾಗಲು ಆಗಲಿಲ್ಲ, ಉಟ್ಟಿದ್ದ ಬಟ್ಟೆಯು ಮಣ್ಣಾಗಿ ಕೆಟ್ಟುಹೋಗಿದ್ದ ಕಾರಣ ಅದ ರಿಂದ ಗುರ್ತಿಸಲು ಆಗಲಿಲ್ಲ. ಹೆಣವು ನೀರಲ್ಲಿ ಮೂರು ದಿವಸ ಕೊಳೆತು ಇದ್ದ ಕಾರಣ ದೇಹದ ಬಣ್ಣ ತಿಳಿಯಲಿಲ್ಲ. ಆದರೆ ಹನುಮಂತರಾಯನಿಗೆ ಇದ್ದ ಹಾಗೆಯೇ ಆ ಶವದ ಯಡಗಿವಿಯಲ್ಲಿ ದಪ್ಪನಾದ ಒಂದೇ ಒಂದು ಮುತ್ತು ಹಾಕಿದಂಥಾ ಒಂದು ಬಾವಲಿ ಇತ್ತು. ಬಲಗೈಯಲ್ಲಿ ದಪ್ಪನಾದ ಚಿನ್ನದ ನುಲಿಗೇ ಕಪ್ಪ ಇತ್ತು. ಉದ್ದಗಾತ್ರ ಒಂದೇ ಸಮನಾಗಿತ್ತು. ಕಾಯಪುಷ್ಟಿ

ಹಾಗೆಯೇ ಚೆನ್ನಾಗಿತ್ತು. ಆ ಶರೀರವನ್ನು ನೋಡಿದರೆ ಹನುಮಂತರಾಯನ ಶರೀರವೆಂದೇ ಹೇಳುವುದಕ್ಕೆ ಸಾಕಾಗುವಷ್ಟು ಗುರುತುಗಳಿದ್ದವು. ಅದೆಲ್ಲವನ್ನೂ ನೋಡಿ ಅಪ್ರಮೇಯನಿಗೂ ಭ್ರಮೆಯಾಯಿತು. ಮೊದಲು ಥಟ್ಟನೆ—ಇದು ನಮ್ಮ ಯಜಮಾನರ ಶರೀರವಿರಬಹುದು ಎಂದು ತೋರ.ತ್ತೆ ಎಂದನು. ಸರ್ಕಾರದವರು ಖಾಯಿದೇ ಮೇರೆ ಮಹಜರನ್ನು ಬರಿಸಲು ಆರಂಭಿಸಿದರು. ಆಗ ಹನುಮಂತರಾಯನ ಗುಮಾಸ್ತೆಯಾದ ಅಪ್ರಮೇಯ ಬಂದು ಅಜಮಾಯಿಷಿ ಮಾಡಿದ್ದೂ ಕೊನೆಗೆ ಆ ಶವ ತಮ್ಮ ಯಜಮಾನನದು ಎಂದು ಹೇಳಿದ್ದೂ ಸಹಾ ಅದರಲ್ಲಿ ನಮೂದಾಯಿತು. ಅದಕ್ಕೆ ಪಂಚಾಯಿತರ ಕೈಯಲ್ಲಿ ರುಜು ಹಾಕಿಸಿದರು. ಅಪ್ರಮೇಯನನ್ನೂ ರುಜು ಹಾಕು ಎಂದರು. ಆಗ ಆ ಮನುಷ್ಯನು ಪುನಃ ನಮ್ಮ ಯಜಮಾನನಿಗೆ ಇನ್ನೊಂದು ವಿಶೇಷವಾದ ಗುರುತು ಇತ್ತು; ಅದನ್ನು ಪರೀಕ್ಷಿಸಿ ನೋಡುತೇನೆ, ಎಂದು ಕಾಲ ಉಂಗುಷ್ಟವನ್ನು ತಿರುಗಿಸಿ ನೋಡಿ ಕೊನೆಗೆ ಸರವಿರ್ಸಾ ಸಾಹೇಬರ ಕಡೆಗೆ ತಿರುಗಿ—ಸಾಹೇಬರೆ, ಇದು ನಮ್ಮ ಯಜಮಾನರ ಶರೀರವಲ್ಲ, ಅವರ ಯಡಗಾಲ ಉಂಗುಷ್ಟ ಒಂದು ವಿಧವಾಗಿ ಎರಡಾದ ಹಾಗಿತ್ತು. ಆ ಗುರುತು ಈ ಶವಕ್ಕಿಲ್ಲ, ಎಂದನು. ಅಪ್ರಮೇಯನು ಕಡೆಗೆ ಹೀಗೆ ಹೇಳುತಾನೆ ಎಂದು ಕೊನೆಯಲ್ಲಿ ಒಂದು ಪಂಕ್ತಿಯನ್ನು ಬರೆದರು. ಅಪ್ರಮೇಯ ರುಜು ಹಾಕಿದನು. ಸರ್ಕಾರದವರು ತಮ್ಮ ಕಾನೂನು ಪ್ರಕಾರ ಮುಂದಿನ ಕ್ರಮವನ್ನು ನಡಿಸಿಕೊಂಡರು.

ಬೇರೆ ಊರಿಗೆ ಎಲ್ಲಿಯಾದರೂ ಹೋಗಿರಬಹುದೇ ಎಂದು ನೋಡುವುದಕ್ಕೆ ಅಪ್ರಮೇಯನು ಮೈಸೂರನ್ನು ಬಿಟ್ಟು ಹೊರಡಲು ಇನ್ನೊಂದು ಕಷ್ಟ ಬಂದಿತ್ತು. ಹನುಮಂತರಾಯನ ಮನೆ ಅವನ ಆಸ್ತಿ ವಿಶಿಷ್ಟವೂ ಅಪ್ರಮೇಯನ ಸ್ವಾಧೀನದಲ್ಲಿ ನಿಂತಿತ್ತು. ಅದೆಲ್ಲವನ್ನೂ ಭದ್ರಮಾಡದೇ ಹೊರಟು ಹೋದರೆ ಬಹು ದುಷ್ಟ

ರಾದ ತುರುಕರ ಬೀದಿಗೆ ಸಮೀಪವಾಗಿರುವ ಮನೆಯ ಗತಿ ಏನಾದೀತೋ ಯಾರು ರಾತ್ರಿ ಕಾಲದಲ್ಲಿ ಕನ್ನ ಹಾಕಿ ಎಲ್ಲವನ್ನೂ ತೆಗೆದುಕೊಂಡು ಹೋದಾರೋ ಎಂಬ ಭೀತಿಯು ಬಹಳವಾಗಿ ತಟ್ಟಿತ್ತು. ಬೆಲೆಯಾದ ಪದಾರ್ಥಗಳೆಲ್ಲವನ್ನೂ ಹೇಗೆ ಜೋಪಾನವಾಗಿ ಇಡುವುದು ಎಂದು ಅಪ್ರಮೇಯನು ಯೋಚನೆ ಮಾಡುತಾ ಇರುವಾಗ ಮೈಸೂರಿನಲ್ಲಿ ಇನ್ನೊಂದು ಕೆಲಸ ನಡೆಯಿತು.

## ೧೧ನೇ ಅಧ್ಯಾಯ

## ಪಿತೂರಿ

ಬಸವಯ್ಯ—ಏನು ಲಚ್ಮನಿ, ಕುಂಟುತೀಯೆ?

ಲಚ್ಮನಿ—ಬೇಟೆಯಾಡುವಾಗ ಹಾಳಹಕ್ಕಿ ಮಾಡಿದ ಗಾಯದ ಫಲ, ಪ್ರಾಣವೇ ಹೋಗಬೇಕಾಗಿತ್ತು, ಸ್ವಲ್ಪದರಲ್ಲಿ ತಪ್ಪಿತು.

ಬಸ—ಉಳಿದವರು ಯಾರನ್ನೂ ಕಾಣಲಿಲ್ಲವಲ್ಲ?

ಲಚ್ಮ—ಏನು ಬಂದಾರು? ಎಲ್ಲರಿಗೂ ಬಹುವಾಗಿ ಪೆಟ್ಟಾಗಿದೆ. ಕೆಲವರಿಗಂತೂ ಅಂಗಹೀನವಾಗಿ ಹೋಯಿತು. ಎಲ್ಲರಿಗಿಂತಲೂ ನಾನೇ ವಾಸಿ, ಹಾಗೂ ಹೀಗೂ ಜೀವ ಸಹಿತವಾಗಿ ಉಳಿದೆ, ನಿಂತ ಸಂಗತಿಯೆಲ್ಲಾ ತಿಳಿದೇ ಇದೆ.

ಬಸ—ಗೂಬೆ ಸತ್ತಿತೆ ಹಾರಿಹೋಯಿತೆ ?

ಲಚ್ಮ—ಗೂಬೆ ಸತ್ತುಬಿತ್ತು.

ಬಸ—ಮುಂದಿನ ಬೇಟೇ ಕ್ರಮವನ್ನು ನಾಳೆ ರಾತ್ರಿ ಗೊತ್ತು ಮಾಡಬೇಕು. ನಾವೆಲ್ಲರೂ ಸೇರೋಣ.

ಲಚ್ಮ—ತಮ್ಮ ಅಪ್ಪಣೇಪ್ರಕಾರ ಆಗಲಿ.

ಹೀಗೆ ಇವರು ಮಾತನಾಡಿಕೊಂಡು ಹೋದ ಮೂರು ದಿವಸದ ಮೇಲೆ ಮೈಸೂರ ಅಂಚೇ ಗುರಿಕಾರನಿಂದ ಡಿವೀರ್ಷ ಸೂಪರಿಂಟೆಂಡೆಂಟರಾದ ಕ್ಯಾಪರ್ಟ ಮಂಗಮಾರೀ ಸಾಹೇಬರಿಗೂ

ಮೈಸೂರು ದೊರೆಗಳ ಸೀಮೆಯ ರಾಜ್ಯಭಾರದ ಕಮಿಷನರು ಜನರಲ್ ಕಬ್ಬ್ ಸಾಹೇಬರಿಗೂ ಎರಡು ಬಿನ್ನವತ್ತಲೆ ತಲಪಿದವು. ಇದಕ್ಕೆ ಅನುಸಾರವಾಗಿ ದುರ್ಗಾಬಾಯಿ ಎಂಬುವಳ ಹೆಸರಿನಿಂದ ಕಬ್ಬ್ ಸಾಹೇಬರಿಗೆ ಒಂದು ಅರ್ಜಿ ಸಹಾ ತಲಪಿತು. ಆ ಬಿನ್ನವತ್ತಲೆಗಳು ಮತ್ತು ಅರ್ಜಿಗಳಲ್ಲಿ ಬರೆದಿದ್ದ ಮುಖ್ಯ ಅಭಿಪ್ರಾಯವೇನಂದರೆ:—

"ದುರ್ಗಾಬಾಯಿ ಗಂಡನಾದ ತುಕುಡಿದಾರ ಹನುಮಂತರಾಯನಿಗೆ ಬಕ್ಷಿ ದೇಪಣ್ಣನು ಅರಮನೆಯಲ್ಲಿ ನೌಕರಿ ಮಾಡಿಸಿ ಕೊಡುವುದಾಗಿ ಆಸೇ ಹುಟ್ಟಿಸಿ, ಆ ಹನುಮಂತರಾಯನಿಂದ ೫೦೦ ರೂಪಾಯಿ ಲಂಚ ತೆಗೆದುಕೊಂಡನು. ಆದರೆ ಅರಮನೆಯಲ್ಲಿ ಸಂಬಳವಾಗಲಿಲ್ಲ. ಆಗ ತಾನು ಕೊಟ್ಟ ೫೦೦ ರೂಪಾಯಿಯನ್ನು ವಾಪಸು ಕೊಡೆಂದು ಕೇಳಿದನು. ಬಕ್ಷಿಯು ಕೊಡುವುದಿಲ್ಲವೆಂದು ಹೇಳಿ ಅವನನ್ನು ತಳ್ಳಿಸಿ ಬಿಟ್ಟನು. ಆಗ ಹನುಮಂತರಾಯನು ಈ ಸಂಗತಿಯನ್ನು ಡಾಕ್ಟರು ಕ್ಯಾಂಬಲ್ ಸಾಹೇಬರಲ್ಲಿ ತಿಳಿಸಿ ಬಕ್ಷಿಯವರ ಯೋಗ್ಯತೆಯನ್ನು ಪ್ರಕಾಶ ಮಾಡುತೇನೆಂದು ಹೇಳಿ ಆ ಸಾಹೇಬರ ಬಂಗಲೆಗೆ ಹೋಗುತಿರುವಾಗ ದೇಪಣ್ಣನು ಈ ವರ್ತಮಾನವನ್ನು ಕೇಳಿ ಅನೇಕಜನ ತುಂಟರನ್ನು ಕಳುಹಿಸಿ ಮನಸ್ಸಿ ಹೊಯಿಸಿದನು. ಹನುಮಂತರಾಯನಿಗೆ ಪ್ರಾಣ ಹೋಗುವ ಹಾಗಾಯಿತು. ಅವನನ್ನು ಯಾರೋ ಹೊತ್ತು ಕೊಂಡು ಹೋಗಿ ಡಾಕ್ಟರು ಕ್ಯಾಂಬಲ್ ಸಾಹೇಬರಿಗೆ ತೋರಿಸಿ ಔಷಧಿ ಕೊಡಿಸಿ ಮನೆಗೆ ಕರೆದುಕೊಂಡು ಹೋಗುವುದರೊಳಗಾಗಿ ಹನುಮಂತರಾಯನ ಪ್ರಾಣ ಹೋಯಿತು."

ಹೀಗೆಂದು ಆ ಫಿರ್ಯಾದುಗಳಲ್ಲಿಯೂ ಬಿನ್ನವತ್ತಳೆಗಳಲ್ಲಿಯೂ ಬರೆದಿತ್ತು. ಡಿವೀಷನ್ ಸೂಪರಿಂಟೆಂಡೆಂಟರಾದ ಮಂಗಮಾರಿ ಸಾಹೇಬರಿಗೆ ಈ ಕಾಗದ ಸುನಾವಣೆಯಾಯಿತೊ ಇಲ್ಲವೊ ತಿಳಿಯಲಿಲ್ಲ. ಈ ವಿಷಯದಲ್ಲಿ ಕೆಲವು ದಿವಸಗಳವರೆಗೆ ಯಾವ

ವಿಚಾರವೂ ನಡೆಯಲಿಲ್ಲ. ದುರ್ಗಾಬಾಯಿಯು ಕರ್ಬ್ಯ ಸಾಹೇಬರಿಗೆ ಬರೆದ ಅರ್ಜಿಯು ವಿಚಾರಣೆಗಾಗಿ ಮಂಗಮಾರಿ ಸಾಹೇಬರಲ್ಲಿಗೆ ಬಂತು. ಬಿನ್ನವತ್ತಲೆಯನ್ನು ಬರೆದವನು ಕಂಪನಿ ಸರ್ಕಾರದ ನೌಕರನಾದ್ದರಿಂದ ಮೊದಲು ಅವನನ್ನು ಕರಿಸಿ ವಿಚಾರಣೆಗೆ ಆರಂಭಿಸಿದರು.

ಸಾಹೇಬ—ನಿನ್ನ ಹೆಸರೇನು?

ಕಪ—ಕಪನೀ.

ಸಾಹೇಬ—ನೀನು ಅಂಚೇಮುತ್ಸದ್ದಿಯೆ?

ಕಪ—ಹವುದು.

ಸಾಹೇಬ—ಈ ಬಿನ್ನವತ್ತಳೆಯನ್ನು ಓದಿನೋಡಿಕೊ, ಇದನ್ನು ಯಾರು ಬರೆದರು?

ಕಪ—ನಾನು.

ಸಾಹೇಬ—ದೇಪಣ್ಣ ಹನುಮಂತರಾಯನನ್ನು ಹೊಡೆಯಿಸಿ ಕೊಲ್ಲಿಸಿದ ಎಂದು ಇದರಲ್ಲಿ ಬರೆದಿದೆಯಲ್ಲಾ, ಇದನ್ನು ನೀನು ಬಲ್ಲೆಯ?

ಕಪ—ಬಲ್ಲೆ.

ಸಾಹೇಬ—ಹೇಗೆಬಲ್ಲೆ?

ಕಪ—ಕೇಳಿಬಲ್ಲೆ.

ಸಾಹೇಬ—ನೀನು ನೋಡಲಿಲ್ಲ?

ಕಪ—ಇಲ್ಲ.

ಸಾಹೇಬ—ದೇಪಣ್ಣನಿಗೆ ಹನುಮಂತರಾಯನ ಮೇಲೆ ಯಾಕೆ ದ್ವೇಷ?

ಕಪ—ದೇಪುವಿಗೆ ಹನುಮಂತರಾಯ ೫೦೦ ರೂಪಾಯಿ ಕೊಟ್ಟಿದ್ದನು.

ಸಾಹೇಬ—ಯಾತಕ್ಕೆ?

ಕಪ—ಲಂಚವಾಗಿ.

ಸಾಹೇಬ—ಯಾಕೆ ಲಂಚ ?

ಕಪನಿ—ಅರಮನೆಯಲ್ಲಿ ಹನುಮಂತರಾಯನಿಗೆ ಸಂಬಳ ಮಾಡಿಸಿಕೊಡುವುದಕ್ಕೆ.

ಸಾಹೇಬ—ಅರಮನೆಯಲ್ಲಿ ಹಮುಮಂತರಾಯನಿಗೆ ಸಂಬಳ ವಾಯಿತೊ ?

ಕಪನಿ—ಇಲ್ಲ ; ದೇಪು ಮಾಡಿಸಿಕೊಡಲಿಲ್ಲ.

ಸಾಹೇಬ—ಹನುಮಂತರಾಯ ಏನುಮಾಡಿದ ?

ಕಪ—ಈ ಲಂಚದ ಹಣವನ್ನು ವಾಪಸು ಕೊಡೆಂದು ಕೇಳಿದ. ಆಗ ದೇಪು ಅವನನ್ನು ಕೊಲ್ಲಿಸಿದ.

ಸಾಹೇಬ—ಇದೆಲ್ಲವನ್ನೂ ನೀನು ಚೆನ್ನಾಗಿ ನೋಡಿದ್ದೆಯಷ್ಟೆ ?

ಕಪ—ನೋಡಿಲ್ಲ. ಕೇಳಿದೇನೆ.

ಸಾಹೇಬ—ಯಾವ ಕೃತ್ಯನಡೆದದ್ದನ್ನೂ ನೀನು ಕಾಣೆ ?

ಕಪ—ನಾನು ಕಾಣೆ.

ಸಾಹೇಬ—ಕಾಣದ ಸಂಗತಿಯನ್ನು ನೀನು ಬಿನ್ನವತ್ತಳೆಯಲ್ಲಿ ಹೇಗೆ ಬರೆದೆ ?

ಕಪ—ಕೇಳಿದ ಸಂಗತಿಯನ್ನು ಬರೆದೆ.

ಸಾಹೇಬ—ಅಂಚೇ ಕೆಲಸನೋಡುವ ನೀನು ಹೀಗೆ ಕೇಳಿದ ಸಂಗತಿಯನ್ನು ಸರ್ಕಾರೀ ರಿಪೋರ್ಟಿನಲ್ಲಿ ಬರೆಯಲು ಕಾರಣ ವೇನು ?

ಕಪ—ಅಂಚೇ ಇಲಾಖೆಯುವರಿಗೆ, ಕಾಗದಗಳನ್ನು ರವಾನೆ ಮಾಡತಕ್ಕದ್ದು ಬಂದ ಕಾಗದಗಳನ್ನು ಪಾವತಿ ಮಾಡತಕ್ಕದ್ದು ಇಷ್ಟು ಮಾತ್ರವೇ ಅಲ್ಲ; ಅವರು ಸಂಗತಿಯನ್ನು ಕಂಡರೂ ಕೇಳಿದರೂ ರಪ್ಪಟ್ಟು ಮಾಡತಕ್ಕದ್ದೂ ಅವರ ಕೆಲಸವಾಗಿದೆ.

ಸಾಹೇಬ—ಹಾಗಾದರೆ ಈ ಅರ್ಜಿಯನ್ನು ರವಾನೆ ಮಾಡ ಬೇಕೆಂದು ನಿನ್ನಲ್ಲಿ ಯಾರು ತಂದು ಕೊಟ್ಟರು ?

ಕಪ—ದುರ್ಗಾಬಾಯಿ.

ಸಾಹೇಬ—ಇವಳು ಯಾರು ?

ಕಪ—ಹನುಮಂತರಾಯನ ಹೆಂಡತಿ.

ಸಾಹೇಬ—ದುರ್ಗಾಬಾಯಿ ಸ್ವತಃ ತಂದುಕೊಟ್ಟಳೊ ?

ಕಪ—ಹವುದು.

ಸಾಹೇಬ—ಅವಳನ್ನು ನೀನು ಬಲ್ಲೆಯ ?

ಕಪ—ಬಲ್ಲೆ.

ಸಾಹೇಬ—ಅವಳನ್ನು ನೀನು ನೋಡಿದ್ದೀಯ ?

ಕಪ—ನೋಡಿದೇನೆ.

ಸಾಹೇಬ—ಅವಳು ಹೇಗಿದಾಳೆ ?

ಕಪ—ಕಾಣೆ.

ಸಾಹೇಬ—ಅದು ಹೇಗೆ ?

ಕಪ—ಅವಳು ಬುರುಕಿ ಹಾಕಿಕೊಂಡಿದ್ದಳು.

ಸಾಹೇಬ—ಈ ಅರ್ಜೀ ಬರೆದಿರುವ ಅಕ್ಷರ ಯಾರದು ?

ಕಪ—ನನ್ನದು.

ಸಾಹೇಬ—ನೀನು ಹೇಗೆ ಬರೆದೆ ?

ಕಪ—ದುರ್ಗಾಬಾಯಿ ಬರೆದುಕೊಡೆಂದು ಕೇಳಿದಳು, ನಾನು ಬರೆದುಕೊಟ್ಟೆ.

ಸಾಹೇಬ—ನೀನು ಬರೆದುಕೊಡಲು ಕಾರಣವೇನು ?

ಕಪ—ನಮ್ಮ ಇಲಾಖೆಗೆ ವರ್ತಮಾನಗಳೆಲ್ಲಾ ತಿಳಿಯ ಬರುತ್ತೆ. ಆಯಾ ದಿವಸದ ಇಲಾಖೆ ಬಿನ್ನವತ್ತಳೆಗಳಿಗೆ ತಕ್ಕ ಸಮಾಚಾರವೆಲ್ಲಾ ತಿಳಿಯಬಹುದು. ನಾನು ಅರ್ಜಿ ಬರೆಯದಿದ್ದರೆ ಸವಿಸ್ತಾರವಾಗಿ ನಮಗೆ ತಿಳಿಯುವ ಬಗೆ ಹೇಗೆ ?

ಸಾಹೇಬ—ಸರ್ಕಾರದ ನೌಕರರು ಇಂಥಾ ಅರ್ಜಿಗಳನ್ನು ಬರೆಯಬಹುದೆಂದು ಯಾರು ಅಪ್ಪಣೆ ಕೊಟ್ಟದಾರೆ ?

ಕಪ—ಸರ್ಕಾರದ ನೌಕರರು ಇಂಥಾದ್ದನ್ನು ಬರೆಯಕೂಡದೆಂದು ಯಾವ ಅಪ್ಪಣೆಯೂ ಇಲ್ಲ.

ಸಾಹೇಬ—ಈಗ ಆ ದುರ್ಗಾಬಾಯಿ ಎಲ್ಲಿದಾಳೆ ಬಲ್ಲೆಯ?

ಕಪ—ಹೆಗ್ಗಡದೇವನಕೋಟೇ ತಾಲ್ಲೋಕು ಮಗ್ಗೆ ಎಂಬ ಗ್ರಾಮದಲ್ಲಿದಾಳೆಂದು ತಿಳಿಯಬರುತ್ತೆ.

ಸಾಹೇಬ—ಅವಳ ಸ್ಥಳ ಯಾವುದು?

ಕಪ—ನಾನು ಅರಿಯೆ.

ಸಾಹೇಬ—ಅಲ್ಲಿ ಅವಳಿಗೆ ಯಾರಾದರೂ ಸಂಬಂಧಿಗಳು ಇದಾರೆಯೇ?

ಕಪ—ಕಾಣೆ.

ಸಾಹೇಬ—ಅಲ್ಲಿ ಯಾರ ಮನೆಯಲ್ಲಿವಾಳೆ?

ಕಪ—ದೇಪಂಣನವರ ವಶದಲ್ಲಿದಾಳೆ.

ಸಾಹೇಬ—ನೀನು ಹೇಗೆ ಬಲ್ಲೆ?

ಕಪ—ಜನರು ಹೇಳಿಕೊಳ್ಳುತಾರೆ. ಅದರಿಂದ ಬಲ್ಲೆ.

ಈ ಕಪನಿಯು ಹೀಗೆ ತಾನು ಕೈಗೆ ಸಿಕ್ಕದಂತೆ ಮನಸ್ಸು ಬಂದ ಸಂಗತಿಗಳನ್ನು ಹೇಳಿದನು. ಈ ಕೈಫಿಯತನ್ನು ಸಾಹೇಬನು ಮೇಲಕ್ಕೆ ಬರೆಯಲಾಗಿ ಹನುಮಂತರಾಯನನ್ನು ಕೊಂದವರ ವಿಷಯದಲ್ಲಿ ಯಾವ ಮುಂದಿನ ಕ್ರಮ ನಡಿಸಲು ತೋರಲಿಲ್ಲ. ಜನರು ಮನಸ್ಸು ಬಂದ ಹಾಗೆ ಹೇಳಿಕೊಳ್ಳಲು ಆರಂಭವಾಯಿತು. ಗಲಾಟೆ ಹೆಚ್ಚಾಯಿತು. ಆದರೆ ದೇಪಣ್ಣ ಈ ಕೆಲಸವನ್ನು ಮಾಡಿಸಿದ ಎಂಬ ಪ್ರವಾದಕ್ಕೆ ಕಪನಿಯ ಕೈಫಿಯತು ಆಧಾರವನ್ನುಂಟುಮಾಡುವಂತೆ ಕಂಡಿತು. ದೇಪಣ್ಣ ದೊಡ್ಡ ಪದವಿಯಲ್ಲಿರತಕ್ಕವನು. ಆತನಿಗೆ ಅರಮನೆಯಲ್ಲಿ ಬಕ್ಷಿಗಿರಿ ಆಗಿದೆ. ದೊರೆಗಳಿಗೆ ಮಂತ್ರಿಯಾಗಿದಾನೆ. ಇವನನ್ನು ಹಿಡಿದು ದಸ್ತಗಿರಿ ಮಾಡಿ ಪಹರೆಯಲ್ಲಿಡುವುದಕ್ಕೆ ತಕ್ಕಷ್ಟು ಆಧಾರವಿದೆಯೆ? ಇದರಿಂದ ದೊರೆಗೆ ಏನು ಕೋಪ ಬಂದೀತೋ, ಹೆಚ್ಚಿನ ದೊಂಬಿ ಮುಂತಾದ ಗಲಭೆಯೇನು ಎದ್ದೀತೋ. ರಾಜಕೀಯವಾದ ಇನ್ನು ಯಾವ ಕೆಡಕು ಉಂಟಾದೀತೋ,

ಇವೆಲ್ಲವನ್ನೂ ಸ್ಥಳದಲ್ಲಿಯೇ ವಿಚಾರಮಾಡಿ ತಿಳಿಯತಕ್ಕದ್ದು ಉತ್ತಮವೆಂದು ಕಮಿಷನರ್ ಕಬ್ಬನ್‌ಸಾಹೇಬನು ಮೈಸೂರಿಗೆ ಬಂದನು. ಬಸಪ್ಪ ಮೊದಲಾದವರು ತಮ್ಮ ಮುಖ್ಯೋದ್ದೇಶ ವೆಂಬ ಗಿಡಕ್ಕೆ ಪಾತೀಕಟ್ಟಿ ನೀರಹಾಕಿ ಆರೈಕೆಮಾಡಿ ಫಲ ಬಿಡುವಹಾಗೆ ಮಾಡುವ ಸಮಯ ದೊರೆಯಿತೆಂದು ಸಂತೋಷ ಪಟ್ಟು ತಮ್ಮ ಕೆಲಸಗಳೆಲ್ಲವನ್ನೂ ಸಿದ್ಧಮಾಡಿಕೊಂಡರು.

ಆ ಕಾಲದಲ್ಲಿ ಒಂಟಿ ಕುದುರೇ ಸಾರೋಟು, ಜೋಡು ಕುದುರೆ ಸಾರೋಟು, ಮೋಟರಕಾರು ಮೊದಲಾದವುಗಳು ಇರಲಿಲ್ಲ. ಜನರ ತಿಂಥಿಣಿ ಹೆಚ್ಚಾಗಿರುವ ಪೇಟೆಗಳಲ್ಲಿ ಇಂಥಾ ಯಾನ ಯಂತ್ರಗಳನ್ನು ಜ್ಞಾನರಸ ಜ್ಞಾನಸೀಸೆಗಳ ಮಹಿಮೆಯಿಂದ ಮುಖವನ್ನು ಜಿಡ್ಡು ಜಿಡ್ಡಾಗಿ ಮಾಡಿಕೊಂಡು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಗಂಟೆಗೆ ಇಪ್ಪತ್ತು ಮೂವತ್ತು ಐವತ್ತು ಮೈಲಿ ಕಡೆಗೆ ನೂರು ಮೈಲಿ ಪ್ರಕಾರ ಭರ್ರನೆ ಓಡಿಸಿ ಮಕ್ಕಳು ಸಿಕ್ಕಲಿ ಮುದುಕರು ಸಿಕ್ಕಲಿ ಹೆಂಗಸರು ಸಿಕ್ಕಲಿ ಗಾಡಿಗೆ ಗಾಡಿ ಡಿಕ್ಕಿ ಹೊಡೆಯಲಿ ಎತ್ತು ಸಾಯಲಿ ಕುದುರೆ ಸಾಯಲಿ ಜನರು ಸಾಯಲಿ ಲಕ್ಷ್ಯಮಾಡದೆ ಗಾಡೀ ಯಜಮಾನನ ಅಧಿಕಾರಬಲ ವನ್ನು ಗಾಡೀ ಹೊಡೆಯುವ ತನ್ನ ಪರಾಕ್ರಮದಿಂದ ತೋರಿಸುತಾ ಯಾನ ಯಂತ್ರವನ್ನು ನಡೆಸತಕ್ಕ ಚತುರರು ಆಗ ಇರಲಿಲ್ಲ. ಯಾರಿಗೆ ಎಷ್ಟಾದರೂ ನಷ್ಟವಾಗಲಿ ಯಾರ ಪ್ರಾಣ ಎಷ್ಟೇ ಹೋಗಲಿ ಕುಂದಾಚಾರದವರು, ಈ ಫಿರ್ಯಾದು ನಾವು ಹಿಡಿಯು ತಕ್ಕದ್ದಲ್ಲವೆನ್ನುವ ಪುಟ್ಟಿಗೂ, ಕೋರ್ಟಿನಲ್ಲಿ ಫಿರ್ಯಾದು ಮಾಡಿದರೆ —ಇದು ಗಾಡೀ ಹೊಡೆದವನೂ ಆ ಮಹಾರಥಕ್ಕೆ ಬಲಿಯಾದ ವನೂ ಸಹಾ ಪರಸ್ಪರ ನಡೆಸಿದ ಅಜಾಗರೂಕತೆಯಿಂದ ಉಂಟಾದ ಫಲಕ್ಕೆ ಗಾಡಿಯವನನ್ನು ಗುರಿಮಾಡಲು ಆಗುವು ದಿಲ್ಲವೆನ್ನುವಪುಟ್ಟಿಗೂ ವ್ಯವಹಾರಶಾಸ್ತ್ರ ಘನೀಭೂತವಾಗಿರಲಿಲ್ಲ. ಗಾಡೀ ಯಜಮಾನನ ಯೋಗ್ಯತಾನುಸಾರವಾಗಿ ಅಧಿಕಾರಾನು

ಸಾರವಾಗಿ ಕೋರ್ಟುಗಳಿಗೆ ಬಂದು ಕರಿದನ್ನು ಬಿಳಿದೆಂದೂ ಬಿಳಿದನ್ನು ಕರಿದೆಂದೂ ವಾಕ್ಚಾತುರ್ಯದಿಂದ ನಿರೂಪಿಸುವಂಥಾ ವಕೀಲ ಶಿಖಾಮಣಿಗಳು ಆ ವಾಗ್ಮಿಗಳ ಪ್ರೌಢವಾಕ್ಯಗಳಿಗೆ ಹವುದು ಹವುದೆಂದು ಹವುದು ಗುಟ್ಟಿ ಅಪರಾಧಿಯು ಅಪರಾಧಿಯಲ್ಲವೆನ್ನುವಂಥಾ ನ್ಯಾಯಮೂರ್ತಿಗಳೂ ಇರಲಿಲ್ಲ. ಆಗಿನ ಕಾಲದಲ್ಲಿ ಹುದ್ದೇದಾರರೇ ಮೊದಲಾಗಿ ದೊಡ್ಡವರೆಲ್ಲರೂ ಮೇನಾಗಳಲ್ಲಿಯೂ ಪಲ್ಲಕ್ಕಿಗಳಲ್ಲಿಯೂ ಕೂತುಕೊಂಡು ಬೋಯಿಗಳಿಂದ ಹೊರಸಿಕೊಂಡು ಹೋಗುವ ಹಳೇ ವಾಡಿಕೆಯೇ ಇತ್ತು. ಯೂರೋಪಿನ ದೊಡ್ಡ ಸರದಾರರೂ ಕೂಡ ಹೀಗೆಯೇ ಮಾಡುತಿದ್ದರು. ಈ ಪದ್ಧತಿಯನ್ನು ಅನುಸರಿಸಿ ಮೇನಾದಲ್ಲಿ ಕೂತು ಕಬ್ಬ್ರ್ ಸಾಹೇಬನು ಮೈಸೂರ ಪೇಟೆಯಲ್ಲಿ ಕಚೇರಿಗೆ ಹೋಗುವುದಕ್ಕಾಗಿ ತೆರಳಿದನು. ಬಸಪ್ಪನ ಗುಂಪಿನವರಿಗೆ ಇನ್ನು ಇಂಥಾ ಸಮಯ ಸಿಕ್ಕೀತೆ ?

ಮೈಸೂರ ಪೇಟೆಯಲ್ಲಿ ಕಬ್ಬ್ರ್ ಸಾಹೇಬನ ಸವಾರಿ ಬರುತಾ ಇರುವಾಗ, ಗುಲಾಲ್ ರಂಗಿನ ಸೀರೆಯನ್ನುಟ್ಟು ಬಿಳೀಬಟ್ಟೆಯಿಂದ ಮುಸುಗು ಹಾಕಿಕೊಂಡು ಒಬ್ಬ ಹೆಂಗಸು ತಟ್ಟನೆ ಬಂದು ಮೇನಾವನ್ನು ಹಿಡಿದು ನಿಲ್ಲಿಸಿ ಹಿಂದುಸ್ತಾನಿ ಭಾಷೆಯಲ್ಲಿ—ಖಾವಂದರೆ ಈ ಊರಿನ ತುಂಟ ಜನರು ನಮ್ಮ ಯಜಮಾನನನ್ನು ಕೊಲ್ಲಿಸಿದರು; ನನ್ನ ಹೆಸರು ದುರ್ಗಾಬಾಯಿ, ಈ ಊರ ಅಧಿಕಾರಿಗಳು ದೇಪಣ್ಣನವರಿಗೆ ಹೆದರಿಕೊಂಡು ವಿಚಾರಣೆ ಮಾಡದೆ ಬಿಟ್ಟು ಬಿಟ್ಟರು; ಅನಾಥರನ್ನು ಕೇಳುವವರಿಲ್ಲದ ಹಾಗಾಯಿತು, ಹೀಗೆಂದು ಗಟ್ಟಿಯಾಗಿ ಕೂಗುತಾ ತಾನು ಅರ್ಜಿಯಲ್ಲಿ ಬರೆದಿದ್ದ ಸಂಗತಿಯನ್ನೆಲ್ಲಾ ಬಾಯಲ್ಲಿ ಹೇಳಿಕೊಂಡಳು. ಆಗ ಕಮಿಷನರು ಸಾಹೇಬನು ಹಿಂತಿರುಗಿ ಬಂಗಲೆಗೆ ಹೋಗಿ ಹನುಮಂತರಾಯ ಖೂನಿಯಾದ ಮೊಕದ್ದಮೆಯನ್ನು ಚೆನ್ನಾಗಿ ವಿಚಾರಣೆ ಮಾಡಿ ಅಪರಾಧಿಗಳನ್ನು ಶಿಕ್ಷೆಗೆ ಗುರಿಮಾಡಬೇಕೆಂದು ಖಂಡಿತವಾದ

ಅಪ್ಪಣೆಯನ್ನು ಮಾಡಿದನು. ಇದುವರೆಗೆ ತಕ್ಕ ವಿಚಾರಣೇ ಮಾಡದೇ ಸಾವಕಾಶ ಮಾಡಿದ ಸಂಗತಿಯಲ್ಲಿ ಹೆಚ್ಚಾದ ಆಕ್ಷೇಪಣೆ ಬಂತು. ದೇಪಣ್ಣನ ಹೆಸರು ಇದಕ್ಕೆ ಸೇರಿದ್ದದರಿಂದ ಮೊಕದ್ದಮೆ ಬಲವಾಯಿತು. ನಮ್ಮ ಶ್ರೀಕೃಷ್ಣರಾಜ ಪ್ರಭುಗಳಿಗೆ ಹೇಗಾದರೂ ದೌಲತ್ತು ಬರುವಂತೆ ತಕ್ಕ ತರದೂದುಗಳನ್ನು ದೇಪಣ್ಣನು ಇಂಗ್ಲಿಷ್ ಸರದಾರರ ಮೂಲಕವೇ ಮಾಡಿಸುತಿದ್ದುದು ನೆರವೇರಿದರೆ ಈ ಸೀಮೆಯಲ್ಲಿ ತಾನು ಮಾಡತಕ್ಕ ಸರ್ವಾಧಿಕಾರಕ್ಕೆ ಲೋಪ ಬಂದೀತೋ ಎಂಬ ಭೀತಿಯು ಕಬ್ಬರ್ ಸಾಹೇಬನ ಮನಸ್ಸಿನಲ್ಲಿರಲಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಇದರಿಂದಲೋ ಅಥವಾ ನ್ಯಾಯವಿಮರ್ಶೆ ಸರಿಯಾಗಿ ಆಗಬೇಕೆಂಬ ಇಂಗ್ಲಿಷ್ ಸರದಾರರ ಸಹಜವಾದ ಕುತೂಹಲದಿಂದಲೋ ಹುಟ್ಟಿದ ದೊಡ್ಡ ಸಾಹೇಬರ ಅಪ್ಪಣೆಗೆ ಸ್ಥಳದ ಅಧಿಕಾರಿಗಳು ಬಹಳವಾಗಿ ಹೆದರಿದರು.

ಸರಮೀರ್ ಚಾವಡಿಯ ಅಧಿಕಾರಿಗಳೂ ಜವಾನರೂ ಸೇರಿ ದುರ್ಗಾಬಾಯಿ ಎಂಬುವಳನ್ನು ಕುರಿತು—ನಿನ್ನ ಗಂಡನನ್ನು ಕೊಂದು ಹಾಕಿದವರು ಯಾರು? ನಿನಗೆ ಯಾರ ಯಾರ ಮೇಲೆ ಗುಮಾನಿ ಇದೆ? ಎಂದು ಕೇಳಿದರು. ಅದಕ್ಕೆ ಅವಳು—ನನ್ನ ಗಂಡನನ್ನು ಕೊಲ್ಲಲು ಅನೇಕ ಜನ ಸೇರಿದ್ದರು. ಕೇಮಲ್ ಸಾಹೇಬರ ಬಂಗಲೀ ದಾರಿಯಲ್ಲಿ ಈ ಕೆಲಸವನ್ನು ಮಾಡಿದರು. ದೇಪಣ್ಣ, ಮಲಕಣ್ಣ, ನಿಟ್ರಿಸಿದ್ಧಪ್ಪ, ಮರಿಯಪ್ಪ, ವೆಂಕಟನಾರಿ, ಮೊದಲಾಗಿ ಅನೇಕರು ಸೇರಿಮಾಡಿದರು. ಅಲ್ಲಿ ಅನೇಕ ಜನ ಸೇರಿದ್ದರು. ಅವರೆಲ್ಲಾ ಕಂಡಿದಾರೆ ಎಂದಳು. ಅದಕ್ಕೆ ಸರಮೀನರು—ಕಂಡ ಸಾಕ್ಷಿಗಳನ್ನು ಹೇಳು ಎಂದು ಕೇಳಲಾಗಿ ದುರ್ಗಾಬಾಯಿಯು—ಪೇಟೇ ನಂಜಪ್ಪ, ವೆಂಕಟರಾಮಯ್ಯ, ಕಳಲೇ ಸೋಮಯ್ಯ, ಯಜಮಾನ ಮಲ್ಲಣ್ಣ, ಪೇಟೇ ಅಣ್ಣಯ್ಯ ಶಾಸ್ತ್ರಿ, ಹಿರೀದೇವಿ ತಿಮ್ಮಣ್ಣಜೋಯಿಸ, ಇಮಾಮಲ್ಲಿ ಸಾಬರು,

ಹೀಗೆ ಮನಸ್ಸು ಬಂದಹಾಗೆ ನೂರಾರು ಹೆಸರುಗಳನ್ನು ಹೇಳಿದ್ದೂ ಅಲ್ಲದೆ—ಈ ಕೆಲಸಕ್ಕೆ ಇನ್ನೂ ಯಾರು ಯಾರೋ ಸೇರಿದ್ದರು, ಅವರ ಹೆಸರು ನನಗೆ ಗೊತ್ತಿಲ್ಲ, ಬೇಕಾದರೆ ಆ ಜನರನ್ನು ಚೌಕದಲ್ಲಿ ತೋರಿಸುತ್ತೇನೆ ಎಂದಳು. ಹಾಗೆಯೇ ಆಗಬಹುದೆಂದು ಜವಾನರು ಇವಳನ್ನು ಚೌಕಕ್ಕೆ ಕರೆದುಕೊಂಡು ಹೋದರು. ಈ ದುರ್ಗಾಬಾಯಿಯು ಗಂಭೀರವಾದ ಬಟ್ಟೆಯನ್ನು ಹಾಕಿಕೊಂಡು ಬೀದಿಯಲ್ಲಿ ಯಾರು ಹೋಗುತ್ತಿದ್ದಾಗ್ಯೂ—ಇವರೂ ಇದ್ದರು, ಅವರೂ ಇದ್ದರು ಎಂದು ಕಂಡಕಂಡವರನ್ನೆಲ್ಲಾ ತೋರಿಸುವುದಕ್ಕೆ ಆರಂಭಿಸಿದಳು. ಅವರೆಲ್ಲರನ್ನೂ ಜವಾನರು ಹಿಡಿದು ಕೂರಿಸಿಕೊಳ್ಳಲು ಮೊದಲು ಮಾಡಿದರು. ಹೆಣ್ಣು ಗಂಡು ಆದಿಯಾಗಿ ಊರ ಜನವೆಲ್ಲಾ ಗಡಗಡನೆ ನಡುಗಿಹೋಯಿತು. ಸಿಕ್ಕಿದವರೆಲ್ಲರನ್ನೂ ಹಿಡಿದುಕೊಳ್ಳುತಾರೆ ಎಂದು ದೊಡ್ಡ ಪ್ರವಾದ ಹುಟ್ಟಿತು. ಗಣ್ಯರಾದ ಅನೇಕ ವರ್ತಕರು ತಂತಮ್ಮ ಅಂಗಡಿಗಳನ್ನು ಮುಚ್ಚಿಕೊಂಡು ಸಂದು ಗೊಂದುಗಳಲ್ಲಿ ಬಿದ್ದು ಮನೆಗೆ ಸೇರಿಕೊಂಡರು. ನಾಲ್ಕೈದು ದಿವಸಗಳ ವರೆಗೆ ಗಂಡಸರು ಬೀದಿಯಲ್ಲಿ ತಲೆ ಎತ್ತಿ ತಿರುಗಾಡುವುದನ್ನು ಬಿಟ್ಟುಬಿಟ್ಟರು. ದುರ್ಗಾಬಾಯಿ ಅವಾಂತರವೆಂದರೆ ೪೦–೫೦ ವರುಷವಾದ ಮೇಲೂ ಕೂಡ ಮೈಸೂರ ನಿವಾಸಿಗಳೆಲ್ಲಾ ದಿಗಿಲು ಪಡುವಂತೆ ಭೀತಿ ನಿಂತುಹೋಯಿತು. ಹೀಗೆ ಹಿಡಿದ ಜನರಲ್ಲಿ ಕೆಲವರು ಅಪರಾಧಿಗಳಾದರು, ಅನೇಕರು ಸಾಕ್ಷಿಗಳಾದರು. ಎಲ್ಲರನ್ನೂ ಬೆಂಗಳೂರಿಗೆ ಸಾಗಿಸಿಕೊಂಡು ಹೋದರು. ಅಲ್ಲಿ ವಿಚಾರಣೆ ನಡೆಯಲು ಆರಂಭವಾಗಿ ಅನೇಕ ತಿಂಗಳು ಜರುಗಿತು. ಅಂಚೆಕಪನಿ ಮೊದಲಾದವರನ್ನು ಕೂಡ ದಸ್ತಗಿರಿ ಮಾಡಿದರು. ಇನ್ನೂ ಕೆಲವು ಸರ್ಕಾರಿ ನೌಕರರಿಗೂ ಇದೇ ಗತಿಯಾಯಿತು. ಮೈಸೂರು ಬೆಂಗಳೂರು ಸಹಾ ಗದಗಾಪಿಸಿಹೋಯಿತು.

## ೧೨ನೇ ಅಧ್ಯಾಯ

# ಹನುಮಂತರಾಯ ಏನಾದ?

ಅತ್ತ ಅಂಚೆ ಕಪನಿಯ ಬಿನ್ನವತ್ತಳೆ, ದುರ್ಗಾಬಾಯಿಯ ಅರ್ಜಿ, ಸಿಕ್ಕಿದವರು ದಸ್ತಗಿರಿಯಾದ್ದು, ವಿಚಾರಣೇ ಕ್ರಮ, ಇವೆಲ್ಲಾ ಕಿವಿಗೆ ಬಿದ್ದ ಕೂಡಲೆ ಅಪ್ರಮೇಯನಿಗೆ ವಿಸ್ಮಯವಾಯಿತು. ಇದೇನು ಆಶ್ಚರ್ಯ! ಸಾತಾರೆಗೆ ಹೊರಟುಹೋದ ದುರ್ಗಾಬಾಯಿ ಇಲ್ಲಿಗೆ ಇಷ್ಟು ಜಾಗ್ರತೆಯಾಗಿ ಹೇಗೆ ಬಂದಳು? ಹನುಮಂತರಾಯ ಖೂನಿ ಮಾಡಲ್ಪಟ್ಟದ್ದು ನಿಜವೆ! ಹೆಣವೇನೋ ಅವನ ದೇಹದ ಹಾಗೆಯೇ ಇದ್ದದ್ದು ನಿಜ. ಆದರೆ ವ್ಯತ್ಯಾಸವೂ ಇತ್ತಲ್ಲವೆ? ಅಂಚೆ ಕಪನಿ ಎಂಬುವ ಯಾರು, ಅವನು ಈ ಖೂನಿ ವಿಚಾರದಲ್ಲಿ, ಸೀದಾ ಕರ್ಬ್ರಸಾಹೇಬರಿಗೆ ಬರೆದದ್ದು ಹೇಗೆ? ಅವನಿಗೆ ಇಂಥಾದ್ದೇ ನಿಶ್ಚಯವೆಂದು ಹೇಗೆ ಗೊತ್ತಾಯಿತು? ಒಂದು ವೇಳೆ ದುರ್ಗಾಬಾಯಿಯು ಗಂಡ ಸತ್ತ ಸಮಾಚಾರವನ್ನು ಹೇಗೋ ಕೇಳಿ ಸಾತಾರೆಯಿಂದ ಬಂದಿರಬಹುದೆ? ಹಾಗೆ ಆಕೆ ಬಂದಿದ್ದರೆ ಇಷ್ಟೊಂದು ಆಸ್ತಿಯನ್ನೂ ನನ್ನ ಮೇಲೆ ಬಿಟ್ಟು ಮನೆಗೆ ಬಾರದೇ ಬೇರೆ ಕಡೆ ಇಳಿದುಕೊಂಡಳೆ? ಎರಡನೇ ಮಗನೆಂದು ಅವಳಿಂದ ಭಾವಿಸಲ್ಪಟ್ಟಿದ್ದ ನನ್ನನ್ನು ಕರೆಕಳುಹಿಸದೇ ಇರುತಿದ್ದಳೆ? ಹನುಮಂತರಾಯನ ಸಂಗಡ ಮನೆಯಲ್ಲಿಯೇ ಯಾವಾಗಲೂ ಇರುತ್ತಾ ಆತನನ್ನು ಎಡಬಿಡದೇ ಇದ್ದ ನನ್ನನ್ನು ಗಂಡನ ವಿಷಯವಾಗಿ ವಿಚಾರ ಮಾಡದೇ ಇರುತಿದ್ದಳೆ? ಒಂದು ದಿವಸವಾದರೂ ಬಹಿರಂಗವಾಗಿ ಪೇಟೆಗೆ ಬಂದ ಗರತಿಯಲ್ಲವಲ್ಲಾ. ಈಗ ಬಹಿರಂಗವಾಗಿ ಬಂದು ನಿಂತು ಯಾವ ಲಜ್ಜೆಯೂ ಇಲ್ಲದೆ ಕರ್ಬ್ರಸಾಹೇಬನಲ್ಲಿ ಮಾತನಾಡಿಯಾಳೆ. ಅಷ್ಟು ದೊಡ್ಡ ಸರದಾರನ ಹೆಂಡತಿಯಲ್ಲಾ. ಅಷ್ಟೊಂದು ಬಹಿರಂಗವಾಗಿ ಬಂದು ಬಿಟ್ಟಳೆ. ಒಂದೊಂದು ವೇಳೆ ಅತಿಯಾದ

ದುಃಖ ಸಂತಾಪಾದಿಗಳು ಮನುಷ್ಯನಿಗೆ ತನ್ನ ಗೌರವದ ಮೇಲೆ ವಿಸ್ಮೃತಿಯನ್ನು ತರುವುದುಂಟು. ಹಾಗಿರಬಹುದೆ? ಆಕೆ ಇಳಿದಿರುವ ಸ್ಥಳವೇ ಗೊತ್ತಾಗಲಿಲ್ಲವಲ್ಲಾ. ಆಸ್ತಿಯನ್ನೆಲ್ಲಾ ಆಕ್ರಮಿಸಲು ನಾನು ಏನಾದರೂ ಆತನ ಪ್ರಾಣವನ್ನು ತೆಗೆಯಿಸಿರಬಹುದೆಂದು ತಿಳಿದುಕೊಂಡಿದಾಳೆಯೆ? ಹಾಗಿದ್ದರೆ ನನ್ನನ್ನೂ ದಸ್ತಗಿರಿ ಮಾಡಬೇಕಾಗಿತ್ತಲ್ಲ. ಅದಿಲ್ಲದ ಮೇಲೆ ನನ್ನಲ್ಲಿ ಆಕೆಗೆ ಏನೂ ಅನುಮಾನವಿರುವಂತೆ ಕಾಣಿಸಲಿಲ್ಲ. ಹಾಗೆ ಅನುಮಾನವಿಲ್ಲದಿದ್ದರೆ ಮನೆಗೆ ಯಾಕೆ ಬರಲಿಲ್ಲ, ಅಥವಾ ನನಗೆ ಯಾಕೆ ಹೇಳಿಕಳುಹಿಸಲಿಲ್ಲ? ದೇಪಣ್ಣನಿಗೂ ನಮ್ಮ ಯಜಮಾನನಿಗೂ ಬಹಳವಾಗಿ ಸ್ನೇಹವಿತ್ತಷ್ಟೆ. ಅಂಥವನು ಹನುಮಂತರಾಯನನ್ನು ಕೊಲ್ಲಿಸಿದನೆಂದು ಹೇಳುವುದು ಹೇಗೆ? ಸಿಕ್ಕಿದ ಹೆಣ ಹನುಮಂತರಾಯನದೇ ಇದ್ದರೂ ಇರಬಹುದಲ್ಲವೆ? ಹೇಗೆ ಯೋಚಿಸಿದರೂ ಬತ್ತ ಮೊಸರು ಕಲಸಿದ ಹಾಗೆ, ಒಂದಕ್ಕೊಂದಕ್ಕೆ ಹೊಂದಿಕೆಯೇ ಇಲ್ಲವಾಗಿದೆ. ಲೂಟೀ ಮಾಲುಗಳು ತನ್ನಲ್ಲಿವೆ, ಆದ್ದರಿಂದ ತನ್ನನ್ನು ಹಿಡಿದುಕೊಂಡು ಹೋದಾರು ಎಂಬ ಭೀತಿಯು ಯಜಮಾನನಿಗೆ ಬಹಳವಾಗಿ ಹತ್ತಿತ್ತು. ಇಷ್ಟು ಜಾಗ್ರತೆಯಾಗಿ ಹೆಂಡತಿ ಮಕ್ಕಳು ಇರುವ ಸಾತಾರೆಗೆ ಹೋಗಿದ್ದಾನೆಯೆ? ಇದು ಸಾಧ್ಯವಿಲ್ಲ. ಆತನ ಗುರುತನ್ನು ಅನೇಕರು ಬಲ್ಲರು. ತನಗೆ ಇದ್ದ ಭೀತಿಗೆ ಆತ ಊಹಿಸಿಕೊಂಡಿದ್ದ ಕಾರಣ ನಿಜವಾಗಿದ್ದರೆ ಆತನು ಸರ್ಕಾರದವರ ಕೈಗೆ ಸಿಕ್ಕುವುದೇನೂ ಅತಿಶಯವಲ್ಲ. ಆದಕಾರಣ ರೂಪವನ್ನು ಮರೆಯಿಸಿಕೊಂಡು ಅನಾಮಧೇಯವಾದ ಯಾವುದಾದರೂ ಹಳ್ಳಿಗಳಲ್ಲಿ ಏನಾದರೂ ಅವಿತುಕೊಂಡಿರಬಹುದೋ ಏನೋ. ಇದೂ ಅಲ್ಲದೆ ಹನುಮಂತರಾಯನಿಗೆ ಸಾಧುಗಳು ಸನ್ಯಾಸಿಗಳು ಬೈರಾಗಿಗಳು ಜ್ಞಾನಿಗಳು ಇವರಲ್ಲಿ ವಿಶೇಷವಾಗಿ ಭಕ್ತಿಯುಂಟು. ಈ ಸಂಸಾರವನ್ನು ಕಟ್ಟಿಕೊಂಡು ಎಷ್ಟು ದಿವಸ ಪೇಚಾಡುವುದು? ಎಂದಾದರೂ

ನಮ್ಮ ಮಾರ್ಗವನ್ನು ನಾವು ನೋಡಿಕೊಳ್ಳಲೇ ಬೇಕು, ಹೀಗೆಂದು ಆತ ಹೇಳುತ್ತಲೇ ಇದ್ದನಷ್ಟೆ. ಹೆಂಡತಿ ಮಕ್ಕಳೆಲ್ಲರನ್ನೂ ಮುಂಚಿತವಾಗಿಯೇ ಊರಿಗೆ ಕಳುಹಿಸಿಬಿಟ್ಟು ಸಿದ್ಧಮಾಡಿಕೊಂಡಿದ್ದು ಸಮಯವನ್ನು ನೀರಿಕ್ಷಿಸುತಾ ಯಾರೋ ಒಬ್ಬ ಯೋಗಿಯ ಸಂಗಡ ಹೇಳದೇ ಕೇಳದೆ ಹೊರಟು ಹೋಗಿರಬಹುದೆ? ಹೇಗಾದರೂ ಆಗಲಿ, ಆತನು ಮೊದಲಿನಿಂದಲೂ ಹೋಗುತಾ ಇದ್ದ ಸ್ಥಳಗಳನ್ನೆಲ್ಲಾ ಹುಡುಕಿ ಮೊದಲು ನಿರ್ಧರ ಮಾಡಿಕೊಳ್ಳೋಣ. ಆತ ನಿಜವಾಗಿ ಕೊಂದು ಹಾಕಲ್ಪಟ್ಟಿದ್ದರೆ ನಾನು ಹುಡುಕುವುದರಿಂದ ಯಾವ ಕೆಲಸವೂ ಕೆಟ್ಟು ಹೋಗುವುದಿಲ್ಲ, ಆತ ಬದುಕಿದ್ದರೆ ನಾನು ಹುಡುಕುವ ತರಹದಿಂದ ಎಲ್ಲಿಯಾದರೂ ಆತ ನನಗೆ ಸಿಕ್ಕಲೇ ಬೇಕು. ಆತನು ಬಹಳ ದೂರದೇಶ ಹೋಗುವುದಕ್ಕೆ ಅವಕಾಶವಿಲ್ಲ. ಈ ಪ್ರಾಂತ ಎಲ್ಲಿಯೂ ಇಲ್ಲವೆಂದು ನಿರ್ಧರಿಸಿಕೊಂಡು ತರುವಾಯ ಸಾತಾರೆಗೂ ಹೋಗಿ ನೋಡಿಕೊಂಡು ಬರುವುದೇ ಖಂಡಿತ. ಈ ಮಧ್ಯೆ ಸರಕಾರದವರು ಮಾಡುವ ವಿಚಾರಣೆಯಿಂದ ಏನು ಹೊರಡುವುದೋ ನೋಡೋಣ, ಹೀಗೆಂದು ಅಪ್ರಮೇಯನು ನಿಶ್ಚೈಸಿಕೊಂಡನು.

ಆದರೆ ಹನುಮಂತರಾಯನ ಮನೆ ಅದರಲ್ಲಿದ್ದ ಭಾರಿ ಆಸ್ತಿ ಇದನ್ನೆಲ್ಲಾ ಮೈಸೂರಿನಲ್ಲಿಯೇ ಇದ್ದು ಕಾಪಾಡಲು ಸಾಧ್ಯವಿಲ್ಲ. ಆದಕಾರಣ ರಹಸ್ಯವಾಗಿ ಸಾಮಾನುಗಳನ್ನು ತನ್ನ ಊರಿಂದ ಗುಂಡಲಪೇಟೆಗೆ ಸಾಗಿಸಿ ಭದ್ರವಾಗಿ ಇಟ್ಟು ಮೈಸೂರ ಮನೆಯನ್ನು ಬಾಡಿಗೆಗೆ ಕೊಟ್ಟು ಪ್ರಯಾಣ ಮಾಡಬೇಕೆಂದು ನಿರ್ಧರಿಸಿಕೊಂಡನು.

ಈ ಮಧ್ಯೆ ಬಸಪ್ಪನ ಮನೆಯಲ್ಲಿ ರಾತ್ರೆ ಹನ್ನೊಂದು ಗಂಟೆಯ ಮೇಲೆ ರಾಕ್ಷಸಗಣಗಳೆಲ್ಲಾ ಗುಂಪು ಸೇರುತಿದ್ದವು. ಆಯಾ ದಿವಸ ಇಂಥಾ ಇಂಥಾ ಕೆಲಸ ನಡೆಯಿತೆಂದು ವರದಿಯಾಗುತಿತ್ತು. ಮಾರನೇ ದಿವಸ ಮಾಡಬೇಕಾದ ತಂತ್ರಗಳೆಲ್ಲಾ ಹಿಂದಿನ

ರಾತ್ರಿಯೇ ಚರ್ಚೆಯಾಗಿ ಸಿದ್ಧಾಂತವಾಗುತ್ತಿತ್ತು. ಈ ಸಂದರ್ಭದಲ್ಲಿ ಈ ಮಹಾ ಸಭೆಯವರು ಮಾಡಿದ ಸಂಕಲ್ಪಗಳೇನೆಂದರೆ :—

ಇದುವರೆಗೆ ನಡೆಸಿದ ಕಾರ್ಯವೆಲ್ಲಾ ಮುಖ್ಯೋದ್ದೇಶ್ಯ ನೆರವೇರುವಮಟ್ಟಿಗೆ ಸಫಲವಾಯಿತು. ಇದುವರೆಗೆ ಕೈಗೂಡಿ ಬಂದಿರುವ ಕಾರ್ಯವು ಮುಂದೆಯೂ ಹೀಗೆಯೇ ಹುಪ್ಪಿನಸರ ಎತ್ತಿದ ಹಾಗೆ ಜರುಗುವಂತೆ ತಕ್ಕ ಪ್ರಯತ್ನವನ್ನು ಮಾಡಬೇಕು. ಉಳಿದವರ ವಿಚಾರವನ್ನೆಲ್ಲಾ ಹೇಗಾದರೂ ನೋಡಿಕೊಳ್ಳಬಹುದು. ಒಂದು ಭೀತಿ ಮಾತ್ರ ಇಲ್ಲವೆಂದು ಹೇಳಲು ಆಗುವುದಿಲ್ಲ.

ಬಸಪ್ಪ—ಯಾರಿಗೂ ಅಸಾಧ್ಯವೆನಿಸುವ ಕೆಲಸಗಳೆಲ್ಲವನ್ನೂ ಇದುವರೆಗೆ ನಾವು ಸಾಧಿಸಿದೆವು. ಅಸ್ತಿಭಾರವೇನೋ ಚನ್ನಾಗಿಯೇ ನಿಂತಿತು. ಮನೆಯೂ ಕಟ್ಟಿ ಆಯಿತು. ಚಿತ್ರವನ್ನು ಬರೆಯಿಸುತಿದೇವೆ. ಆದರೆ ಸಾವಿರ ಚಿತ್ರವನ್ನೂ ಒಂದು ಮಸಿ ನುಂಗುವ ಹಾಗಿದೆಯಲ್ಲಾ.

ಲಚ್ಮನಿ—ಗುರಿಕಾರರೆ, ತಾವು ಯೋಚಿಸುವ ಸಂಗತಿ ಗೊತ್ತಾಯಿತು. ಆ ಮೂರು ನಾಮದ ಪರದೇಶಿಯಿಂದ ಏನಾದೀತು? ಆ ಸಿಪತಿ ಹಕ್ಕಿಯನ್ನು ನನ್ನ ಕಂಕುಳ ಸಂದಿಯಲ್ಲಿ ಸಿಕ್ಕಿಸಿಕೊಂಡು ಹೊಸಗಿಹಾಕಿಬಿಟ್ಟೇನು.

ಸಿದ್ದಯ್ಯ—ಮನುಷ್ಯ ಸಣ್ಣಗಿದ್ದರೇನು? ಆತನ ಶಕ್ತಿ ಬೇರೆ. ಬಿಳೀ ಕಾಗದದ ಮೇಲೆ ಕರೀ ಕಪ್ಪ ಹತ್ತಿಸುವವರ ಜೋಸ್ತಿ ಇಂಥಾದ್ದೇ ಎಂದು ಹೇಳಕೂಡದು.

ಮಧ್ವ—ಬರವಣಿಗೆ ಬಲ್ಲವರೆಲ್ಲರೂ ಕೆಟ್ಟವರೆ? ಹಾಗೆ ಹೇಳುವುದಕ್ಕಾಗದು. ಆ ಮನುಷ್ಯಯೇನೋ ಸಾಧಾರಣನಲ್ಲ.

ಲಚ್ಮನಿ—ಅದು ಹೇಗೆ ಹೇಳುತೀಯೆ?

ಮಧ್ವ—ಹೆಣ ತೆಗೆಯಿಸಿ ಪರೀಕ್ಷೆ ಮಾಡುವ ಕಾಲದಲ್ಲಿ ನಾನು ಇದ್ದೆ. ಆಗ ಅವನು ಒಂದು ವಿಷಗಣ ಪ್ರಯೋಗ ಮಾಡಿದ. ಈಗ ಅದಕ್ಕೆ ಯಾರೂ ಮನಸ್ಸು ಕೊಟ್ಟಿಲ್ಲ. ಕಡೆಗೆ

ನಮ್ಮ ಕಾರ್ಯಭಂಗವಾಗಬೇಕಾದರೆ ಅವನ ಬರವಣಿಗೆಯಿಂದಲೇ ಎಂದು ನಾನು ನಂಬಿದೇನೆ.

ಬಸಪ್ಪ—ನಾವು ಮಾಡಿರತಕ್ಕ ಕಾರ್ಯನಿರ್ವಾಹವನ್ನು ಕೆಡಿಸುವುದಕ್ಕೆ ಆ ಪಂಜೇವಾರ್ ಮನುಷ್ಯನ ಕೈಲೇನಾದೀತು? ಆದರೆ ಶತ್ರುಸಂಬಂಧವಾದ ಯಾವುದನ್ನೂ ಅಲ್ಪವಾದ್ದೆಂದು ನಾವು ತಿರಸ್ಕಾರ ಮಾಡಬಾರದು. ಯಾವ ಕಾಲಕ್ಕೆ ಹೇಗೆ ತಿರುಗುವುದೋ. ಅದೇನೋ ಹೊಟ್ಟೆಗೆ ಕಾಣದ ಬಡಕಲ ನಾಯಿ. ಹಳಸಿದ ಹಿಟ್ಟನ್ನು ಎಸೆದರೆ ಸುಮ್ಮನಾಗುವುದು.

ಮಧ್ವ—ಅದು ಹಿಟ್ಟಿಗೋಸ್ಕರ ಕಾದಿರುವ ನಾಯಿಯಲ್ಲ.

ಸಿದ್ದಯ್ಯ—ಹಾಗಿದ್ದರೆ ಉಪಾಯವಾಗಿ ಅದನ್ನು ಕಟ್ಟಿಹಾಕಬೇಕು. ಸರ್ಕಾರಿ ಅಧಿಕಾರ ಮಾಡಬೇಕೆಂದು ಅವನಿಗೆ ಆಶೆ ಇದೆಯಂತೆ. ಯಾವುದಾದರೂ ಒಂದು ಮುತ್ಸದ್ದಿ ಕೆಲಸಕ್ಕೆ ಸೇರಿಸಿಬಿಟ್ಟರೆ ನಾವು ಹೇಳಿದ ಹಾಗೆ ಕೇಳಿಕೊಂಡು ಬಿದ್ದಿರುತ್ತಾನೆ.

ಮಧ್ವ—ಹನುಮಂತರಾಯ ಬೇಕಾದ್ದ ಕೊಟ್ಟಿದ್ದಾನೆ. ಇಂಥಾ ಆಶೆಯಿಂದೆಲ್ಲಾ ಅವನು ನಮ್ಮ ಕೈಗೆ ಸಿಕ್ಕುವುದು ಕಷ್ಟ.

ಮಾದ—ಒಳ್ಳೇ ಮಾತಿನಿಂದ ಮೆಲ್ಲಗೆ ಅವನ ಸ್ನೇಹವನ್ನು ಬೆಳೆಯಿಸಿ ಕೈಕೊಡಬೇಕು. ಇವನು ಯಾರನ್ನು ಇಟ್ಟುಕೊಂಡಿದಾನೆ ಹೇಳು, ಅವಳ ಮೂಲಕ ಕೀಲು ತಿರುಗಿಸಿದರೆ ಕೆಲಸವಾಯಿತು.

ಮಧ್ವ—ಅವನು ಇದುವರೆಗೆ ಯಾರನ್ನೂ ಇಟ್ಟುಕೊಂಡವನಲ್ಲ; ಅಂಥಾ ತಂಟೆಯೇ ಇಲ್ಲ.

ಬಸಪ್ಪ—ಹಾಗಾದರೆ ಹೇಪನಾಗಿರಬೇಕು. ಇವನ ಹೆಂಡತಿಯ ಮೂಲಕ ಭೇದವನ್ನು ಮಾಡಿದರೋ?

ಮಧ್ವ—ಆಕೆ ಒಳ್ಳೇ ಪತಿವ್ರತೆ, ಅದೆಲ್ಲಾ ಅನುಕೂಲವಾದ ಮಾರ್ಗವಲ್ಲ.

ಬಸಪ್ಪ—ಯಾವುದಕ್ಕೂ ಬಗ್ಗದೇ ಹೋದರೆ ಏನು ಮಾಡ

ಬೇಕು? ಇಷ್ಟೆಲ್ಲಾ ಮಾಡಿ ಈ ಗುಂಗಾಣಿಗೆ ನಾವು ಭಯಪಡ ಬೇಕಾಗಿ ಬಂತಲ್ಲಾ.

ಮಾನು—ಲಚ್ಮನಿ ಹೇಳಿದ ಮಾತೇ ಸರಿಯಾಗಿದೆ. ಸಮಯ ನೋಡಿ ಒಂದು ಗಳಿಗೆಯಲ್ಲಿ ಮಾಡತಕ್ಕ ಕೆಲಸಕ್ಕೆ ಇಷ್ಟು ಯೋಚನೆ ಯಾಕೆ ಮಾಡಬೇಕು?

ಬಸಪ್ಪ—ಹಾಗೇ ಸರಿ ಕಣನೊ, ಮಾನು, ಲಚ್ಮನಿ, ನೀವು ಹೇಳುವ ಮಾರ್ಗವು ಸುಲಭವಾಗಿ ಆಗತಕ್ಕದ್ದು.

ಈ ಪರನು ನೀಚ ಮಹಾಸಭೆಯಲ್ಲಿ ಆದ ಮಂತ್ರಾಲೋಚನೆಯು ಈ ಸಿದ್ಧಾಂತಕ್ಕೆ ಇಳಿಯಿತು. ಅತ್ತ ಅಪ್ರಮೇಯನು ಯಜಮಾನನಾದ ಹನುಮಂತರಾವ್ ರಣನವರೆ ಎಲ್ಲಿದಾನೋ ಹುಡುಕಿ ಗೊತ್ತು ಮಾಡುವುದು ತನ್ನ ಮೊದಲ ಕೆಲಸವೆಂದು ಯೋಚಿಸಿ ಅದಕ್ಕೆ ತಕ್ಕ ಪ್ರಯತ್ನವನ್ನು ಮಾಡುತಿದಾನೆ. ಇವನು ಬೇಕೆಂದು ತಂತ್ರಮಾಡಿ ನಮ್ಮ ಮೊಕದ್ದಮೆ ಕೆಡುವ ಕೆಲಸಗಳನ್ನು ಮಾಡಿದರೆ ನಮ್ಮ ಮುಖ್ಯೋದ್ದೇಶವೇ ಇದರಿಂದ ಭಂಗವಾಗುವುದು. ಆಮೇಲೆ ಯಾರ ಯಾರ ತಲೆಗೆ ಬಂದೀತೋ ಗೊತ್ತಿಲ್ಲ. ಇದುವರೆಗೆ ನಡಿಸಿದ್ದೆಲ್ಲಾ ಹುವ್ವಿನ ಸರ ಎತ್ತಿದ ಹಾಗೆ ಸಾಗಿತು. ಈ ಒಬ್ಬ ಅಲ್ಪನಿಂದ ನಮಗೆಲ್ಲಾ ಅವಮಾನವಾದರೆ ನಾವು ಹುಟ್ಟಿ ಪ್ರಯೋಜನವೇನು? ನ್ಯಾಯವಾದ ಮಾತಿಗೆ ಒಡಂಬಡುವುದಿಲ್ಲ. ನಾವು ಕೇಳಿಕೊಂಡರೆ ಮಾರ್ಗಕ್ಕೆ ಬರುವುದಿಲ್ಲ. ಭೇದಿಸಿ ಏನಾದರೂ ಛದ್ಮನೆಮಾಡಿ ಕೈಗೆ ತೆಗೆದು ಕೊಳ್ಳೋಣವೆಂದರೆ ಅವನು ನಮ್ಮ ಬಲೆಗೆ ಬೀಳುವ ಹಾಗಿಲ್ಲ. ಆದ್ದರಿಂದ ಸಮಯ ನೋಡಿ ತುಕಡಿದಾರರು ಹೋದ ದಾರಿಗೆ ಮುನೀಬರನ್ನೂ ಕಳುಹಿಸುವುದು ಒಂದೇ ಸೂಕ್ತವಾದ ಮಾರ್ಗ— ಹೀಗೆಂದು ಎಲ್ಲರೂ ಸೇರಿ ಗೊತ್ತುಮಾಡಿಕೊಂಡರು.

ಇತ್ತ ಅಪ್ರಮೇಯನು ಯಜಮಾನನ ಮನೇ ಆಸ್ತಿಯೆಲ್ಲವನ್ನೂ ಅತ್ಯಂತ ರಹಸ್ಯವಾಗಿ ಸಾಗಿಸಿಕೊಂಡು ತನ್ನ ಹೆಂಡತಿ

ಮಗ ಇವರನ್ನೂ ಕರೆದುಕೊಂಡು ಹೋಗಿ ಗುಂಡಲಪೇಟೆಗೆ ತನ್ನ ಮನೆಗೆ ಸೇರಿಸಿದನು. ಇವನು ಇಷ್ಟು ಜಾಗ್ರತೆಯಾಗಿ ಮೈಸೂರನ್ನು ಬಿಡುತ್ತಾನೆಂದು ಹಿಂದೆ ಹೇಳಿದ ಮಹಾ ಸಭೆಯವರು ಯಾರೂ ಅರಿಯರು. ಯಾರಿಗೂ ತಿಳಿಯದ ಹಾಗೆ ಗುಟ್ಟಾಗಿಯೇ ಹೋಗಿ ತಲ ತಲಪಿದನು. ಅದುವರೆಗೆ ಇವನ ತಾಯಿ ಇವರ ಅಣ್ಣ ಎಲ್ಲರೂ ತೀರಿಹೋಗಿದ್ದರು. ಇವನ ಅತ್ತಿಗೆಯು ಮನೆಗೆ ಯಜಮಾನಿಯಾಗಿದ್ದಳು. ಬೇಕಾದಷ್ಟು ಭೂಸ್ಥಿತಿ ಇತ್ತು. ಅದೆಲ್ಲವನ್ನೂ ರಕ್ಷಿಸುವುದಕ್ಕೇ ತನ್ನ ಮಗನನ್ನು ನಿಲ್ಲಿಸಿದನು. ಈ ಹುಡುಗನಿಗೆ ಇಪ್ಪತ್ತೆರಡು ವರುಷ ವಯಸ್ಸಾಗಿತ್ತು. ಇವನಿಗೆ ಭೂಮಿಕಾಣಿ ಮೊದಲಾದ್ದನ್ನು ನೋಡಿಕೊಂಡು ಗೃಹಕೃತ್ಯವನ್ನು ಸ್ವತಂತ್ರವಾಗಿ ನೋಡಿಕೊಳ್ಳುವ ಯೋಗ್ಯತೆ ಇತ್ತು. ಎಲ್ಲಾ ಸ್ವಂತ ಆಡಳತವನ್ನೂ ಮಗನ ವಶಕ್ಕೂ ಅತ್ತಿಗೇ ವಶಕ್ಕೂ ಬಿಟ್ಟು ಅಪ್ರಮೇಯ ತನ್ನ ಮುಂದಿನ ಕೆಲಸಕ್ಕೆ ಹೊರಟನು.

## ೧೩ ನೇ ಅಧ್ಯಾಯ

# ಅಪ್ರಮೇಯನ ಪ್ರಯಾಣ

ಅಪ್ರಮೇಯನಿಗೆ ತನ್ನ ಯಜಮಾನನಾದ ಹನುಮಂತರಾಯನನ್ನು ಹುಡುಕುವುದು ಮುಖ್ಯವಾದ ಕಾರ್ಯವಾಗಿತ್ತು. ಮೊದಲು ರಜಪೂತ ಘಾಟಿನ ಕಂದಕದಲ್ಲಿ ಸಿಕ್ಕಿದ ಹೆಣ ಯಜಮಾನನದಲ್ಲವೆಂದು ಮನಸ್ಸಿಗೆ ದೃಢಮಾಡಿಕೊಂಡನು. ಆದರೆ ತನಗಿರುವ ಇತರ ಸಂಶಯವೆಲ್ಲಾ ಪರಿಚ್ಛೇದವಾಗಬೇಕಾದರೆ ಹನುಮಂತರಾಯ ಏನಾದ, ಎಲ್ಲಿದಾನೆ ಎಂಬುವುದನ್ನು ಗೊತ್ತುಮಾಡಲೇಬೇಕೆಂದು ನಿಷ್ಕರ್ಷೆ ಮಾಡಿಕೊಂಡನು.

ಆತ ಹೋದ ರೀತಿಯೂ ಸ್ಥಳವೂ ಇಂಥಾದ್ದೆಂದು ತಿಳಿಯ

ಲಿಲ್ಲ. ಅದನ್ನು ಅರಿಯುವ ಬಗೆ ಹೇಗೆ? ಇಷ್ಟೊಂದು ಗಲಭೆ ಯಾದಮೇಲೆ ಇನ್ನು ಈ ಸೀಮೆಯಲ್ಲಿದ್ದರೆ ಮಾನ ಉಳಿಯುವು ದಿಲ್ಲವೆಂದು ಖಂಡಿತವಾಗಿಯೂ ತೋರುವುದು. ತನ್ನ ಹೆಂಡತಿ ಮಕ್ಕಳು ಹೋಗಿರುವ ಸಾತಾರೆ ಪ್ರಾಂತಕ್ಕೆ ತೆರಳಿರಬಹುದೆ? ಮೊದಲು ಆ ಕಡೆಗೆ ಹೋಗಿ ನೋಡೋಣ. ತರುವಾಯ ಮುಂದಿನ ಮಾತನ್ನು ಯೋಚಿಸೋಣ. ಆತನು ಈ ಮಹಾ ಗಲಭೆಯಲ್ಲಿ ಅಲ್ಲಿಗೆ ಹೋಗಲು ವಿಶೇಷವಾಗಿ ಜನಸಂಚಾರದ ಮಾರ್ಗವನ್ನು ಹಿಡಿಯಲಾರ. ಗಟ್ಟ ಬೆಟ್ಟದ ಕಾಡುದಾರಿ ಯನ್ನೇ ಹಿಡಿದಿರಬಹುದು, ಎಂದು ಮನಸ್ಸಿನಲ್ಲಿ ನಿಷ್ಕರ್ಷೆಮಾಡಿ ಕೊಂಡು ಪ್ರಯಾಣಕ್ಕೆ ಗುಟ್ಟಾಗಿ ಸಿದ್ಧಮಾಡಿಕೊಂಡನು.

ಇವನು ಮತದಲ್ಲಿ ಶ್ರೀ ವೈಷ್ಣವ. ತಾನು ಸಂಚರಿಸಿಕೊಂಡು ಹೋಗಬೇಕೆಂದಿರುವ ಪ್ರಾಂತವು ಮರಾಟಿದೇಶದ ಸೆರಗು. ಆಕಡೆ ಶ್ರೀವೈಷ್ಣವರು ಇಲ್ಲವೇ ಇಲ್ಲ. ಮೂರು ನಾಮವನ್ನು ಹಾಕಿಕೊಂಡು ಹೋದರೆ, ಯಾರೋ ಹೊಸ ಮನುಷ್ಯ ದೇಶಾಂತರ ದಿಂದ ಬಂದಿದಾನೆಂದು ಅನುಮಾನ ತೋರಬಹುದು. ತನ್ನ ಉದ್ದೇಶ ನೆರವೇರುವುದು ಕಷ್ಟವಾದೀತು ಎಂದು ಯೋಚಿಸಿ ಸ್ಮಾರ್ತ ವೈದಿಕವೇಷವನ್ನು ತಾಳಿದನು. ಅದಕ್ಕೆ ಬೇಕಾದ ಧಾವಳಿ, ಮಡಿಚೀಲ, ವಿಭೂತಿ ಸಣ್ಣಚೀಲ, ಪಂಚಪಾತ್ರೆ, ಉದ್ಧ ರಣೆ, ಕೃಷ್ಣಾಜಿನ, ಜಪಾಸನ, ಮೂರುನಾಲ್ಕು ರುದ್ರಾಕ್ಷಸರ ಗಳು, ಸ್ಫಟಿಕದ ಜಪಸರ, ಪ್ರತಿದಿನವೂ ಮಾಡಬೇಕಾದ ಪಾರ್ಥಿವ ಪೂಜೆ ಸಲಕರಣಗಳು, ಇವುಗಳೆಲ್ಲವೂ ಅನುಕೂಲವಾದವು.

ಯಾರೂ ಕಾಣದ ಹಾಗೆ ಪಶ್ಚಿಮ ದಿಕ್ಕಿಗೆ ಪ್ರಯಾಣಮಾಡಿ ಜನಸಂಚಾರವಿರುವ ಸುಪಥವಾದ ಮಾರ್ಗವನ್ನು ಬಿಟ್ಟು ಶುದ್ಧ ವಾಗಿ ಕಾಡುಬಿದ್ದು ನಡಕೊಂಡು ಹೋಗುವಾಗ ಅನೇಕ ಹರಿ ದಾರಿ ಹೋದ ಮೇಲೆ ದೂರದೂರವಾಗಿ ಸಿಕ್ಕುತಿದ್ದ ಒಂದೊಂದು ಹಳ್ಳಿಗಳಲ್ಲಿ ತಂಗುತಿದ್ದನು. ಅಲ್ಲಿ ಇವನು ಸ್ನಾನಮಾಡಿ ಹಾಕಿ

ಕೊಳ್ಳುತಾ ಇದ್ದ ವಿಭೂತಿ ಕಟ್ಟು, ರುದ್ರಾಕ್ಷಿ ಮಾಲೆಗಳೂ, ಧ್ಯಾನಾಸಕ್ತನಾಗಿ ಕಣ್ಣುಗಳನ್ನು ಅರೆಯಾಗಿ ಮುಚ್ಚಿ ಮಾಡುತಾ ಇದ್ದ ಜಪ, ಶಿವಪೂಜಾ ಕ್ರಮ, ಸ್ಪಷ್ಟವಾಗಿ ಅಪ್ರಮೇಯ ಹೇಳುತಾ ಇದ್ದ ಮಂತ್ರ ಸ್ತೋತ್ರಾದಿಗಳ ವೈಖರಿ ಇದೆಲ್ಲಾ ಅಲ್ಲಲ್ಲಿ ಜನರಿಗೆ ಭಕ್ತಿ ವಿಶ್ವಾಸಗಳನ್ನು ಹುಟ್ಟಿಸುತಾ ಬಂದ ಕಾರಣ, ಕೆಲವರು ದೂರವಾಗಿ ನಿಂತು ಕೈಮುಗಿಯುವುದು, ಕೆಲವರು ಸಮೀಪಕ್ಕೆ ಬಂದು ತೀರ್ಥ ಪ್ರಸಾದಗಳನ್ನು ತೆಗೆದು ಕೊಳ್ಳುವುದು, ಮತ್ತೆ ಪ್ರಶ್ನೆ ಕೇಳುವುದು, ರೋಗಿಷ್ಟರಿಗೆ ಕೈಕರ ಣದ ಔಷಧಗಳನ್ನು ಕೇಳಿ ತಿಳಿದುಕೊಳ್ಳುವುದು, ಉಪ್ಪನ್ನೂ ವಿಭೂತಿಯನ್ನೂ ಮಂತ್ರಿಸಿಕೊಂಡು ತೆಗೆದುಕೊಂಡು ಹೋಗು ವುದು, ಇದೆಲ್ಲಾ ಜರುಗಲು ಮೊದಲಾಯಿತು. ಗುಣವಾದ ರೋಗಿಗಳ ಬಾಯಲ್ಲಿ ಇವನ ಶ್ಲಾಘನೆಯೂ ಹೆಚ್ಚಿತು. ಜನರು ಈ ದೀಕ್ಷಿತರಿಗೆ ವಿಶೇಷವಾಗಿ ಗೌರವವನ್ನು ತೋರಿಸುತಾ ಬಂದರು. ಹನುಮಂತರಾಯನ ಸಮಾಚಾರ ಗೊತ್ತಾಗುವು ದಕ್ಕೆ ಇದೆಲ್ಲಾ ಬೇಕು.

ಮೊದಲು ಯುದ್ಧ ಮುಂತಾದ್ದು ಇಂಗ್ಲಿಷರಿಗೂ ಮರಾಟೆಯ ವರಿಗೂ ಜರುಗುತಾ ಇದ್ದಾಗ ಆತನು ಪೂರ್ವದಲ್ಲಿ ಯಾವ ಯಾವ ಸೀಮೆಗಳ ಮೇಲೆ ಸಂಚಾರ ಮಾಡುತಿದ್ದನೋ ಅಂಥಾ ಪ್ರದೇಶ ಗಳಿಗೆ ಸಮೀಪ ಸಮೀಪವಾಗಿ ಹೋಗುತಾ ವಿಚಾರ ಮಾಡುತಾ ಇದ್ದ ಅಪ್ರಮೇಯನಿಗೆ ಏನೂ ಗೊತ್ತಾಗದೆ ಸಾಕಾಯಿತು. ಆದರೂ ಏನೇನು ಸಂಭವಿಸಿದರೂ ಎಲ್ಲವನ್ನೂ ಸಹಿಸಿಕೊಂಡು ತನ್ನ ಮುಖ್ಯವಾದ ಕಾರ್ಯ ಸಾಧನೆಯ ಮೇಲೆಯೇ ದೃಷ್ಟಿ ಇಟ್ಟು ಕೊಂಡಿರುವಂಥಾ ಸಹನ ಗುಣವು ಅಪ್ರಮೇಯನಲ್ಲಿ ಬೇಕಾದ ಷ್ಟಿತ್ತು. ಮುಂದಕ್ಕೆ ಏನು ಜರುಗಿತೋ ನೋಡೋಣ.

## ೧೪ನೇ ಅಧ್ಯಾಯ

# ಆತ್ಮಾರಾಂ ಬಾವಾಜಿ

ಮುಖ್ಯವಾಗಿ ತನ್ನ ಯಜಮಾನ ಸಿಕ್ಕಬೇಕು, ಅವನಿಗೆ ಕ್ಷೇಮವಾಗಬೇಕು ಎಂಬುವುದರಲ್ಲಿಯೇ ಗಮನವಿಟ್ಟು ಮುಂದು ಮುಂದಕ್ಕೆ ಹೋಗುತಾ ಅಪ್ರಮೇಯನು ಉತ್ತರಕ್ಕೆ ತಿರುಗಿದನು. ಹನುಮಂತರಾವ್ ರಣನವರೆಯು ಮರಾಟಿಯವನಾದ್ದರಿಂದ ಆತನು ತನ್ನ ಜಾತಿ ಜನರಿದ್ದ ಊರಿಗೆ ಹೋಗಿ ಇಳಿಯತಕ್ಕ ಸಂಭವವುಂಟಲ್ಲವೆ? ಆದಕಾರಣ ಅಪ್ರಮೇಯನು ಮಿರಜಿ, ಕೊಲ್ಲಾಪುರ ಮೊದಲಾದ ಪ್ರಾಂತಗಳಿಗೆ ಹೋದನು. ಮಾರ್ಗಾಯಾಸ ಬಹಳವಾಯಿತು, ಅನ್ನ ನೀರಿಲ್ಲದೆ ಕೆಲವು ಕಡೆ ಶ್ರಮಪಟ್ಟನು. ಅಲ್ಲಲ್ಲಿ ಜ್ವರದಿಂದ ಕೆಲವು ದಿವಸ, ಆಮಶಂಕೆಯಿಂದ ಕೆಲವು ದಿವಸ ಬಾಧೆಯನ್ನನುಭವಿಸಲೂ ಅನುಭವಿಸಿದನು. ಹೀಗೆಯೇ ಮುಂದಕ್ಕೆ ಹೋಗುತಾ ಮರಾಟಿಯವರ ಮೇಲೆ ಇಂಗ್ಲಿಷರಕಡೆ ಸೇರಿಕೊಂಡು ಮೈಸೂರಿನ ದಂಡು ಎಲ್ಲೆಲ್ಲಿ ಯುದ್ಧ ಮಾಡಿತೋ ಅಲ್ಲೆಲ್ಲಾ ಹುಡುಕಿಕೊಂಡು ಪುನಃ ವಿಚಾರ ಮಾಡುತಾ ಹೋದನು. ಒಂದು ಗ್ರಾಮದಲ್ಲಿ ಮಾತ್ರ ಒಬ್ಬ ಮುದುಕನು—ನಾನು ಹನುಮಂತರಾವ್ ರಣನವರೆಯನ್ನು ಬಲ್ಲೆ. ಆತ ದೊಡ್ಡ ಸರದಾರ. ಈ ಸೀಮೆಯಲ್ಲಿ ಆತನನ್ನು ಕಂಡವರೂ ಆತನ ಕೈಕೆಳಗೆ ಚಾಕರೀ ಮಾಡಿದವರೂ ಸಹಾ ಇದಾರೆ. ಆದರೆ ಆತನು ಈಚೆಗೆ ಇಲ್ಲಿಗೆ ಬಂದ ಸಂಗತಿ ನನಗೆ ಗೊತ್ತಾಗಲಿಲ್ಲ; ಈ ಪ್ರಾಂತದಲ್ಲಿ ಆತ್ಮಾರಾಂಬಾವಾಜಿ ಎಂಬ ಒಬ್ಬ ಮಹಾಪುರುಷರಿದಾರೆ, ಅವರಿಗೂ ಹನುಮಂತರಾಯರಿಗೂ ಕೇವಲ ಪರಿಚಯ ಉಂಟು, ಆತ ಎಲ್ಲಿದಾರೆಯೊ ಗೊತ್ತಿಲ್ಲ, ಅವರಿರುವಕಡೆ ನೀನು ಗೊತ್ತುಮಾಡಿಕೊಂಡು ಹೋಗಿ ಕೇಳಿದರೆ ಏನಾದರೂ ತಿಳಿದರೂ ತಿಳಿಯಬಹುದು, ಎಂದು ಸ್ವಲ್ಪ ಮಂಜು ಮಂಜಾದ

ಸೂಚನೆಯನ್ನು ಕೊಟ್ಟನು. ಆತ್ಮಾರಾಂಬಾವಾಜಿಯ ಗುರುತುಗಳನ್ನೇ ಕೇಳಿ ತಿಳಿದುಕೊಂಡು ಅಪ್ರಮೇಯನು ಮುಂದಕ್ಕೆ ಹೊರಟನು. ಆತನು ಇರುವ ಸ್ಥಳವೇ ಗೊತ್ತಿಲ್ಲದಿರುವಾಗ ಹುಡುಕುವುದು ಎಲ್ಲಿ? ಹನುಮಂತರಾಯ ಹೋಗಿರುವಕಡೆ ಗೊತ್ತುಮಾಡುವುದಕ್ಕಾಗಿ ಬಾವಾಜಿ ಇರುವಕಡೆ ಗೊತ್ತುಮಾಡಬೇಕಾಗಿ ಬಂತು. ಇದು ಎಲ್ಲಿಯ ಕೆಲಸ? ಶ್ರಮ ಒಂದಕ್ಕೆ ಎರಡಾಯಿತು.

ಅಪ್ರಮೇಯನು ಆದ್ದೆಲ್ಲಾ ಆಗಲಿ ಎಂದು ಮುಂದಕ್ಕೆ ಹೊರಟನು. ಎಲ್ಲಿಗೆ ಹೋಗುವುದು ? ಊರಿಗೆ ಹೋಗಲು ರಸ್ತೆಯೂ ಇಲ್ಲ, ಕೈ ಮರವೂ ಇಲ್ಲ, ದಾರಿ ತೋರಿಸುವುದಕ್ಕೆ ಜನಸಂಚಾರವೇ ಇಲ್ಲ. ಕಾಲುದಾರಿಯೇ ದಾರಿ. ಅದೂಕೂಡ ಒಂದು ಕಾಡಿಗೋ ಗುಡ್ಡಕ್ಕೋ ಹೋಗುವುದು. ಮುಂದಕ್ಕೆ ಅದೂ ಇಲ್ಲ. ಆ ಕನ್ನಪ್ಪನ ಕಾಡಿನಲ್ಲಿ; ನೀನೇ ಎಂದು ಕೇಳುವವರೇ ಇಲ್ಲ. ಕಾಡಮೃಗಗಳ ಕೂಗು, ಕಾಡಹಕ್ಕಿಗಳ ಕೂಗು, ಇಷ್ಟು ಹೊರತು ನೀನು ಯಾವದೇವರ ಒಕ್ಕಲು ಎಂದು ವಿಚಾರಿಸುವ ಪ್ರಾಣಿಯೇ ಇಲ್ಲ. ಹಿಂದಕ್ಕೆ ತಿರುಗಿ ಹೋಗೋಣವೆಂದರೆ ಬಂದ ದಾರಿಯ ಗುರುತೂ ಸಿಕ್ಕದೇಹೋಯಿತು. ಆಹಾರವಿಲ್ಲ, ನಿದ್ರೆ ಇಲ್ಲ, ಎರಡು ದಿನವೂ ಮಧ್ಯಾಹ್ನ ದಾರೀನಡೆದದ್ದಾಯಿತು. ದೂರದಲ್ಲಿಯಾದರೂ ಒಂದು ಗ್ರಾಮ ಇರುವ ಸೂಚನೆಯೂ ಇಲ್ಲ. ಹೀಗಿರುವಲ್ಲಿ ಒಂದು ಬೆಟ್ಟದಸಾಲು ಸಿಕ್ಕಿತು. ಅದರ ಪಕ್ಕದಲ್ಲಿ ಒಂದು ಸಣ್ಣ ಹಳ್ಳ ಹರಿಯುತಿತ್ತು. ಆ ನೀರು ಬೆಟ್ಟದ ಮೇಲಿನಿಂದ ಬಂದು ಒಂದು ಕಲ್ಲುಪೊಟರೆಯೊಳಕ್ಕೆ ಬಿದ್ದು ಮುಂದಕ್ಕೆ ನೀರೇ ಕಾಣಿಸದೆ ಹೋಯಿತು. ಇನ್ನೂರು ಹೆಜ್ಜೆ ಹೋದ ತರುವಾಯ ಒಂದು ದೊಡ್ಡ ಹಾಸರೆ ಸಿಕ್ಕಿತು. ಆ ಬಂಡೆಯ ಮಧ್ಯೆ ನೀರಿನಿಂದ ಕೊರೆದು ಹೋದ ಹಾಗೆ ಒಂದು ಗುಂಡಿ ಇತ್ತು. ಅದರಲ್ಲಿ ನೀರು ತುಂಬಿಯೇ ಇರುತಾ ಕೆಳಗಡೆ

ಯಿಂದ ಉಕ್ಕಿ ಮೇಲಕ್ಕೆ ಕಾರಂಜಿಯಹಾಗೆ ಹಾರುತಾ ಇತ್ತು. ಇದರಿಂದ ಆ ದೊಣೆಯಲ್ಲಿ ಮೇಲುಗಡೆ ಎಷ್ಟು ಕಶ್ಮಲ ಬಂದು ಬಿದ್ದಾಗ್ಯೂ ಅದೆಲ್ಲಾ ಆಚೆಗೆ ಚಿಲ ಚಿಲನೆ ಹರಿದುಹೋಗಿ ಉದಕವು ಬಹು ತಿಳಿಯಾಗಿರುತಿತ್ತು. ಅಲ್ಲಿ ನೀರು ಎದೆಯುದ್ದಕ್ಕಿಂತ ಹೆಚ್ಚಾಗಿರಲಿಲ್ಲ. ಅದನ್ನು ಕಂಡು ಅಪ್ರಮೇಯನಿಗೆ ಪಂಚಪ್ರಾಣವೂ ಎದ್ದು ಬಂದಹಾಗಾಯಿತು. ಅದರ ಪಕ್ಕದಲ್ಲಿಯೇ ಇಪ್ಪತ್ತಡಿ ಎತ್ತರದಲ್ಲಿ ಒಂದು ಮಂಟಪವೂ ಅದರ ಮಧ್ಯೆ ಪ್ರತಿಷ್ಠೆ ಮಾಡಿದ್ದ ಒಂದು ಆಂಜನೇಯ ವಿಗ್ರಹವೂ ಕಾಣಿಸಿತು. ಕೂಡಲೆ ಅಪ್ರಮೇಯನು ತನ್ನ ಗಂಟನ್ನು ಅಲ್ಲಿರಿಸಿ ಆ ದೊಣೆಯಲ್ಲಿ ಚೊಕ್ಕಟವಾಗಿ ಸ್ನಾನವನ್ನು ಮಾಡಿ ಆಹ್ನಿಕವನ್ನು ಮಾಡಿಕೊಂಡು ನಿಂತುಕೊಂಡನು. ಅರ್ಧ ಆಯಾಸ ಪರಿಹಾರವಾದಂತಾಯಿತು. ಸುತ್ತ ಮುತ್ತಲೂ ಬೇಕಾದಂಥಾ ಹೂವಿನಗಿಡಗಳು ಕಂಡವು. ಪಕ್ಕದಲ್ಲಿ ಒಂದೇ ಜಾತಿ ಗಿಡಗಳುಳ್ಳ ಒಂದು ವನ ಕಂಡಿತು. ಆ ಗಿಡಗಳ ತುಂಬ ಬೆಳ್ಳಗೆ ಎಳೇ ಸವತೇ ಕಾಯಿನ ಹಾಗೆ ಇರತಕ್ಕ ಒಂದು ಬಗೆ ಉದ್ದುದ್ದವಾದ ಕಾಯಿ ಕಂಡಿತು. ಅದು ಆ ಗಿಡಗಳಲ್ಲಿ ಎಲೆಗೆ ಒಂದು ಕಾಯಿನಂತೆ ಬಿಟ್ಟಿತ್ತು. ಆದರಲ್ಲಿ ೨-೩ ಕಾಯಿಗಳನ್ನು ಮುರಿದು ಕಲ್ಲಲ್ಲಿ ಜಜ್ಜಿಕೊಂಡು ತಿನ್ನಲು ಆರಂಭಿಸಿದನು. ಅದು ಸಕ್ಕರೆಗಿಂತಲೂ ಸೀಯಾಗಿತ್ತು. ಅವೆಲ್ಲವನ್ನೂ ಹೊಟ್ಟೆತುಂಬಾ ತಿಂದು ಮುಗಿಸಿದನು. ಅದನ್ನು ತಿನ್ನುತಾ ಬಂದಹಾಗೆಲ್ಲಾ ಏನೋ ಒಂದು ವಿಧವಾದ ಉನ್ಮತ್ತು ದೇಹದಲ್ಲಿ ಹೆಚ್ಚಾದ ಹಾಗೆ ತೋರಿತು. ಇದು ಆ ಕಾಯಿನ ಗುಣವೋ ಅಥವಾ ೨-೩ ದಿವಸ ಅನ್ನವಿಲ್ಲವೆ ಹಸಿದು ಹಸಿದು ತುಂಬಾ ಆಯಾಸ ಪಟ್ಟು ಇರುವಾಗ ಈ ಕಾಯನ್ನು ತಿಂದಕಾರಣ ಅದರ ರುಚಿ ಒಂದಕ್ಕೆ ನಾಲ್ಕಾಗಿ ಕಾಣಿಸಿತೋ ತಿಳಿಯದು. ಹೇಗಾದರೂ ಆಗಲಿ, ಅಪ್ರಮೇಯನು ಪರಮಾತ್ಮನನ್ನು ತೃಪ್ತಿಮಾಡಿ ಆ ಮಂಟಪದಲ್ಲಿ ಮಲಗಿಕೊಂಡನು. ಗಾಢ

ನಿದ್ರೆ ಬಂತು. ಮೂರನೇ ದಿನ ಬೆಳಗ್ಗೆ ಎದ್ದು ನೋಡುವಾಗ ಆ ಮಂಟಪವು ಒಂದು ಆಂಜನೇಯನ ಗುಡಿಯಾಗಿತ್ತು.

ಇವನು ಎದ್ದು ಸ್ನಾನವನ್ನು ಮಾಡಿ ನಿರ್ಮಲಚಿತ್ತನಾಗಿ ಆಹ್ನಿಕವನ್ನು ಮುಗಿಸಿಕೊಂಡು ಆ ದೇವರಿಗೆ ಅಭಿಷೇಕವನ್ನು ಮಾಡಿ ಅಲ್ಲಿದ್ದ ಉತ್ತಮವಾದ ಹೂಗಳಿಂದ ಪೂಜೆ ಮಾಡಿ ಯಥಾಪ್ರಕಾರದ ಫಲವನ್ನು ನಿವೇದನ ಮಾಡಿ ತಾನು ತಿಂದು ಅಲ್ಲಿ ಕೂತು ನಿಂತು ಬಹು ಆನಂದವಾಗಿ ಅಲ್ಲೆಲ್ಲಾ ಓಡಿಯಾಡು ತಿರುವಾಗ, ಆ ಸರೋವರದ ಸಮೀಪದಲ್ಲಿ ಮನುಷ್ಯರ ಉದ್ದ ವಾದ ಹೆಜ್ಜೆ ಗುರುತುಗಳು ಕಂಡವು. ಅದು ತನ್ನ ಹೆಜ್ಜೆಯಲ್ಲ, ಇನ್ನೂ ಹೆಚ್ಚಾಗಿ ಉದ್ದವಾಗಿಯೂ ಅಗಲವಾಗಿಯೂ ಇತ್ತು. ಹೊಸ ಗುರುತಾಗಿಯೂ ಇತ್ತು. ಆ ನಿರ್ಮಾನುಷ ಪ್ರದೇಶದಲ್ಲಿ ಈ ಗುರುತು ಎಲ್ಲಿಯದು? ಹೇಗೆ ಹೇಳುವುದು? ಸುತ್ತಲೂ ನೋಡಿದನು, ಏನೂ ಕಾಣಲಿಲ್ಲ. ಬರುತಾ ಬರುತಾ ಆ ಗುರುತು ಚೆನ್ನಾಗಿಲ್ಲದೆ ಮಸಣಿಸಿದಂತೆ ಕಾಣಬಂತು. ಪರೀಕ್ಷಿಸುತ ಬಂದ ಹಾಗೆಲ್ಲಾ ಅದು ದೇವರ ಹಿಂಭಾಗಕ್ಕೆ ಹೋಯಿತು. ಅಲ್ಲಿ ಒಬ್ಬ ಮನುಷ್ಯ ಕೂತುಕೊಂಡು ಹೋಗುವ ಹಾಗೆ ಸಂದು ಅತ್ಯಂತ ಕಿರಿದಾಗಿತ್ತು. ಅಂಧಕಾರ ಬಹುವಾಗಿತ್ತು. ಸ್ವಲ್ಪ ದೂರ ಹೋದನು. ಒಂದೊಂದು ಕಡೆ ಆ ಪಕ್ಕ ಈ ಪಕ್ಕದಲ್ಲಿ ಒಬ್ಬ ಮನುಷ್ಯ ಕೂತುಕೊಳ್ಳುವಹಾಗೆ ಒಂದೊಂದು ಜಗಲಿ ಸಿಕ್ಕುತಾ ಬಂತು. ಒಳಗೆ ಮನುಷ್ಯನ ಕೈವಾಡ ಕಾಣುತಾ ಬಂತು. ಅನು ಮಾನ ಹೆಚ್ಚಾಯಿತು. ಇದನ್ನು ಪರೀಕ್ಷಿಸಿ ನೋಡಬೇಬೇಕೆಂದು ಹೊರಟನು. ಎಷ್ಟು ದೂರ ಹೋದರೂ ಕೊನೆಗಾಣಲಿಲ್ಲ. ತಣ್ಣಗೆ ಗಾಳಿ ಬೀಸುತಾ ಬಂತು. ಆ ಮೇಲೆ ನೀರು ಬೀಳುವ ಸದ್ದು ಕೇಳುತಾ ಬಂತು. ಹೋಗುತಾ ಸದ್ದು ಹೆಚ್ಚಾಯಿತು. ದೂರದಲ್ಲಿ ಸ್ವಲ್ಪ ಬೆಳಕುಕಂಡಿತು. ಮುಂದೆ ಮುಂದೆ ತೆವಣಿ ಕೊಂಡು ಹೋದಕೂಡಲೆ ಬೆಳಕು ಹೆಚ್ಚಾಯಿತು. ಗಮುಗಮನೆ

ಸುವಾಸನೆ ಬಂತು. ಬಹು ಆನಂದವಾಗಿತ್ತು. ಆಗ ೧೦–೧೫ ಹೆಜ್ಜೆ ಹೋದಕೂಡಲೆ ಅತ್ಯಾಶ್ಚರ್ಯಕರವಾದ ನೋಟ ಸಿಕ್ಕಿತು.

ಸುಮಾರು ೬೦ ಮಾರು ಉದ್ದ, ೬೦ ಮಾರು ಅಗಲ ಇರುವ ಒಂದು ಗುಂಡಾದ ಆವರಣ. ಅದರ ಸುತ್ತಲೂ ಸುಮಾರು ಹತ್ತು ಮಾರು ಎತ್ತರ ಇರುವ ಒಂದೇ ಬಂಡೆಯಲ್ಲಿ ಕತ್ತರಿಸಿ ಮಾಡಿದ ಕಲ್ಲಗೋಡೆ. ಅದರ ಸುತ್ತಲೂ ಅದಕ್ಕೆ ಅಂಟಿದಹಾಗೆ ಸುಮಾರು ಹತ್ತು ಮೊಳ ಎತ್ತರದ ಕಂಬಸಾಲು ಉಳ್ಳ ಕೈಸಾಲೆ, ಪ್ರತಿ ಕಂಬದ ಮೇಲೂ ವಿಚಿತ್ರವಾಗಿ ಕೆತ್ತಿದ ವಿಗ್ರಹದ ಚಿತ್ರ. ಅದರ ಮುಂದುಗಡೆ ಎರಡು ಮಾರಿಗೆ ಒಂದರಂತೆ ಅಂಥಾ ಕೆತ್ತನೆ ಕೆಲಸದ ಕಂಬಗಳು. ಹಾಗೆ ಮಾಡಿದ ಪ್ರತಿ ಅಂಕಣದ ವಿಸ್ತಾರವು ಎರಡು ಮಾರು ಉದ್ದ, ಎರಡು ಮಾರು ಅಗಲ, ಪ್ರತಿ ಅಂಕಣದ ನಡುವೆ ಅಮೃತ ಶಿಲೆಯ ಪಾಣಿವಟ್ಟಲುಳ್ಳ ಸ್ಫಟಿಕದ ಲಿಂಗ. ಆ ಪ್ರತಿಲಿಂಗದ ಶಿರಸ್ಸಿನ ಮೇಲೆ ಸರಿಯಾಗಿ ಬಂಡೇ ಚಾವಣಿಯಲ್ಲಿದ್ದ ಸಣ್ಣ ಸಣ್ಣ ರಂಧ್ರಗಳಿಂದ ಚೀರಕೊಳವಿಯಿಂದ ಬಂದ ಹಾಗೆ ಉಕ್ಕಿ ಬಂದು ಸಂತತವಾಗಿ ಬೀಳುತ್ತಿರುವ ಜಲ ಧಾರೆ. ಇದೆಲ್ಲಾ ಕಾಣಿಸಿತು. ಆ ಅಂಕಣಗಳ ಮುಂದುಗಡೆ ತೋರಣದ ಹಾಗೆ ಬೆಳೆದಿದ್ದ ಬಳ್ಳಿ, ಆ ಬಳ್ಳಿ ಕುಡಿಗಳಲ್ಲಿ ಬೆಳ್ಳಗೆ ಇದ್ದು ಆ ಪ್ರತಿಲಿಂಗದ ತಲೆಯಮೇಲೂ ಜೋಲಾಡುವ ಮನೋಹರವಾದ ಸುವಾಸನೆಯುಳ್ಳ ಹುವ್ವಿನ ಗೊಂಚಲು, ಇದೆಲ್ಲಾ ಕಾಣಿಸಿತು. ಅಭಿಷೇಕವಾದ ತೀರ್ಥವು ಮಧ್ಯೆ ತೊಟ್ಟಿಯ ಹಾಗೆ ಇರುವ ಗುಂಡಿಗೆ ಬರುತಿತ್ತು. ಈ ಕೈಸಾಲೆಯಿಂದ ನಾಲ್ಕು ಕಡೆಯೂ ಮೂರು ಮೆಟ್ಟಲು ಉಳ್ಳ ಸೋಪಾನವಿತ್ತು. ಅದರ ಕೆಳಗೆ ಸುತ್ತಲೂ ಪ್ರತಿಯೊಂದು ಅಂಕಣದ ಕೆಳಗೂ ಕಾಲು ಅಂಕಣದ ಅಗಲಕ್ಕೆ ಒಂದೊಂದು ಗುಂಡ ಕಮಾನಿನ ಗೂಡು ಇತ್ತು. ಒಂದು ಬಿಟ್ಟು ಒಂದು ಗೂಡಿನಲ್ಲಿ ಈಶ್ವರನ ಇಪ್ಪತ್ತೈದು ಲೀಲಾಮೂರ್ತಿಗಳು, ವಿಷ್ಣುವಿನ ದಶಾವತಾರ

ಮೂರ್ತಿಗಳು ಇವೇ ಮೊದಲಾದ ಪ್ರತಿಮೆಗಳನ್ನು ಅಮೃತಶಿಲೆಯಲ್ಲಿ ಮಾಡಿ ಪ್ರತಿಷ್ಠೆ ಮಾಡಿದ್ದರು. ಆ ಗೂಡುಗಳ ಮುಂದುಗಡೆ ಆವರಣವು ಅಗಲವಾದ ಮೆಟ್ಟಲಾಗಿತ್ತು. ಅದರ ಕೆಳಗೆ ಸುತ್ತಲೂ ಸೋಪಾನ ಕಟ್ಟಿತ್ತು. ಆ ಸೋಪಾನದ ಒಂದು ಮೆಟ್ಟಲು ಬಿಳೀ ಶಿಲೆಯಲ್ಲಿಯೂ ಇನ್ನೊಂದು ಕೆಂಪು ಶಿಲೆಯಲ್ಲಿಯೂ, ಮತ್ತೊಂದು ಹಸರು ಕಲ್ಲಿನಲ್ಲಿಯೂ, ಮಗದೊಂದು ಶುದ್ಧ ಕರೀಕಲ್ಲಿನಲ್ಲಿಯೂ ಹೀಗೆ ಬೇರೆ ಬೇರೆ ರಂಗಿನ ಕಲ್ಲುಗಳಿಂದ ಕಟ್ಟಿದ್ದರು. ಈ ತೆರದ ಪಾವಟಿಗೆಗಳು ಕೆಳಗಿನವರೆಗೂ ಇದ್ದವು. ಮೇಲುಗಡೆಯಲ್ಲೆಲ್ಲಾ ಗುಂಡಾಗಿರುವ ಆ ಕೊಳವು ರಂಗಿನ ಕಲ್ಲು ಹಾಕಿರುವ ಸ್ಥಳದಲ್ಲಿ ಚೌಕವಾಗಿತ್ತು. ಮೇಲೆ ಕೈಸಾಲೆಯಲ್ಲಿರುವ ಲಿಂಗಗಳಿಗೆ ಅಭಿಷೇಕವಾಗಿ ಹೊರಟ ನೀರು ಈ ಕೊಳಕ್ಕೆ ಇಂಗಡವಾದ ಸಣ್ಣ ಬಚ್ಚಲುಗಳಿಂದ ಬಂದು ಈ ಮಧ್ಯದ ಕೊಳಕ್ಕೆ ಬೀಳುತಿತ್ತು. ಎಷ್ಟು ನೀರು ಬಂದರೂ ಆ ಕೊಳದಲ್ಲಿ ಎವೆಯುದ್ದ ನೀರಿಗಿಂತಲೂ ಯಾವಾಗಲೂ ಹೆಚ್ಚಾಗುತಿರಲಿಲ್ಲ. ಉಳಿದ ನೀರೆಲ್ಲಾ ಎಲ್ಲಿ ಹೋಗುತಿತ್ತೋ ಗೋಚರವಿಲ್ಲ. ಸುತ್ತಲೂ ಇದ್ದ ಅರೆಯಗೋಡೆ, ಕೈಸಾಲೆ, ಕಂಬ, ಚಾವಣಿ, ಅಂಕಣದ ಮಧ್ಯದ ಈಶ್ವರನ ಪಾಣಿವಟ್ಟಲು ನೆಲಕಟ್ಟು ರಂಗುದಾರಿಕಲ್ಲು ಹೊರತು ಉಳಿದ ಪಾವಟಿಗೆಗಳು ಇದೆಲ್ಲಾ ಸಪ್ಪಿಂಡವಾಗಿದ್ದ ಒಂದೇ ಕಲ್ಲಿನಲ್ಲಿ ಕತ್ತರಿಸಿ ಮಾಡಿದ್ದಾಗಿತ್ತು. ಆ ಕಲ್ಲುಬಂಡೆ ಗೋಡೆಯ ಮಧ್ಯೆ ಸಣ್ಣ ಬಿರುಕುಗಳಿದ್ದವು. ಆ ಬಿರುಕುಗಳಲ್ಲಿ ವಿಚಿತ್ರವಾದ ಹೂವಿನ ಗಿಡಗಳು ಹುಟ್ಟಿ ಪ್ರತಿ ಅಂಕಣದ ಮೇಲುಗಡೆಯಲ್ಲಿಯೂ ಹೂವಿನ ಗೊಂಚಲುಗಳು ಕೆಳಗಿದ್ದ ಲಿಂಗದ ಮೇಲೆ ಆಗಾಗ್ಗೆ ಬೀಳುತಿದ್ದವು.

ಇವೆಲ್ಲವನ್ನೂ ಅಪ್ರಮೇಯನು ಕಂಡು ವಿಸ್ಮಿತನಾದನು. ಮೇಲೆ ಲಿಂಗಗಳನ್ನೂ ಅವುಗಳಿಗೆ ಆಗುತಿರುವ ಅಭಿಷೇಕವನ್ನೂ ನೋಡಿ ಅವನಿಗೆ ಬಹಳ ಭಕ್ತಿ ಹುಟ್ಟಿತು. ಸುತ್ತಲ ಕೈಸಾಲೆ

ಯಿಂದ ಕೆಳಕ್ಕೆ ಇಳಿದನು. ಅಲ್ಲಿ ಕರ್ಮಾ ಗೂಡುಗಳಲ್ಲಿ ಅಮೃತ ಶಿಲೆಯಿಂದ ಬಹು ಸುಂದರವಾಗಿ ಮಾಡಿದ್ದ ವಿಗ್ರಹಗಳೆಲ್ಲವನ್ನೂ ನೋಡಿಕೊಂಡು ಬಂದನು. ಮಧ್ಯೆ ಮಧ್ಯೆ ಬರಿದಾಗಿದ್ದ ಗೂಡು ಗಳನ್ನು ನೋಡುತಾ ಬರುವಾಗ ಒಂದು ಗೂಡಿನಲ್ಲಿ ಅತ್ಯಂತ ಮುದುಕನಾದ ಒಬ್ಬ ಮನುಷ್ಯ ಕೂತಿದ್ದನು. ಅವನ ಗಡ್ಡ, ಮೀಶೆ, ತಲೇಕೂದಲು ಎಲ್ಲಾ ಉದ್ದುದ್ದವಾಗಿ ಬೆಳೆದು ನರೆತು ಹೋಗಿ ಹಂಜಿಕುಕ್ಕೆಯಾಗಿತ್ತು. ಒಂದು ಉಡಿದಾರ ಒಂದು ಲಂಗೋಟಿ ಹೊರತು ಅವನ ಮೈ ಮೇಲೆ ಏನೂ ಇರಲಿಲ್ಲ. ಒಂದು ಬಿಳೀ ಧಾವಳಿಯು ಪಕ್ಕದಲ್ಲಿರಿಸಿತ್ತು. ಮೈಗೆಲ್ಲಾ ವಿಭೂತಿ ಬಳಿದುಕೊಂಡು ಧ್ಯಾನಾಸಕ್ತನಾಗಿ ಕೂತಿದ್ದನು. ಅವನ ಮುಂದೆ ಬೆಂಕಿ ಹಾಕಿತ್ತು. ಅದಕ್ಕೆ ಒಂದು ಕೊರಡು ಚಾಚಿತ್ತು. ಆ ಪುಣ್ಯಾತ್ಮನನ್ನು ನೋಡಿದ ಕೂಡಲೆ ಎಂಥವರಿಗೂ ಆನಂದವೂ ಭಕ್ತಿಯೂ ಉಂಟಾಗುತಿತ್ತು. ಅಪ್ರಮೇಯನು ಅವನನ್ನು ಕಂಡು ದೃಷ್ಟಿಸಿ ನೋಡಿದನು. ಆ ಸಿದ್ಧಪುರುಷನಲ್ಲಿ ಬಹುಭಕ್ತಿ ಹುಟ್ಟಿ ಆತನಿಗೆ ನಮಸ್ಕಾರವನ್ನು ಮಾಡಿದನು. ಆ ಮುದುಕನು ಇವನ ಕಡೆ ತಿರುಗಿಕೂಡ ನೋಡಲಿಲ್ಲ. ಆದರೂ ಅಪ್ರಮೇಯ ನಿಗೆ ಅವನಲ್ಲಿ ಭಕ್ತಿ ಕಡಮೆಯಾಗಲಿಲ್ಲ; ಅವನು ಆದಿನ ಮೊದಲು ಗೊಂಡು ಆ ಬೈರಾಗಿಯ ಶುಶ್ರೂಷೆಯಲ್ಲಿ ನಿರತನಾದನು. ನಾಲ್ಕೈದು ದಿವಸವಾಯಿತು, ಆ ಸ್ಥಳವನ್ನು ಎಷ್ಟು ನೋಡಿದರೂ ಸಾಲದು. ಎಂಥಾವರಿಗೂ ಅತ್ಯಾಶ್ಚರ್ಯವನ್ನು ಉಂಟುಮಾಡುವ ಪ್ರವೇಶ. ಈ ಅದ್ಭುತವಾದ ಕಟ್ಟಡವನ್ನು ಯಾವ ಪುಣ್ಯಾತ್ಮ ಮಾಡಿಸಿರಬಹುದು? ಎಷ್ಟು ಕೋಟಿ ದ್ರವ್ಯ ಮುಟ್ಟಿರಬಹುದು? ಹೇಳುವುದು ಅಸಾಧ್ಯ. ಅಲ್ಲಿ ಯಾವ ಪುರುಷನಾದರೂ ಸರಿಯೆ, ಅರೆಗಳಿಗೆ ಇದ್ದರೂ ಈ ಲೋಕದ ಕಷ್ಟವೆಲ್ಲಾ ಮರೆತುಹೋಗಿ ಬ್ರಹ್ಮಜ್ಞಾನ ಉಂಟಾಗುವುದರಲ್ಲಿ ಸಂಶಯವಿಲ್ಲ. ಆದ್ದರಿಂದಲೇ ಆ ಯೋಗಿಯು ಅಲ್ಲಿ ನಿಂತಿರುವನು. ಆ ಪ್ರದೇಶದ ಮಹತ್ತ್

ನಿಂದ ಈ ಮಹಾತ್ಮನಿಗೆ ಯೋಗಸಿದ್ಧಿಯಾಗಿ ಬ್ರಹ್ಮ ಸಾಕ್ಷಾತ್ಕಾರವಾಗಿರುವುದು. ಪರಿಶುದ್ಧಾತ್ಮರು ಹೆಚ್ಚಾಗಿರುವ ಕಡೆ ಸತ್ಸಂಗವೇ ಯೋಗಾನುಷ್ಠಾನ ಸಂಪತ್ತನ್ನುಳ್ಳ ಮಹಾತ್ಮರಿಗೆ ಸಹಾಯವಾಗುವುದು. ಈ ದುಷ್ಟ ಪ್ರಪಂಚದಲ್ಲಿ ಮಾತ್ರ ನಿಸ್ಸಂಗವೇ ಸತ್ಸಂಗವೆಂದು ಹೇಳಬೇಕು, ಹೀಗೆಂದು ಅಪ್ರಮೇಯನು ಯೋಚಿಸಿಕೊಂಡು ಆ ವೈರಾಗಿಯ ಸೇವೆಯಲ್ಲಿ ನಿಂತನು. ಕೆಲವು ದಿನಗಳು ಕಳೆದು ಹೋದವು; ಆದರೂ ಆ ಮುದುಕನು ಒಂದು ಮಾತನ್ನೂ ಆಡಲಿಲ್ಲ. ಪ್ರತಿನಿತ್ಯವೂ ಪಂಚ ಪಂಚ ಉಷಃಕಾಲಕ್ಕೆ ಆ ಶಿವತೀರ್ಥದ ಕೊಳದಲ್ಲಿ ಅಪ್ರಮೇಯನು ಸ್ನಾನಮಾಡಿ ನಿತ್ಯಕರ್ಮವನ್ನೆಲ್ಲಾ ತೀರಿಸಿಕೊಂಡು ಮುನಿಯನ್ನುಪಚರಿಸಿ ಗುಹೆಯಿಂದ ಹೊರಗಡೇ ವನದಲ್ಲಿ ಬೆಳೆದಿದ್ದ ಆಹಾರದ ಕಾಯಿಯನ್ನು ತಂದು ಆತನ ಮುಂದೆ ಇರಿಸುತಾ ನಮಸ್ಕಾರ ಮಾಡುತಾ ಬಂದನು. ಎಂಟು ಹತ್ತು ದಿವಸದ ಮೇಲೆ ಮಧ್ಯಾಹ್ನದಲ್ಲಿ ಆ ಜ್ಞಾನಿಯು ಅಪ್ರಮೇಯನನ್ನು ನೋಡಿ—ನೀನು ಯಾರು, ಇಲ್ಲಿಗೆ ಯಾಕೆ ಬಂದೆ? ಎಂದು ಮರಾಟಿಯಲ್ಲಿ ಕೇಳಿದನು. ಆ ಧ್ವನಿಯನ್ನು ಕೇಳಿ ಅಪ್ರಮೇಯನು ಆನಂದ ಭರಿತನಾಗಿ ಆ ಸಿದ್ಧಪುರುಷನಿಗೆ ಸಾಷ್ಟಾಂಗವೆರಗಿ ಕೈಮುಗಿದುಕೊಂಡು ಆತನ ಮುಂದೆ ನಿಂದು ತನ್ನ ಪೂರ್ವ ವೃತ್ತಾಂತವನ್ನೂ ತಾನು ಬಂದಿರುವ ಕಾರ್ಯವನ್ನೂ ಆ ಭಾಷೆಯಲ್ಲಿಯೇ ಸೂಕ್ಷ್ಮವಾಗಿ ಅರಿಕೆ ಮಾಡಿದನು. ಇವನು ಆಡಿದ ಅಚ್ಚ ಮರಾಟಿ ಭಾಷೆಯನ್ನೂ, ಅವನ ವಿನಯವಾದ ಮಾತಿನ ಸ್ವಾರಸ್ಯವನ್ನೂ, ಆ ಗಂಭೀರವಾದ ಧ್ವನಿಯನ್ನೂ ಕೇಳಿ ಆ ತಪಸ್ವಿಯು ಮುಖರಸದಲ್ಲಿ ಆನಂದವನ್ನು ತೋರಿಸಲು ಅದರಿಂದ ಅಪ್ರಮೇಯನು ಹರ್ಷಿತನಾಗಿ,

ಅಪ್ರ—ನಾನು ಒಬ್ಬ ಪುರುಷನನ್ನು ಹುಡುಕಿಕೊಂಡು ಬಂದೆ. ಆತ ಸಿಕ್ಕಲಿಲ್ಲ. ಆತ್ಮಾರಾಂ ಬಾವಾಜಿಯನ್ನು ಕೇಳಬೇಕು ಎಂದರು, ಇಲ್ಲಿಗೆ ಬಂದೆ.

ಸಿದ್ಧ—(ಹಸನ್ಮುಖನಾಗಿ) ಎಲ್ಲಿಂದ ಬಂದೆ ?

ಅಪ್ರ—ಶ್ರೀರಂಗಪಟ್ಟಣದ ಸೀಮೆಯಿಂದ ಬಂದೆ.

ಸಿದ್ಧ—ನೀನು ಯಾರನ್ನು ಹುಡುಕಿಕೊಂಡು ಬಂದೆ?

ಅಪ್ರ—ತುಕಡಿದಾರ ಹನುಮಂತರಾವ್ ರಣನವರೆಯನ್ನು.

ಸಿದ್ಧ—ಆತನಿಂದ ನಿನಗೆ ಆಗಬೇಕಾದ್ದೇನು?

ಅಪ್ರ—ಅವರು ಮೈಸೂರಲ್ಲಿದ್ದರು. ಕೆಲವು ದುಷ್ಟರ ದೆಸೆಯಿಂದ ಅವರಿಗೆ ಕಷ್ಟ ಸಂಭವಿಸಿತು. ಹೆಂಡತಿ ಮಕ್ಕಳನ್ನು ಬಿಟ್ಟು ಅವರು ಎಲ್ಲಿಯೋ ಹೊರಟು ಹೋದರು. ಪತಿವ್ರತೆಯಾದ ಅವರ ಭಾರ್ಯವು ಶತ್ರುಗಳ ಭದ್ರತೆಯ ಮಧ್ಯೆ ಸಿಕ್ಕಿದರು. ಸಂಸಾರವೇ ಕಳಪಿಳಿಯಾಯಿತು. ಅವರು ಆ ದೇಶವನ್ನು ಬಿಟ್ಟು ಹೋದ ಮೇಲೆ ಅವರಿಗೆ ದೊಡ್ಡ ಅಪವಾದ ಪ್ರಾಪ್ತವಾಯಿತು. ಇವರು ಯಾರಿಗೂ ಕಾಣಿಸದೆ ತಲೆ ಮರೆಸಿಕೊಂಡು ದೇಶಾಂತರಗತರಾಗಿ ಹೊರಟು ಹೋಗಿರುವ ಕಾರಣ ಇವರ ಸ್ನೇಹಿತರಾದ ನಿರಪರಾಧಿಗಳಾಗಿರತಕ್ಕ ಕೆಲವು ದೊಡ್ಡ ಮನುಷ್ಯರಿಗೆ ಪ್ರಾಣಾಪಾಯ ಸಂಭವಿಸಿದೆ. ಕಚೇರಿಯಲ್ಲಿ ಮೊಕದ್ದಮೆ ಜರುಗುತಾ ಇದೆ. ಹನುಮಂತರಾಯರು ಸಿಕ್ಕಿದರೆ ಮೈಸೂರು ಸೀಮೆಗೇ ಬಂದಿರುವ ದೊಡ್ಡ ಅಪವಾದ ತಪ್ಪುವುದು. ಇದಕ್ಕಾಗಿಯೂ ಹನುಮಂತರಾಯರ ಸಂಸಾರದ ವಿಚಾರಕ್ಕಾಗಿಯೂ ಅವರನ್ನು ಹುಡುಕಿಕೊಂಡು ಬಂದೆ.

ಸಿದ್ಧ—ಲೋಕದಲ್ಲಿ ಜನರ ಪ್ರಾಚೀನ ಕರ್ಮಾನುಸಾರವಾಗಿ ನಡೆಯತಕ್ಕ ಕಾರ್ಯಸರಣಿಗೆ ನೀನು ಏನುಮಾಡಿದರೆ ತಡೆಯಾದೀತು? ನಡೆಯುವುದು ನಡೆಯಬೇಬೇಕು.

ಅಪ್ರ—ವಿಪರ್ಯಾಸ ಜರುಗುವುದು ಪ್ರಾಚೀನ ಫಲವೇನೋ ನಿಜ. ಅಂಥಾದ್ದಕ್ಕೆ ಯಾವ ವಿಧದಲ್ಲಿಯಾಗಲಿ ಅಡ್ಡಿ ಬರತಕ್ಕದ್ದು ಸಹಾ ಪ್ರಾಚೀನ ಸರಣಿಯಲ್ಲಿಯೇ ಸೇರಿದ್ದಲ್ಲವೆ?

ಸಿದ್ಧ—ಜನ್ಮಾಂತರವಾಸನಾ ಫಲದಲ್ಲಿ ನಮ್ಮ ಪುರುಷ

ಪ್ರಯತ್ನ ಸೇರಿರುವುದಿಲ್ಲ. ಐಹಿಕ ಸಂಬಂಧವಾದ ಪುರುಷ ಪ್ರಯತ್ನದಲ್ಲಿ ಜನ್ಮಾಂತರ ವಾಸನಾ ಫಲದ ವೇಗವನ್ನು ಹೆಚ್ಚು ಕಡಮೆ ಮಾಡತಕ್ಕ ತ್ರಾಣವಿದೆ ಪುರುಷ ಪ್ರಯತ್ನದಿಂದ ಸನ್ಮಾರ್ಗ ದೊರೆತರೆ ದುಷ್ಟವಾದ ಪ್ರಾಚೀನಕರ್ಮವು ಕಾರ್ಯದಲ್ಲಿ ಪರಿಣಮಿಸದೆ ತೋರಿ ಅಡಗುವುದು. ಮುಂದಿನ ಜನ್ಮಕ್ಕೆ ಇದು ನಶಿಸಿ ಹೋಗಿಬಿಡುವುದು. ಸನ್ಮಾರ್ಗದುರ್ಮಾರ್ಗಗಳೆರಡಕ್ಕೂ ಇದೇ ವಿಧಿ ಕಾಣ್ಕೈ.

ಅಪ್ರ—ಅಪ್ಪಣೆಯಾದ ಅಂಶವನ್ನು ಶಿರಸಾವಹಿಸಿದೆ. ಹಾಗಾದರೂ ಪುರುಷ ಪ್ರಯತ್ನವು ನಷ್ಟವಲ್ಲವಷ್ಟೆ ?

ಸಿದ್ಧ—ಪುರುಷಪ್ರಯತ್ನವು ಫಲಪ್ರಾಪ್ತಿಗೆ ತಕ್ಕಮಟ್ಟಿಗೆ ಇರಬೇಕು. ಅದಕ್ಕಿಂತಲೂ ಅತಿಯಾದರೆ ಪ್ರಯೋಜನವೇನ್ಸ್ಯೆ, ಬೇಟ? ನಮ್ಮ ಪ್ರಯತ್ನವು ನಮ್ಮನ್ನು ನಾವರಿಯದ ಮಡುಗಳಿಗೆ ಎಳೆದುಕೊಂಡು ಹೋದರೆ ಕಷ್ಟ ಹೆಚ್ಚುವುದು. ಈ ಲೋಕ ವ್ಯವಹಾರವೆಲ್ಲಾ ಹೀಗೆಯೇ ಎಂದು ತಿಳಿ. ಲೋಕ ಸ್ಥಿರವೆಂದು ಯಾರು ಬದುಕಿದಾರೆ?

ಅಪ್ರ—ಹಾಗಾದರೆ ಲೋಕದಲ್ಲಿ ಸೇರಿಕೊಂಡಿರುವ ನಮ್ಮ ಜನ್ಮವೂ ಅಸ್ಥಿರವೇ. ಶೀತೋಷ್ಣಾದಿ ಸುಖದುಃಖಗಳೂ ಅಸ್ಥಿರವೇ.

ಸಿದ್ಧ—ನಿಸ್ಸಂದೇಹವಾಗಿಯೂ ಹಾಗೆಯೇ ಸರಿ, ಎಲ್ಲಾ ಮಿಥ್ಯ.

ಅಪ್ರ—ತತ್ಕಾಲದಲ್ಲಿ ನಮ್ಮ ಅನುಭವಸಿದ್ಧವಾದ್ದೂ ಕೂಡ ಹೇಗೆ ಮಿಥ್ಯ ? ಆ ಕಾಲದ ಮಟ್ಟಿಗಾದರೂ ಅದು ಸತ್ಯವೆಂದು ನಾವು ನಂಬದಿದ್ದರೆ ಸ್ವಾನುಭವಕ್ಕೆ ವಿರುದ್ಧ ಬರುವುದಲ್ಲವೆ?

ಸಿದ್ಧ—ಸತ್ಯ ಮಿಥ್ಯವಿವೇಚನೆ ಶಾಶ್ವತವಾಗಿರತಕ್ಕದ್ದರಲ್ಲಿ....

**ಅಪ್ರ—ಈ ಜನ್ಮವಿರುವ ಮಟ್ಟಿಗಾದರೂ ಐಹಿಕವ್ಯಾಪಾರ ನಿಜವಾದ್ದು ಅಹುದೇ ಅಲ್ಲವೇ?**

ಸಿದ್ಧ—ಅಶಾಶ್ವತವಾದ ದೇಹ ಸಂಬಂಧದಲ್ಲಿ ನಿಜ. ಪರ್ಯವಸಾನದಲ್ಲಿ ಅಲ್ಲ.

ಅಪ್ರ—ಈ ಜನ್ಮದವುಟ್ಟಿಗೇ ಅರಿಕೇ ಮಾಡುತ್ತೇನೆ. ಸ್ವಲ್ಪ ಕಾಲದ ಮಟ್ಟಿಗಾದರೂ ಲೋಕವ್ಯವಹಾರ ನಿಜವಾದ್ದೆಂದು ನಾವು ನಂಬದಿದ್ದರೆ, ಈ ಸಂಸಾರದಂದುಗವೇ ಇಲ್ಲದಂತಾಗುವುದು. ಆಗ ಮನುಷ್ಯನ ಸ್ಥಿತಿಯು ಏಕರೀತಿಯಾಗುವುದು. ಈ ಜನ್ಮದಲ್ಲಿ ಪಾಪವೂ ಇಲ್ಲ. ಪುಣ್ಯವೂ ಇಲ್ಲ. ಪ್ರಪಂಚಧರ್ಮಕ್ಕೇ ಲೋಪಬರುವುದು. ಆಗ ಜಗತ್ತಿನ ಸೃಷ್ಟಿಯೇ ಇಲ್ಲದಂತಾಗುವುದು. ಇದು ಸಾಧ್ಯವೆ? ಹಾಗಾದರೆ ಲೋಕಕ್ಕೆಲ್ಲಾ ಜನ್ಮೋತ್ತಾರಣೆಯು ಸ್ವಲ್ಪಕಾಲದಲ್ಲಿಯೇ ಆಗ ಬೇಕಾಗುವುದಲ್ಲ? ಆ ಪಕ್ಷದಲ್ಲಿಯೂ ಜನ್ಮಾಂತರವಾಸನೆಯು ಸ್ವಲ್ಪವಾದರೂ ತನ್ನ ಶಾಖವನ್ನು ತೋರಿಸಿದಂತಾಗುವುದು.

ಸಿದ್ಧ—ಜನ್ಮಾಂತರವಾಸನೆಯು ಒಂದು ಜನ್ಮದಲ್ಲಿಯೇ ನಶಿಸುವುದಿಲ್ಲ. ಪ್ರತಿ ಜನ್ಮದಲ್ಲಿಯೂ ಸನ್ಮಾರ್ಗದಲ್ಲಿದ್ದರೆ ಹಲವು ಜನ್ಮದಲ್ಲಿ ನಶಿಸುವುದು. ಒಂದು ಜನ್ಮದಲ್ಲಿ ಜ್ಞಾತಾಜ್ಞಾತವಾದ ಪಾಪಗಳು ಸಂಘಟನೆಯಾದರೆ ಅವುಗಳ ಯೋಗ್ಯತೆ ಇದ್ದ ಹಾಗೆಲ್ಲಾ ಜನ್ಮಗಳು ಹೆಚ್ಚು ಕಡಮೆಯಾಗುತಾ ಬರುವವು. ಪ್ರಾರಬ್ಧಕರ್ಮ ಬಲವಾಗಿದ್ದರೆ ಪುನಃ ಬುದ್ಧಿಯು ದುರ್ಮಾರ್ಗಕ್ಕೆ ಹೋಗುವುದು. ಅದು ಹಾಗೆ ಹೋಗದಂತೆ ಮನಸ್ಸನ್ನು ಜಿತವಾಗಿ ನಿಲ್ಲಿಸಿಕೊಂಡು ಸನ್ಮಾರ್ಗಕ್ಕೆ ಬುದ್ಧಿಯನ್ನು ಹೊಗಿಸುವುದೇ ಪುರುಷಪ್ರಯತ್ನ. ಈ ಪ್ರಯತ್ನವು ಎಷ್ಟು ಬಲವಾದರೆ, ಎಷ್ಟರ ಮಟ್ಟಿಗೆ ಸನ್ಮಾರ್ಗವನ್ನು ಅನುಸರಿಸಿದರೆ, ಮುಕ್ತಿಯು ಅಷ್ಟು ಸಮೀಪವಾಗುವುದು. ಮನಸ್ಸನ್ನು ಸೆರೆಗೊಳ್ಳುವ ಗಲಭೆ ಹೆಚ್ಚಿದಷ್ಟೂ ಮನಸ್ಸು ಜಿತವಾಗಿ ನಿಲ್ಲದೆ ಹೋಗುವುದು. ಸಂಸಾರದಂದುಗವೇ ಆ ಗಲಭೆ. ಈ ಗಲಭೆಯು ಆತ್ಮೀಯ ಪರಕೀಯ ಎಂದು ಎರಡು ಬಗೆಯಾಗಿದೆ. ಸ್ವಕೀಯವಾದ

ದೇಹ ಮನಸ್ಸು ಇವುಗಳ ಸುಖ ದುಃಖ ಸಂತಾಪಾದಿಗಳು ಆತ್ಮೀಯ ಗಲಭೆ. ಪರಕೀಯ ಗಲಭೆಯು ಮಾತಾ ಪಿತೃದಾರಾ ಪುತ್ರಾದಿಗಳ ಸಂಬಂಧ, ರಾಜಿಕ ದೈವಿಕ ಪರಾರ್ಥಕ ಸಂಬಂಧ ಎಂದು ಎರಡು ಬಗೆಯಾಗಿದೆ. ಇವುಗಳಲ್ಲಿ ಯಾವಗಲಭೆ ಪ್ರಾಪ್ತವಾದರೂ ನಮ್ಮ ಮನಸ್ಸು ಗಾಳಿಗೆ ಹಿಡಿದ ದೀಪದಂತಾಗುವುದು.

ಅಪ್ರ—ಹಾಗಾದರೆ ಲೋಕ ವ್ಯವಹಾರದಲ್ಲಿ ಲೇಶವೂ ಸುಖವಿಲ್ಲದಿದ್ದರೆ ಅಂಥಾ ಕಷ್ಟವನ್ನು ಯಾಕೆ ಅನುಭವಿಸಿ ಕೊಂಡಿದಾರೆ ?

ಸಿದ್ಧ—ಅದೇ ಜನ್ಮಾಂತರದ ವಾಸನಾ ಫಲವೆನ್ನುವುದು. ಅದನ್ನು ಅನುಭವಿಸಿಯೇ ತೀರಿಸಬೇಕು.

ಅಪ್ರ—ದುಃಖದ ಚಿಂತೆಯಲ್ಲಿ ಸುಖವೂ ಇದೆಯಷ್ಟೆ ?

ಸಿದ್ಧ—ಯಾವುದು ಸುಖವೈ? ಮೊದಲು ನಮ್ಮ ಜನ್ಮಕ್ಕೆ ಕಾರಣವಾಗಿ ಹೊತ್ತು ಹೆತ್ತು ವಿಧ ವಿಧವಾದ ಬಾಧೆಯನ್ನನುಭವಿಸಿ ನಮ್ಮನ್ನು ಕಾಪಾಡಿ ತಮ್ಮ ಎರಡನೇ ಪ್ರಾಣವೆಂದು ಅಭಿಮಾನವನ್ನು ಇಟ್ಟುಕೊಂಡಿರುವ ತಂದೆ ತಾಯಿಗಳು ಕೂಡ ಲೋಕಕ್ಕೆ ಯಾವುದು ವಿರೋಧವಾದ ನಡತೆ ಎಂದು ತೋರುವುದೋ ಅದು ನಮ್ಮಲ್ಲಿದ್ದರೆ ನಮ್ಮನ್ನು ತ್ಯಜಿಸುವರು. ಗಂಡ ಹೆಂಡಿರಾದರೂ ಪರಸ್ಪರ ಸೌಹಾರ್ದವಿಲ್ಲದಿದ್ದರೆ ದುಃಖಮಯ. ಮಕ್ಕಳಿಗೆ ಆಜಗವನ್ನು ಕೊಡದಿದ್ದರೆ ಕೊಡಲಿಲ್ಲವೆಂದು ದುಃಖ, ಕೊಟ್ಟರೆ ಕೆಟ್ಟತನದ ದುಃಖ; ಉಳಿದ ಬಂಧುಗಳೆಲ್ಲರಿಗೂ ಕೊಟ್ಟರೆ ನಮ್ಮವರು ಕೊಡದಿದ್ದರೆ ಹಗೆಯವರು, ದೈವಿಕ ನಮ್ಮ ಯತ್ನಮೀರಿದ್ದು; ರಾಜಿಕವು ಸ್ವಾನುಭವವಿಲ್ಲದ್ದರಿಂದ ಉಂಟಾಗುವುದು. ಸ್ನೇಹಿತರು ನಿನಗಿಂತ ಐಶ್ವರ್ಯವಂತರಾದರೆ ನಿನ್ನನ್ನು ಆಶ್ರಿತನೆಂದು ಭಾವಿಸಿ ಕೀಳಾಗಿ ಕಾಣುವರು; ಸಮಾನವಾಗಿದ್ದರೆ ಅಸೂಯದ ಮೊಳಕೆಯನ್ನು ತೋರಿಸುವರು; ಬಡವರಾದರೆ ತಮ

ಗೇನೂ ಕೊಡಲಿಲ್ಲವೆಂದು ಆಡಿಕೊಳ್ಳುವರು. ಎಲ್ಲಿ ನೋಡಿದರೂ ಸ್ವಾರ್ಥಪರತೆಯೇ ನಿಬಿಡವಾಗಿರುವುದು. ಸುಖವೆಲ್ಲಿಯದು ?

ಅಪ್ರ—ಪರರ ಕಷ್ಟವನ್ನು ನೋಡಿ ಮರುಗುವವರಿಲ್ಲವೆ ?

ಸಿದ್ಧ—ಪ್ರಾಚೀನ ಕರ್ಮ ಪರಿಪಕ್ವಕ್ಕೆ ಬಂದಿರತಕ್ಕವರಿಗೆ ಅಂಥಾ ಬೆಣ್ಣೆಯಂದದ ಮನಸ್ಸು ಇರುವುದು.

ಅಪ್ರ—ಪರರ ಕಷ್ಟವನ್ನು ನೋಡಿ ಸಹಿಸಿಕೊಂಡು ಸುಮ್ಮನೆ ಇರುವುದು ನನ್ನಿಂದ ಸಾಧ್ಯವಾಗಲಾರದು. ಸುಖದುಃಖ ಸಂತಾಪಾದಿಗಳು ಸ್ವಾನುಭವದಿಂದ ನಮ್ಮ ಮನಸ್ಸಿಗೆ ವೇದ್ಯವಾಗಿ ಅಲ್ಲಿ ನಾಟಿರುವವು. ಅಂಥಾ ಅನುಭವ ನಮಗೆ ಪುನಃ ಉಂಟಾಗುವುದೆಂದು ತೋರುವ ಸಂದರ್ಭದಲ್ಲಿ ನಮಗೆ ಪೂರ್ವ ಸ್ಮರಣೆ ಬಂದು ಅದರ ಫಲವನ್ನು ತೋರಿಸುವುದು, ಇದು ಮಾನಸಿಕಾನುಭವ ; ಅಂಥಾ ಭಾವ ಇತರರಿಗೆ ಹುಟ್ಟಿ ನಮಗೆ ಹೊಳೆದಾಗಲೂ ಅದನ್ನು ಕಂಡು ನಮಗೆ ಪೂರ್ವದ ಅನುಭವ ಜ್ಞಾಪಕಕ್ಕೆ ಬರುವುದು, ಇದೂ ಮಾನಸಿಕವೇ ? ಸ್ವಾನುಭವದ ಸ್ವಭಾವವನ್ನೇ ಇದು ವಹಿಸುವುದು. ನಮಗೆ ಸ್ವತಃ ಬಂದ ಮಾನಸಿಕಾನುಭವ ಯಾವ ಭಾವವನ್ನು ಹುಟ್ಟಿಸುವುದೋ ಪರರ ಸಂಬಂಧದಿಂದ ಉಂಟಾದ ಅನುಭವವೂ ನಮ್ಮಲ್ಲಿ ಅದೇ ಮನೋವಿಕಾರವನ್ನು ಹುಟ್ಟಿಸುವುದು. ಈ ಪ್ರಕಾರ ಸಜಾತೀಯವಾದ ಗುಣ ಪರಕೀಯವಾದರೂ ಅನುಭವದಲ್ಲಿ ಸ್ವಕೀಯವಾಗಿ ಇರುವುದು. ಅದು ಹಿತವಾಗಿದ್ದರೆ ಪುನರಾವರ್ತಿಯನ್ನೂ ಅಹಿತವಾಗಿದ್ದರೆ ನಿವಾರಣೆಯನ್ನೂ ಮನಸ್ಸು ಅಪೇಕ್ಷಿಸುವುದು. ಹೀಗೆ ಅನೇಕ ವೇಳೆ ಸಂಭವಿಸಿ ಹುಟ್ಟುವ ಪರೋಪಕಾರ ಬುದ್ಧಿಯು ಉತ್ತಮ ಸ್ವಭಾವಕ್ಕೆ ಸಹಜಧರ್ಮವಾಗಿ ನಿಲ್ಲುವುದು. ಮರುಕ ಹುಟ್ಟುವುದೂ ಇದರಿಂದಲೇ. ಒಬ್ಬರು ಇನ್ನೊಬ್ಬರಿಗೆ ಉಪಕಾರ ಮಾಡುವುದೂ ಆದರಿಂದಲೇ. ಇಂಥಾ ಗುಣದಿಂದ ಪರರ ಕಷ್ಟ ನಿವಾರಣೆಯೇ ಮುಖ್ಯ ಫಲವಾಗಿ ಕಾಣಿಸಿದಾಗ್ಯೂ ಸ್ವಕೀಯವಾದ

ಮನೋವ್ಯಥೆಯು ನಿವಾರಣೆಯೂ ತತ್ಸಮವಾದ್ದೆಂದು ಖಂಡಿತ ಮಾಡಿಕೊಳ್ಳಬೇಕು. ನಮ್ಮ ಯಾಜಮಾನನಿಗೆ ಸಂಭವಿಸಿದ ಕಷ್ಟ ನಿವಾರಣೆಯ ಗೋಜಿಗೆ ಹೋದ್ದು ಇದರಿಂದಲೇ, ಆತ್ಮಾರಾಂ ಬಾವಾಜಿಯ ಕೃಪೆಯಿಂದ ನಿನ್ನ ಇಷ್ಟ ಸಿದ್ಧಿಯಾಗುವುದೆಂದು ಒಬ್ಬ ಪುಣ್ಯಾತ್ಮರು ಹೇಳಿದರು. ನನ್ನ ಪುಣ್ಯಾವಶಾತು ಈ ದರ್ಶನ ದೊರೆಯಿತು. ನನ್ನ ಸ್ವಾಮಿಕಾರ್ಯವನ್ನು ನಿರ್ವಹಿಸಬೇಕೆಂದು ಶಪಥ ಮಾಡಿದೇನೆ. ಅದು ನೆರವೇರುವಂತೆ ಕೃಪೆಮಾಡಿ ನಮ್ಮ ಯಜಮಾನ ದೊರೆಯುವ ರೀತಿಯನ್ನು ಅಪ್ಪಣೇ ಕೊಡಿಸಿದರೆ ನಾನು ಕೃತಾರ್ಥನಾಗುತೇನೆ.

ಸಿದ್ಧ—ನನ್ನನ್ನು ನೀನು ಹುಡುಕಿಕೊಂಡು ಶ್ರಮಪಟ್ಟು ಇಲ್ಲಿಗೆ ಬಂದೆ. ನಿನ್ನ ಮಾತನ್ನು ಕೇಳಿ ನನಗೆ ಆನಂದವಾಯಿತು. ನೀನು ಹೇಳಿದ ಮನುಷ್ಯನು ನಿನ್ನ ಸಮಯಕ್ಕೆ ಸರಿಯಾಗಿ ಒದಗುತಾನೆ. ಆತ ಇರುವ ಸ್ಥಳವು ನಿನಗೆ ಮುಂದೆ ಗೊತ್ತಾಗುವುದು, ನಿನ್ನ ಕಾರ್ಯ ನೆರವೇರುವುದು.

ಅಪ್ರಮೇಯನು ಆತ್ಮಾರಾಂ ಬಾವಾಜಿ ಹೇಳಿದ ಈ ಮಾತನ್ನು ಕೇಳಿ ಹರ್ಷಿತನಾಗಿ ಗುರುವಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಒಂಡೆರಡು ದಿವಸ ಆ ಮಹಾ ಸ್ಥಳದಲ್ಲಿದ್ದು ಅದನ್ನು ಬಿಟ್ಟು ಬರಲು ಮನಸ್ಸಿಲ್ಲವೆ ಕಡೆಗೆ ಮನಸ್ಸನ್ನು ಅಲ್ಲಿಂದ ಕಿತ್ತು ಕೊಂಡು ಹೊರಟನು.

## ೧೫ನೇ ಅಧ್ಯಾಯ

## ಕರಾಡಿಗರು—ಮಹಾಕಾಳಿಗೆ ನರಬಲಿ

ಆತ್ಮಾರಾಂ ಬಾವಾಜಿಯು ಹೇಳಿದ ಮಾತು ಹೈಮಂತ ಋತು ವಿನಲ್ಲಿ ಬೆಳಗಿನ ಜಾವದ ಮಂಜುಬೀಳುತ್ತಿರುವಾಗ ಕಾಣಿಸಿದ ಮುಖದ ಗುರುತಿನಂತಾಯಿತು. ಅಪ್ರಮೇಯನು ಅದನ್ನೇ

ಯೋಚನೆ ಮಾಡುತಾ ಕಂಡ ಕಂಡವರನ್ನೆಲ್ಲಾ ಕುರಿತು ಒಂದು ಬಗೆ ಹುಚ್ಚು ಹಿಡಿದವನಂತೆ ಕೇಳುತಾ ಬೆಟ್ಟವನ್ನಿಳಿದು ಪಶ್ಚಿಮ ದಿಕ್ಕಿಗೆ ಹೋಗುತ್ತಿರುವಾಗ, ೪ ಜನ ಮರಾಟೆಯವರು ಆ ಬೆಟ್ಟದ ಕಿಬ್ಬಿಯಲ್ಲಿದ್ದದನ್ನು ಕಂಡನು. ಈ ನಿರ್ಮಾನುಷವಾದ ಪ್ರದೇಶ ದಲ್ಲಿ ಸಿಕ್ಕಿದವರೇ ಆಪದ್ಬಂಧುಗಳು ಎಂದು ಅವರ ಸಮೀಪಕ್ಕೆ ಹೋದನು ಆ ಜನರು ಬಹು ಬಲಶಾಲಿಗಳಾಗಿ ಯಾವ ಕಾರ್ಯಕ್ಕೂ ಹಿಂತೆಗೆಯತಕ್ಕವರಲ್ಲವೆಂದು ತೋರುವಹಾಗೆ ಅವರ ರೀತಿಯಿಂ ದಲೂ ಮಾತಿನಿಂದಲೂ, ತಿಳಿಯಿತು. ಅಪ್ರಮೇಯನು ಅವರ ದೃಷ್ಟಿಗೆ ಬಿದ್ದಕ್ಷಣದಲ್ಲಿಯೇ ಅವರು ಅವನಿಗೆ ಎದುರಾಗಿ ಬಂದು ಅತ್ಯಂತ ಆದರದಿಂದ ಇವನನ್ನು ಮಾತನಾಡಿಸಿ ಎಷ್ಟು ದಿವಸದ ಪುರಾತನ ಸ್ನೇಹಿತರೋ ಎನ್ನುವಹಾಗೆ ಸಲಿಗೆಯನ್ನು ತೋರಿಸಿ ಅವನ ಸಂಗಡಲೇ ಲೋಕಾಭಿರಾಮವಾದ ಮಾತುಗಳನ್ನಾಡುತಾ ಹೊರಟರು. ಯಾರಲ್ಲಿ ತನ್ನ ರಹಸ್ಯಗಳನ್ನು ಹೇಳ ಬಹುದು ಯಾರಲ್ಲಿ ಹೇಳಬಾರದು ಎಂಬ ವಿವೇಚನೆಗಿಂತಲೂ ಯಾರನ್ನು ಕೇಳಿದರೆ ಹನುಮಂತರಾಯ ಇರುವ ಸ್ಥಳ ಗೊತ್ತಾದೀತೋ ಎಂಬ ಆತುರ ಅಧಿಕವಾಗಿತ್ತು. ಆ ಜನರ ಸಂಗಡ ಅಪ್ರಮೇ ಯನು ತನ್ನ ಯಜಮಾನನ ಗುರುತುಗಳನ್ನು ಹೇಳುತಾ ಬಂದನು. ಇವನ ಮಾತಿನಿಂದಲೂ ಇವನ ರೀತಿಯಿಂದಲೂ ಅವರು ಅವನ ಹೆಗ್ಗುರುತುಗಳನ್ನು ಊಹಿಸುತಾ ಮೈಸೂರುಸೀಮೆಯವನೆಂದು ತಿಳಿದುಕೊಂಡು—

೧ನೇ ಘೊಂಡ್ಯ—ನಾನು ಬಲ್ಲೆ ಆತನನ್ನು, ಮೈಸೂರ ಸೀಮೆ ಯವರಲ್ಲವೆ ?

ಅಪ್ರ—ಹವುದು.

೨ನೇ ಡೊಂಗ್ರ್ಯ—ಆತನಿಗೆ ಸುಮಾರು ವಯಸ್ಸು, ತಾಳಿ ಎಷ್ಟೆಂದು ಹೇಳಬಹುದು ? ನಮ್ಮ ಚಂಡಿಕ್ಯನ............

ಅಪ್ರ—ಸುಮಾರು ೬೫ ವರುಷವಿರಬಹುದು.

೩ ನೇ ಉಷ್ಣ್ಯ—(ದಂಡಿನ ಸಂಗಡ ಆ ಪ್ರಾಂತ ಬಂದಿರ ಬಹುದೆಂದು ಊಹಿಸಿ) ಮೈಸೂರ ದಂಡಿನಲ್ಲಿ ಜಮಾದಾರಿಯಿತ್ತಲ್ಲವೆ?

ಅಪ್ರ—ಸರ್ ತುಕಡಿ ದಾರಿಇಶ್ತು.

೪ ನೇ ಚಂಡಿಕ್ಯ—ಸರಿ ಹವುದು, ಅವರೇಯೇ. (ದಂಡಿನಲ್ಲಿ ಕಷ್ಟಪಟ್ಟು ಮಳೆಯಲ್ಲಿ ನೆನೆದು ಬಿಸಿಲಿನಲ್ಲಿ ಒಣಗಿದ ಮನುಷ್ಯನ ಮುಖದ ವರ್ಣ ಹೀಗಿರಬಹುದೆಂದು ಊಹಿಸಿ) ಆತನ ವರ್ಣ ಸುಮಾರು ಕ–ಕ–ಕ

ಅಪ್ರ—ಕಪ್ಪೂ ಅಲ್ಲ ಕೆಂಪೂ ಅಲ್ಲ ಶ್ಯಾಮವರ್ಣ:

೧ ನೇ ಘೊಂಡ್ಯ—ಅವರನ್ನು ನಾನು ಬಲ್ಲೆ. (ಮೈಸೂರು ದಂಡಿನವರೆಲ್ಲಾ ಗೋರ ಸರದಾರರಲ್ಲಿ ಚೆನ್ನಾಗಿ ಶಿಕ್ಷಿತರಾದವ ರೆಂದು ಇರುವ ಪ್ರವಾದವನ್ನು ಅನುಸರಿಸಿ) ಲಡಾಯಿ ಕ್ರಮದಲ್ಲಿ ಬಹಳ ಕಡಿದಾದ ಉದ್ಯೋಗಸ್ಥರು, ಹವುದೋ?

ಅಪ್ರ—ಹವುದು.

೨ ನೇ ಘೊಂಡ್ಯ—ಅವರು ಈಕಡೆ ಬಂದು ಇದಾರೆ. ಕೆಲವು ದಿವಸದಿಂದ ಒಂದು ಕಡೆಯಲ್ಲಿ ಅವಿತುಕೊಂಡಿದಾರೆ. ನಮ್ಮ ಸಂಗಡ ನೀವು ಬಂದರೆ ನಾನು ತೋರಿಸುತೇನೆ.

ಅಪ್ರಮೇಯನಿಗೆ ಈ ಮಾತು ಕಿವಿಗೆ ಬಿದ್ದ ಕೂಡಲೆ ಪಂಚ ಪ್ರಾಣವೂ ಎದ್ದು ಬಂದ ಹಾಗಾಯಿತು. ತನ್ನ ಮುಖ್ಯವಾದ ಕೋರಿಕೆಯೇ ನೆರವೇರಿದಂತಾಯಿತು. ಇನ್ನೇನು ಆಗಬೇಕು? ಕುರುಡನಿಗೆ ಕಣ್ಣು ಬಂದಂತಾಯಿತು. ಮಾರ್ಗದ ದಣುವೂ ತೋರಲಿಲ್ಲ, ಹಸಿವೂ ತೋರಲಿಲ್ಲ. ಆ ನಾಲ್ಕು ಜನರ ಸಂಗಡ ಅಪ್ರಮೇಯ ಹೊರಟನು. ಅವರು ಇವನನ್ನು ದಾರಿಯಲ್ಲದ ದಾರಿಯಲ್ಲಿ ಕರೆದುಕೊಂಡು ಹೋಗಿ ಅಲ್ಲಿ ಬಿದ್ದು ಇಲ್ಲಿ ಬಿದ್ದು ಪಶ್ಚಿಮ ಸಮುದ್ರಕ್ಕೆ ಹೋದರು. ಅಲ್ಲಿ ಒಂದು ದೋಣಿ ಬಿಟ್ಟಿತ್ತು. ಅದರಲ್ಲಿ ಅವನನ್ನು ಕೂರಿಸಿಕೊಂಡು ತಾವೂ ಕೂತು ಆ ನಾವೆಯನ್ನು

ನಡೆಸುತಾ ಇತರರಿಗೆ ತಿಳಿಯದ ಹಾಗೆ ಒಂದು ಬಗೆ ಭಾಷೆಯಲ್ಲಿ ರಹಸ್ಯವಾದ ಮಾತುಗಳನ್ನು ಆಡಿಕೊಳ್ಳುತಾ ಹೊರಟರು. ದೋಣಿಯನ್ನು ಸುಮಾರು ಮೂರುಗಂಟೇ ಹೊತ್ತು ನಡಿಸಿ ಕೊಂಡು ಹೋದ ತರುವಾಯ ಒಂದು ಎಡ ಕಟ್ಟು ಸಿಕ್ಕಿತು. ಆದರ ರೇವಿನಲ್ಲಿ ಒಂದು ಕೊಲ್ಲಿ ಇತ್ತು. ಅಲ್ಲಿ ತಾವು ಇಳಿದು ಅಪ್ರಮೇಯನನ್ನು ಮೆಲ್ಲಗೆ ಇಳಿಸಿಕೊಂಡು ಭೂಮಿಯ ಮೇಲೆ ಹೊರಡಲು, ಸ್ವಲ್ಪ ದೂರದಲ್ಲಿ ಒಂದು ದೊಡ್ಡ ಮನೆ ಸಿಕ್ಕಿತು. ಆ ಮನೆಯ ಗೋಡೆಯು ಕೋಟೇ ಗೋಡೆಯಂತಿತ್ತು. ಅಲ್ಲಿ ಭದ್ರವಾದ ಒಂದು ಚಿಕ್ಕ ಮನೆಯೊಳಗೆ ಇವನನ್ನು ಇಳಿಸಿ ಬಾಗಿ ಲಲ್ಲಿ ಬಲವಾಗಿ ಕಾದುಕೊಂಡಿದ್ದರು. ಅಪ್ರಮೇಯನು ಬ್ರಾಹ್ಮಣ ನೆಂದು ಮೊದಲೇ ಗೊತ್ತಾಗಿದ್ದ ಕಾರಣ ಬೇಕಾದ ಸಾಮಾನು ಗಳನ್ನು ಪುಷ್ಕಳವಾಗಿ ತಂದುಕೊಟ್ಟು ಅಡಿಗೇ ಮಾಡಿಸಿಕೊಂಡು ಊಟ ಮಾಡುವುದಕ್ಕೆ ಆಗಬೇಕಾದ ಸಾಮಾನುಗಳನ್ನು ಚೆನ್ನಾಗಿ ಒದಗಿಸಿಕೊಟ್ಟು ಅತಿಯಾಗಿ ಉಪಚಾರ ಮಾಡಿದರು. ಅಪ್ರಮೇಯನು ಹೊಟ್ಟೆತುಂಬ ಭೋಜನಮಾಡಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡನು. ಅಷ್ಟು ಹೊತ್ತಿಗೆ ಸಾಯಂಕಾಲವಾಯಿತು. ಆಗ ಅವರು ಅಪ್ರಮೇಯನನ್ನು ಕರೆದುಕೊಂಡು ಹೋಗುತಾ ಒಂದು ಕೊಟ್ಟಡಿಯಿಂದ ಇನ್ನೊಂದು ಕೊಟ್ಟಡಿ ಹೀಗೆ ಎಂಟು ಹತ್ತು ಬಾಗಿಲನ್ನು ತಟಹಾಯಿಸಿ ಹೋದರು. ಅವನನ್ನು ಒಂದು ಕತ್ತಲೇ ಮನೆಯಲ್ಲಿ ಕೂರಿಸಿ ತಾವು ಅರೆಗಳಿಗೆ ಹೊರಕ್ಕೆ ಹೋಗಿ ಮುಖವಾಡವನ್ನು ಹಾಕಿಕೊಂಡು ರೂಪವನ್ನು ಬದಲಾಯಿಸಿ ಕೊಂಡು ಕತ್ತಲೇ ಮನೆಗೆ ನುಗ್ಗಿ ಅಪ್ರಮೇಯನ ಕೈ ಹಿಡಿದು ಒಂದು ಒಳಬಾಗಿಲೊಳಕ್ಕೆ ಕರೆದುಕೊಂಡು ಹೋದರು.

ವಿಶಾಲವಾದ ಹಜಾರ ಸಿಕ್ಕಿತು. ಅಲ್ಲಿ ವಿಶೇಷವಾಗಿ ದೀಪ ಗಳನ್ನು ಹತ್ತಿಸಿದ್ದ ಕಾರಣ ಈ ನಾಲ್ಕು ವಿರೂಪವಾದ ಮುಖ ಗಳು ಕಾಣಿಸಿದವು. ಅದನ್ನು ಕಂಡು ಅಪ್ರಮೇಯನಿಗೆ ಅತ್ಯಂತ

ಭಯ ಉಂಟಾಯಿತು. ಆಗ ಅವನು ಮೊದಲಿದ್ದ ನಾಲ್ಕು ಜನರೇ ಈ ವೇಷಧಾರಿಗಳೆಂದು ಗೊತ್ತು ಸಿಕ್ಕದೆ - ಅಯ್ಯೋ, ಡೊಂಗ್ರ್ಯಾ, ಧೊಂಡ್ಯಾ ಎಲ್ಲಿ ಹೋದಿರಪ್ಪ ಎಂದು ಅರಿಚಿಕೊಂಡನು. ಆ ನಾಲ್ಕು ಜನರೂ ಆಳಿಗೆ ಎರಡು ಗುದ್ದಿನ ಪ್ರಕಾರ, ಅಪ್ರಮೇಯನನ್ನು ಹೊಡೆದು ಒಂದು ಮಾತನ್ನೂ ಆಡಬೆ ಒಂದು ಸಣ್ಣ ಸಂದಿನೊಳಗೆ ಆ ಪ್ರಾಣಿಯನ್ನು ತಳ್ಳಿಕೊಂಡು ಹೋದರು. ಅಲ್ಲಿ ಇನ್ನೊಂದು ದೊಡ್ಡ ಹಜಾರ ಸಿಕ್ಕಿತು. ಅಲ್ಲಿ ಒಂದು ಕಂಬಕ್ಕೆ ಬಾಗಡೋರು ಹಗ್ಗದಿಂದ ಅವನನ್ನು ಬಿಗಿದು ಆಚೆಗೆ ಹೊರಟು ಹೋದರು. ಆ ಹಜಾರದ ಸ್ಥಿತಿಯನ್ನು ಏನೆಂದು ವರ್ಣಿಸೋಣ! ಅಲ್ಲಿ ಗೋಡೆ ಒತ್ತಿಗೆ ಮಧ್ಯರಾಷ್ಟ್ರದಲ್ಲಿ ಅತಿವಿಕಾರ ಸ್ವರೂಪ ಉಳ್ಳ ಆಳುದ್ದದ ಒಂದು ಹೆಣ್ಣು ಪ್ರತಿಮೆ ಕೂರಿಸಿತ್ತು. ಅದರ ಎರಡು ಪಕ್ಕದಲ್ಲಿಯೂ ಎರಡು ತಲೆ ಹೋದ ಮುಂಡಗಳನ್ನು ಹೇಗೆಯೋ ನಿಲ್ಲಿಸಿ ಅದರ ಮೇಲೆ ಮಣ್ಣಿನ ದೊಡ್ಡ ಹಣತೆಗಳನ್ನು ಇರಿಸಿ ಅದಕ್ಕೆ ಮನುಷ್ಯರ ತಲೇ ಕೊಬ್ಬನ್ನು ಹಾಕಿ ದೊಡ್ಡ ಮೊಂದೆಯನ್ನು ಹತ್ತಿಸಿತ್ತು. ಅದರಿಂದ ಈಚೆಗೆ ದೇವರ ಸಮೀಪದಿಂದ ಸುತ್ತಲೂ ಒಂದೆರಡು ದಿವಸದ ಕೆಳಗೆ ಕುಯಿದ ಮನುಷ್ಯರ ತಲೇಬುರುಡೆಗಳು ನಾಲ್ಕು ಇರಿಸಿದ್ದವು. ಆ ತಲೆಗಳಮೇಲೆ ದೊಡ್ಡ ಸಣಾವೆಗಳನ್ನಿರಿಸಿ ಎಣ್ಣೇ ಹಾಕಿ ಕಕ್ಕಡವನ್ನು ಹತ್ತಿಸಿದ್ದರು. ಆ ದೇವರಿಗೆ ಎಂಟು ಕೈ ಇತ್ತು. ಒಂದೊಂದು ಕೈಯಲ್ಲಿ ಒಂದೊಂದು ಆಯುಧವಿತ್ತು. ತೆರದ ಬಾಯಿ ನಾಲ್ಕು ಕೋರೇದಾಡೆ ಭಯಂಕರವಾದ ರೂಪು, ಕೆಂಪು ಹೂವಿನಿಂದ ಮಾಡಿದ ಅಂತರಂತರವಾದ ದಂಡೆಯ ಹಾರಗಳು, ಒಂದು ಕಾಲು ಒಂದು ಹೆಣದ ತಲೆಯಮೇಲೆ, ಒಂದು ಕಾಲು ಅದರ ಹೊಟ್ಟೆಯಮೇಲೆ, ಮುಂದುಗಡೆ ಕತ್ತು ಕತ್ತರಿಸಿ ಬಿದ್ದಿದ್ದ ಒಂದು ಕೋಣ ಅಲ್ಲೆಲ್ಲಾ ವಿಪರೀತವಾಗಿ ಚೆಲ್ಲಾಡಿ ಗುಂಡಿಕಟ್ಟಿ ನಿಂತಿದ್ದ ರಕ್ತ, ದೇವತೆಯ ಎದುರಿಗೆ ಬಲಿಯ ಕಂಬ, ಇದೆಲ್ಲಾ

ಕಾಣಿಸಿತು. ಆ ಕಂಬಕ್ಕೇ ಅಪ್ರಮೇಯನನ್ನು ಬಿಗಿದಿದ್ದರು. ಅಲ್ಲಿನ ಸ್ಥಿತಿಯನ್ನು ವಿವರಿಸುವುದಕ್ಕೇ ಎಷ್ಟೋ ಭಯವಾಗುವುದು. ಅವನ ಮನಸ್ಸಿನ ಗಾಬರಿಯನ್ನು ಹೇಳುವುದು ಕಷ್ಟ. ಎಲ್ಲಿ ನೋಡಿದರೂ ಹೆಣಮಯವಾಗಿದ್ದ ಆ ಬಳಿಯಲ್ಲಿ ತನ್ನನ್ನೂ ಬಲಿ ಕೊಡುವುದಕ್ಕೆ ಕರೆದು ತಂದಿದ್ದಾರೆಂದು ಪ್ರಾಣಭೀತಿ ದೊಡ್ಡದಾಗಿತ್ತು. ಆ ಗಾಬರಿಗೆ ದುಃಖ ಬೇರೆ ಸೇರಿಕೊಂಡಿತು. ಯಾತಕ್ಕೂ ಹೆದರದ ಮನುಷ್ಯ ಅಲ್ಲಿ ಹೆದರಿದನು, ಮತ್ತು ಆ ಪ್ರಯತ್ನವಾಗಿ ಕೆಟ್ಟ ಅರಚಲನ್ನು ಅರಿಚುವುದಕ್ಕೆ ಆರಂಭಿಸಿದನು. ಅವನಿಗೆ ಪಂಚಪ್ರಾಣವೂ ಹೋದ ಹಾಗಾಯಿತು. ಅದುವರೆಗೆ ಅನುಭವಿಸಿದ ಕಷ್ಟವನ್ನೆಲ್ಲಾ ಬಾಯಲ್ಲಿ ಹಲಬುತಾ ಹಾಡಿ ಹಾಡಿಕೊಂಡು ಅಳುತಾ ಇದ್ದನು.

ಆ ಹಜಾರಕ್ಕೆ ಇನ್ನೊಂದು ಒಳಬಾಗಿಲಿತ್ತು. ಈ ಕೂಗನ್ನೂ ಗೋಳನ್ನೂ ಕೇಳಿ ಹತ್ತು ವರುಷದ ಒಬ್ಬ ಹುಡುಗಿಯು ಆ ಬಾಗಿಲಿಗೆ ಬಂದಳು. ಅವನ ಸೌಮ್ಯವಾದ ಆಕಾರ ಯಾರ ಕಣ್ಣಿಗೆ ತಾನೆ ಅಂದವಾಗಿ ತೋರದು? ಅವನ ಇಂಪಾದ ಕಂಠಧ್ವನಿ ಯಾರಿಗೆ ತಾನೇ ಕರ್ಣಕಠೋರವಾಗಿದ್ದೀತು? ಇನ್ನೊಂದು ಸಾರಿ ಕೇಳಿಯೇನು ಎನ್ನುವಹಾಗೆ ಇದ್ದ ಅವನ ಮಾತಿನ ಒಕ್ಕಣೆಯು ಯಾರಿಗೆ ತಾನೇ ತಿಳಿಯದೇ ಹೋದೀತು? ಅದುವರೆಗೆ ಅವನು ಅನುಭವಿಸಿದ ಕಷ್ಟಪರಂಪರೆಯ ಕಥೆಯು ಯಾರ ಮನಸ್ಸನ್ನು ತಾನೇ ಕರಗಿಸದು? ಹೀಗೆ ದುಃಖ ಪಡುವುದನ್ನು ನೋಡಿದರೆ ಯಾರಿಗೆ ತಾನೆ ಕಣ್ಣು ಚುಳ್ಳೆನ್ನುವುದಿಲ್ಲ? ಆ ಕನ್ನೆಯು ಇವನನ್ನು ಕಂಡು ತಾನೂ ಅಳುವದಕ್ಕೆ ಆರಂಭಿಸಿದಳು. ತರುವಾಯ ಹಾಗೆಯೇ ಅವನ ಸಮೀಪಕ್ಕೆ ಬಂದು ನಿಂತು—ಅಪ್ಪಾ, ನೀನು ಯಾರು? ಎಂದು ಮರಾಟಿಯಲ್ಲಿ ಕೇಳಿದಳು. ಅಪ್ರಮೇಯನು ತನ್ನ ಪೂರ್ವ ಕಥೆಯನ್ನೂ ಆ ದುಷ್ಟ ಜನರು ತನ್ನನ್ನು ಅಲ್ಲಿಗೆ ಕರೆತಂದು ಬಿಟ್ಟದ್ದನ್ನೂ ಹೇಳಿಕೊಂಡನು.

ಇದನ್ನು ಕೇಳಿ ಆ ಹುಡುಗಿಯು—ಅಪ್ಪಾ, ಇದು ದಸರ ಹಬ್ಬ, ನಾವು ಕರಾಡಿಗರು, ಈ ದಿವಸ ದುರ್ಗಾಷ್ಟಮಿ, ಈ ಮಹಾ ಕಾಳಿಗೆ ಇಂದು ರಾತ್ರೆ ಸರಿಹೊತ್ತಿನಲ್ಲಿ ಬಲಿಕೊಡಲು ನಿನ್ನನ್ನು ಕರೆದು ತಂದಿದಾರೆ. ಈಗ ಕತ್ತಲೆಯಾಗಿದೆ, ಗಂಡಸರೆಲ್ಲಾ ಹೊರಗೆ ದೋಣೀ ಮೇಲೆ ಹೋಗಿದಾರೆ. ನಮ್ಮ ತಾಯಿ ಮೊದಲಾದವರು ಒಳಗೆ ಇದಾರೆ. ಹೇಗಾದರೂ ನಿನ್ನ ಪ್ರಾಣ ವನ್ನು ಉಳಿಸಿಕೋ, ಎಂದು ಹೇಳಿ ಅವನ ಕಟ್ಟನ್ನು ಬಿಚ್ಚಿಯೂ ಬಿಚ್ಚಿದಳು, ಮುಂದೆ ಅವ ಮಾಡಬೇಕಾದ ಉಪಾಯವನ್ನು ಹೇಳಿಯೂ ಕೊಟ್ಟಳು. ಆ ಹುಡುಗಿಯು ತನ್ನ ಭಾಗಕ್ಕೆ ಸಾಕ್ಷಾತು ಪಾರ್ವತಿ ಎಂದು ಅಪ್ರಮೇಯನು ಭಾವಿಸಿ ಅವಳನ್ನು ಮನಸ್ಸಿನಲ್ಲಿ ಸ್ತೋತ್ರಮಾಡುತಾ ಪಕ್ಕದಲ್ಲಿದ್ದ ಇನ್ನೊಂದು ಬಾಗಿ ಲನ್ನು ತೆಗೆದು ಹೊರಕ್ಕೆ ಹೋದನು. ಅಲ್ಲಿಂದ ಹಿತ್ತಲ ಕಡೆಗೆ ಹೋಯಿತು. ಅಲ್ಲಿ ಗೋಡೆ ಹತ್ತಿ ಕೆಳಕ್ಕೆ ದುಮಿಕಿ ಸುಮಾರು ನೂರುಮಾರು ದೂರ ಓಡಿದನು, ಅಲ್ಲಿ ಸಮುದ್ರ ಸಿಕ್ಕಿತು. ನೀರಿನ ಅಲತೆ ಅಲ್ಲಿ ಹೆಚ್ಚಾಗಿರಲಿಲ್ಲ. ಆದರೇನು, ಸಮುದ್ರ ವನ್ನು ದಾಟುವುದು ಹೇಗೆ? ಪ್ರಾಣ ಭೀತಿಯುಂಟಾದ ಕಾಲದಲ್ಲಿ ಮನುಷ್ಯನಿಗೆ ಇಲ್ಲದ ಧೈರ್ಯ ಉಂಟಾಗುವುದು. ಆ ಮನೆಯಿಂದ ಆ ರೇವಿನವರೆಗೂ ಒಂದು ಕಾಲುದಾರಿ ಇದ್ದಹಾಗೆ ಕಾಣಿಸಿತು, ನೀರಿನ ತಡಿಯಲ್ಲಿ ಹಾಗೆಯೇ ಹುಡುಕಿಕೊಂಡು ಹೋಗುವಾಗ ಒಂದು ಮರದ ತುಂಡು ಸಿಕ್ಕಿತು. ಆ ಕರಾಡಿ ಜನರು ಸಮು ದ್ರದ ಖಾರಿಯನ್ನು ದಾಟಿಕೊಂಡು ಹೋಗುವುದಕ್ಕೆ ಅದೂ ಒಂದು ಮಾರ್ಗವಾಗಿ ತೋರಿತು. ಅಪ್ರಮೇಯನಿಗೆ ಈಜು ಚೆನ್ನಾಗಿ ಬರುತ್ತಿತ್ತು. ಆ ಮರದ ತುಂಡಿನ ಆಸರೆಯೂ ದೊರೆತ ಕಾರಣ ನೀರಿನಲ್ಲಿ ಮುಳುಗಿ ಹೋದೇನೆಂಬ ಭೀತಿ ಏನೂ ಇರ ಲಿಲ್ಲ. ಇವನ ಬಟ್ಟೆ ಗಂಟೆಲ್ಲಾ ಕಾಳೀ ಗುಡಿಯಲ್ಲಿಯೇ ನಿಂತು ಹೋಯಿತು. ಪ್ರಾಣ ಉಳಿದರೆ ಸಾಕೆಂದು ಮೃತ್ಯುದೇವತೆಯ

ಬಾಯಿಂದ ಈಚೆಬಂದ ಸಮಯದಲ್ಲಿ ಯಾವುದೂ ಬೇಕಾಗುವು ದಿಲ್ಲ. ಉಟ್ಟ ಪಂಚೆ ಒಂದು ಮಾತ್ರ ಇತ್ತು. ಆ ಮರದ ತುಂಡನ್ನು ಕಟ್ಟಿಕೊಂಡು ಈಜುಬಿದ್ದನು. ಹೋಗ ಹೋಗುತಾ ಸಮುದ್ರದ ಅಲೆ ಹೆಚ್ಚಾಯಿತು. ಆದರೂ ಕಷ್ಟಪಟ್ಟು ಹೋಗಿ ಎದುರು ತಡಿಯನ್ನು ಸೇರಿದನು. ಅಲ್ಲಿಂದ ದಾರಿಯನ್ನೂ ಕಾಣದೆ ಬಟ್ಟೆಯನ್ನೂ ಕಾಣದೆ ಕಾಡುಬಿದ್ದು ಒಂದು ರಾತ್ರೆ ಒಂದು ಹಗಲು ನಡೆದನು. ಕರಾಡಿ ನೀಚರು ಎಲ್ಲಿ ಹರಿಸಿ ಕೊಂಡು ಬರುತಾರೋ ಎಂದು ಹಿಂತಿರುಗಿ ನೋಡುತಾ ಹೋಗಿ ಒಂದು ಹಳ್ಳಿಯನ್ನು ಸೇರಿದನು. ಅಲ್ಲಿ ಸಾವಿರಾರು ಮನೆ ಗಳಿದ್ದವು. ಅಲ್ಲಿ ತಿರುಪೇ ಮಾಡಿ ಎರಡು ಹಳೇ ಪಂಚೆ ಯನ್ನು ಸಂಪಾದಿಸಿಕೊಂಡು ಒಬ್ಬ ಬ್ರಾಹ್ಮಣರ ಮನೆಗೆ ಹೋಗಿ ಒಂದು ಹೊತ್ತು ಅನ್ನವನ್ನು ಹಾಕಬೇಕೆಂದು ಬೇಡಿದನು. ಸಮಯ ಬಂದಾಗ ಮನುಷ್ಯನ ಉಪಾಯವನ್ನೆಲ್ಲಾ ತೋರಿಸ ಬೇಕಾಗುತ್ತೆ. ಇವನು ಆಡತಕ್ಕ ಲಕ್ಷಣವಾದ ಮರಾಟಿ ಮಾತೂ ಇವನು ಹೇಳುವ ಮಂತ್ರವೂ ರಾಗವಾಗಿ ಹೇಳುವ ಶ್ಲೋಕಗಳೂ ದೇಶಸ್ಥ ಬ್ರಾಹ್ಮಣರಾದ ಆ ಮನೆ ಜನರಿಗೆ ಇವನಲ್ಲಿ ಭಕ್ತಿ ಯನ್ನೂ ವಿಶ್ವಾಸವನ್ನೂ ಹುಟ್ಟಿಸಿದವು. ಆ ದಿವಸ ವಿಜಯ ದಶಮಿಯಾಗಿತ್ತು. ತಾನಾಗಿ ಅಭ್ಯಾಗತನಾಗಿ ಬಂದ ಬ್ರಾಹ್ಮಣ ನನ್ನು ಬಿಟ್ಟಾರೆ? ಅಲ್ಲಿ ಹಬ್ಬದ ಊಟವಾಯಿತು. ಆ ಘಾತು ಕರು ಎಲ್ಲಿ ಹಿಂದಟ್ಟಿ ಬಂದು ಹಿಡಿದುಕೊಂಡು ಹೋಗುತಾರೋ ಎಂಬ ಅಳಕು ಇದ್ದೇ ಇತ್ತು. ಕೂಡಲೆ ಅಲ್ಲಿಂದ ಪ್ರಯಾಣ ಮಾಡಿ ಹೊರಟನು. ಪರದೇಶಿಗಳು, ದಿಕ್ಕುಕೆಟ್ಟವರು ಎಂದರೆ ಅವರನ್ನು ಆದರಿಸುವ ಧರ್ಮಗುಣವು ನಮ್ಮ ಜನರಲ್ಲಿ ಬಲ ವಾಗಿಯೇ ಇತ್ತು. ಬಂದ ಅತಿಥಿಗಳನ್ನು—ಏನಾದರೂ ಕೆಲಸ ಮಾಡು, ದುಡಿದು ಸಂಪಾದನೆ ಮಾಡು, ಆಚೆಗೆ ನಡೆ, ನಿಮ್ಮಂಥಾ ಮುಟ್ಟಲಿಗಳಿಂದಲೇ ನಮ್ಮ ದೇಶವು ಹಾಳಾಯಿತು, ಎಂದು ಅಟ್ಟಿ

ಹರಿಯುವ ಕೋಸೇಮನೆ ಶೂರರೂ ದೇಶಾಭಿಮಾನಿಗಳೂ ಆಗ ಇನ್ನೂ ಹುಟ್ಟಿರಲಿಲ್ಲ. ಧರ್ಮಗುಣವು ಹಿಂದುಸ್ಥಾನವನ್ನು ಇನ್ನೂ ಬಿಟ್ಟಿರಲಿಲ್ಲ. ಹಾಗೂ ಹೀಗೂ ಯೋಚನೆ ಮಾಡುತಾ ಅಪ್ರಮೇಯ ಹೊರಟನು.

ಎಷ್ಟು ಪ್ರಯತ್ನ ಮಾಡಿದರೂ ಹನುಮಂತರಾಯ ಸಿಕ್ಕಲಿಲ್ಲ. ಹೆಂಡತಿ ಮಕ್ಕಳನ್ನು ನೋಡಿ ಬಹಳ ದಿವಸವಾಯಿತು. ಸ್ಥಳಕ್ಕೆ ಹೋಗಿ ಸ್ವಲ್ಪ ದಿವಸ ಸುಧಾರಿಸಿಕೊಂಡು ಇನ್ನೊಂದು ಸಾರಿ ಹೊರಡೋಣವೆಂದು ಮನಸ್ಸು ಹುಟ್ಟಿತು. ಅಪ್ರಮೇಯನು ಅಲ್ಲಿಂದ ಗುಂಡಲಪೇಟೆಗೆ ಬಂದನು. ಈತನನ್ನು ಕಾಣದೆ ವ್ಯಥೆ ಪಡುತಿದ್ದ ಅವನ ಹೆಂಡತಿ ಮಕ್ಕಳು ಮೊದಲಾದ ಸಂಬಂಧಿಗಳೆಲ್ಲಾ ಬಹಳ ಸಂತೋಷಪಟ್ಟರು.

## ೧೬ ನೇ ಅಧ್ಯಾಯ

# ಹಿಟ್ಟಿಗೆನಾ ಬಿಟ್ಟಿಗೆನಾ

ಸಮುದ್ರದ ಎಡತಿಟ್ಟಿನಲ್ಲಿ ಕರಾಡಿಗರ ಛದ್ಮಸೆಯಿಂದ ಸಿಕ್ಕಿ ಉಂಟಾಗಿದ್ದ ಪ್ರಾಣ ಭಯವು ಅಪ್ರಮೇಯನ ಮನಸ್ಸಿಗೆ ಬಹುವಾಗಿ ಅಂಟಿಹೋಗಿತ್ತು. ಊರಿಗೆ ಹೋಗಿ ತಲಪಿದ ಎಂಟು ಹತ್ತು ದಿವಸಕ್ಕೆ ಅವನಿಗೆ ಜ್ವರ ಛಳಿ ಬಂದು ಬದುಕುವುದೇ ಬಹು ಕಷ್ಟವಾಯಿತು. ಇಷ್ಟ ದೇವರ ಹರಕೆ, ಮನೆದೇವರಿಗೆ ಮಾಸಲು, ಮಂತ್ರಜ್ಞರಲ್ಲಿ ಯಂತ್ರ, ಮಂತ್ರವಾದಿಗಳಲ್ಲಿ ಮಂತ್ರ, ವೈದ್ಯರ ಔಷಧ, ಕಂಡು ಕೇಳಿದ ಮದ್ದು, ಸೂರ್ಯನಮಸ್ಕಾರ, ನವಗ್ರಹ ಜಪ, ಪೀಡಾ ಪರಿಹಾರಾರ್ಥವಾಗಿ ಮೃತ್ಯುಂಜಯ ಜಪ, ಬ್ರಾಹ್ಮಣ ಸಮಾರಾಧನೆ, ಕೈಮುಸಕಿನ ಔಷಧಿ, ಶೂನ್ಯವನ್ನು ಹಿಂತಿರುಗಿಸುವ ಪ್ರತೀಕಾರ, ಇವುಗಳೆಲ್ಲವನ್ನೂ ಮಾಡಿ ಮುಗಿಸಿದರು. ದೈವಕೃಪೆಯಿಂದ ಕಡೆಗೆ ಗುಣವಾಯಿತು. ಆದರೆ

ಹೊಟ್ಟೆಯಲ್ಲಿ ಜ್ವರದ ಗಡ್ಡೆ ಕಟ್ಟಿತು. ಅದನ್ನು ನಿವಾರಣೆ ಮಾಡಿಕೊಳ್ಳುವುದಕ್ಕಾಗಿ ಬಹು ಪೇಚಾಟವಾಯಿತು.

ತೆರಕಣಾಂಬಿ ಎಂಬ ಊರಿನ ಸಮೀಪದಲ್ಲಿ ಒಬ್ಬ ಶೂದ್ರನು ಅಗ್ನಿ ವೈದ್ಯವನ್ನು ಮಾಡಿ ಗುಣಮಾಡುತ್ತಾನೆಂದು ತಿಳಿಯ ಬಂತು. ಅಪ್ರಮೇಯನು ಆ ಊರಿಗೆ ಹೋಗಿ ತಲಪಿದನು. ಗೋಪೇ ಗೌಡನೆಂಬ ಆ ಚಿಕಿತ್ಸಕನು ಆ ಊರ ಹೊರಗೆ ಒಂದು ಹುಲ್ಲುಗುಡಿಸಲನ್ನು ಹಾಕಿಕೊಂಡು ವಾಸವಾಗಿದ್ದನು. ಇವನು ಮಾಡತಕ್ಕ ಚಿಕಿತ್ಸೆಗಾಗಿ ಅನೇಕಜನ ರೋಗಿಗಳು ಆ ಊರಲ್ಲಿ ಬಂದು ವಾಸವಾಗಿದ್ದರು. ಇವರುಗಳು ಇಳಿದುಕೊಳ್ಳುವುದ ಕ್ಕೋಸ್ಕರ ಆ ವೈದ್ಯನು ತನ್ನ ಮನೇ ಎದುರಿಗೆ ದೊಡ್ಡದಾಗಿ ಹುಲ್ಲು ಮನೆಯನ್ನು ಕಟ್ಟಿಸಿದ್ದನು. ಅಲ್ಲಿ ಹಲವುಜನ ರೋಗಿ ಗಳೂ ಅವರ ಪೋಷಕರೂ ಬಂದು ಇಳಿದಿದ್ದರು. ಅವರಿಗೆಲ್ಲಾ ತಕ್ಕ ಪ್ರಯೋಗಗಳನ್ನು ಮಾಡಿ ಗುಣವಾಗುವವರೆಗೆ ಅವರು ಗಳನ್ನು ತನ್ನ ಹವೇಲಿ ಛತ್ರದಲ್ಲಿಯೇ ಇರಿಸಿಕೊಂಡು ಅವರ ಊಟ ಉಪಚಾರಗಳಿಗೆ ಬೇಕಾದ ಸಾಮಾನುಗಳನ್ನು ಅವರಿಂದ ಒಂದು ಕವಡೆಯನ್ನೂ ಮುಟ್ಟದೆ ಒದಗಿಸಿಕೊಟ್ಟು ಅವರಿಗೆ ಗುಣಮಾಡಿ ಕಳುಹಿಸಿಕೊಡುತ್ತಿದ್ದನು. ಅಂಥವರಲ್ಲಿ ಪುಣ್ಯವಂತ ರಾದವರು ತಮ್ಮ ಶಕ್ತ್ಯನುಸಾರವಾಗಿ ಹಣವನ್ನು ಕೊಡುತ್ತಿ ದ್ದರು, ಕೊಡದೇ ಇದ್ದವರನ್ನು ಬಲವಂತ ಮಾಡುತ್ತಿರಲಿಲ್ಲ. ಹೀಗೆ ಬಂದ ಹಣವನ್ನು ಗೋಪೇ ಗೌಡನು ರೋಗಿಗಳಿಗೋಸ್ಕ ರವೇ ವೆಚ್ಚಮಾಡುತ್ತಿದ್ದನಲ್ಲದೆ ಅದರಲ್ಲಿ ಒಂದು ಕಾಸನ್ನೂ ತನ್ನ ಸ್ವಂತಕ್ಕೆ ಉಪಯೋಗಿಸಿಕೊಳ್ಳುತ್ತಿರಲಿಲ್ಲ. ಇವನು ಸ್ವಭಾವ ವಾಗಿ ಬಹಳ ಬಡವನಾಗಿದ್ದನು. ಇವ ಹೊದ್ದುಕೊಳ್ಳುವುದಕ್ಕೆ ಒಂದು ಜೂಲು ಕಂಬಳಿ ಇವನ ಹೆಂಡತಿ ಉಟ್ಟುಕೊಳ್ಳುವುದಕ್ಕೆ ಒಂದು ಹೊಬೆ ಮಗ್ಗದ ಬಿಳೀಸೀರೇ ತುಂಡು, ಇಷ್ಟು ಹೊರತು ಬೇರೇ ಗಟ್ಟಿಯಾದ ಬಟ್ಟೆ ಕೂಡಾ ಇರಲಿಲ್ಲ. ಅವನ ಹೆಂಡತೀ

ಕತ್ತಿನಲ್ಲಿ ಒಂದು ಹಿತ್ತಾಳೀ ತಾಳಿ ವಿನಾ ಮನೆಯಲ್ಲಿ ಇನ್ನು ಯಾವ ಹಿತ್ತಾಳೀ ಸಾಮಾನೂ ಇರಲಿಲ್ಲ. ಚಿನ್ನ ಬೆಳ್ಳಿ ತಾಮ್ರ ಈ ಲೋಹಗಳನ್ನು ಇತರರ ಮನೆಯಲ್ಲಿಯೂ ಯಾರಾದರೂ ದುಡ್ಡು ಕೊಟ್ಟರೆ ಆಗಲೂ ನೋಡಿದ್ದೇ ಹೊರತು ಜೇರೆ ಗತಿ ಇಲ್ಲ. ಸಾಧಾರಣವಾದ ಒಂದು ಹೊಲವಿತ್ತು, ಅದರಿಂದ ೫-೬ ಕಂಡಗ ರಾಗಿ ಬರುತಿತ್ತು. ರೋಗಿಗಳ ಗದ್ದಲದಲ್ಲಿ ಹೊಲವನ್ನು ಸ್ವಂತ ವಾಗಿ ಸಾಗುವಳೀ ಮಾಡುತಿರಲಿಲ್ಲ. ವಾರಕ್ಕೆ ಕೊಟ್ಟಿದ್ದನು. ಸ್ವಂತವಾಗಿ ಸಾಗುವಳಿಮಾಡುತಿದ್ದರೆ ಇನ್ನೂ ಐಕಂಡಗ ಹೆಚ್ಚಾಗಿ ಬರಬಹುದಾಗಿತ್ತು. ಇಷ್ಟು ಬಡತನವನ್ನು ಅನುಭವಿಸುತಿದ್ದಾಗ್ಯೂ ಅವನು ತನ್ನ ಧರ್ಮಗುಣವನ್ನೂ ಪರೋಪಕಾರ ಬುದ್ಧಿಯನ್ನೂ ಬಿಟ್ಟಿರಲಿಲ್ಲ. ಅಪ್ರಮೇಯನು ಆ ಊರಿಗೆ ಬಂದು ಇಳಿದು ಕೊಂಡ ಎರಡು ಮೂರು ದಿವಸಕ್ಕೆ ಹಗಲು ಹೊತ್ತಿನಲ್ಲಿ ಬಡತನ ವೆಂಬ ಪಿಶಾಚಿಯ ಕಾಟದಿಂದ ಗಂಡನಿಗೂ ಹೆಂಡತಿಗೂ ಮಾತು ಬೆಳೆಯುತಾ ಬಂತು.

ಹೆಂಡತಿ—ಅಂದಿಗೆ ಆ ಬಟ್ಟೆ, ಇಂದಿಗೆ ಈ ಬಟ್ಟೆ, ಮುಂದಕ್ಕೆ ದರದಟ್ಟೆ. ಇನ್ನೆಂದು ಹೊಟ್ಟೆ ತುಂಬ ಹಿಟ್ಟಹಾಕಿದ್ದೀಯೆ?

ಗೋಪೇಗೌಡ—ಎಂದು ನೀ ಹಸುಗಂಡು ಇದ್ದದು? ನೆನ್ನೆ ಮೊನ್ನೆ ಬಿಸಿ ಉಣಲಿಲ್ಲವ?

ಹೆಂಡತಿ—ಮೊನ್ನೆ ಎಲ್ಲಿ ಉಂಡಿ? ವಸಿ ಜೋಳದ ಅಂಬಲಿ ಯಲ್ಲವ ಕುಡದದು?

ಗೋಪೇ—ನನಗೆ ಅದೂ ಇಲ್ಲವಲ್ಲ? ಹಸಗಂಡು ಎಡ ಮಗ್ಗ ಲಾದಿ.

ಹೆಂಡತಿ—ವಸಿ ಅಂಬಲಿ ಬಸಗಂಡರೆ ಹೊಟ್ಟೆ ತುಂಬತ್ತೈತ? ಹಿಂಗೆ ಹೊಟ್ಟೆಗಿಲ್ಲದೆ ಸತ್ತರೆ ಕಳ್ಳೆಲ್ಲಾ ಸುಂಡಿ ಹೋಗಾಕಿಲ್ಲವ? ಕೈ ಕಾಲು ಹೆಂಗೆ ಬತ್ತದೆ? ಎತ್ತಿಗೆ ಹತ್ತು ಹರವಿ, ಎಮ್ಮೆಗೆ ಹತ್ತು ಹರವಿ ನೀರತಂದು ಬಾನಿಗೆ ಹುಯ್‌ಬೇಡವ, ಹುಲ್ಲ

ಹಾಕಬೇಡವ, ಕರೀಬೇಡವ, ಕಾಸಬೇಡವ, ತೊಪ್ಪೆ ತಟ್ಟಬೇಡವ, ರಾಗಿ ಮಾಡಬೇಡವ, ಹಸಿಹಿಟ್ಟು ಬೀಸಬೇಡವ, ತೊಳಸಬೇಡವ, ಮುದ್ದೆಮಾಡಬೇಡವ, ಇಕ್ಕಿ ಬಡಿಸಿ ಮಾಡಬೇಡವ? ಹೊಟ್ಟೆಗಿಲ್ಲದೆ ಇದೆಲ್ಲಾ ಮಾಡಾಕಾದಾತಾ? ಏಡು ಹೊತ್ತು ಹೊಟ್ಟೆಗೆ ಹಿಟ್ಟಿಲ್ಲ ಜಿದ್ದರೆ ನಾ ದುಡೀಲಾರೆ.

ಗೋಪೇ—ಅದೇನು ಬಗೆ ಅತ್ತೀಯುತೆ? ಕಂದಾಯಕೆನಾ, ಕವಣಿಕೆನಾ, ಹಿಟ್ಟಿಗೆನಾ, ಬಟ್ಟೆಗೆನಾ, ಎಂಡಿಸ್ಪತ್ತಣ ತೆರಾಕೆನಾ, ಹಸಗಂಡು ಹಸಗಂಡು ಬಿದ್ದಿರಾಕೆನಾ, ಉಣ್ಣಾಕೆ ನೀ ಅಲ್ಲವ?

ಹೀಗೆ ಗಂಡ ಹೆಂಡಿರಿಬ್ಬರೂ ಒಬ್ಬರನ್ನು ಒಬ್ಬರು ಮಾಕರಿಸಿ ಮಾತನಾಡುತಾ ಇರುವಾಗ ಅವರ ಗುಡಿಸಿಲಲ್ಲಿ ಚಿಕಿತ್ಸೆಗೋಸ್ಕರ ಮೊದಲೇ ಬಂದು ಕೂತಿದ್ದ ಅಪ್ರಮೇಯನು ಹೆಂಡತಿಯನ್ನು ಹಾಗೆ ಎನ್ನಬೇಡವೆಂದು ಹೇಳಲು, ಕೂಡಲೆ ಗೋಪೇಗೌಡನು—ನೋಡಿ ಬುದ್ಧಿಮಂತೆ, ಏನೂ ಗತಿ ಇಲ್ಲದವನ ಕಂಡಹಂಗೆ ಆಡತವಳೆ. ನಮ್ಮಪ್ಪ ಇದ್ದಾಗ ಒಂದು ಜಿನಕೆ ಹತ್ತು ಬಳ್ಳ ಹಸಿಟ್ಟು ಹಾಕಿದರೂ ಸಾಲುತಿರಲ್ಲ, ಹಂಗಿತ್ತು. ಮನೇಲಿ ತಲೆಗೊಂದು ಕಂಬಳಿ ಒಂದು ಹೊಡಕೆ ಚಾಪೆ, ಹೆಮಕಗೊಳಿಗೆ ಬಿಳೀಸೀರೆ, ಹಿತ್ತಾಳೆ ಕಡಗ, ಬೆಳ್ಳಿತಾಳಿ, ಕಾಲಿಗೆ ಕಂಚಿನ ಮಿಂಚು ಇವೆಲ್ಲಾ ಇತ್ತು; ಮನೇಲಿ ಏಡುಕಂಚಿನ ತಣಿಗೆ, ನಾಲ್ಕು ದೊಡ್ಡ ಗುಡಾಣ ಇದ್ವೊ. ಹಂಗೆ ಹಿಂಗೆ ವಸಿ ನೆಮ್ಮದಿಯಾಗಿಯೇ ಇರಲಿಲ್ಲವ? ಏನೋ ಗತಿ ಇಲ್ಲದವನ ಕಂಡಹಂಗೆ ಕೆಲೆತವಳೆ. ಆಗ ಹಂಗೆ ಧಾರಾಳವಿತ್ತು. ಈಚೆಗೆ ಕಾಲ ಬಿಗಿಯಾಯಿತೇಳಿ, ಎಂದನು. ಅಪ್ರಮೇಯನು ಇದನ್ನು ಕೇಳಿ ತನ್ನ ಮನಸ್ಸಿನಲ್ಲಿ—ಅಯ್ಯೋ ಏನೆಂದು ಹೇಳೋಣ! ಈ ಲೋಕದಲ್ಲಿ ಕಷ್ಟವೆಲ್ಲಾ ಸತ್ಪುರುಷರಿಗೇ ಹೆಚ್ಚಾಗಿ ಸಂಭವಿಸುವುದು. ಅಂಥವರಿಗೆ ಜಾಗ್ರತೆಯಾಗಿ ಜನ್ಮೋತ್ತಾರಣೆಯಾಗುವಕಾರಣ ಅವರ ಪೂರ್ವಾರ್ಜಿತವಾದ ಸಣ್ಣ ಸಣ್ಣ ಪಾಪಶೇಷಗಳನ್ನು ಅಂಥಾ

ಮನುಷ್ಯ ಜಾಗ್ರತೆಯಾಗಿ ಅನುಭವಿಸಿಬಿಡಲೆಂದು ಅವರಿಗೆ ವಿಶೇಷವಾಗಿ ದಾರಿದ್ರ್ಯ ಪ್ರಾಪ್ತವಾಗುವುದೆ? ಹಾಗಾದರೆ ತಂಡೋಪತಂಡವಾದ ದುಃಖ ಪರಂಪರೆ ಇಲ್ಲದೇ ರಾಜಯೋಗಿಗಳಿಗೆ ಕೈವಲ್ಯ ಪ್ರಾಪ್ತವಾಗುವುದಲ್ಲ. ಇದೂ ಅಲ್ಲದೆ ದುಃಖಕ್ಕೂ ಸುಖಕ್ಕೂ ವ್ಯತ್ಯಾಸವೇನು? ಯಾವುದು ಸುಖ, ಯಾವುದು ದುಃಖ? ಶೀತೋಷ್ಣಗಳೆರಡೂ ಒಂದೇ, ನಮ್ಮ ಪ್ರಕೃತಿ ವಿಶೇಷದಿಂದ ಹಾಗೆ ತೋರುವುದು. ಮನುಷ್ಯ ನೀರಿಗೆ ಬಿದ್ದರೆ ಉಸಿರು ಕಟ್ಟಿಕೊಂಡು ಸಾಯುವನು. ಹೀಗೆ ಮನುಷ್ಯ ಶರೀರ ಧರ್ಮಕ್ಕೆ ವಿಷವಾದ ನೀರು ಮೀನಿಗೆ ಅಮೃತವಾಗುವುದು. ಹೀಗೆ ಮೀನ ಗಾಳಿಗೆ ಬಂದರೆ ಉಸಿರು ಕಟ್ಟಿಕೊಂಡು ಸಾಯುವುದು. ಅದೇ ಗಾಳಿಯು ಮನುಷ್ಯನಿಗೆ ಅಮೃತ ಪ್ರಾಯವಾಗುವುದು. ಹೀಗೆ ಸಹಜವಾದ ವೃತ್ತಿಯಲ್ಲಿ ಪ್ರಕೃತಿ ವ್ಯತ್ಯಾಸದಿಂದ ಭಿನ್ನಜ್ಞಾನ ಹುಟ್ಟುವುದು. ಎಲ್ಲಾ ಸ್ಥಿತಿಯಲ್ಲಿಯೂ ಏಕರೀತಿಯಾದ ಮನೋವೃತ್ತಿಯನ್ನು ಸಂಪಾದಿಸಿದರೆ ಸಿರ್‌ಕೈರ್‌ಗಳೆರಡಕ್ಕೂ ವ್ಯತ್ಯಾಸವೇ ಕಾಣಲಾರದು. ಅಂಥಾ ಮನೋವೃತ್ತಿಯು ಈ ಪುಣ್ಯಾತ್ಮನಿಗೆ ಪ್ರಾಪ್ತವಾಗಿದೆ. ಹೀಗೆ ಪರರ ಸೌಖ್ಯಕ್ಕೂ ಸ್ವಸೌಖ್ಯಕ್ಕೂ ವ್ಯತ್ಯಾಸವನ್ನು ಕಲ್ಪನೆಮಾಡದೆ ಪರೋಪಕಾರದಿಂದ ಆತ್ಮತೃಪ್ತಿಯಾಗುವುದೆಂಬ ಮನೋನಿಶ್ಚಯವು ಈ ಪುರುಷನಿಗೆ ಮಹದೈಶ್ವರ್ಯ ಸಂಪತ್ತಾಗಿವೆ ಎಂದು ಹೇಳಬೇಕು. ಪಾರಮಾರ್ಥಿಕ ವಿಚಾರವನ್ನು ಬಿಟ್ಟು ಮಾತನಾಡಿದಾಗ್ಯೂ ಶೋಚನೀಯವಾದ ಸಂಗತಿಯೇ ಹೊಳೆಯುವುದು. ಇಂಥಾ ಉತ್ತಮ ಪುರುಷರಿಗೂ ಇಂಥಾ ದಾರಿದ್ರ್ಯ ಪ್ರಾಪ್ತವಾಗಬೇಕಾದರೆ ಯುಗಾಂತರದಿಂದಲೂ ಐಶ್ವರ್ಯಕ್ಕೆ ಹೆಸರುಗೊಂಡಿದ್ದ ನಮ್ಮ ಹಿಂದುಸ್ಥಾನದ ಭಾಗ್ಯವೆಲ್ಲಾ ಮೊದಲು ತುರುಕರ ಪಾಲಾಯಿತು, ಆಮೇಲೆ ಬ್ರಿಟೀಷ್ ಅಧಿಕಾರಗಳ ಪಾಲಾಯಿತು; ತರುವಾಯ ಯೂರೋಪು ಖಂಡದ ವರ್ತಕರ ಪಾಲಾಯಿತು. ನಮ್ಮ ದೇಶದಲ್ಲಿ

ಅನ್ನತಿನ್ನುವವನು ಹಿಟ್ಟುತಿನ್ನುವಹಾಗೂ ಹಿಟ್ಟುತಿನ್ನುವವನು ಅಂಬಲಿ ಕುಡಿಯುವಹಾಗೂ ಸ್ಥಿತಿಬಂತು. ಹೀಗೆ ಬಾಯಿಗೆ ಹಾಕಿಕೊಂಡು ಎಲ್ಲರೂ ಅಗಿದಗಿದು ಉಗುಳಿಬಿಟ್ಟಿರುವ ಕಬ್ಬಿನ ಸಿಪ್ಪೆಯಲ್ಲಿ ಇನ್ನೂ ರಸವಿದೆ ಎಂದು ಇತರರು ಬಾಯಿಗೆ ಹಾಕಿಕೊಂಡು ಅಗಿಯಲಪೇಕ್ಷಿಸುತಾರಲ್ಲ, ಏನಾಶ್ಚರ್ಯ! ಹೀಗೆ ಅಪ್ರಮೇಯನು ಮನಸ್ಸಿನಲ್ಲಿಯೇ ಪೇಚಾಡಿಕೊಳ್ಳುತಾ, ಗೋಪೇಗೌಡನ ಚಿಕಿತ್ಸೆಯನ್ನು ಹೊಂದಿ ತನ್ನ ಜಾಡ್ಯ ಗುಣವಾಗುತಾ ಬಂದದ್ದನ್ನು ಕಂಡು ತನ್ನ ಊರಿಗೆ ಹೋಗಿ ಐದು ವರಹಗಳನ್ನು ಆ ವೈದ್ಯನಿಗೆ ಕಳುಹಿಸಿಕೊಟ್ಟನು. ಗೋಪೇಗೌಡನ ಸಂತೋಷಕ್ಕೆ ಪಾರವೇ ಇಲ್ಲ. ಅವನು ಆ ಹಣದಲ್ಲಿ ಇನ್ನೊಂದು ಹೊಲವನ್ನು ಕೊಂಡುಕೊಂಡು ಸುಖವಾಗಿದ್ದನು.

ಆಮೇಲೆ ಅಪ್ರಮೇಯನು ಗುಂಡಲಪೇಟೆಯಲ್ಲಿ ಮನೆಯಲ್ಲಿಯೇ ಕೆಲವು ದಿವಸ ಇದ್ದು ತರುವಾಯ ತನ್ನ ಮುಖ್ಯವಾದ ಕಾರ್ಯಕ್ಕಾಗಿ ಪುನಃ ಏನು ಮಾಡಬೇಕೆಂದು ಬಹು ಚಿಂತಾಕ್ರಾಂತನಾಗಿ ಮೈಸೂರಿಗೆ ಪ್ರಯಾಣ ಸನ್ನದ್ಧನಾದನು. ಆದರೆ ಮೈಸೂರಲ್ಲಿ ಇನ್ನೊಂದು ವಿಪತ್ತು ಕಾದುಕೊಂಡಿರುವ ಅಂಶ ಜ್ಞಾಪಕಕ್ಕೆ ಬಂತು. ಬಸಪ್ಪ ಮೊದಲಾದ ಪಿತೂರಿಗಾರರು ಇದುವರೆಗೆ ತಾವು ಒಳ್ಳೊಳಗೆ ಮಾಡಿದ ತಂತ್ರವು ಅಪ್ರಮೇಯನ ಪ್ರಯತ್ನದಿಂದ ಭಂಗವಾಗುವುದು ಖಂಡಿತವೆಂದು ಯೋಚಿಸಿ ಇವನನ್ನು ಎಲ್ಲಿಯಾದರೂ ಹಿಡಿಸಿ ಅಂತರಂಗವಾಗಿ ಅವನ ಅವತಾರವನ್ನು ಪೂರ್ತಿಮಾಡಬೇಕೆಂಬ ದುರಾಲೋಚನೆಯಿಂದ ಘಾತುಕರನ್ನೂ ಬೇಹುಗಾರರನ್ನೂ ಒಳಗೇ ಸಂಚುಮಾಡಿ ಕಳುಹಿಸಿರತಕ್ಕದ್ದೂ, ಆ ದುಷ್ಟರು ಎಲ್ಲೆಲ್ಲಿಯೂ ಹುಡುಕಿಯಾಡುತಾ ಇರುವುದೂ ಗೊತ್ತಾಗಿತ್ತು. ಆದರೆ ಅವರ ಕೈಗೆ ಸ್ವಲ್ಪವೂ ಸಿಕ್ಕದಹಾಗೆ ತಾನು ಹೊರದೇಶಗಳಲ್ಲಿ ಸಂಚಾರ ಮಾಡಿಕೊಂಡು ಬಂದನು. ಇವನನ್ನು ಹಿಡಿಯುವುದಕ್ಕೆ ಕೈಲಾಗವೆ ಆ ಜನರು

ಊರಲ್ಲಿಯೇ ನಿಂತರು. ಅಂಥಾ ಊರಿಗೆ ತಾನಾಗಿ ಹೋಗಿ ಅವರ ಕೈಗೆ ಸಿಕ್ಕಿಕೊಳ್ಳುವುದು ಹಾವಿನ ಬಾಯಿಗೆ ನಾವಾಗಿ ಬೆರಳಿಟ್ಟಹಾಗಾಗುವುದು.

ಅಲ್ಲಿಗೆ ಹೋಗದಿದ್ದರೆ ಮುಂದೆ ಯಾವ ಕಾರ್ಯವೂ ನೆರವೇರುವುದಕ್ಕೆ ಮಾರ್ಗವಾಗುವುದಿಲ್ಲ. ಒಂದು ವೇಳೆ ಮೈಸೂರಿಗೆ ಹೋದಾಗ್ಯೂ ತಾನು ಸುಮ್ಮನೆ ಒಂದುಕಡೆ ಕೂತಿರುವುದಕ್ಕಾಗುವುದಿಲ್ಲ. ಶತ್ರುಗಳನ್ನು ಗೆಲ್ಲುವುದಕ್ಕೆ ಭೇದೋಪಾಯವನ್ನು ಮಾಡಿ ಅವರ ಗುಟ್ಟನ್ನು ತಿಳಿದುಕೊಳ್ಳಬೇಕು. ವಿಶಿಷ್ಟ ತಂತ್ರಕ್ಕೂ ಮೂಲಸ್ಥಾನವಾದ ಬಸಪ್ಪನಲ್ಲಿಯೇ ಒಳಹೊಗಬೇಕು. ಇದಕ್ಕೆ ಬೇಕಾದ ಛದ್ಮನೆಗಳೆಲ್ಲವನ್ನೂ ಅಪ್ರಮೇಯನು ಚೆನ್ನಾಗಿ ಯೋಚಿಸಿಕೊಂಡನು.

## ೧೭ನೇ ಅಧ್ಯಾಯ

## ಜನ್ನೈಯಂಗಾರಿ

ಇತರ ವಿದ್ಯೆಗಳ ಜೊತೆಗೆ ಇನ್ನೊಂದು ವಿಚಿತ್ರವಾದ ವಿದ್ಯೆವು ಅಪ್ರಮೇಯನಲ್ಲಿತ್ತು. ಸುಮಾರು ನೀಟಾದ ಮುಖವನ್ನು ಹೇಗೆಯೋ ಚಟ್ಟ ಮುಖವಾಗಿ ಮಾಡಿಕೊಂಡು ಧ್ವನಿಯನ್ನು ಸಮಯ ಬಂದಹಾಗೆ ಬದಲಾಯಿಸಿಕೊಂಡು ಮಾತನಾಡುವ ಅಭ್ಯಾಸವು ಇವನಿಗೆ ಬಹು ಚೆನ್ನಾಗಿ ಬರುತಿತ್ತು. ಇಂಥಾ ಕೆಲಸಕ್ಕೆ ಬೇಕಾದ್ದನ್ನೆಲ್ಲಾ ಸಜ್ಜುಮಾಡಿಕೊಂಡು ಧೈರ್ಯವಾಗಿ ಮೈಸೂರಿಗೆ ಹೋದನು. ಅಲ್ಲಿ ಒಬ್ಬಾನೊಬ್ಬ ಪೂರ್ವಸ್ನೇಹಿತನ ಮನೆಯಲ್ಲಿ ಇಳಿದುಕೊಂಡು ಒಂದೆರಡು ದಿವಸದ ಮೇಲೆ ಒಂದು ದಿನ ರಾತ್ರಿ ಹಳೇ ಅಗ್ರಹಾರದಲ್ಲಿರುವ ಬಸಪ್ಪನ ಮನೆಗೆ ಹೋಗಿ ಗುಂಡಲಪೇಟೆಯಿಂದ ಭೇಟಿಗಾಗಿ ಯಾರೋ ಶ್ರೀವೈಷ್ಣವರು ಬಂದಿದಾರೆಂದು ಹೇಳಿ ಕಳುಹಿಸಿದನು. ಅದಕ್ಕೆ ಬಸಪ್ಪನು—

ಇವನು ಗುಂಡಲ ಪೇಟೆಯಿಂದ ನಮ್ಮ ಬಳಿಗೆ ಬರತಕ್ಕ ಮೂರು ನಾಮದವನು ಯಾರಿರಬಹುದು? ಅಪ್ರಮೇಯ ಆ ಊರವನೆಂದು ಕೇಳಿದ್ದೆ. ಅವನೇ ಆಗಿದ್ದರೆ ನಮ್ಮ ಕಾರ್ಯ ನೆರವೇರಿತು. ಆದರೆ ಅವನು ಬಹಳ ಹಟವಾದಿ ಎಂದು ಕೇಳಿದೇನೆ. ಹೀಗೆ ತಾನಾಗಿ ನಮ್ಮಲ್ಲಿ ಬಂದಾನೆ? ಒಂದು ವೇಳೆ ತನ್ನ ಕೈಯಲ್ಲಿ ಏನೂ ಸಾಗದೆ ಶರಣಾಗತನಾಗಿ ಬಂದಿರಬಹುದೆ? ಇಲ್ಲಿ ದುರ್ಗಾಬಾಯಿ ತನ್ನನ್ನು ಲಕ್ಷ್ಯಮಾಡಲಿಲ್ಲವೆಂಬ ನಿಜವಾದ ಆಕ್ರೋಶದಿಂದ ಅವಳ ಮೇಲೆ ತಾನು ಏನಾದರೂ ಕಾರ್ಯಭಾಗ ನಡಿಸುವುದಕ್ಕಾಗಿ ನಮ್ಮ ಸಹಾಯವನ್ನು ಹೊಂದಲು ಬಂದನೆ? ಇಲ್ಲ ಇವನು ಬೇರೆ ಮನುಷ್ಯನೆ ಅಥವಾ ಅಪ್ರಮೇಯನೇ ಭೇದೋಪಾಯವನ್ನು ನಡಿಸಲು ನಮ್ಮಲ್ಲಿ ಬಂದಿದ್ದಾನೆಯೆ? ಹೇಗಾದರೂ ಇರಲಿ, ಒಳಕ್ಕೆ ಕರೆಯಿಸಿ ಮಾತನಾಡಿ ನೋಡೋಣ? ಹೀಗೆ ಬಸಪ್ಪನು ತನ್ನ ಮನಸ್ಸಿನಲ್ಲಿ ಗುಣಿಸಿಕೊಳ್ಳುತಾ ಅವನನ್ನು ಒಳಕ್ಕೆ ಕರೆಯಿಸಿ,

ಬಸಪ್ಪ—ನೀವು ಯಾರು?

ಅಪ್ರ—ನಾನು ಗುಂಡಲಪೇಟೆಯವನು.

ಬಸಪ್ಪ—ಯಾಕೆ ಬಂದಿರಿ?

ಅಪ್ರ—ತಮ್ಮ ದರ್ಶನಕ್ಕಾಗಿ ಬಂದೆನು.

ಬಸಪ್ಪ—ನನ್ನಿಂದ ನಿಮಗೆ ಆಗಬೇಕಾದ್ದೇನು?

ಅಪ್ರ—ತಮ್ಮ ದಯವನ್ನು ಸಂಪಾದಿಸಿಕೊಳ್ಳಲು ಬಂದೆ.

ಬಸಪ್ಪ ನಿಮಗೇನಾಗಬೇಕು?

ಅಪ್ರ—ನನಗೆ ತಮ್ಮಿಂದ ಆಗಬೇಕಾದ ಕಾರ್ಯಗೌರವ ಉಂಟು.

ಬಸಪ್ಪ—ನಿಮ್ಮ ಹೆಸರೇನು?

ಅಪ್ರ—ಜನ್ನಯ್ಯಂಗಾರಿ.

ಬಸಪ್ಪ—ಯಾಚಕಕ್ಕೆ ಬಂದಿರ?

ಅಪ್ರ—ನಾನು ಯಾಚನೆಗೆ ಬರಲಿಲ್ಲ.

ಬಸಪ್ಪ—ನೀವು ಬಂದ ಕಾರ್ಯವೇನು?

ಅಪ್ರ—(ಸುತ್ತಲೂ ಕೂತಿದ್ದ ಜನರನ್ನು ತಿರುಗಿನೋಡಿದಂತೆ ಮಾಡಿ) ಸಾವಕಾಶವಾಗಿ ಅರಿಕೇಮಾಡುತ್ತೇನೆ.

ಬಸಪ್ಪ—(ಏನೋ ರಹಸ್ಯವಿರಬಹುದೆಂದು ಯೋಚಿಸಿ ಅಲ್ಲಿದ್ದ ಜನರೆಲ್ಲಾ ಹೊರಟು ಹೋದಮೇಲೆ) ಗುಂಡಲಪೇಟೆ ಅಪ್ರಮೇಯನನ್ನು ಬಲ್ಲಿರ ?

ಅಪ್ರ—ಬಲ್ಲೆ, ಚೆನ್ನಾಗಿಬಲ್ಲೆ. ಅವನು ನಮ್ಮದೊಡ್ಡಪ್ಪನ ಮಗ. ನಮ್ಮ ಆಸ್ತಿಯನ್ನೆಲ್ಲಾ ಅಪಹರಿಸಿದ್ದೂ ಅಲ್ಲದೆ ನನ್ನ ಪ್ರಾಣವನ್ನು ತೆಗೆಯಬೇಕೆಂದು ಯತ್ನಮಾಡುತಿದಾನೆ.

ಬಸಪ್ಪ—ಆತನನ್ನು ನಾನು ಸ್ವಲ್ಪ ನೋಡಿದೇನೆ. ಒಂದುಬಗೆ ವಿಜಾತೀಯವಾದ ಮನುಷ್ಯ.

ಅಪ್ರ—ಅವನ ಯೋಗ್ಯತೆಯನ್ನು ತಾವೂ ಚೆನ್ನಾಗಿ ಪರಿಶೋಧಿಸಿದ್ದೀರಿ ಎಂದು ಕೇಳಿಬಲ್ಲೆ. ತಮ್ಮಲ್ಲಿ ಹೇಳಿಕೊಂಡರೆ ನನ್ನ ಕಷ್ಟವೆಲ್ಲಾ ಪರಿಹಾರವಾಗಬಹುದೆಂದು ನಂಬಿಕೊಂಡು ಬಂದೆ.

ಬಸಪ್ಪ—ಅಪ್ರಮೆಯ ಈಗ ಎಲ್ಲಿದಾನೆ ? ಈಗ ಈ ಊರಿಗೆ ಬಂದಿದಾನೆಯೆ ?

ಅಪ್ರ—ಈ ಊರಿಗೆ ಬಂದಿದಾನೆ. ಅವನು ಇರುವ ಸ್ಥಳ ಗೊತ್ತಿಲ್ಲ. ಅದನ್ನು ಹುಡುಕುತಾ ಇದೇನೆ. ಅವನು ಬಹಳ ತಂತ್ರಕಂಡವನು, ಅನೇಕ ವೇಷಗಳನ್ನು ಹಾಕಿಕೊಂಡಿರುತಾನೆ. ಗುರುತು ಸಿಕ್ಕುವುದೇ ಇಲ್ಲ. ಅವನನ್ನು ಬಲ್ಲವರೇ ಬಲ್ಲರು. ಹುಡುಕಿ ತಿಳಿಸುತೇನೆ.

ಬಸಪ್ಪ—ಆಗಲೈಯ್ಯ ಜನ್ನಯ್ಯಂಗಾರ್ರೆ, ನೀವು ನಮಗೆ ದೊರತದ್ದು ಬಹಳ ಅನುಕೂಲವಾಯಿತು. ನಿಮ್ಮಿಂದ ಮುಂದೆ ಬಹಳ ಕೆಲಸವಾಗಬೇಕಾಗಿದೆ. ಏನಯ್ಯ ಲಚ್ಮನಿ, ಹವುದೋ ಅಲ್ಲವೊ?

ಲಚ್ಮನಿ—ಈತನ ಮೂಲಕ ಅಪ್ರಮೇಯ ನಮ್ಮ ಕೈಗೆ ಸಿಕ್ಕಿ ಋರೆ ನಮ್ಮ ಕೆಲಸವೆಲ್ಲಾಗೆತ್ತು. ಇಷ್ಟು ಗಲಾಟೆಯೂ ಅವ

ನಿಂದಲೇ ಉಂಟಾಗಿರುವುದು. ಅವ ನಮ್ಮ ಕೈಗೆ ಸಿಕ್ಕಿದರೆ ಎಲ್ಲಾ ತೆಪ್ಪಗಾಗುವುದು.

ಹೀಗೆ ಎಲ್ಲಾ ವಿಪರ್ಯಾಸಗಳಿಗೂ ಮೂಲಸ್ಥಾನವಾದ ಬಸಪ್ಪನಲ್ಲಿ ಅಪ್ರಮೇಯನು ಸ್ಥಳವನ್ನು ಸಂಪಾದಿಸಿಕೊಂಡು ಪ್ರತಿದಿನವೂ ತನ್ನ ಗುರುತು ಎಳ್ಳಷ್ಟೂ ಸಿಕ್ಕದ ಹಾಗೆ ರೂಪನ್ನು ಮರೆಯಿಸಿಕೊಂಡು ಬಸಪ್ಪನ ಮನೆಗೆ ಹೋಗಿ ಬರಲು ಆರಂಭ ಮಾಡಿದನು. ಆ ದುರ್ಮಾರ್ಗರ ಗುಂಪಿನವರು ಇವ ಇಂಥವನೆಂದು ಗುರುತು ಕಂಡಹಿಡಿಯಲಾರವೆ ಮೊದಲು ಕೆಲವು ದಿವಸ ಪರೀಕ್ಷಿಸಿ ಐಬು ಸಿಕ್ಕದಕಾರಣ ಅಪ್ರಮೇಯನ ಚಾಕಚಕ್ಯದಿಂದ ಅವನು ಪರಮಾಪ್ತನೆಂದು ಭಾವಿಸಿ ಇವನಲ್ಲಿ ರಹಸ್ಯವಾದ ಮಾತುಗಳನ್ನು ಆಡುತಾ ತಮ್ಮ ಗುಂಪಿಗೆ ಯೋಗ್ಯನಾದ ಮತ್ತೊಬ್ಬ ಮನುಷ್ಯ ಸೇರಿದನೆಂದು ಭಾವಿಸಿ ಸಂತೋಷಪಡುತಿದ್ದರು. ಅಪ್ರಮೇಯನು ಆ ಜನರಲ್ಲಿ ಹಾಸು ಹೊಕ್ಕಾಗಿ ಸೇರಿ ಅವರ ಗುಟ್ಟನ್ನೆಲ್ಲಾ ತಿಳಿದುಕೊಳ್ಳುತಾ ಬಂದನು.

ಅತ್ತ ಸರ್ಕಾರದಲ್ಲಿ ವೇಪಣ್ಣ ಮೊದಲಾದವರಿಗೆ ಬೇಡಿಯಾಯಿತೆಂದೂ ಕೆಲವರನ್ನು ನೀರಿನಮೇಲೆ ದ್ವೀಪಾಂತರಕ್ಕೆ ಕಳುಹಿಸಿದರೆಂದೂ ತಿಳಿಯಿತು. ಯಾಕೆ ಹೀಗಾಯಿತು ಎಂಬ ವಿವರ ತಿಳಿಯಲಿಲ್ಲ.

ಶ್ರೀಮನ್ಮ ಮಹಾರಾಜ ಕೃಷ್ಣರಾಜಒಡೆಯರವರಲ್ಲಿ ಸೇರಿ ಅವರಿಗೆ ಆಪ್ತರಾಗಿ ರಾಜ್ಯಗಳನ್ನು ನಡಿಸುತಾ ಇದ್ದ ಜನರನ್ನು ಹೇಗಾದರೂ ಮುರಿದುಬಿಟ್ಟರೆ ತಮಗಳಿಗೆ ಉತ್ತರೋತ್ತರ ಶ್ರೇಯಸ್ಸಾಗುವುದೆಂದು ಸಂತೋಷಪಡುತಿದ್ದ ಕೆಲವು ದೊಡ್ಡ ಅಧಿಕಾರಿಗಳೂ ನ್ಯಾಯಮೂರ್ತಿಗಳೂ ಈ ವ್ಯಾಜ್ಯದಲ್ಲಿ ಹಠವನ್ನು ಹಿಡಿದು ಅನ್ಯಾಯವನ್ನು ಮಾಡಿದಂತೆ ತಿಳಿಯಬಂತು. ಅನ್ಯಾಯ ನಡೆದಿರುವುದೇನೋ ಲೋಕವಿದಿತವಾಯಿತು. ಖೂನಿಯಾದವನು ಇಂಥಾ ಮನುಷ್ಯನೆಂತಲೂ ಖೂನಿಮಾಡಿದವ

ಇಂಥವನೆಂತಲೂ ಯಾವ ರುಜುವಾತೂ ಇಲ್ಲದೆ ಶಿಕ್ಷೆಕೊಟ್ಟಿರುವುದು ನ್ಯಾಯಕ್ಕೆ ವಿರೋಧವಾಗಿದೆ ಎಂದು ಅಪರಾಧಿಗಳೆಲ್ಲರೂ ಸೇರಿ ಕರ್ಬ್ಬಸಾಹೇಬರಲ್ಲಿ ಅಪ್ಪೀಲು ಮಾಡಿಕೊಂಡರಂತೆ. ಆ ಸಾಹೇಬರು ಈ ಮೊಕದ್ದಮೆಯು ಸ್ವಭಾವದಿಂದ ಇದು ಪುನಃ ವಿಚಾರಣೆಯಾಗಿ ತೀರ್ಮಾನವಾಗತಕ್ಕದೆಂದು ಕಲ್‌ಕತ್ತಾ ಸರ್ಕಾರಕ್ಕೆ ಸಿಫಾರಸು ಮಾಡಿರಲಾಗಿ ಅದರಂತೆ ಆಗಬಹುದೆಂದು ಅಪ್ಪಣೆಯಾಯಿತಂತೆ. ಆ ಪ್ರಕಾರ ಈ ಮೊಕದ್ದಮೆಯನ್ನು ನಿಷ್ಪಕ್ಷಪಾತವಾಗಿರತಕ್ಕ ಪಂಚಾಯಿತರ ಮುಂದೆ ಸರಿಯಾಗಿ ಕಾನೂನು ಪ್ರಕಾರ ವಿಚಾರಣೇಮಾಡಿ ತೀರ್ಮಾನಮಾಡಬೇಕೆಂದು ಕರ್ಬ್ಬಸಾಹೇಬರು ವಿಧಾಯಕಮಾಡಿದರಂತೆ.

ಇದು ಅಪ್ರಮೇಯನಿಗೆ ಕರ್ಣಾಕರ್ಣಿಕೆಯಾಗಿ ತಿಳಿಯಬಂದ ಮಾತೇ ಹೊರತು, ಹೀಗೆಯೇ ಸರಿಯೆಂದು ಯಾವುದೂ ಖಂಡಿತವಾಗಿ ಗೊತ್ತಾಗಲಿಲ್ಲ. ಈ ಮೊಕದ್ದಮೆಯು ಕೇವಲ ರಾಜಕೀಯ ಸಂಬಂಧವೆಂದು ಇಲ್ಲದ ರಹಸ್ಯವನ್ನು ಮಾಡಿ ಈ ವಿಷಯವನ್ನು ಕುರಿತು ಯಾರೂ ಬಾಯಿಬಿಡದಂತೆ ನಿರ್ಬಂಧಮಾಡಿದ್ದರು. ಇದರ ವಿವರವೆಲ್ಲಾ ಮೇಲ್ಪಟ್ಟ ಅಧಿಕಾರಿಗಳಿಂದ ಗೊತ್ತಾಗಲು ಅಪ್ರಮೇಯ ಅಷ್ಟೊಂದು ಹಣಗಾರನಲ್ಲ. ಮುನಷೀರು ಗುಮಾಸ್ತರು ಇವರುಗಳನ್ನು ವಿಚಾರಿಸಬೇಕು. ಕಚೇರಿಯಲ್ಲಿ ವಿಚಾರಮಾಡುವುದಕ್ಕೆ ಹೋದರೆ, ಕೇವಲ ನಿಸ್ಪೃಹರಂತೆ ಎಲ್ಲರೂ ಅಟ್ಟಿ ಹರಿಯುತಾರೆ. ಅವರುಗಳ ಮನೆಗೆ ಹೋಗಿ ಅನುಸರಣೆಮಾಡಿದರೆ ಅವರೂ ಕೂಡ ಕಾಣಿಕೆ ಮುಂಚು ಮಾತು ಹಿಂಚು ಎನ್ನುತಾರೆ. ಮೊಕದ್ದಮೆಯು ನಿಜವಾಗಿ ಏನಾಗಿದೆ ಎನ್ನುವುದನ್ನು ತಿಳಿಯುವ ರೀತಿ ಹೇಗೆ? ಈ ಮೊಕದ್ದಮೆಯು ಸಾಧಾರಣವಾದ್ದಲ್ಲ. ಕುಣಿಚಿ ಕೇಳ ಹೋದರೆ. ಕೇಳಿದವರೂ ಅದಕ್ಕೆ ಸೇರಿದಾರೆಂದು ಅಪ್ರಮೇಯನನ್ನು ಹಿಡಿದು. ಕೊಂಡರೆ ಏನು ಗತಿ? ಕೇಳದೆ ಹೋದರೆ ನಿಜಸ್ಥಿತಿ ತಿಳಿಯು

ವುದು ಹೇಗೆ? ಈ ಯೋಚನೆಯು ಅಪ್ರಮೇಯನ ಮನಸ್ಸನ್ನು ಆಕ್ರಮಿಸಿತು.

## ೧೮ನೇ ಅಧ್ಯಾಯ

## ಬಂದೀಖಾನೆ ಭಾಗವು

ನಾಜರು ವೆಂಕಟರಾವ್—ಏನು ಸಿಂಗರೆ, ನಿಮ್ಮ ಅಹಷಾಂ ಇಲಾಖೆ ಸರಿಯಾಗಿದೆಯೆ?

ಬಲವಂತ ಸಿಂಗು—ನಾಲ್ಕು ಜವಾನಿ ಕೆಲಸ ಖಾಲಿಯಾಗಿದೆ. ಅದಕ್ಕೆ ಯಾರನ್ನೂ ಇನ್ನೂ ನೇಮಕ ಮಾಡಿಲ್ಲ.

ನಾಜರು—ಇಷ್ಟು ಖಾಲಿ ಇದ್ದರೆ, ಕೆಲಸ ಹೇಗೆ ನಡೆಯ ಬೇಕು? ಜಮಾದಾರರಾದ ನೀವೇ ಎಲ್ಲಾ ಕೆಲಸವನ್ನೂ ಮಾಡು ವುದಕ್ಕೆ ಆದೀತೆ? ಏನಾದರೂ ವ್ಯತ್ಯಾಸ ನಡೆದರೆ ಹುದ್ದೇದಾರರ ತಲೆಗೆ ಬರುತ್ತೆ.

ಬಲವಂತ—ಮೇಲ್ಪಟ್ಟವರ ಆಡಳತ ಹಾಗಿದೆ, ಯಾರನ್ನೂ ತಾವೂ ನೇಮಿಸರು, ನಾವು ನೇಮಿಸಿದರೆ ಒಪ್ಪರು. ಪಹರೆ ನಡೆ ಯುವುದು ಬಹಳ ಹಿಂಸೆಯಾಗಿದೆ.

ನಾಜರು—ನೀವೇ ಹೀಗೆಂದ ಮೇಲೆ ಮುಂದೇನು ಮಾತ ನಾಡತಕ್ಕದ್ದಿದೆ? ಉತ್ತರ ದೇಶದಿಂದ ಒಬ್ಬ ಬಂದಿದಾನೆ. ಅವನಿ ಗೇನಾದರೂ ಜೀವನೋಪಾಯಕ್ಕೆ ದಾರಿ ಇದೆಯೆ ಎಂದು ವಿಚಾರಿ ಸಿದೆ.

ಬಲವಂತ—ಅವ ಯಾರು?

ನಾಜರು—ಅವನನ್ನೇ ನಿಮ್ಮಲ್ಲಿಗೆ ಕಳುಹಿಸುತೇನೆ. ಮಾಡಿ ದರೆ ಬಂದೀಖಾನೆ ನೌಕರಿ ಮಾಡುತೇನೆ, ಇಲ್ಲವಾದರೆ ಯಾವುದೂ ಬೇಡ ಎನ್ನುತಾನೆ.

ಬಲವಂತ—ಈ ಹಾಳ ಕೆಲಸ ನಾವು ಒಲ್ಲೆವೋ ಎಂದು

ಅನೇಕರು ರಾಜೀನಾಮೆ ಕೊಡುವುದಕ್ಕೆ ಕೂಡ ಸಿದ್ಧವಾಗಿದ್ದಾರೆ. ಆ ಮನುಷ್ಯ ಮಾತ್ರ ಈ ಹಾಳ ಚಾಕರಿಗೆ ಆಶೆ ಪಡುವುದು ಆಶ್ಚರ್ಯವಾಗಿದೆ. ಇವನು ಯಾವ ಜಾತಿಯವನು?

ನಾಜರು—ಜಾತಿ ಕಟ್ಟಿಕೊಂಡೇನು? ಅವನಿಗೆ ಯೇನಾದರೂ ನಿಮ್ಮ ಇಲಾಖೆಯಲ್ಲಿ ದೊರೆಯುವುದಾದರೆ ಕರೆಸುತೇನೆ.

ಬಲವಂತ—ನಿನ್ನೆ ರಾತ್ರೆ ಒಬ್ಬ ಮನುಷ್ಯನನ್ನು ನೋಡಿದ್ದೆ. ನೀವು ಅಪ್ಪಣೇ ಕೊಡುವ ರೀತಿ ನೋಡಿದರೆ ಅವನೇ ಆಗಿರ ಬಹುದು.

ನಾಜರು—ನೀವು ಹೇಳಿದ್ದು ಸರಿ. ಆ ಮನುಷ್ಯನೇ ನಾನು ಹೇಳಿದ್ದು.

ಬಲವಂತ—ಹಾಗಾದರೆ ಸಂಗತಿಯೆಲ್ಲಾ ತಿಳಿಯಿತು. ಬಹಳ ಅಪಾಯವೇ ತೋರುತಿದೆ.

ನಾಜರು—ಬಂದೀಖಾನೆ ಭಾಗಮ್ಮ ಬರುವ ಹಾಗಿದೆ.

ಬಲವಂತ—ಅವಳೇ ನನ್ನನ್ನು ಹುಡಿಕಿಕೊಂಡು ಬರುವಹಾಗೆ ಕಾಣಿಸುತ್ತೆ. ಬಹಳ ಹಳೇ ಖೈದಿಯಾದ್ದರಿಂದ ಇವಳನ್ನು ಅಲ್ಲಿನ ಚಾಕರಿಗೆ ಇರಿಸಿಕೊಂಡಿದ್ದಾರೆ. ಇವಳು ಬೇಕಾದ ಸಂಧಾನ ನಡಿಸಬಲ್ಲಳು. ನಾನು ಪಹರೇದವರಿಂದ ಆಗಬೇಕಾದ್ದಕ್ಕೆ ಜವಾಬುದಾರನಾಗಿರುತೇನೆ, ಏನು ಭಾಗಮ್ಮ ಯಾಕೆ ಬಂದೆ?

ಭಾಗಮ್ಮ—ಜಮಾದಾರರೆಲ್ಲಿ ಎಂದು ಕೇಳಿದರು. ಕೆಲವು ಚಿಲ್ಲರೆ ಸಾಮಾನು ಬೇಕಾಗಿತ್ತು. ಎಲ್ಲವನ್ನೂ ತೆಗೆಯಿಸಿಕೊಂಡು ಬಾ ಎಂದು ದರೋಗರ ಅಪ್ಪಣೆಯಾಯಿತು. ನಾನು ಜಾಗ್ರತೆ ಯಾಗಿ ಹೋಗಬೇಕು. ಸಾಯಂಕಾಲವಾಗುತಾ ಬಂತು. ಖೈದಿ ಗಳ ಗುಮ್ಮಿಗಳಿಗೆ ಬೀಗಾ ಹಾಕಿಬಿಡುತಾರೆ.

ಬಲವಂತ—ನಾನು ಹೋಗುತೇನೆ. ಸಾಮಾನನ್ನು ತೆಗೆದು ಕೊಂಡು ನೀನೂ ಗಾಡಬಾರಮ್ಮ.

ನಾಜರು—ಭಾಗಮ್ಮ, ದೇಪಣ್ಣನವರು ಸ್ವಸ್ಥವಾಗಿದಾರೆಯೆ?

ಭಾಗಮ್ಮ—ಮೆಲ್ಲಗೆಹೇಳಿ. ನಮ್ಮ ಮಾತನ್ನು ಯಾರಾದರೂ ಸಂಚು ಕೇಳುತಾ ಇದ್ದು ಪ್ರಾಣಕ್ಕೆ ತಂದಾರು. ಆತನಿಗೆ ಯಾತರ ಸ್ವಸ್ಥ, ಅನ್ನ ತಿನ್ನುವುದಿಲ್ಲ, ನಿಪ್ರೆ ಇಲ್ಲವೇ ಇಲ್ಲ. ಕಂಗೆಟ್ಟು ಕಡ್ಡಿಯಾಗಿದಾನೆ. ಚನ್ನಾಗಿ ಬದುಕಿದವನು. ದೇವರೇ ಆತನ ಕಷ್ಟವನ್ನು ಪರಿಹಾರ ಮಾಡಬೇಕು. ಇನ್ನು ಯಾವ ಮಾರ್ಗವೂ ಇಲ್ಲ.

ನಾಜರು—ದೇವರೇ ಬಂದು ಎದುರಿಗೆ ನಿಂತು ಕಷ್ಟವನ್ನು ಪರಿಹಾರಮಾಡುತಾನೆಯೆ? ಯಾರಾದರೂ ನಿಮ್ಮಂಥಾ ಯೋಗ್ಯರ ರೂಪವಾಗಿ ಬಂದು ತನ್ನ ದಯವನ್ನು ತೋರಿಸುತಾನೆ.

ಭಾಗಮ್ಮ—ಅಯ್ಯೋ, ನನ್ನ ಹೇಳಿ, ಪರಮ ಪಾಪಿಷ್ಠಳನ್ನು ಹುಟ್ಟದಾಗಿನಿಂದ ಯಾವ ಉಪಕಾರವನ್ನೂ ಮಾಡಿದವಳಲ್ಲ. ಇನ್ನು ಮೇಲಂತೂ ಇಲ್ಲವೇ ಇಲ್ಲ.

ನಾಜರು—ನಮ್ಮ ನಮ್ಮ ಕೈಲಾದ್ದನ್ನು ನಾವು ಮಾಡಿದರೆ ಸಾಕು. ಮೈಸೂರಿಂದ ಅಪ್ರಮೇಯ ಇದೇ ಕೆಲಸವಾಗಿ ಬಂದಿದಾನೆ. ನಿಮ್ಮನ್ನು ನೋಡಿ ಮಾತನಾಡಬೇಕೆಂದು ಇದಾನೆ. ಕರೆಯಲೆ?

ಭಾಗಮ್ಮ—ಮುಲ್ಲಾ ಶಾಸ್ತ್ರ ಓದಿದ ಅಪ್ರಮೇಯನಲ್ಲವೆ? ಯಾಕೆ ಬಂದಿದಾನೆ ಕೇಳೋಣ ಕರೆಯಿರಿ.

ಅಪ್ರಮೇಯನನ್ನು ನಾಜರು ವೆಂಕಟರಾಯರು ಒಳಗಿನಿಂದ ಕರೆದುಕೊಂಡು ಬಂದರು. ಅಪ್ರಮೇಯನು ಬಂದಕೂಡಲೆ ಭಾಗಮ್ಮನಿಗೆ ನಮಸ್ಕಾರ ಮಾಡಿದನು.

ಭಾಗಮ್ಮ—ಆಯುಷ್ಮಂತನಾಗಿ ಮಾರ್ಕಂಡೇಯನಾಗಿ ತಣ್ಣಗಿರಪ್ಪ. ನನ್ನಿಂದ ಏನಾಗಬೇಕು?

ಒಳಕ್ಕೆ ಹೋದ ವೆಂಕಟರಾಯರು ಈಚೆಗೆ ಬರಲಿಲ್ಲ. ಅಪ್ರಮೇಯನೂ ಭಾಗಮ್ಮನೂ ಸ್ವಲ್ಪ ಹೊತ್ತು ಪಿಸಿ ಮಾತನಾಡಿದ ತರುವಾಯ,

ಭಾಗಮ್ಮ—ನೀನು ಹೇಳುವ ಮಾತು ತಲೆಗೆ ಬರುವ ಮಾತಾ

ಗಿದೆ. ನನ್ನ ಪಾಡಂತೂ ಹೀಗೆಯೇ ಆಯಿತು. ಬಂದೀಖಾನೆ ಯಲ್ಲಿಯೇ ನಾನು ಪ್ರಾಣಬಿಡುವುದು ನನ್ನ ಹಣೆಯಲ್ಲಿ ಬರೆದಿದೆ. ನೀನು ಬಾಳಿ ಬದುಕುವವನು, ಹೇಗಪ್ಪ ?

ಅಪ್ರಮೇಯ — ಎಳ್ಳಷ್ಟು ಅನುಮಾನವೂ ಹುಟ್ಟದ ಹಾಗೆ ನಾನು ಬೇಕಾದ ತರದೂದನ್ನು ಮಾಡುತೇನೆ. ವೆಂಕಟರಾಯರ ಮನೆಯ ಮಹಡಿ ದೊಡ್ಡದಾಗಿದೆ. ನೀವಿರಬಹುದು, ನನಗಂತೂ ಈದಿನ ಬೆಳಗ್ಗೆ ಕ್ಷೌರವಾಗಿದೆ.

ಭಾಗಮ್ಮ—ನಿನಗೆ ಧೈರ್ಯವಿದ್ದರೆ ಬೇಕಾದ್ದು ಮಾಡು, ನಾನು ಸಹಾಯವಾಗಿರುತೇನೆ.

ಹ೯ನೇ ಅಧ್ಯಾಯ

## ಜಮಾದಾರ್

ಜಮಾದಾರ—ಯಾರಿದ್ದೀರೋ? ಆರುಗಂಟೆ ಸಮಯ. ಕತ್ತಲೆ ಯಾಗುತಾ ಬಂತು. ಬೀಗದ ಕೈ ಜೊಂಪೆಯನ್ನು ತೆಗೆದುಕೊಂಡು ಹೊರಡಿ. ಮುತ್ಸದ್ದಿಯವರನ್ನು ಕರೆಯಿರಿ, ಗಣತಿಮಾಡಿ ಒಂದೊಂದು ಬಾಗಿಲಿಗೂ ಬೀಗಾಹಾಕಿ ಮೊಹರುಮಾಡುತಾ ಬನ್ನಿ.

ದಫೇದಾರ—ಮುತ್ಸದ್ದೀರೂ ಮುನೀಬರೂ ಗಣತಿಮಾಡಿ ಬೀಗಾ ಹಾಕಿಸಿದರು. ದರ್ಯಾಫ್ತಿ ಖೈದಿಗಳಲ್ಲಿ ೩ಳನೇ ಒಂಟಿ ಖೈದಿಬಾಗಿಲಿಗೆ ಬೀಗಾ ಹಾಕಿಲ್ಲ, ಅವರಿಗೆ ಆಲಸ್ಯವಂತೆ, ಬಿಸಿ ನೀರು ಬೇಕೆಂದರು. ಭಾಗಮ್ಮ ನೀರಕಾಸಲು ಹೋಗಿದಾಳೆ. ಅದನ್ನು ತಂದುಕೊಟ್ಟ ತರುವಾಯ ಆ ಬಾಗಿಲಿಗೆ ನಾನು ಮೊಹರು ಮಾಡಿಕೊಂಡು ಬರುತೇನೆ, ನಡೆಯಿರಿ.

ಆ ಕೂಡಲೆ ಭಾಗಮ್ಮನು ಬಿಸಿನೀರ ಕಾಯಿಸಿ ತಂದು ೩ಳನೇ ನಂಬರು ಒಂಟಿ ಖೈದಿಯ ಬಾಗಿಲೊಳಕ್ಕೆ ಹೋಗಿ ಬಿಸಿನೀರನ್ನು ಇರಿಸಿ ನಿಂತುಕೊಂಡಳು. ಖೈದಿಯು ನೀರನ್ನು ಕುಡಿದು ಮಲಗಿ

ಕೊಳ್ಳುವ ಸಮಯವನ್ನು ನೋಡಿ ಭಾಗಮ್ಮನು ಖೈದಿಯನ್ನು ಕುರಿತು—ಸ್ವಾಮಿ, ತಮ್ಮಲ್ಲಿ ಒಂದು ಮಾತನ್ನು ಅರಿಕೆ ಮಾಡಲು ಬಂದೆ. ತಮ್ಮ ಮೊಕದ್ದಮೆ ಏನಾಗಿದೆ, ಯಾವ ಸ್ಥಿತಿಯಲ್ಲಿದೆ? ಅಪ್ಪಣೆಯಾಗಬೇಕು ಎನಲು ಆ ಖೈದಿಯು—ನಿನಗೆ ಯಾಕಮ್ಮ ಆ ಮಾತು; ಯಾರಾದರೂ ಸಂಚುಕೇಳುತಾ ಇದ್ದು ತಲೆಗೆ ತಂದಾರು, ಎಂದನು. ಅದಕ್ಕೆ ಭಾಗಮ್ಮನು—ಸ್ವಾಮಿ ತಮ್ಮಲ್ಲಿ ವಂಚನೆ ಮಾಡಲು ಸಮಯವಲ್ಲ. ನಾನು ಭಾಗಮ್ಮನಲ್ಲ, ಅಪ್ರ ಮೇಯ, ಎಂದು ತಾನು ಹಾಕಿಕೊಂಡಿದ್ದ ಮುಂಡ ಮುಸುಗನ್ನು ತೆಗೆದು ಮುಖವನ್ನು ತೋರಿಸುತಾ—ಮೊಕದ್ದಮೆಯ ನಿಜವಾದ ಸ್ಥಿತಿಯನ್ನು ತಿಳಿದುಕೊಂಡು ಹೋಗಲು ಬಂದೆ, ತಾವು ಯಾವ ಅಂದೇಶವನ್ನೂ ಪಡದೆ ನಿರ್ವಂಚನೆಯಿಂದ ಎಲ್ಲವನ್ನೂ ಹೇಳಿ, ಮುಂದೆ ನಾನು ಮಾಡಬೇಕಾದ ಕಾರ್ಯಭಾಗ ಬಹಳವಾಗಿದೆ ಎಂದನು. ಅದಕ್ಕೆ ಆ ಖೈದಿಯಾಗಿದ್ದ ದೇಪಣ್ಣನು—ಓಹೋ! ನೀವು ಇಲ್ಲಿಗೆ ಹೇಗೆ ಬಂದಿರಿ? ಎಂದು ಕೇಳಿದನು. ಅದಕ್ಕೆ ತಕ್ಕ ಉಪಾಯವನ್ನು ಮಾಡಿಕೊಂಡು ತಮ್ಮನ್ನು ನೋಡಿ ಮಾತ ನಾಡಿ ಕೊಂಡು ಹೋಗುವುದಕ್ಕೆ ಬಂದೆ ಎಂದು ಅಪ್ರಮೇಯು ಹೇಳಿ ದೇಪಣ್ಣನಿಂದ ತಿಳಿಯಬೇಕಾದ ಸಂಗತಿಗಳನ್ನು ತಿಳಿದು ಕೊಂಡು ತಾನು ಹೇಳಬೇಕಾದ್ದನ್ನೆಲ್ಲಾ ಮುಂದೆ ನಡಿಸತಕ್ಕದ್ದ ನ್ನೆಲ್ಲಾ ವಿವರಿಸಿ, ಯಥಾಪ್ರಕಾರ ಮುಂಡು ಮುಸುಗನ್ನು ಹಾಕಿ ಕೊಂಡು ಭಾಗಮ್ಮನ ಕಿರುಮನೆಗೆ ಹೋಗಿ ರಾತ್ರೆ ಮಲಗಿ ಕೊಂಡನು. ನಿದ್ರೆ ಎಂದಿಗೆ ಬಂದೀತು, ಆ ಸ್ಥಿತಿಯಲ್ಲಿ? ಎದೆ ಡವಗುಟ್ಟುತ್ತಲೇ ಇತ್ತು. ಕೂಡಲೆ ಇವನಿದ್ದ ಭಾಗಮ್ಮನ ಕೊಠ ಡಿಗೂ ಬೀಗವನ್ನು ಹಾಕಿ ಮೊಹರು ಮಾಡಿದರು. ಮಾರನೇ ಬೆಳಗ್ಗೆ ದೇಪಣ್ಣನಿಗೆ ಏನೋ ಔಷಧಕ್ಕೆ ಪಸಾರೆ ಸಾಮಾನು ಬೇಕೆಂದು ಮೊದಲೇ ಸಂಕೇತ ಮಾಡಿಕೊಂಡಿದ್ದ ಪ್ರಕಾರ ಭಾಗ ಮ್ಮನ ವೇಷದಲ್ಲಿದ್ದ ಅಪ್ರಮೇಯನು ಬೆಳಗ್ಯೆ ೬ ಗಂಟೆ ಹೊಡೆದ

ಕೂಡಲೆ ಬಂದೀಖಾನೆಯ ತಲಬಾಗಿಲಿನಿಂದ ಹೊರಟು ನಾಜರು ವೆಂಕಟರಾಯರ ಮನೆಗೆ ಹೋಗಿ ರಾತ್ರಿಯೆಲ್ಲಾ ಅಲ್ಲಿದ್ದ ಬಂದೀಖಾನೆ ಭಾಗಮ್ಮನಿಗೆ ಅವಳ ಸೀರೆಯನ್ನು ವಾಪಸು ಬಿಚ್ಚಿಕೊಟ್ಟು ಪಸಾರೆ ಸಾಮಾನನ್ನೂ ಕೊಟ್ಟು ಬಂದೀಖಾನೆಗೆ ಕಳುಹಿಸಿದನು. ತರುವಾಯ ನಾಜರು ವೆಂಕಟರಾಯನಿಂದ ಆದ ಉಪಕಾರಕ್ಕೆ ಕೇವಲ ಕೃತಜ್ಞನಾಗಿ ಅಗತ್ಯವಾದಷ್ಟು ಉಪಚಾರೋಕ್ತಿಗಳನ್ನಾಡಿ ಅವರ ಅಪ್ಪಣೇ ಪಡೆದು ಮುಂದೆ ತಾನು ಮಾಡಬೇಕಾದ ಕಾರ್ಯ ನಿರ್ವಾಹದ ಪರುಠವಣೆಯನ್ನೆಲ್ಲಾ ಯೋಚಿಸಿಕೊಳ್ಳುತ್ತಾ ಮೈಸೂರಿಗೆ ಹೊರಟನು. ಬಂದೀಖಾನೆಯಲ್ಲಿ ಲೇಶವೂ ಪುಕಾರಾಗದೆ ಕಾರ್ಯವೆಲ್ಲಾ ಜಯವಾಯಿತು.

## ೨೦ ನೇ ಅಧ್ಯಾಯ

# ಪುನರ್ವಿಚಾರಣೆ

ಈ ಮೊಕದ್ದಮೆಯು ಪುನರ್ವಿಚಾರಣೆಯಾಗಬೇಕೆಂದು ಗೊತ್ತಾಯಿತಷ್ಟೇ. ನಿಷ್ಪಕ್ಷಪಾತವಾದ ಪಂಚಾಯಿತರನ್ನು ಹುಡುಕಿ ತೆಗೆಯತಕ್ಕದ್ದು ಒಂದು ದೊಡ್ಡ ಕಷ್ಟದ ಕೆಲಸವಾಗಿತ್ತು. ಮೈಸೂರಲ್ಲಿ ಯಾವ ದೊಡ್ಡ ಮನುಷ್ಯರನ್ನು ನೋಡಿದಾಗ್ಯೂ ಇಲ್ಲ ಅಪರಾಧಿಗಳು, ಇಲ್ಲ ಸಾಕ್ಷಿಗಳು, ಇಲ್ಲ ಅರಮನೇ ಅಧಿಕಾರಿಗಳು, ಇಲ್ಲ ಸರ್ಕಾರಿ ಅಧಿಕಾರಿಗಳು, ಹೀಗೆ ಆಗಿತ್ತೇ ಹೊರತು ನ್ಯಾಯವಿಮರ್ಶೆಗೆ ತಕ್ಕ ಯೋಗ್ಯತೆಯುಳ್ಳ ಪುರುಷರು ಮೈಸೂರಲ್ಲಿಯಾಗಲಿ ಶ್ರೀರಂಗಪಟ್ಟಣದಲ್ಲಿಯಾಗಲಿ ಅಥವಾ ಬೆಂಗಳೂರಲ್ಲಿಯಾಗಲಿ ಯಾರೂ ದೊರೆಯಲಿಲ್ಲ. ಆಗ ಮಳವಳ್ಳಿಯಲ್ಲಿ ಕೆಲವು ಗೌರವಶಾಲಿಗಳಾದ ಮುಸಲ್ಮಾನ್ ದೊಡ್ಡ ಮನುಷ್ಯರು ಯಾವ ಪಕ್ಷಕ್ಕೂ ಸೇರದವರಾಗಿದ್ದರು. ಈ ಮೊಕದ್ದಮೆಗೆ ಸೇರಿದ್ದ ಜನರೆಲ್ಲಾ ವಿಶೇಷವಾಗಿ ಹಿಂದುಗಳೇ ಆಗಿದ್ದ ಕಾರಣ ಅನ್ಯ

ಮತ್ಸರ ಪಂಚಾಯಿತಿಯ ನ್ಯಾಯವಿಮರ್ಶೆಗೆ ಸಹಕಾರಿಯಾಗಿರ ಬಹುದೆಂದು ಯೋಚಿಸಿ ಮೊಹರ್ದಿ ನವಾಸ್ ಖಾ, ಬದ್ರೋಜಮಾ ಖಾ, ಧರ್ಮ ಸಾಮ್ರಾಜ್ಯ ಪಂಡಿತ, ಭತ್ತದ ಮಳಿಗೆ ಮರಿಯಣ್ಣ, ಸೋಮಾರಗಿರಿ ಬಾವಾಜಿ, ಇವರನ್ನು ನೇಮಕ ಮಾಡಿದರು. ಮೈಸೂರ ಜನರ ಸುಳಿದಾಟವಿಲ್ಲದಂತೆ ಗಂಜಾಮುದ ಗೋಸಾಯಿ ಗಟ್ಟದಲ್ಲಿ ವಿಚಾರಣೆ ಜರುಗಲು ಗೊತ್ತಾಯಿತು. ತಾರೀಖು ನಿಷ್ಕರ್ಷೆಯಾಯಿತು.

ಆ ತಾರೀಖು ಸಮೀಪಿಸಿದ ಹಾಗೆಲ್ಲಾ ಅಪ್ರಮೇಯನಿಗೆ ದಿಗಿಲು ಹೆಚ್ಚುತಾ ಬಂತು. ಹನುಮಂತರಾಯ ಸಿಕ್ಕಲಿಲ್ಲ. ದುರ್ಗಾಬಾಯಿಯು ಒಂದುಸಾರಿ ಸಾತಾರೆಗೆ ಹೊರಟು ಹೋದಳು. ತನ್ನ ಗಂಡನಿಗೆ ಪರಮಾಪ್ತನಾಗಿದ್ದ ದೇಪಣ್ಣನ ಮೇಲೆ ಫಿರ್ಯಾದು ಆಗಿರುವುದು ವಾಚಾವಿವರಿಸುವ ಹದ್ದನ್ನು ಮೀರಿದೆ. ಹನುಮಂತರಾಯ ಕೂಡಲೆ ಸಮಯಕ್ಕೆ ಸರಿಯಾಗಿ ಬರುತಾನೆಂದು ಹೇಳಿದ್ದ ಆತ್ಮಾರಾಂ ಬಾವಾಜಿಯ ಮಾತು ನಿಜ ವಾಗಲಿಲ್ಲ. ಅಪ್ರಮೇಯನನ್ನು ತೋರಿಸೆಂದು ಬಸಪ್ಪ ಮೊದಲಾದ ಶತ್ರುಪಕ್ಷದವರು ಕೊಡುವ ಬಾಧೆ ದಿನೇದಿನೇ ಹೆಚ್ಚುತಾ ಬಂತು. ಈಗ ಪುನಃ ಹನುಮಂತರಾಯನನ್ನು ತಾನು ಹುಡುಕುವುದಕೆ ವಿಚಾರಣೇ ಸಮಯ ಮೀರಿ ಹೋಗುವುದು. ಆಮೇಲೆ ಯಾವ ರುಜುವಾತು ಬಂದರೂ ಸಮಯ ಮಿಂಚಿಹೋಗುವುದು. ಇದು ವರೆಗೆ ತಾನು ಮಾಡಿದ ಕೆಲಸವೆಲ್ಲಾ ಅರೆಗಳಿಗೆಯಲ್ಲಿ ಕೆಟ್ಟು ಹೋಗುವುದು ಮತ್ತೇನು ಮಾಡಬೇಕು? ಮತ್ತೆ ಯಾವ ಉಪಾ ಯವೂ ಇಲ್ಲ. ತನ್ನಲ್ಲಿರುವ ರುಜುವಾತುಗಳನ್ನು ಸಜ್ಜುಮಾಡಿ ಕೊಂಡು ಫಿರ್ಯಾದಿ ಪರದ ಸಾಕ್ಷಿಗಾರರಿಗೆ ಎದುರು ವಿಚಾರಣೇ ಮಾಡಿ ಅವರ ಹೇಳಿಕೆಗಳನ್ನು ಮುರಿದು ತನ್ನಲ್ಲಿರತಕ್ಕ ರುಜು ವಾತನ್ನು ಒದಗಿಸುವುದೇ ಮುಖ್ಯವಾದ ಕೆಲಸವೆಂದು ಯೋಚಿಸಿ ಸ್ವಾಮಿಕಾರ್ಯಕ್ಕೆ ತಾನೇ ಸೊಂಟಾ ಸುತ್ತಿಕೊಂಡು ನಿಂತ್ಕ

ಕೊಂಡನು.

ಇನ್ನೊಂದು ಕಷ್ಟ ಬಂತು. ಅಪರಾಧಿಗಳ ಪರವಾಗಿ ಅಪ್ರಮೇಯನು ನಿಂತು ಮಾತನಾಡುವುದು ಹೇಗೆ? ತನ್ನ ಪರವಾಗಿ ವಕಾಲತ್ತನ್ನು ವಹಿಸಿದವನು ಮಾತನಾಡಬಹುದೇ ಹೊರತು ಮನಸ್ಸು ಬಂದವರೆಲ್ಲಾ ಮಾತನಾಡಕೂಡದೆಂದು ಅಪರಾಧಿಗಳು ಹೇಳಿದರು, ಅಪ್ರಮೇಯನ ಸ್ಥಿತಿ ಇದ್ದದ್ದೂ ಹಳಸಿಕೊಂಡಿತು. ಮೊಕದ್ದಮೆಯ ಸಂಗತಿಯೇನೋ ತೊಡಕಾದ್ದು. ಆದರೆ ಆನು ಪೂರ್ವಿಯನ್ನು ತಿಳಿದ ಒಬ್ಬನಿಗೆ ಮಾತ್ರ ಅದನ್ನು ನಡಿಸುವುದು ಸಾಧ್ಯ. ಇದಕ್ಕೆ ಫಿರ್ಯಾದಿಪರದಲ್ಲಿ ಜರುಗಿರುವ ಪಿತೂರಿ, ಅದಕ್ಕೆ ಕಾರಣ, ಅದಕ್ಕೆ ಸೇರಿರುವವರ ಉದ್ದೇಶ್ಯ, ಫಿರ್ಯಾದಿಪರದ ಸಾಕ್ಷಿಗಳ ಯೋಗ್ಯತೆ, ಅವರು ಸ್ವಪ್ರಯೋಜನದ ಮೇಲೆ ದೃಷ್ಟಿ ಇಟ್ಟು ಆಡುವ ಮಾತನ್ನು ಖಂಡಿಸುವುದಕ್ಕೆ ಬೇಕಾದ ಸಲಕರಣೆಗಳು, ಅದೆಲ್ಲವನ್ನೂ ಒದಗಿಸಿಕೊಂಡು ಕೋರ್ಟಿನಲ್ಲಿ ಮಾತನಾಡಲು, ತಕ್ಕ ಸಾಮರ್ಥ್ಯ ಮತ್ತು ಧೈರ್ಯ, ತಾನು ಮಾಡತಕ್ಕ ಕೆಲಸದಲ್ಲಿ ಶ್ರದ್ಧೆ, ಇದೇ ಮೊದಲಾದ ಅಂಶಗಳನ್ನು ಉಳ್ಳವನು ಅಪ್ರಮೇಯ ಒಬ್ಬ ಅಲ್ಲವೆ ಮತ್ತೆ ಯಾರೂ ಸಮರ್ಥರು ಇರಲಿಲ್ಲ. ಕೋರ್ಟಿನಲ್ಲಿ ನ್ಯಾಯಾಧಿಪತಿ ಪಂಚಾಯಿತರು, ಶಿರಸ್ತೆದಾರರು, ಮುನಷಿಗಳು, ಫಿರ್ಯಾದಿ ಪರವಾಗಿ ನಿಂತು ಮೊಕದ್ದಮೆಯನ್ನು ನಡಿಸತಕ್ಕ ಖಿಲ್ಲೇದಾರರು ಮೊದಲಾದ ಅಧಿಕಾರಿಗಳು, ಗೊತ್ತಿಲ್ಲದಷ್ಟು ಜನ ಜವಾನರು,ಅಪರಾಧಿಗಳು, ಅವರಿಗೆ ಬೇಕಾದ ಮಿತ್ರರು, ಮತ್ತು ಅರಮನೆಯ ಅಹಲೇಕಾರರು ದಪ್ಪ ಮೀಸೆಯವರು, ದೊಡ್ಡ ಹೊಟ್ಟೆಯವರು, ಕೋರು ರುಮಾಲಿನವರು, ಪಟ್ಟೇ ಅಂಚಿನ ಪಂಚೆಯವರು, ಚಿಕ್ಕಿ ಬಟ್ಟೆನವರು, ಜೋಡೀ ವಸ್ತ್ರದವರು, ಇವರೇ ಮೊದಲಾಗಿ ಅನೇಕ ಅರಮನೇ ನೌಕರರೂ, ವರ್ತಕರೂ, ರೈತರೂ, ಇತರ ಖುಷ್ ಖಾಷ್ ಜನಗಳು ಇವರೆಲ್ಲಾ ಸೇರಿದ್ದರು. ಕೋರ್ಟಿನ ಒಳಗೆ ಸಾವಿರಾರು ಮಂದಿ ಇತ್ತು. ಕೋರ್ಟಿನ ಹೊರಗೆ ೩–೪

ಸಾವಿರಜನ ಸೇರಿತ್ತು. ಇದು ಸಾಧಾರಣ ಮೊಕದ್ದಮೆಯಲ್ಲ. ಅದು ವರೆಗೆ ಇಂಥಾದ್ದು ಯಾವುದೂ ಈ ದೇಶದಲ್ಲಿ ವಿಚಾರಣೆಗೆ ಬಂದಿರ ಲಿಲ್ಲ. ಇಂಗ್ಲಿಷ್ ಕೋರ್ಟುಗಳ ನ್ಯಾಯವಿಮರ್ಶೆಯ ವಿಧಾನವೆಲ್ಲಾ ಪೂರ್ತಿಯಾಗಿ ಜಾರಿಗೆ ಬಂದಿರಲಿಲ್ಲ. ನ್ಯಾಯವಿಧಾಯಕ ಕ್ರಮ ದಲ್ಲಿ ನಮ್ಮ ಪೂರ್ವದ ಪದ್ಧತಿಗಳು ಹೋಗಿರಲಿಲ್ಲ.

ಈ ಸ್ಥಿತಿಯಲ್ಲಿದ್ದ ತುಂಬಿದ ಕೋರ್ಟಿನಲ್ಲಿ ಅಪ್ರಮೇಯನು ನಿಂತು ಅಧಿಕಾರಿಗಳನ್ನು ಕುರಿತು–ಸ್ವಾಮಿ, ಈ ಮೊಕದ್ದಮೆಯು ನನಗೆ ಆದ್ಯಂತವಾಗಿ ತಿಳಿದಿದೆ. ಅಪರಾಧಿಗಳ ಪರವಾಗಿ ಕ್ರಮ ವರಿತು ಮೊಕದ್ದಮೆಯನ್ನು ನಡಿಸತಕ್ಕ ಲಾಯಖ್ ಮನುಷ್ಯರು ಯಾರಾದರೂ ಬೇರೇ ಇದ್ದರೆ ಸರಿ. ಹಾಗಿಲ್ಲವಾದರೆ, ಅಪರಾಧಿ ಗಳನ್ನು ಅರೆಗಳಿಗೇ ಮಟ್ಟಿಗೆ ಹೊರಗೆ ಕಳುಹಿಸಿಕೊಡಬೇಕು; ಅವರ ಸಂಗಡ ಕೆಲವು ಮಾತನಾಡಿ ಒಳಕ್ಕೆ ಕರೆದುಕೊಂಡು ಬರು ತೇನೆ, ಅಪ್ಪಣೇ ಕೊಡಿಸಬೇಕು, ಎಂದನು. ಆಗ ಕೋರ್ಟಿನ ನ್ಯಾಯಾಧಿಪತಿ ಪಂಚಾಯಿತರೇ ಮುಖ್ಯವಾಗಿ ಒಬ್ಬೊಬ್ಬರೂ ಒಂದೊಂದು ಅಭಿಪ್ರಾಯಪಟ್ಟರು. ಆದರೆ ಪಂಚಾಯಿತರಲ್ಲಿ ಪ್ರಮುಖನಾಗಿಯೂ ಒಳ್ಳೆ ವಾಗ್ಮಿಯಾಗಿಯೂ ನ್ಯಾಯ ವಿಮರ್ಶೆಯ ರೀತಿಯನ್ನು ಬಲ್ಲವನಾಗಿಯೂ ಇದ್ದ ಮೊಹರ್ದಿ ನವಾಸಖಾನನಿಗೆ ಅಪ್ರಮೇಯನ ಯೋಗ್ಯತೆ ಗೊತ್ತಿತ್ತು; ಮೊದಲು ಅನೇಕ ವರುಷಗಳ ಹಿಂದೆ ಮುಳವಳ್ಳೀ ಮಸೀತಿಯಲ್ಲಿ ಅಪ್ರಮೇಯನು ಫಾರ್ಷಿ ಗ್ರಂಥವನ್ನು ಮೌಲ್ವಿ ವೇಷದಲ್ಲಿ ಕೂತು ಓದಿ ಎಲ್ಲರ ಮೆಚ್ಚಿಗೆಗೂ ಪಾತ್ರನಾದ ಲಾಗಾಯಿತು. ಮೊಹರ್ದಿ ನವಾಸ್‌ಖಾನನು ಅಪ್ರಮೇಯನ ಶಕ್ತಿಯನ್ನೂ ಯೋಗ್ಯತೆ ಯನ್ನೂ ಅರಿತವನಾಗಿದ್ದ ಕಾರಣ, ನ್ಯಾಯಾಧಿಪತಿಗೂ ಇತರ ಪಂಚಾಯಿತರಿಗೂ ಸಮಾಧಾನವನ್ನು ಹೇಳಿ ಅಪ್ರಮೇಯನ ಇಷ್ಟ ಪ್ರಕಾರ ಅಪ್ಪಣೆಯನ್ನು ಕೊಡಿಸಿದನು. ಆಗ ಅಪ್ರಮೇಯನು ದೇಪಣ್ಣ ಮೊದಲಾದ ಅಪರಾಧಿಗಳೆಲ್ಲರನ್ನೂ ಹೊರಕ್ಕೆ ಕರೆದು

ಕೊಂಡು ಹೋಗಿ ಮೊಕದ್ದಮೆಯ ಸ್ವಭಾವವನ್ನು ಅವರಿಗೆ ವಿವರಿಸಿ ಹೇಳಿ ತಾನು ಮೊಕದ್ದಮೆಯಲ್ಲಿ ಮಾಡಬೇಕೆಂದಿರುವ ಕೆಲಸ ಅದರಿಂದ ಅಪರಾಧಿಗಳಿಗೆ ಉಂಟಾಗುವ ಪ್ರಯೋಜನ ಇದೆಲ್ಲ ವನ್ನೂ ವಿಶದಮಾಡಿದನು. ಆಗಬಹುದೆಂದು ಅಪರಾಧಿಗಳೆಲ್ಲರೂ ಒಪ್ಪಿದರು ಮತ್ತು ಅಪ್ರಮೇಯನನ್ನು ಕುರಿತು—ಹನುಮಂತ ರಾಯನಿಗೆ ನೀವು ಪರಮಾಪ್ತರು, ಅವನ ವಿಚಾರವೆಲ್ಲವನ್ನೂ ನೀವು ಬಲ್ಲಿರಿ, ನಿಮ್ಮ ಯುಕ್ತಿಗೆ ತೋರಿದಹಾಗೆ ಮೊಕದ್ದಮೆ ಯನ್ನು ನಡಿಸಿ ನಮ್ಮ ಮಾನವನ್ನು ಕಾಪಾಡಿ, ನಮಗೆ ಇನ್ನು ಯಾರಲ್ಲಿಯೂ ನಂಬಿಕೆ ಇಲ್ಲ ಎಂದು ಹೇಳಿಕೊಂಡರು. ಅಪ್ರ ಮೇಯನು ನೀವು ಹೆದರಬೇಡಿ ಎಂದು ಅಭಯವನ್ನು ಕೊಟ್ಟು ಕೋರ್ಟಿನೊಳಕ್ಕ ಅಪರಾಧಿಗಳನ್ನು ಕರೆದು ತಂದುಬಿಟ್ಟು ಅವರ ಪರವಾಗಿ ಮಾತನಾಡಲು ತಾನು ನಿಂತುಕೊಂಡನು.

ವಿಚಾರಣೆಗೆ ಆರಂಭವಾಯಿತು. ಫಿರ್ಯಾದಿಪರ ಸಾಕ್ಷಿಗಳೆಲ್ಲರೂ —ದೇಪಣ್ಣನವರು ಖುದ್ದು ನಿಂತುಕೊಂಡು ಹನುಮಂತರಾಯ ನನ್ನು ಇತರ ಅಪರಾಧಿಗಳಿಂದ ಕೊಲ್ಲಿಸಿದರು ಎಂಬ ಒಂದು ಬೀಜ ಮಂತ್ರವನ್ನು ಚೆನ್ನಾಗಿ ಕಲಿತು ಒರಲಿಸಿದ್ದರು. ಕೋರ್ಟು ಮುಂದೆ ಬರಬೇಕೆಂದು ಅವರ ಹೆಸರನ್ನು ಕೂಗಿಸಿದಕೂಡಲೇ ಆ ಮಾತನ್ನು ಹುಂಡ ಹಾಳತವಾಗಿ ಥಟ್ಟನೆ ಆಡುತಿದ್ದರು; ಆದರೆ ಅಡ್ಡ ಸವಾಲಿನಲ್ಲಿ ಒಬ್ಬೊಬ್ಬ ಸಾಕ್ಷಿ ಒಂದೊಂದು ವಿಧವಾಗಿ ಮಾತನಾಡಿ ಹೇಳಿಕೆ ಬರಿಸಿದನು.

೧ನೇ ಸಾಕ್ಷಿ—ಹನುಮಂತರಾಯರನ್ನು ಚೆನ್ನಾಗಿ ಬಲ್ಲೆ.

ಅಪ್ರ—ಹನುಮಂತರಾಯರನ್ನು ಖೂನೀಮಾಡಿದ್ದನ್ನು ನೀವು ನೋಡಿದಿರ?

೧ನೇ ಸಾಕ್ಷಿ—ನೋಡಿದೆ.

ಅಪ್ರ—ಯಾರು ಖೂನಿ ಮಾಡಿದರು?

೧ನೇ ಸಾಕ್ಷಿ—ಯಾರು ಮಾಡಿದರೊ ಕಾಣೆ.

ಅಪ್ರ—ಯಾರು ಖೂನಿಮಾಡಿದರೊ ಗದ್ದಲದಲ್ಲಿ ಗೊತ್ತಾಗಲಿಲ್ಲವೊ ?

೧ನೇ ಸಾಕ್ಷಿ—ಗೊತ್ತಾಗಲಿಲ್ಲ.

ಅಪ್ರ—ಬಹಳಜನ ಸೇರಿತ್ತೊ.

೧ನೇ ಸಾಕ್ಷಿ—ನೂರಾರು ಜನ ಸೇರಿತ್ತು.

ಅಪ್ರ—ಅವರ ಹೆಸರನ್ನು ಹೇಳಬಲ್ಲೆಯ ?

೧ನೇ ಸಾಕ್ಷಿ—ಆ ಗುಂಪಿನಲ್ಲಿ ಬಹಳ ಜನವಿದ್ದ ಕಾರಣ ಆ ಗದ್ದಲದಲ್ಲಿ ಯಾರ ಹೆಸರೂ ಗೊತ್ತಾಗಲಿಲ್ಲ.

ಅಪ್ರ—ಈ ಜಗಳವನ್ನು ನೋಡುತಾ ಯಾರಾದರೂ ಇದ್ದರೆ ? ಅವರ ಹೆಸರನ್ನಾದರೂ ಹೇಳಬಲ್ಲೆಯಾ ?

೧ನೇ ಸಾಕ್ಷಿ—ಗದ್ದಲದಲ್ಲಿ ಅವರ ಹೆಸರನ್ನೆಲ್ಲಾ ಹೇಗೆ ಬರೆದು ಇರಿಸಿಕೊಳ್ಳಲಿ ?

ಅಪ್ರ—ನೀನು ಹೊರತು ಇನ್ನುಯಾರು ಇದ್ದರೋ ಹೇಳಲು ಸಾಧ್ಯವಿಲ್ಲವಷ್ಟೆ ?

೧ನೇ ಸಾಕ್ಷಿ—ಸಾಧ್ಯವಿಲ್ಲ.

ಅಪ್ರ—ಹನುಮಂತರಾಯನನ್ನು ದೊಣ್ಣೆಗಳಿಂದ ಹೊಡೆದರೋ ?

೧ನೇ ಸಾಕ್ಷಿ—ದಪ್ಪ ದೊಣ್ಣೆಗಳಿಂದ ಹೊಡೆದರು.

ಅಪ್ರ—ಮೈಯೆಲ್ಲಾ ರಕ್ತ ಬಂದಿತ್ತೋ ?

೧ನೇ ಸಾಕ್ಷಿ—ಮೈಯೆಲ್ಲಾ ರಕ್ತದ ಮಯವಾಗಿತ್ತು.

ಅಪ್ರ—ಡಾಗವೊರೆ ಕೇಪಲ್ ಸಾಹೇಬರ ಬಂಗಲೆ ಎಲ್ಲಿದೆ ಬಲ್ಲೆಯ ?

೧ನೇ ಸಾಕ್ಷಿ—ನಸರಾಬಾದು ದಾರಿಯಲ್ಲಿ.

ಅಪ್ರ—ಹನುಮಂತರಾಯನ ಶರೀರವನ್ನು ರಜಪೂತುಗಾಟಿನ ಕಂದಕಕ್ಕೆ ತಳ್ಳಿಬಿಟ್ಟರಲ್ಲವೆ ?

೧ನೇ ಸಾಕ್ಷಿ—ತಳ್ಳಿಬಿಟ್ಟರು.

ಅಪ್ರ—ಹನುಮಂತರಾಯರು ರಜಪೂತು ಗಾಟಿನ ಕಡೆ ಹೋಗುತಾ ಇದ್ದರು ಅಲ್ಲವೆ?

೧ನೇ ಸಾಕ್ಷಿ—ಹವುದು.

ಅಪ್ರ—ರಜಪೂತ ಗಾಟಿಗೂ ಕೇಮಲ್ ಸಾಹೇಬರ ಬಂಗಲೆಗೂ ಎಷ್ಟು ದೂರವಿದೆ?

೧ನೇ ಸಾಕ್ಷಿ—ಅದು ಎತ್ತಲಾಗೆ ಇದು ಎತ್ತಲಾಗೆ? ಅಲ್ಲಿಗೂ ಅಲ್ಲಿಗೂ ಎರಡು ಮೂರು ಮೈಲಿ ಇರಬಹುದು?

ಅಪ್ರ—ಹನುಮಂತರಾಯನನ್ನು ಹೊಡೆದು ಅವನನ್ನು ಕಂದಕಕ್ಕೆ ಕೊಡಲಿ ತಳ್ಳಿಬಿಟ್ಟರೊ?

೧ನೇ ಸಾಕ್ಷಿ—ಕುಟುಕುಜೀವ ಇದ್ದಾಗಲೇ ತಳ್ಳಿಬಿಟ್ಟರು.

ಅಪ್ರ—ಅವನ ಶರೀರವನ್ನು ಕಂದಕಕ್ಕೆ ತಳ್ಳಲು ಅಲ್ಲಿನ ಜನರೆಲ್ಲಾ ಬಹಳ ಆತುರರಾಗಿದ್ದರಲ್ಲವೆ?

೧ನೇ ಸಾಕ್ಷಿ—ಬಹಳ ಆತುರರಾಗಿದ್ದರು.

ಅಪ್ರ—ಹನುಮಂತರಾಯನಿಗೆ ಆಗಿದ್ದ ಗಾಯವನ್ನು ನೀನು ಹತ್ತಿರಿದ್ದು ನೋಡಿದೆಯ?

೧ನೇ ಸಾಕ್ಷಿ—ಅಂಥಾ ಕಾಲದಲ್ಲಿ ಹತ್ತಿರಕ್ಕೆ ಹೋದವರುಂಟೆ? ನಾನು ಆ ಗಾಯಗಳನ್ನು ನೋಡಲಿಲ್ಲ.

ಅಪ್ರ—ಆ ಗಾಯಕ್ಕೆ ನೀವು ಯಾರಾದರೂ ಔಷಧಿ ಹಾಕಿದರ?

೧ನೇ ಸಾಕ್ಷಿ—ಯಾರೂ ಔಷಧಿ ಹಾಕಲಿಲ್ಲ.

ಅಪ್ರ—ಕೇಮಲ್ ಸಾಹೇಬರು ಆಗ ಹನುಮಂತರಾಯನಿಗೆ ಚಿಕಿತ್ಸೆ ಮಾಡಿದರಲ್ಲವೆ?

೧ನೇ ಸಾಕ್ಷಿ—ಹವುದು.

ಅಪ್ರ—ಅವರ ಬಂಗಲೆಯಲ್ಲಿ ಚಿಕಿತ್ಸೆ ಮಾಡಿದರೊ?

೧ನೇ ಸಾಕ್ಷಿ—ಮಾಡಿದರು.

ಆಗ ಫಿರ್ಯಾದಿ ಕಡೆಯವರು ಪುನರ್ವಿಚಾರಣೆ ಮಾಡಲಿಲ್ಲ, ಬಿಟ್ಟುಬಿಟ್ಟರು.

ಎರಡನೆ ಸಾಕ್ಷಿಯ ಅಡ್ಡ ವಿಚಾರಣೆಗೆ ಮೊದಲಾಯಿತು.

ಅಪ್ರ—ಹನುಮಂತರಾಯ ಕೇಮಲ್‌ಸಾಹೇಬರ ಬಂಗಲಿಗೆ ಹೋಗುತಾ ಇರುವಾಗ ಅವನನ್ನು ಖೂನಿ ಮಾಡಿದರಲ್ಲವೆ?

೨ನೇ ಸಾಕ್ಷಿ—ಹವುದು.

ಅಪ್ರ—ಕೇಮಲ್ ಸಾಹೇಬರ ಬಂಗಲಿಗೆ ಸಮೀಪವಾಗಿ ದಾರಿಯಲ್ಲಿ ಈ ಕೆಲಸ ಮಾಡಿದರೋ?

೨ನೇ ಸಾಕ್ಷಿ—ಹವುದು.

ಅಪ್ರ—ಹನುಮಂತರಾಯನಿಗೆ ಏಟು ಪೂರಾ ಬಿದ್ದಿತಲ್ಲವೆ?

೨ನೇ ಸಾಕ್ಷಿ—ಪೂರಾ ಏಟುಬಿದ್ದಿತು.

ಅಪ್ರ—ಯಾರು ಅವನನ್ನು ಹೊಡೆದರು?

೨ನೇ ಸಾಕ್ಷಿ—ದೇಪಣ್ಣನವರು.

ಅಪ್ರ—ದೇಪಣ್ಣನವರು ಖುದ್ದು ಹೊಡೆದರೊ? ಎಲ್ಲೆಲ್ಲಿ, ಎಷ್ಟುಏಟು, ಯಾತರಿಂದ?

೨ನೇ ಸಾಕ್ಷಿ—ದೇಪಣ್ಣನವರು ಹೊಡೆದರು ಎಂದುಕೊಂಡರು. ಎಲ್ಲೆಲ್ಲಿ ಎಷ್ಟು ಏಟು ಹೊಡೆದರೊ, ಯಾತರಿಂದ ಹೊಡೆದರೋ ನಾವು ಏಕೆ ನೋಡೋಣ?

ಅಪ್ರ—ಎಲ್ಲರೂ ಕಾಣುವಹಾಗೆ ಇಂಥಾ ಕೆಲಸಾ ಮಾಡಿ ಯಾರೇನ್ಯೆಯ್ಯ?

೨ನೇ ಸಾಕ್ಷಿ—ಕತ್ತಲೆಯಲ್ಲಿ ಕೆಲಸಾಮಾಡಿದರೆ ಯಾರು ಕಾಣುತಾರೆ?

ಅಪ್ರ—ಹಾಗಾದರೆ ಈ ಕೆಲಸವನ್ನು ರಾತ್ರೆಹೊತ್ತು ಮಾಡಿದರೊ?

೨ನೇ ಸಾಕ್ಷಿ—ರಾತ್ರೆಹೊತ್ತು, ಕತ್ತಲೇಕಾಲ.

ಅಪ್ರ—ಜನದ ಗದ್ದಲ ಬಹಳವಾಗಿತ್ತಲ್ಲವೆ?

೨ನೇ ಸಾಕ್ಷಿ—ಬಹಳಜನ ಸೇರಿತ್ತು.

ಅಪ್ರ—ಕತ್ತಲೆಯೂ ಬಹಳವಾಗಿತ್ತೊ?

೨ನೇ ಸಾಕ್ಷಿ—ಬಹಳವಾಗಿತ್ತು.

ಅಪ್ರ—ಅಲ್ಲಿದ್ದ ಜನರು ಕಾಣಿಸದಷ್ಟು ಕತ್ತಲೆಯಾಗಿತ್ತಲ್ಲವೆ?

೨ನೇ ಸಾಕ್ಷಿ—ಒಬ್ಬರ ಮುಖ ಒಬ್ಬರಿಗೆ ಕಾಣಿಸುತಾ ಇರಲಿಲ್ಲ

ಅಪ್ರ—ಹನುಮಂತರಾಯನಿಗೆ ಆಗಲೇ ಪ್ರಾಣ ಹೋಯಿತಲ್ಲವೆ?

೨ನೇ ಸಾಕ್ಷಿ—ಹವುದು.

ಪುನರ್ವಿಚಾರಣೆ ಇಲ್ಲ. ಇದೇಪ್ರಕಾರ ಅನೇಕ ಸಾಕ್ಷಿಗಳನ್ನು ಫಿರ್ಯಾದಿ ತರಪು ವಿಚಾರಣೆ ಮಾಡಿದ್ದರು. ಅವರೆಲ್ಲರನ್ನೂ ಅಪ್ರಮೇಯ ಅಡ್ಡವಿಚಾರಣೆ ಮಾಡಿದನು. ಇಂಥಾ ಪ್ರಶ್ನೆಗೆ ಇಂಥಾ ಉತ್ತರವನ್ನು ಹೇಳಬೇಕೆಂದು ಈ ಸಾಕ್ಷಿಗಳೆಲ್ಲರಿಗೂ ಮೊದಲೇ ಚೆನ್ನಾಗಿ ಬೋಧನೆಯಾಗಿದ್ದರೂ, ನ್ಯಾಯಸ್ಥಾನದ ಮಹತ್ತಿನಿಂದ ಒಂದಕ್ಕೊಂದು ಸಂಬಂಧವಿಲ್ಲದಹಾಗೆ ಹೇಳಿಕೆಯನ್ನು ಬರಿಸಿದರು.

ಆಗ ಅಪ್ರಮೇಯನು ನ್ಯಾಯಾಧಿಕಾರಿಯನ್ನೂ ಪಂಚಾಯಿತರನ್ನೂ ಕುರಿತು,

ಅಪ್ರ—ಸ್ವಾಮಿ, ಫಿರ್ಯಾದಿಪರದ ಸಾಕ್ಷಿಗಳು ಹೇಳಿರುವ ಮಾತನ್ನೆಲ್ಲಾ ಒಂದನ್ನು ಒಂದಕ್ಕೆ ಹೋಲಿಸಿ ನೋಡಿದರೆ, ಮುಂಚಿತವಾಗಿ ಕಲಿತುಕೊಂಡು ಬಂದಿರುವ ಮಠದ ಹುಡುಗರು ಬಾಯಿಪಾಠವನ್ನು ಒಪ್ಪಿಸಿದಹಾಗಿದೆಯಲ್ಲದೆ, ಇದರಲ್ಲಿ ನಿಶ್ಚಯವೇನೂ ಕಾಣಿಸುವುದಿಲ್ಲ. ಯಾರೂ ಕಾಣಿಸುವುದೇ ಇರುವಷ್ಟು ಕತ್ತಲೆ ಇದ್ದರೆ ದೇಪಣ್ಣನವರು ಹೊಡೆದರೆಂದು ಕಾಣಿಸಿದ್ದು ಹೇಗೆ? ದೊಣ್ಣೆಯಲ್ಲಿ ಹೊಡೆದಿದ್ದರೆ ವಿಶೇಷವಾಗಿ ಮೂಗಪೆಟ್ಟು ಆಗುವುದಕ್ಕೆಬದಲಾಗಿ ಮೈ ಎಲ್ಲಾ ತೂತಾಗಿ ವಿಶೇಷವಾಗಿ ರಕ್ತ ಸುರಿದದ್ದು ಹೇಗೆ? ಕೇಮಲ್ ಸಾಹೇಬರ ಬಂಗಲಿ ಬಳಿಯಲ್ಲಿ ಖೂನಿಯಾಗಿದ್ದರೆ ಆ ಹೆಣವು ರಜಪೂತಗಾಟನ ಕಂದಕದಲ್ಲಿ ಬಿದ್ದದ್ದು ಹೇಗೆ? ಸತ್ತುಹೋದ ಕ್ಷಣದಲ್ಲಿಯೇ ಅಥವಾ ಕುಟುಕ ಜೀವ ಇರುವಾಗಲೇ ಕಂದಕಕ್ಕೆ ತಳ್ಳಿದ್ದರೆ ಕೇಮಲ್ ಸಾಹೇಬರು

ಚಿಕಿತ್ಸೆ ಯಾರಿಗೆ ಮಾಡಿದರು? ಇದೇ ಮೊದಲಾಗಿ ಪರಸ್ಪರ ವಿರುದ್ಧವಾದ ಸಂಗತಿಗಳು ಅನೇಕವಾಗಿ ಹೊರಟವು. ಸತ್ತವನು ಇಂಥವನೆಂದುಗೊತ್ತಿಲ್ಲ, ಹೊಡೆದವನು ಇಂಥವನೆಂದು ಗೊತ್ತಿಲ್ಲ. ಹೀಗಿರುವಲ್ಲಿ ಅಪರಾಧವು ಯಾರಮೇಲೂ ಹೊರುವುದಿಲ್ಲ.

ಇದೇ ಮೊದಲಾಗಿ ಅನೇಕ ಸಂಗತಿಗಳನ್ನು ಕುರಿತು ಅಪ್ರಮೇಯನು ಚರ್ಚೆಮಾಡಿದನು. ಆಗ ಪಂಚಾಯಿತರಲ್ಲಿ ಒಬ್ಬನು ಅಪ್ರಮೇಯನನ್ನು ಕುರಿತು—ಈಗ ಫಿರ್ಯಾದಿಪರದಲ್ಲಿ ಹೇಳುವ ಸಾಕ್ಷಿಗಳು ಕೆಲವು ವಿರುದ್ಧವಾದ ಅಂಶಗಳನ್ನು ನುಡಿದಿರುವುದೇನೋ ನಿಜ. ಆದರೆ ಇದೇ ಸಾಕ್ಷಿಗಳ ರುಜುವಾತಿನ ಮೇಲೆ ಮೊದಲು ಇದೇ ಅಪರಾಧಿಗಳಿಗೆ ಶಿಕ್ಷೆಯಾಗಿತ್ತಷ್ಟೆ? ಅಂಥವರು ಈಗ ಸ್ವಲ್ಪ ವ್ಯತ್ಯಾಸವಾಗಿ ಹೇಳಿದ್ದನ್ನೇ ಮುಂದು ಮಾಡಿಕೊಂಡು ಅಪರಾಧಿಗಳನ್ನು ಬಿಡುಗಡೆ ಮಾಡುವುದಕ್ಕಾಗುವುದಿಲ್ಲ. ನಿಮ್ಮಕಡೆ ಬೇರೆ ರುಜುವಾತೇನಾದರೂ ಇದ್ದರೆ ತಿಳಿಸಿ, ಎಂದು ಹೇಳಿದನು. ಅದನ್ನು ಇತರ ಪಂಚಾಯಿತರೂ ಮತ್ತು ಅಧಿಕಾರಿಗಳೂ ಸಹಾ ಅಂಗೀಕರಿಸಿದರು. ಇವರೆಲ್ಲರೂ ಏಕೀಭವಿಸಿ ಈ ಅಭಿಪ್ರಾಯಪಟ್ಟದ್ದು ಅಪರಾಧಿಗಳಿಗೂ ಅವರ ಕಡೆಯವರಿಗೂ ಭೀತಿಯನ್ನುಂಟು ಮಾಡಿತು. ಪರಸ್ಪರ ವಿರುದ್ಧವಾಗಿ ಹೇಳಿದ ಸಾಕ್ಷಿಗಳ ಮಾತನ್ನು ನಂಬಿ ಎಲ್ಲಿ ಶಿಕ್ಷೆ ಕೊಡುತಾರೋ ಇಷ್ಟುಮಾಡಿದ್ದೂ ಬೂದಿಯಲ್ಲಿ ಹೋಮಮಾಡಿದಂತಾಗುವುದು. ಆಗ ಅಪ್ರಮೇಯನು ಧೈರ್ಯವನ್ನು ಕೈಗೊಂಡು ಅಧಿಕಾರಿಗಳನ್ನು ಕುರಿತು—ಅಪರಾಧಿಗಳು ತಪ್ಪುಮಾಡಿಲ್ಲವೆನ್ನುವುದಕ್ಕೆ ಫಿರ್ಯಾದಿಯ ಪರದಲ್ಲಿ ಇದುವರೆಗೆ ವಿಚಾರಣೆಯಾದ ಸಾಕ್ಷಿಗಳ ಪೂರ್ವಾಪರ ವಿರುದ್ಧವಾದ ಅತಂತ್ರವಾದ ರುಜುವಾತೇ ನಮಗೆ ಸಾಕೆಂದು ಹೇಳಿ ಕೈ ಬಿಟ್ಟೇನು; ಮತ್ತು ಬೇರೇ ಸಾಕ್ಷಿಗಳನ್ನು ನಮ್ಮಪರವಾಗಿ ವಿಚಾರಣೇಮಾಡದೇ ಹೋದಾಗ್ಯೂ ಈ ಮಹಾ ಸನ್ನಿಧಾನದಲ್ಲಿ ಆಗತಕ್ಕ ತೀರ್ಮಾನವು

ನಮ್ಮ ಪರವಾಗಿಯೂ ನಿಷ್ಪಕ್ಷಪಾತವಾಗಿಯೂ ಇರುತ್ತೆಂಬ ಧೈರ್ಯ ನನಗೆ ಇದೆ. ಅಪರಾಧಿಗಳಿಗೆ ಶಿಕ್ಷೆ ಕೊಡುವುದಕ್ಕೂ ಈ ಸಾಕ್ಷಿಗಳ ಅನನ್ವಯವಾದ ಹೇಳಿಕೆಯೇ ಸಾಕೆಂದು ನ್ಯಾಯಮೂರ್ತಿಸ್ವರೂಪವಾದ ಈ ಅಧಿಕಾರಸ್ಥಾನ ದಿಂದ ಅಭಿಪ್ರಾಯ ಹೊರಡಲಾರದೆಂಬ ಧೈರ್ಯವು ನನಗೆ ಇಲ್ಲ ದಿದ್ದರೆ, ನಿರ್ಭಾಗ್ಯರಾದ ಈ ಅಪರಾಧಿಗಳ ಪರವಾಗಿ ನಾನು ವಕೀಲನಾಗಿ ಈ ಕೋರ್ಟಿನ ಮುಂದೆ ನಿಲ್ಲುತಿರಲಿಲ್ಲ. ಇದು ವರೆಗೆ ಫಿರ್ಯಾದಿ ಪರದಲ್ಲಿ ಹೊರಪಟ್ಟಿರುವ ರುಜುವಾತು ಹೆಸರಿಗೆ ಫಿರ್ಯಾದಿಪರವಾದಾಗ್ಯೂ ಅದರ ಸಾರಾಂಶದಲ್ಲಿ ಅಪರಾಧಿಗಳಿಗೆ ಅನುಕೂಲವಾಗಿರುವುದರ ಭಾರದಮೇಲೆಯೇ ಈ ದುರದೃಷ್ಟ ಶಾಲಿಗಳನ್ನು ಬಿಡುಗಡೆಮಾಡಬೇಕೆಂದು ನಾನು ಅರಿಕೇ ಮಾಡಿದ್ದ ರಲ್ಲಿ ಅಪರಾಧಿಗಳಪರ ಮತ್ತೆ ಯಾವ ರುಜುವಾತೂ ಇಲ್ಲವೆಂದು ಭಾವನೆ ಬರಕೂಡದು. ಇಂಥಾ ಭಾರೀ ತಪ್ಪನ್ನು ನಮ್ಮಮೇಲೆ ಹೊರಿಸಿರುವಾಗ್ಯೆ ನಮ್ಮ ತಬೇ ತಪ್ಪಿಸಿಕೊಳ್ಳುವುದಕ್ಕೆ ಎಷ್ಟೋ ದೃಷ್ಟಾಂತಗಳಿದ್ದರೂ ಅದೆಲ್ಲವನ್ನೂ ನಾನು ಈಗ ಹೊರಪಡಿಸು ವುದಿಲ್ಲ. ಮುಂಪೆ ಫಿರ್ಯಾದಿಪರದ ದೊಂಬೀಗುಂಪಿನಮೇಲೆ ಪ್ರಯೋಗಿಸುವುದಕ್ಕಾಗಿ ಭಾರಿಯಾದ ಕುಂತಲನ್ನು ನಾವು ಇರಿಸಿ ಕೊಂಡು, ಈ ಅಧಿಕಾರಸ್ಥಾನಕ್ಕೆ ಸ್ವಲ್ಪವಾಗಿ ವಿಚಾರಣೆ ಮಾಡ ತಕ್ಕ ತೊಂದರೆಯನ್ನು ಮೊದಲು ಕೊಟ್ಟು ಅದರಿಂದ ನ್ಯಾಯ ವಿಮರ್ಶೆಯ ಮಂದಮಾರುತವು ನಮ್ಮಕಡೆ ಬೀಸಿ ನಮ್ಮ ತಾಪ ವನ್ನು ನಿವಾರಣೆ ಮಾಡೀತೆ ಎಂಬದಾಗಿ ಮೊದಲು ನೋಡಿ ಕೊಂಡು, ತರುವಾಯ ಅಗತ್ಯವಿದ್ದರೆ ನಮ್ಮ ನಿರಪರಾಧಿತ್ವದ ವಿಚಾರದಲ್ಲಿ ಬೇರೆ ಸಾಧನಗಳನ್ನು ಈ ಮಹಾ ಸನ್ನಿಧಾನದಲ್ಲಿ ಅರಿಕೆ ಮಾಡುತೇನೆ. ಹನುಮಂತರಾಯರಿಗೆ ಏಟುಬಿದ್ದ ಕೂಡಲೆ ಡಾಕ್ಟರು ಕೆಮುಲ್‌ಸಾಹೇಬರ ಬಂಗಲೆಗೆ ಕರೆದುಕೊಂಡು ಹೋದ ರೆಂತಲೂ ಅಲ್ಲಿ ಆ ಸಾಹೇಬರು ಆತನಿಗೆ ಚಿಕಿತ್ಸೆಮಾಡಿದರೆಂತಲೂ

ಕೆಲವು ಸಾಕ್ಷಿಗಳು ಹೇಳಿದಾರೆ. ಆ ಸಾಹೇಬರನ್ನು ಇದುವರೆಗೆ ಯಾರೂ ವಿಚಾರಣೆಮಾಡಿಲ್ಲ. ಹಾಗೆ ಹನುಮಂತರಾಯರಿಗೆ ಗಾಯವಾಗಿದ್ದರೆ ಕೆಮಲ್ ಸಾಹೇಬರಿಗೆ ತಿಳಿದಿರಬೇಕೆಂಬ ಅಂಶ ಅರಿಕೇ ಮಾಡತಕ್ಕದ್ದು ಅನಾವಶ್ಯಕವಾಗಿದೆ. ಮೊದಲು ಅವರ ವಿಚಾರಣೆಯನ್ನು ಮಾಡಬೇಕಾಗಿತ್ತೆಂದು ಹಜಿರತ್ತು ಕಮಿಷನರು ಸಾಹೇಬರು ಸಹಿತ ಆಕ್ಷೇಪಿಸಿ ಬರೆದಿದಾರೆಂದು ತಿಳಿಯಬಂದಿದೆ. ಅವರನ್ನು ಕರೆಯಿಸಿ ದರ್ಯಾಫ್ತಿ ಆದಮೇಲೆ ಆಗಲೂ ಈ ಕೋರ್ಟಿಗೆ ಅಪರಾಧಿಗಳು ಬಿಡುಗಡೆಮಾಡಲ್ಪಡುವುದಕ್ಕೆ ಅರ್ಹರೆಂಬ ಅಭಿಪ್ರಾಯ ಹುಟ್ಟದೇ ಹೋದರೆ, ಬೇರೆ ತಾರ್ಕಣ್ಯಗಳನ್ನು ಕೋರ್ಟಿಗೆ ಒದಗಿಸಿ ಕೊಡಲು ಸಿದ್ಧನಾಗಿದೇನೆ. ಈ ಮೊಕದ್ದಮೆಯ ಸ್ವಭಾವದಿಂದ ಫಿರ್ಯಾದಿಪರದ ರುಜುವಾತೇ ಮುಖ್ಯವಾದ್ದು, ಅದು ಕೆಟ್ಟರೆ, ನಾವು ಖುಲಾಸೆಗೇ ಅರ್ಹರು.

ಈ ಪ್ರಕಾರ ಅಪರಾಧಿಗಳು ತಮ್ಮ ತಲೆಯನ್ನು ಉಳಿಸಿಕೊಳ್ಳಲು ಬಲ ಕಡಮೆ ಎಂಬ ಅಂಶವನ್ನು ಪೂರ್ತಿಯಾಗಿ ನಂಬಿಕೊಂಡಿದ್ದ ಅಪ್ರಮೇಯನಿಗೆ ಒಳಗೆ ಪಂಚ ಪ್ರಾಣವೂ ಪಂಚಾಕ್ಷರಿಯನ್ನು ಜಪಿಸುತಿದ್ದರೂ ಕೂಡ, ಅವನು ತನ್ನ ಆಟೋಪದಿಂದಲೂ ವಾಗ್ಝರಿಯಿಂದಲೂ ಎದುರು ಕಕ್ಷಿಯವರಿಗೆ ಗರ್ಭ ನಿರ್ಭೇದವಾಗುವಂತೆ ಮಾಡಿದ್ದೂ ಅಲ್ಲದೆ ಅಧಿಕಾರಿಗಳೂ ಕೂಡ ಈ ಅಂಶದಲ್ಲಿ ನಿಧಾನವಾಗಿ ಯೋಚಿಸುವಹಾಗೆ ಮಾಡಿದನು. ಇದುವರೆಗೆ ಆದ ವಿಚಾರಣೆಯು ಮೂರು ನಾಲ್ಕು ದಿವಸ ಜರುಗಿತು.

ತರುವಾಯ ಡಾಕ್ಟರು ಕ್ಯಾಂಬಲ್ ಸಾಹೇಬನ ವಿಚಾರಣೆಯಾಯಿತು. ತುಕಡಿದಾರ ಹನುಮಂತರಾವ್ ರಣನವರೆಯನ್ನು ತಾನು ಬಲ್ಲೆ ; ಆತನಿಗೆ ಯಾರು ಹೊಡೆದರೋ ತನಗೆ ಗೊತ್ತಾಗಲಿಲ್ಲ; ಹನುಮಂತರಾಯನನ್ನು ತನ್ನ ಬಂಗಲೆಗೆ ಯಾರೂ ಕರೆದು ತಂದಿರಲೂ ಇಲ್ಲ; ತಾನು ಆತನಿಗೆ ಯಾವ ಚಿಕಿತ್ಸೆಯನ್ನೂ

ಮಾಡಲೂ ಇಲ್ಲ; ದೇಪಣ್ಣ ನಡಿಸತಕ್ಕ ಕಾರ್ಯಗಳಿಗೆ ಹನುಮಂತ ರಾಯನು ವಿಶೇಷವಾಗಿ ಸಹಾಯ ಮಾಡುತಾ ಇದ್ದದನ್ನು ತಾನು ಬಲ್ಲೆ; ಅವರವರಿಗೆ ವಿಶೇಷವಾದ ಮೈತ್ರಿ ಇದ್ದ ಅಂಶವನೂ ತಾನು ಬಲ್ಲೆ ; ಹನುಮಂತರಾಯನನ್ನು ದೇಪಣ್ಣ ಕೊಂದುಹಾಕಿ ಸಿದನೆಂಬ ಮಾತು ತನ್ನ ಕಿವಿಯಮೇಲೆ ಬಿದ್ದಿರಲೇ ಇಲ್ಲ: ಹೀಗೆ ಇದೇ ಮುಂತಾದ ಸಂಗತಿಗಳನ್ನು ಆ ಸಾಹೇಬನು ಹೇಳಿ ಬರಿಸಿ ದನು. ಸಾಹೇಬನು ಈ ಮಾತನ್ನು ಅಧಿಕಾರ ಸ್ಥಾನದಲ್ಲಿ ಹೇಳಿ ಬರಿಸಿದ ಕೂಡಲೆ ಅಪ್ರಮೇಯನಿಗೆ ಉಮ್ಮಸ್ಸು ಹೆಚ್ಚಾಯಿತು. ಒಂದು ಮಾತನಾಡುವ ಕಡೆ ನಾಲ್ಕು ಮಾತನ್ನಾಡಿಯೇನು ಎನ್ನು ವಷ್ಟು ಧೈರ್ಯ ಬಂತು. ನಿಮ್ಮ ಕಡೆ ವಿಚಾರಣೆಗೆ ಇನ್ನು ಯಾವ ಸಾಕ್ಷಿಗಳಿದಾರೆ ಎಂದು ಕೋರ್ಟಿನ ಅಧಿಕಾರಿಗಳು ಕೇಳುತಾ ಇದ್ದರು.

ಅಪ್ರಮೇಯನ ಮನಸ್ಸೆಲ್ಲಾ ವಿಚಾರಣೇ ವಿಷಯದಲ್ಲಿ ಲೀನ ವಾಗಿ ಹೋಗಿತ್ತು. ಇವನು ಅಧಿಕಾರಿಗಳ ಕಡೆ ತಿರುಗಿಕೊಂಡು ಅವರ ಸಂಗಡ ಮಾತನಾಡುವುದು, ಕೇಳಿದ್ದಕ್ಕೆ ಉತ್ತರವನ್ನು ಹೇಳುವುದು, ತನ್ನಲ್ಲಿದ್ದ ಕಾಗದಗಳನ್ನು ನೋಡುವುದು, ಯಾವ ಪ್ರಶ್ನೆಯನ್ನು ಕೇಳಬೇಕು, ಯಾವ ಪ್ರಶ್ನೆಯನ್ನು ಕೇಳಕೂಡದು ಎಂದು ಯೋಚಿಸುವುದು, ಈ ಕೆಲಸ ದಲ್ಲಿ ಇದ್ದ ಕಾರಣ ಕೋರ್ಟಿಗೆ ಯಾರು ಬಂದರು ಯಾರು ಹೋದರು ಅಲ್ಲಿ ಯಾರು ಯಾರು ಕೂಡಿದಾರೆ ಎಂಬುವುದನ್ನು ನೋಡಲೇ ಇಲ್ಲ. ಮತ್ತು ಇವನ ಮನಸ್ಸಿನಲ್ಲಿ ಇನ್ನೊಂದು ಹಿಗ್ಗಾಮುಗ್ಗಾ ಎಳೆದಾಟ ಬಿತ್ತು. ಫಿರ್ಯಾದಿಯಾದ ದುರ್ಗಾ ಬಾಯಿಯನ್ನು ಅಡ್ಡ ವಿಚಾರಣೇ ಮಾಡುವುದು ಹೇಗೆ, ಆಕೆ ತನ್ನನ್ನು ತಾಯಿಯಂತೆ ಕಾಪಾಡುತಿದ್ದಳು. ಈಗ ತನ್ನ ಮೇಲೆ ಇಲ್ಲದ ಕೋಪವನ್ನು ಇಟ್ಟು ಕೊಂಡು ತನ್ನ ಸಂಗಡ ಮಾತನಾ ಡದೆ ಇರುವುದು ನಿಜ. ಇತರರ ದುರ್ಬೋಧನೆಗೆ ಆಕೆ ಒಳಪಟ್ಟು

ಮನಸ್ಸು ಹೀಗೆ ತಿರುಗಿರಬಹುದೆ? ಆದರೆ ಇತರ ದುಷ್ಟರ ಮಾತಿಗೆ ಕಿವಿಕೊಡತಕ್ಕ ಸ್ವಭಾವ ಆಕೆಯಲ್ಲಿರಲಿಲ್ಲವಲ್ಲಾ, ಅಡ್ಡ ವಿಚಾರಣೇ ಮಾಡುವಾಗ ಅಗತ್ಯವಾಗಿ ತೋರಿದ ಪ್ರಶ್ನೆಗಳನ್ನೆಲ್ಲಾ ಕೇಳಬೇಕಾಗುವುದು ; ಹಾಗೆ ಕೇಳಿ ಆಕೆ ಮನಸ್ಸನ್ನು ನೋಯಿಸುವುದು ಸರಿಯೆ? ಹಾಗೆ ಪ್ರಶ್ನೆಗಳನ್ನು ಕೇಳದೆ ನಾನು ಸುಮ್ಮನಾದರೆ ಇಷ್ಟೊಂದು ಜನ ನಿರಪರಾಧಿಗಳಿಗೆ ಸಂಕಟ ಉಂಟಾಗುವುದಲ್ಲಾ. ಒಬ್ಬರ ಮನಸ್ಸಿಗೆ ಸ್ವಲ್ಪಕಾಲ ಯಾತನೆಯನ್ನು ಉಂಟು ಮಾಡುವುದು ಯೋಗ್ಯವಾದ್ದೆ, ಇಷ್ಟೊಂದು ಜನ ನಿರಪರಾಧಿಗಳ ಪ್ರಾಣವನ್ನು ತೆಗೆಯಿಸುವುದು ಯೋಗ್ಯವಾದ್ದೆ? ದುರ್ಗಾಬಾಯಿಗೆ ಈಗಲೇ ನನ್ನ ಮೇಲೆ ಕೋಪ ಬಂದಿರಬೇಕು, ಮುಂದೆ ಅದು ಹೆಚ್ಚಬಹುದು, ಈ ಕೋಪದ ಫಲಕ್ಕಿಂತಲೂ ಇಷ್ಟೊಂದು ಜನರ ತಲೆಯನ್ನೂ ಮಧ್ಯ ಸ್ಥಾನದಲ್ಲಿ ಒಪ್ಪಿಸುವುದರ ಫಲವು ಪ್ರಮಾದವಾದ್ದೆಂದು ಹೇಳಬೇಕಾದ್ದೇ ಇಲ್ಲ ಬಂದದ್ದೆಲ್ಲಾ ಬರಲಿ. ಅಪರಾಧಿಗಳ ಪರವಾಗಿ ನಿಂತು ನಾನು ಮಾತನಾಡುವುದಕ್ಕೆ ಒಪ್ಪಿದೇನೆ. ಸದ್ಯದಲ್ಲಿ ಅವರ ಪ್ರಾಣವನ್ನು ಉಳಿಸುವುದೇ ನನ್ನ ಮುಖ್ಯವಾದ ಕರ್ತವ್ಯವಾಗಿದೆ.

ಇದೂ ಅಲ್ಲದೆ ನಾನು ಹೋಗಿ ಇವಳನ್ನು ಮಾತನಾಡಬೇಕೆಂದು ಅಪೇಕ್ಷಿಸಿದರೆ ತಾನು ಮಾತನಾಡುವುದಿಲ್ಲ ಹೋಗು ಎಂದು ಹೇಳಿ ಕಳುಹಿಸುವಷ್ಟು ದೋಷ ನನ್ನಲ್ಲಿ ಇರಲೂ ಇಲ್ಲ, ಅವಳ ಸ್ವಭಾವ ಅಂಥಾದ್ದಲ್ಲವೂ ಅಲ್ಲ. ಹನುಮಂತರಾಯನಂತೂ ದೇಶಾಂತರ ಗತನಾಗಿ ಹೋಗಿರಬಹುದು. ಈ ದುರ್ಗಾಬಾಯಿ ಮನೆಯನ್ನೂ ವಿಶೇಷವಾದ ಆಸ್ತಿಯನ್ನೂ ಬಿಟ್ಟು ಹೊರಟು ಹೋಗುವುದಕ್ಕೆ ಕಾರಣವಿಲ್ಲ. ಆಕೆ ಪತಿವ್ರತೆಯರಲ್ಲಿ ರತ್ನಪ್ರಾಯಳು ಎಂದು ನಾನು ಚೆನ್ನಾಗಿ ಬಲ್ಲೆ, ಪುರಪುರುಷರ ಸಂಗಡ ಮಾತನಾಡುವುದಾಗಲಿ ಅವರ ಸಂಗಡ ಹೋಗುವುದಾಗಲಿ ಸ್ವಪ್ನದಲ್ಲಿಯೂ ಆಕೆ ಯೋಚಿಸುತಿರಲಿಲ್ಲ. ಇಂಥವಳು ಈಗ ಇಷ್ಟು ಜನ ಗಂಡಸರ ಸಂಗಡ

ಸೇರಿರುವುದು ಹೇಗೆ? ದುರ್ಗಾಬಾಯಿಗೆ ಮಗ ಇದ್ದನಲ್ಲ, ಅವನು ಏನಾದ? ಈ ವ್ಯಾಜ್ಯಕ್ಕೆ ಆರಂಭವಾಗಿ ಇಷ್ಟು ದಿವಸವಾಯಿತು, ಆ ಹುಡುಗನ ಪ್ರಸ್ತಾಪವೇ ಬಂದಿಲ್ಲವಲ್ಲಾ. ಇದೇ ಮೊದಲಾದ ಭಾಗಗಳೆಲ್ಲವನ್ನೂ ಯೋಚಿಸಿದರೆ ಏನೋ ಕೃತ್ರಿಮ ನಡೆದಿದೆ ಎಂದು ತೋರುತಿದೆ. ಹೇಗಾದರೂ ಆಗಲಿ, ಈಕೆಗೆ ಅಡ್ಡಸವಾಲ ಹಾಕಿ ನಿಶ್ಚಯವನ್ನು ಕಂಡು ಹಿಡಿಯಲೇ ಬೇಕೆಂದು ಅಪ್ರಮೇಯನು ನಿಷ್ಕರ್ಷೆ ಮಾಡಿಕೊಂಡು ಕೆಲಸಕ್ಕೆ ಅನುವಾದನು.

## ೨೧ ನೇ ಅಧ್ಯಾಯ

# ಹಗ್ಗದ ಚೆನ್ನಿ

ಅಪ್ರ—ನಿಮ್ಮ ಹೆಸರೇನು?

ಫಿರ್ಯಾದಿ—ದುರ್ಗಾಬಾಯಿ.

ಅಪ್ರ—ನಿಮ್ಮ ತಂದೇ ಹೆಸರೇನು?

ಫಿರ್ಯಾದಿ—ನನ್ನ ಚಿಕ್ಕವಯಸ್ಸಿನಲ್ಲಿಯೇ ನಮ್ಮ ತಂದೆ ಸತ್ತು ಹೋದರು.

ಅಪ್ರ—ಅವರ ಹೆಸರೇನು?

ಫಿರ್ಯಾದಿ—ನನಗೆ ತಿಳಿಯದು.

ಅಪ್ರ—ಹನುಮಂತರಾಯರು ನಿಮ್ಮ ಯಜಮಾನರೋ?

ಫಿರ್ಯಾದಿ—ಹವುದು.

ಅಪ್ರ—ನಿಮಗೆ ಅಣ್ಣ ತಮ್ಮಂದಿರಿದಾರೆಯೊ?

ಫಿರ್ಯಾದಿ—ಇಲ್ಲ.

ಅಪ್ರ—ನಿಮ್ಮ ಊರು ಯಾವುದು?

ಫಿರ್ಯಾದಿ—ಗಂಜಾಮು.

ಅಪ್ರ—ನಿಮ್ಮ ತೌರುಮನೆ ಯಾವ ಊರು?

ಫಿರ್ಯಾದಿ—ತೌರೂರು ಉತ್ತರದೇಶದಲ್ಲಿದೆ.

ಅಪ್ರ—ಆ ವೂರ ಹೆಸರೇನು?

ಫಿರ್ಯಾದಿ—ಹೆಸರು ಮರೆತುಹೋಯಿತು.

ಅಪ್ರ—ಹನುಮಂತರಾಯರು ಎಲ್ಲಿದಾರೆ?

ಫಿರ್ಯಾದಿ—ಅವರು ಸತ್ತುಹೋದರು.

ಅಪ್ರ—ಕಾರಣವೇನು?

ಫಿರ್ಯಾದಿ—ಅವರನ್ನು ಕೊಂದು ಹಾಕಿಬಿಟ್ಟರು.

ಅಪ್ರ—ಯಾರು?

ಫಿರ್ಯಾದಿ—ದೇಪಣ್ಣನವರು ಕೊಲ್ಲಿಸಿದರು, ಅವರ ಕಡೆ ಜನರು ಕೊಂದರು.

ಅಪ್ರ—ಯಾಕೆ ಕೊಂದರು?

ಫಿರ್ಯಾದಿ—ಅರಮನೆಯಲ್ಲಿ ಸಂಬಳಮಾಡಿಸಿ ಕೊಡುತೇನೆಂದು ಹೇಳಿ ದೇಪಣ್ಣನವರು ನಮ್ಮ ಯಜಮಾನರಿಂದ ೫೦೦ ರೂಪಾಯಿಯನ್ನು ಲಂಚವಾಗಿ ತೆಗೆದುಕೊಂಡರು. ಸಂಬಳ ಮಾಡಿಸಿಕೊಡಲಿಲ್ಲ. ಯಜಮಾನರು ಹಣವನ್ನು ವಾಪಸು ಕೊಡಬೇಕೆಂದು ಕೇಳಿದರು. ಕೊಡದೇಹೋದ್ದರಿಂದ ಕೆಮಲ್ ಸಾಹೇಬರಲ್ಲಿ ಫಿರ್ಯಾದು ಹೇಳಿಕೊಳ್ಳಲು ನಮ್ಮ ಯಜಮಾನರು ಹೋದರು. ಆ ದ್ವೇಷದ ಮೇಲೆ ನಮ್ಮ ಯಜಮಾನರನ್ನು ಹೊಡೆಯಿಸಿ ದೇಪಣ್ಣನವರು ಅವರ ಪ್ರಾಣವನ್ನು ತೆಗೆಯಿಸಿದರು.

ಅಪ್ರ—ನೀವು ನೋಡಿದಿರ?

ಫಿರ್ಯಾದಿ—ನಾನು ನೋಡಿದೆ.

ಅಪ್ರ—ಹೊಡೆದು ಕೊಂದುಹಾಕಿದ್ದನ್ನು ನೀವು ನೋಡಿದಿರ? ನಿಶ್ಚಯ ಹೇಳಿ.

ಫಿರ್ಯಾದಿ—ನಾನು ನೋಡಿದ ಹಾಗೆಯೇ.

ಅಪ್ರ—ನೀವು ಎಲ್ಲಿದ್ದಿರಿ?

ಫಿರ್ಯಾದಿ—ನಾನು ಮನೆಯಲ್ಲಿದ್ದೆ.

ಅಪ್ರ—ನೀವು ಬರುವಾಗ್ಯೆ ಪ್ರಾಣ ಹೋಗಿತ್ತಲ್ಲವೆ?

ಫಿರ್ಯಾದಿ—ಹವುದು, ಪ್ರಾಣ ಸ್ವಲ್ಪ ಹತ್ತಿಕೊಂಡಿತ್ತು.

ಅಪ್ರ—ಆಮೇಲೆ ಕೆಮಲ್ ಸಾಹೇಬರ ಬಂಗಲೆಗೆ ಚಿಕಿತ್ಸೆ ಮಾಡಿಸಲು ಕರೆದುಕೊಂಡು ಹೋದಿರ, ಔಷಧಿ ಕೊಟ್ಟರೆ?

ಫಿರ್ಯಾದಿ—ಅವರು ಔಷಧಿ ಕೊಟ್ಟರು.

ಅಪ್ರ—ಗುಣವಾಯಿತೋ?

ಫಿರ್ಯಾದಿ—ಇಲ್ಲ.

ಅಪ್ರ—ಆಮೇಲೆ ಎಲ್ಲಿಗೆ ಹೋದಿರಿ?

ಫಿರ್ಯಾದಿ—ನಮ್ಮ ಮನೆಗೆ.

ಅಪ್ರ—ನಿಮ್ಮ ಮನೆಗೆ ಹೋದ ಎಷ್ಟು ಹೊತ್ತಿಗೆ ಪ್ರಾಣ ಹೋಯಿತು?

ಫಿರ್ಯಾದಿ—ಒಂದು ಗಳಿಗೆಗೆ.

ಅಪ್ರ—ಹೆಣವನ್ನು ಏನು ಮಾಡಿದಿರಿ?

ಫಿರ್ಯಾದಿ—ಹೆಣವನ್ನು ಏನು ಮಾಡುತಾರೆ? ನಮ್ಮ ಪದ್ಧತಿ ಪ್ರಕಾರ ಮಾಡಿದೆವು.

ಅಪ್ರ—ಹೆಣವನ್ನು ನಿಮ್ಮಲ್ಲಿ ಏನುಮಾಡುವ ಪದ್ಧತಿ ಇದೆ?

ಫಿರ್ಯಾದಿ—ಎಲ್ಲರೂ ಏನುಮಾಡುತಾರೋ ನಾವೂ ಅದೇ ಮಾಡಿದೆವು.

ಅಪ್ರ—ಏನುಮಾಡಿದಿರಿ ಹೇಳಿ. ಸುಟ್ಟರ, ಹೂಳಿದಿರ?

ಫಿರ್ಯಾದಿ—ಏನುಮಾಡಿದೆವು ಎಂದು ಹೇಳಲಿ. ಅಯ್ಯೋ! ವಿಧಿಯೆ, (ಅಳುವಳಂತೆ ನಟಿಸುತಾ) ಅಂಥಾ ಶೂರನ ಕೈ ಹಿಡಿದರೂ ನನಗೆ ಇಂಥಾ ಗತಿ ಬಂತೆ? ಇಂಥಾ ಅಲ್ಪರು ನನಗೆ ಸವಾಲುಮಾಡುವ ಹಾಗೆ ಆಯಿತೆ?

ಅಪ್ರ—ಕೇಳಿದ್ದಕ್ಕೆ ಉತ್ತರ ಹೇಳಿ.

ಫಿರ್ಯಾದಿ—ಹಾ ಹಾ! ರಣರಂಗದಲ್ಲಿ ನಿಂತು ಶತ್ರುಗಳೊಡನೆ ಯುದ್ಧಮಾಡಿ ಹಿಂದುಗಡೆಗೆ ಏಟು ಇಲ್ಲದೆ ಮುಂದುಗಡೆಗೆ ಮಾತ್ರ ಏಟು ಬಿದ್ದು ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡೇ ಕೆಳಕ್ಕೆ

ಬಿದ್ದು ವೀರಸ್ವರ್ಗವನ್ನು ಹೊಂದಲು ಯೋಗ್ಯರಾದ ಆ ಮಹಾ ಪರಾಕ್ರಮಿಗಳ ಶರೀರವನ್ನು ನಾವು ಸುಟ್ಟೆವು ಹೂಳಿದೆವು ಎಂದು ಹೇಳುವ ಮಾತು ಅವರ ಮಾನಕ್ಕೆ ತಡೆಯದ್ದಾಗಿದೆ. ನಿಮ್ಮ ಮಾತಿಗೆ ಯಾವ ಜವಾಬನ್ನೂ ಹೇಳಿ ನಾನು ಹೊಟ್ಟೆ ಹಿಡಿಯಲಾರೆ.

ನ್ಯಾಯಾಧಿಕಾರಿ—ಅಪ್ರಮೇಯನವರ ಪ್ರಶ್ನೆಗೆ ನೀವು ಯಾವುದಾದರೂ ಒಂದು ಉತ್ತರವನ್ನು ಹೇಳಬೇಬೇಕು. ಇಲ್ಲ ದಿದ್ದರೆ ನೀವು ಬೇಕೆಂದು ಉತ್ತರ ಹೇಳಲಿಲ್ಲವೆಂಬದಾಗಿ ನಾವು ಬರೆದುಕೊಳ್ಳುತ್ತೇವೆ, ಖಬರ್‌ದಾರ್.

ಫಿರ್ಯಾದಿ—ನೀವು ಬೇಕಾದ್ದನ್ನು ಬರೆದುಕೊಳ್ಳಬಹುದು.

ಅಪ್ರ—ಮೂರನೇ ದಿವಸ ಹನುಮಂತರಾಯರ ಹೆಣವು ರಜಪೂತಘಾಟಿನ ಕಂದಕದಲ್ಲಿ ತೇಲುತಾ ಇತ್ತಲ್ಲವೆ?

ಫಿರ್ಯಾದಿ—ಇರಬಹುದೋ ಏನೋ.

ಅಪ್ರ—ನಿಮ್ಮ ಮನೆಗೆ ಕರೆದು ತಂದಮೇಲೆ ಒಂದು ಗಳಿಗೆಗೆ ಹನುಮಂತರಾಯರಿಗೆ ಪ್ರಾಣ ಹೋಯಿತೆಂದು ನೀವು ಹೇಳಿದಿ ರಲ್ಲವೆ? ಆ ರಾತ್ರೆಯೆಲ್ಲಾ ಬೆಳಗಾಗುವ ತನಕ ಆ ಹೆಣವನ್ನು ನೀವು ಕಾದುಕೊಂಡು ಹಾಸಿಗೇ ಮಗ್ಗಲಲ್ಲಿಯೇ ನೀವು ಕೂತು ಕೊಂಡಿದ್ದಿರ ಅಥವಾ ಆ ಹೆಣವನ್ನು ಬಿಟ್ಟು ನೀವು ಎಲ್ಲಿಯಾದರೂ ಹೊರಟು ಲಕ್ಷ್ಯವಿಲ್ಲದೆ ಹೋಗಿದ್ದಿರ?

ಫಿರ್ಯಾದಿ—ನನ್ನ ಪತಿ ಇದ್ದಾಗ ಅವರೇ ನನ್ನ ಪ್ರಾಣವೆಂದು ತಿಳಿದು ಅವರನ್ನು ಎಡೆಬಿಡದೆ ಇದ್ದ ನಾನು ಅವರ ಕಳೇವರವಿರು ವಾಗಲೇ ಹಾಗೆ ಮಾಡಿಯೇನೆ? ನನ್ನ ಪತಿಭಕ್ತಿಗೆ ಕುಂದಕವನ್ನು ತರತಕ್ಕ ಇಂಥಾ ಮಾತನ್ನು ನೀವು ಕೇಳಬಹುದೆ? (ಹೀಗೆ ಹೇಳುತಾ ಅಳುವ ಧ್ವನಿಯಿಂದ ಕೆಳಕ್ಕೆ ಬೀಳುವಳು, ಜ್ಞಾನ ತಪ್ಪಿಹೋದಂತೆ ಆಗಿ ಕೂಡಲೆ ಚೇತರಿಸಿಕೊಂಡು ಎದ್ದಹಾಗೆ ಮಾಡಿ ನಿಂತುಕೊಳ್ಳುವಳು.)

ಅಪ್ರ—ಹನುಮಂತರಾಯರ ಶರೀರವನ್ನು ಆಚೆಗೆ ಸಾಗಿಸುವ ತನಕ ನೀವು ಹತ್ತರ ಇದ್ದಿರ ಇರಲಿಲ್ಲವೆ? ಯಾವುದಾದರೂ ಒಂದು ಜವಾಬನ್ನು ಹೇಳಲೇಬೇಕು.

ಫಿರ್ಯಾದಿ—ನಾನು ಹತ್ತಿರದಲ್ಲಿರದೆ ಎಲ್ಲಿಗಾದರೂ ಹೋದೇನೆ? ಬೆಳ್ಳನಬೆಳಗೂ ಅಲ್ಲಿಯೇ ಕೂತಿದ್ದೆ.

ಅಪ್ರ—ಬೆಳಗಿನವರೆಗೂ ಹೆಣ ನಿಮ್ಮ ಮನೆಯಲ್ಲಿಯೇ ಇತ್ತಲ್ಲವೆ?

ಫಿರ್ಯಾದಿ—ಹವುದು.

ಅಪ್ರ—ಬೆಳಗಾದಮೇಲೆ ಹೆಣವನ್ನು ಹೊರಕ್ಕೆ ಸಾಗಿಸಿಕೊಂಡು ಹೋದರಲ್ಲವೇ ?

ಫಿರ್ಯಾದಿ—ಹವುದು.

ಅಪ್ರ—ನಿಮ್ಮ ಜಾತಿಯ ಹೆಣವನ್ನು ಇತರ ಜಾತಿಯವರು ಮುಟ್ಟಬಹುದೊ?

ಫಿರ್ಯಾದಿ—ಆ, ಇತರ ಜಾತಿಯವರು ಮುಟ್ಟಿದರೆ ಸುಮ್ಮನೇ ಬಿಟ್ಟೇವೆ?

ಅಪ್ರ—ಹಾಗಾದರೆ ನಿಮ್ಮ ಮರಾಟೀ ಜನರೇ ಸಾಗಿಸಿದರಲ್ಲವೆ?

ಫಿರ್ಯಾದಿ—ಹವುದು.

ಅಪ್ರ—ಸಾಗಿಸಿದ ಜನ ಯಾರು ಯಾರು?

ಫಿರ್ಯಾದಿ—ನಾನು ಅರಿಯೆ.

ಅಪ್ರ—ನೀವೂ ಹೆಣದ ಸಂಗಡ ಹೋಗಿದ್ದಿರ?

ಫಿರ್ಯಾದಿ—ಹೋಗಿದ್ದೆ.

ಅಪ್ರ—ಶವವನ್ನು ಏನು ಮಾಡಿದಿರಿ?

ಫಿರ್ಯಾದಿ—ಸಾರ್ಥಕ ಮಾಡಿದೆವು.

ಅಪ್ರ—ಹಾಗೆಂದರೇನು? ಶವ ಏನಾಯಿತು?

ಫಿರ್ಯಾದಿ—ನಾನು ಕಾಣೆ.

ಅಪ್ರ—ಮೂರನೇ ದಿವಸ ಹನುಮಂತರಾಯರ ಹೆಣ ರಜಪೂತ ಘಾಟಿನ ಕಂದಕದಲ್ಲಿ ತೇಲುತಾ ಇತ್ತೆಂದು ನಿಮಗೆ ತಿಳಿಯಿತೆ?

ಫಿರ್ಯಾದಿ—ತಿಳಿಯಿತು.

ಅಪ್ರ—ನೀವು ಹೋಗಿ ನೋಡಿದಿರ ?

ಫಿರ್ಯಾದಿ—ನೋಡಿದೆ.

ಅಪ್ರ—ಅದು ಯಾರ ಶರೀರವಾಗಿತ್ತು ?

ಫಿರ್ಯಾದಿ—ನಮ್ಮ ಯಜಮಾನರದು.

ಅಪ್ರ—ಮುಖದ ಗುರುತು ಸಿಕ್ಕುತಾ ಇತ್ತೇ ? ಮುಖ ಕೊಳೆತು ಗುರುತು ಸಿಕ್ಕದ ಹಾಗೆ ಆಗಿರಲಿಲ್ಲವೆ ?

ಫಿರ್ಯಾದಿ—ಗುರುತು ಸಿಕ್ಕುತಾ ಇತ್ತು. ಮುಖ ಕೆಟ್ಟು ಹೋಗಿರಲಿಲ್ಲ.

ಅಪ್ರ—ಹನುಮಂತರಾಯರ ಅಂಗದಲ್ಲಿ ಇನ್ನು ಏನು ಗುರುತು ಇತ್ತು ?

ಫಿರ್ಯಾದಿ—ಏನೂ ಇರಲಿಲ್ಲ.

ಈ ಪ್ರಕಾರ ಫಿರ್ಯಾದಿಯ ಅಡ್ಡ ವಿಚಾರಣೆ ಮುಗಿಯಿತು. ಆಗ ಅಲ್ಲಿ ಸೇರಿದ್ದ ಸಾಧಾರಣ ಜನರೆಲ್ಲಾ—ಅಯ್ಯೋ ಪಾಪ, ಪತಿವ್ರತೆ, ಗಂಡನ ಪ್ರಸ್ತಾಪ ಬಂದಾಗೆಲ್ಲಾ ಗೊಳೋ ಎಂದು ಅಳುತಿದ್ದಳು. ಒಂದೆರಡು ಸಾರಿ ಮೂರ್ಛೆ ಸಹಾ ಹೋಯಿತು. ಆ ಮೂರು ನಾಮದ ಹಾರವ ವಕೀಲನಂತೆ, ಬಾಯಿಗೆ ಬಂದ ಮಾತನ್ನೆಲ್ಲಾ ಕೇಳಿ ಆ ಪತಿವ್ರತೆಯ ಮನಸ್ಸನ್ನು ಬಹಳವಾಗಿ ನೋಯಿಸಿದ. ಛಿ! ಅಂಥಾ ಪತಿವ್ರತೆಯರನ್ನು ಉಸ್ಸೆನ್ನಿಸಬಾರದು. ಕಣ್ಣೀರಿನಲ್ಲಿ ಕೈ ತೊಳೆದುಹೋದಳು, ಆ ಪ್ರಾಣಿ. ಗಂಡ ಸತ್ತು ಹೋದ್ದು ಒತ್ತಟ್ಟಿ, ಅವನಿಗೆ ದುರ್ಮರಣ ಪ್ರಾಪ್ತವಾದ್ದು ಒತ್ತಟ್ಟಿ, ಹೀಗೆ ಕಚೇರೀ ಮುಂದೆ ನಿಂತು ಹಾದಿರಂಪ ಬೀದಿರಂಪವಾದ್ದು ಒತ್ತಟ್ಟಿ, ಹೀಗೆ ದಿಕ್ಕು ಕೆಟ್ಟ ಆ ಪರದೇಶಿಗೆ ಹೇಗೆ ನೋಡಿದರೂ

ಕಷ್ಟವೇ ಸಂಭವಿಸಿತು. ಹೀಗೆಂದು ಫಿರ್ಯಾದಿ ಪರವಾಗಿ ಬಗೆ ಬಗೆಯಾಗಿ ಮಾತನಾಡಿಕೊಳ್ಳುತಿದ್ದರು. ಆಗ ಪಂಚಾಯಿತರು ಅಪ್ರಮೇಯನನ್ನು ಕುರಿತು,

ಭದ್ರ ಜಮಾಖಾ—ಅಪ್ರಮೇಯ ಈಗ ನೀವೇನು ಹೇಳುತೀರಿ ?

ಅಪ್ರ—ಖಾವಿಂದ್, ಅಪರಾಧಿಗಳಿಂದ ಲೇಶವೂ ತಪ್ಪಿಲ್ಲ; ಅವರು ಅಕೃತ್ಯವನ್ನು ಮಾಡಿದವರೆನ್ನುವುದಕ್ಕೆ ಯಾವ ರುಜುವಾತೂ ಇರುವುದಿಲ್ಲ.

ಧರ್ಮಸಾಮ್ರಾಜ್ಯ ಪಂಡಿತ—ಮೊದಲೇ ಇದೇ ರುಜುವಾತಿನ ಮೇಲೆ ಅಪರಾಧಿಗಳಿಗೆ ಶಿಕ್ಷೆಯಾಗಿತ್ತಷ್ಟೆ.

ಅಪ್ರ—ಮೊದಲು ಶಿಕ್ಷೆಕೊಟ್ಟದ್ದು ತಪ್ಪು, ಆಗ ಯಾವ ಸಾಕ್ಷಿಗಳ ಹೇಳಿಕೆಯು ಅಪರಾಧಿಗಳ ಶಿಕ್ಷೆಗೆ ಆಧಾರವಾಗಿತ್ತೋ ಅದು ಈಗ ಅಡ್ಡ ವಿಚಾರಣೆಯಲ್ಲಿ ಅಳ್ಳಾಡಿ ಹೋಯಿತು. ಫಿರ್ಯಾದಿ ಪರದಲ್ಲಿ ಒಬ್ಬ ಹೇಳಿದ ಹಾಗೆ ಇನ್ನೊಬ್ಬ ಹೇಳಿಲ್ಲ. ಒಬ್ಬೊಬ್ಬನ ಕೈಫಿಯತ್ತನ್ನು ತೆಗೆದುಕೊಂಡಾಗ್ಯೂ ಪೂರ್ವಾಪರ ವಿರುದ್ಧಾಂಶಗಳು ಬಹಳವಾಗಿವೆ. ತರುವಾಯ ಫಿರ್ಯಾದಿಯ ಹೇಳಿಕೆ ನೋಡೋಣವೆ, ಅತ್ಯಾಶ್ಚರ್ಯ ಉಂಟಾಗುವುದು. ಅವಳಿಗೆ ತಂದೆ ಹೆಸರು ಗೊತ್ತಿಲ್ಲವಂತೆ; ತೌರೂರನ್ನು ಕಾಣಳಂತೆ; ಸತ್ತ ಹೆಣವನ್ನು ಹೂಳಿದರೆ, ಸುಟ್ಟರೆ ಎಂಬುವುದು ಹೆಂಡತಿಯಾದವಳಿಗೆ ಗೊತ್ತಿಲ್ಲವಂತೆ; ಆ ಹೆಣಕ್ಕೆ ಸಂಸ್ಕಾರ ಮಾಡಿದರಂತೆ; ಆದರೂ ರಜಪೂತಘಾಟಿನ ಕಂದಕದಲ್ಲಿ ಆ ಹೆಣ ತೇಲುತಿತ್ತಂತೆ; ಗಂಡನ ಮೈಮೇಲೆ ಯಾವ ಗುರುತೂ ಇರಲಿಲ್ಲವಂತೆ; ಇಂಥಾ ಫಿರ್ಯಾದು ಸುಳ್ಳು ಎಂದು ಹೇಳಿಸಿಕೊಳ್ಳುವುದಕ್ಕೆ ಕೇವಲ ತಕ್ಕದ್ದಾಗಿರುವ ಹೇಳಿಕೆಯನ್ನು ನಂಬಿ ಅಪರಾಧಿಗಳಿಗೆ ಶಿಕ್ಷೆ ಕೊಡಲು ಮಾರ್ಗವಿಲ್ಲ.

ಮೊಹರ್ದಿ ನವಾಜಖಾ—ಹನುಮಂತರಾಯನ ಅಂಗದಲ್ಲಿ ಗುರುತಿಸಲು ಯೋಗ್ಯವಾಗಿ ಥಾಕಾಗಿ ಕಾಣುವ ಗುರುತು ಇತ್ತೆ

ಎಂದು ನೀವು ಕೇಳಿದ್ದಕ್ಕೆ, ಏನೂ ಇರಲಿಲ್ಲವೆಂದು ಫಿರ್ಯಾಧಿ ಹೇಳಿದಳು. ಈ ಪ್ರಶ್ನೆಯನ್ನು ಕೇಳುವುದರಲ್ಲಿ ನಿಮ್ಮ ಉದ್ದೇಶ್ಯವೇನು ?

ಅಪ್ರ—ಅವರ ಅಂಗದಲ್ಲಿ ವಿಚಿತ್ರವಾದ ಒಂದು ಗುರುತು ಇತ್ತು. ಆ ಗುರುತು ಅನೇಕರಲ್ಲಿ ಇರುವುದಿಲ್ಲ.

ಮೊಹರ್ದಿನ—ಇದನ್ನು ನೀವು ಈಗ ನಮೂದಿಸುತ್ತೀರಿ. ಇದುವರೆಗೆ ಯಾಕೆ ಹೇಳಲಿಲ್ಲ ?

ಅಪ್ರ—ನಾನು ಮೊದಲೇ ಇದನ್ನು ಸೂಚಿಸಿದೇನೆ. ನನ್ನ ಮಾತನ್ನು ಯಾರೂ ಲಕ್ಷ್ಯಮಾಡಲಿಲ್ಲ.

ಮೊಹರ್ದಿ—ಯಾವಾಗ ನಮೂದಿಸಿದಿರಿ ?

ಅಪ್ರ—ಹನುಮಂತರಾಯರ ದೇಹವೆಂದು ರಜಪೂತ ಘಾಟಿನಲ್ಲಿದ್ದ ಹೆಣವನ್ನು ಪರೀಕ್ಷಿಸಿ ನೋಡುವಾಗ ನಮೂದಿಸಿದೇನೆ.

ಮೊಹರ್ದಿ—ಯಾರಸಂಗಡ ನಮೂದಿಸಿದಿರಿ ?

ಅಪ್ರ—ಕಾಗದದಮೇಲೆ ನಮೂದು ಮಾಡಿದ್ದೇನೆ.

ಮೊಹರ್ದಿ—ಯಾವ ಕಾಗದ?

ಅಪ್ರ—ಕಂದಕದಲ್ಲಿ ಬಿದ್ದಿದ್ದ ಹೆಣವನ್ನು ತೆಗೆದಾಗ ಅದರ ಅಂಗಾಂಗಗಳನ್ನೆಲ್ಲಾ ಪರೀಕ್ಷಿಸಿ ಅದರ ಲಕ್ಷಣಕ್ಕೆ ವಾಡಿಕೆಯಾದ ಒಂದು ಮಹಜರನ್ನು ಬರಿಸಿದರು ಅದರಲ್ಲಿ ನಮೂದಿಸಿದೇನೆ.

ಮೊಹರ್ದಿ—(ಮಹಜರನ್ನು ತೆಗೆದು ನೋಡಿ), ಇದರಲ್ಲಿ ನೀವು ಏನೂ ನಮೂದಿಸಿಲ್ಲವೆಂದೇ ತೋರುತ್ತೆ. ಹಾಗೆ ಇದ್ದರೆ ಇಷ್ಟೊಂದು ಗಲಭೆಗೆ ಆಸ್ಪದವಿರುತ್ತಿರಲಿಲ್ಲ.

ಅಪ್ರ—(ಮಹಜರನ್ನು ತೋರಿಸುತಾ) ಇಗೋ ನೋಡಿ, ಮಹಜರಿಗೆ ನಾನು ಕೊನೆಯಲ್ಲಿ ರುಜು ಹಾಕಿದೇನೆ. ಅದರ ಮೇಲುಗಡೆ ಸಣ್ಣ ಪಙ್ತಿ ಬರೆದಿದೇನೆ. ಹನುಮಂತರಾಯರ ಕಾಲ ಅಂಗುಷ್ಟದಲ್ಲಿ ವಿಜಾತೀಯವಾದ ಒಂದು ಗುರುತು ಇತ್ತು, ಅದು ಈ ಶವದಲ್ಲಿಲ್ಲವಾಗಿ ಇದು ಹನುಮಂತರಾಯರ ದೇಹವೇ ಅಲ್ಲವೆಂದು ಬರೆದಿದೇನೆ.

ಮೊಹರ್ದಿ—ಮುಹಜರಾಗುವಾಗ ಇದ್ದ ಇತರ ಜನರು ಏನು ಬರೆದಿದ್ದಾರೆ?

ಅಪ್ರ—ಮುಖವೆಲ್ಲಾ ಕೆಟ್ಟುಹೋಗಿ ಮೀನು ಮೊದಲಾದ ಜಲಜಂತುಗಳು ಕಿತ್ತುಕೊಂಡು ತಿಂದಿರುವ ಕಾರಣ ಸತ್ತವನು ಇಂಥವನೇ ಎಂದು ಹೇಳಲು ಆಗಲಾರದೆಂದು ಅಭಿಪ್ರಾಯ ಪಟ್ಟಿದ್ದಾರೆ.

ಮೊಹರ್ದಿ—ಹೀಗೆ ಬರೆಯಿಸಿರುವ ಸಾಕ್ಷಿಗಳ ವಿಚಾರಣೆಯಾಗಿದೆಯೊ?

ಅಪ್ರ—ಆಗಿದೆ, ಅವರ ಕೈಫಿಯತ್ತು ಕಟ್ಟಿನಲ್ಲಿದೆ.

ಮೊಹರ್ದಿ—ಮುಹಜರನ್ನು ನೋಡಿದರೆ ಇನ್ನೂ ಕೆಲವರು—ದೇಹವನ್ನು ನೋಡಿ ಗುರ್ತಿಸಿದೇವೆ, ಈ ಶವವು ಹನುಮಂತರಾಯನದೇ ಎಂದು ಬರೆಸಿದ್ದಾರೆಯಲ್ಲಾ.

ಅಪ್ರ—ಮುಖವನ್ನು ನೋಡದೆ ಬರೀ ದೇಹವನ್ನು ಮಾತ್ರ ನೋಡಿ ಮನುಷ್ಯ ಇಂಥವನೆಂದು ಗೊತ್ತಾಗಿ ಹೇಳುವುದು ಅಸಾಧ್ಯ. ಬ್ರಹ್ಮಸೃಷ್ಟಿಯಲ್ಲಿ ಒಂದು ಮುಖವಿರುವ ಹಾಗೆ ಇನ್ನೊಂದು ಮುಖವಿರುವುದಿಲ್ಲ. ಅವಳಿ ಮಕ್ಕಳಿಗೆ ಕೂಡ ಮುಖದಲ್ಲಿ ಭೇದವಿರುವುದು ಕಾಲಿನ ಹಾಗೆ ಕಾಲು ಕೈಯಿನ ಹಾಗೆ ಕೈ ಹೊಟ್ಟೆಯಂತೆ ಹೊಟ್ಟೆ ಇರಬಹುದು. ಇಂಥಾ ಸಂದರ್ಭದಲ್ಲಿ ಆ ದೇಹದಲ್ಲಿಯೂ ಕೂಡ ನಾನು ಭೇದವನ್ನು ಸೂಚಿಸಿದೇನೆ.

ಮೊಹರ್ದಿ—ನೀವು ಹೇಳುವ ಕಾಲಿನ ಗುರುತು ಇನ್ನು ಯಾರಿಗೂ ಇಲ್ಲವೊ?

ಅಪ್ರ—ಹನುಮಂತರಾಯರು ಸಾಧಾರಣರಲ್ಲ. ಅನೇಕ ಯುದ್ಧಗಳನ್ನು ಮಾಡಿದವರು. ಕದನಗಳಲ್ಲಿ ಅನೇಕವಾಗಿ ಏಟು ತಿಂದವರು. ಆ ಗುರುತು ಹುಟ್ಟುಗುರುತೋ ಪೆಟ್ಟಿನ ಗುರುತೋ ಗೊತ್ತಿಲ್ಲ. ಅಂತೂ ಅಂಥಾ ಚಿಹ್ನೆ ಅನೇಕರಲ್ಲಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಮೊಹರ್ದಿ—ನೀವು ಒಬ್ಬರು ಮಾತ್ರ ಅದನ್ನು ಕಂಡಿದ್ದಿರಿ, ಇನ್ನು ಯಾರೂ ಕಾಣರು ಎಂದು ಹೇಳುವುದನ್ನು ಹೇಗೆ ನಂಬುವುದು? ಹನುಮಂತರಾಯರ ಹೆಂಡತಿ ತಿಳಿಯದ ಗುರುತನ್ನು ನೀವು ಕಂಡಿದ್ದಿರ?

ಹೀಗೆ ಪಂಚಾಯಿತರ ಅಭಿಪ್ರಾಯವು ಫಿರ್ಯಾದಿಯ ಪಕ್ಷವಾಗಿಯೇ ತಿರುಗುವ ಸಂದರ್ಭ ಚೆನ್ನಾಗಿತ್ತು. ಆಗ ಅಪ್ರಮೇಯನಿಗೆ ಗಾಬರಿಯಾಗಿ ಇಷ್ಟು ಪ್ರಯತ್ನ ಮಾಡಿದ್ದೂ ವ್ಯರ್ಥವಾಗುವುದಲ್ಲಾ ಎಂದು ಭಯ ಹುಟ್ಟಿತು. ಇದರಿಂದ ಮುಖ ವಿವರ್ಣವಾಯಿತು. ಬಾಯಿನ ಮಾತು ಸ್ವಲ್ಪ ತೊದಲುವುದಕ್ಕೆ ಮೊದಲಾಯಿತು. ಆ ಸಮಯದಲ್ಲಿ ಅವನು—ಅಯ್ಯೋ ನನ್ನ ಶ್ರಮವೆಲ್ಲಾ ಹಾಳಾಗುವ ಹೊತ್ತು ಬಂತಲ್ಲಾ! ಭಗವಂತನೇ ಕಾಪಾಡಬೇಕು, ಹನುಮಂತರಾಯನು ಕಡೆಗೆ ನಿನಗೆ ಸಿಕ್ಕುತಾನೆ, ನಿನ್ನ ಕಾರ್ಯ ಜಯವಾಗುತ್ತೆ, ಎಂದು ಆತ್ಮಾರಾಂಬಾವಾಜಿ ಹೇಳಿದ ಮಾತು ಸುಳ್ಳಾಯಿತು. ಆ ಸಾಕ್ಷಾತು ನರಸಿಂಹನು ನಮ್ಮ ಭಾಗಕ್ಕೆ ಇದ್ದರೆ ಕಾಪಾಡಲಿ, ನಿರಪರಾಧಿಗಳು ಬದುಕಲಿ, ಇಲ್ಲದಿದ್ದರೆ ಹೋಗಲಿ, ಎಂದು ಯೋಚಿಸುತಾ ನಿಂತಿರುವ ಸಮಯದಲ್ಲಿ ಆಶ್ಚರ್ಯಕರವಾದ ಒಂದು ಸಂಗತಿ ನಡೆಯಿತು.

ಮೊದಲು ಕೋರ್ಟಿನ ಒಳಕ್ಕೆ ಬಂದು ಗುಂಪಿನ ಹಿಂದೆ ನಿಂತಿದ್ದ ಒಬ್ಬ ದಂಡಿನ ಸಿಪಾಯಿಯು ಅವನ ಹತ್ತಿರಿದ್ದ ಒಬ್ಬ ಹೆಂಗಸೂ ಸಹಾ ದಾರಿ ಬಿಡಿಸಿಕೊಂಡು ಅಧಿಕಾರಿಗಳ ಮತ್ತು ಪಂಚಾಯಿತರ ಮುಂದೆ ಬಂದು ನಿಂತುಕೊಂಡರು. ಅಪ್ರಮೇಯನ ದೃಷ್ಟಿ ಅವರ ಮೇಲೆ ಬಿತ್ತು. ಅವರು ಇವನನ್ನೂ ಇವನು ಅವರನ್ನೂ ದೃಷ್ಟಿಸಿ ನೋಡಿದರು. ಆವರವರ ಕಣ್ಣಿನಲ್ಲಿಯೂ ನೀರು ಬಂತು. ಶತ್ರುಗಳು ಮಾಡಿದ ತಂತ್ರವೂ, ಅವರು ಒಡ್ಡಿದ ಜಾಲವೂ, ಅದುವರೆಗೆ ಅವರು ನಡೆಸಿದ ಛದ್ಮನೆಯೂ ವಿಶಿಷ್ಟವೂ ಏಕಕಾಲದಲ್ಲಿ ಮಿಂಚು ಹೊಳೆದಂತೆ ಅಪ್ರಮೇಯನ ಮನಸ್ಸಿಗೆ ಹೊಳೆಯಿತು

ಕೂಡಲೆ ಅವನು ಥಟ್ಟನೆ ಮುಂದಕ್ಕೆ ಹೋಗಿ ಆ ಸಿಪಾಯಿಯ ಕೈಯನ್ನು ಹಿಡಿದುಕೊಂಡು—ಸ್ವಾಮಿ, ನಮ್ಮಪ್ಪಾ, ಎಲ್ಲಿ ಹೋಗಿದ್ದಿರಿ? ಏನು ಶ್ರಮ ಪಟ್ಟಿರಿ? ಇಷ್ಟು ಅನಾಹುತಕ್ಕೆ ಕಾರಣವಾಯಿತು. ಅಮ್ಮಾ, ನೀವು ಏನು ಶ್ರಮ ಪಟ್ಟಿರೋ, ಏನೇನು ದುಃಖವನ್ನು ಅನುಭವಿಸಿದಿರೋ ಕಾಣೆ, ತಮ್ಮಗಳನ್ನು ಅಗಲಿದ ಗಳಿಗೆಯಿಂದ ಹೊಟ್ಟೆಗೆ ಅನ್ನವಿಲ್ಲದೆ ಕಣ್ಣಿಗೆ ನಿದ್ರೆಯಿಲ್ಲದೆ ದೇಶ ದೇಶವನ್ನೂ ಸುತ್ತಿ ಏಳು ಉಣ್ಣದ ಊಟಾ ಉಂಡು ಏಳಕೆರೇ ನೀರು ಎತ್ತಿ ಕುಡಿದು ಇಲ್ಲದ ಪಡಿಪಾಟಲನ್ನೂ ಪಟ್ಟೆ. ದೈವ ವಿಲಾಸವನ್ನು ಏನೆಂದು ಹೇಳಲಿ? ಆ ಆಪದ್ಬಾಂಧವ ಅನಾಥರಕ್ಷಕನಾದ ಸ್ವಾಮಿ ನರಸಿಂಹನ ದಯ ನಮ್ಮ ಮೇಲೆ ಬಂತು. ಹೀಗೆಂದು ಬಗೆಬಗೆಯಾಗಿ ಹಲುಬುತಾ ಸ್ಮೃತಿ ತಪ್ಪಿದವನಂತೆ ಅಪ್ರಮೇಯ ನಿಂತಿರುವಾಗ ನ್ಯಾಯಾಧಿಕಾರಿಯು—ಇದೇನು ಅಪ್ರಮೇಯ ಬಹಳ ಆಶ್ಚರ್ಯಪಡುತಾ ನಿಂತುಕೊಂಡಿದ್ದೀಯೆ ಎಂದನು. ಅದಕ್ಕೆ ಅಪ್ರಮೇಯನು—ಸ್ವಾಮಿ ಭಗವಂತನ ಮಹಿಮೆಯನ್ನು ನಾನು ಎಷ್ಟು ಕೊಂಡಾಡಲಿ! ದೇಪಣ್ಣನವರು ಕೊಂದು ಹಾಕಿಸಿದರೆಂಬ ಹನುಮಂತರಾಯರು ಮೂರ್ತಿವತ್ತಾಗಿ ತಮ್ಮ ಮುಂದೆ ಬಂದು ನಿಂತಿವಾರೆ, ಪರಾಂಬರಿಕೆಯಾಗಬೇಕು. ಹೀಗೆ ಅಪ್ರಮೇಯ ಹೇಳಿದ ಕೂಡಲೆ, ನ್ಯಾಯಾಧಿಕಾರಿ, ಪಂಚಾಯಿತರು, ಅಪರಾಧಿಗಳು, ಸಾಕ್ಷಿಗಳು, ಅಲ್ಲಿ ಸೇರಿದ್ದ ಜನರು, ಇವರೆಲ್ಲರ ದೃಷ್ಟಿಯೂ ಹನುಮಂತರಾಯನ ಮೇಲೆ ಬಿತ್ತು. ಇದೇನು ಆಶ್ಚರ್ಯವಾದ ಸಂಗತಿ, ಸತ್ತುಹೋದನೆಂದು ಸಾಕ್ಷಿಗಳು ಹೇಳಿರುವುದೇನು? ಅಂಥವನು ಜೀವಸಹಿತ ಬಂದದ್ದು ಹೇಗೆ? ಇದೇನು ಪ್ರೇತವೇ, ಪಿಶಾಚಿಯೋ, ನಿಜವಾದ ಮನುಷ್ಯನೇ? ಇದರಲ್ಲಿ ಇನ್ನೇನು ನಡೆದಿದೆಯೋ ತಿಳಿಯಬೇಕೆಂದು ಎಲ್ಲರಿಗೂ ಕುತೂಹಲ ಹೆಚ್ಚಿತು. ಒಂದು ವಿಷಯ ಮಾತ್ರ ಎಲ್ಲರೂ ನೋಡಿ ಜ್ಞಾಪಕದಲ್ಲಿ ಇಡ

ತಕ್ಕದ್ದಾಗಿತ್ತು. ಫಿರ್ಯಾದಿ ಕಡೆಯವರೆಲ್ಲರೂ ಉಭ ಶುಭ ಎನ್ನದೆ ತಲೇ ಬಗ್ಗಿಸಿಕೊಂಡು ಸುಮ್ಮನೇ ಕೂತಿದ್ದರು. ಆಗ ನ್ಯಾಯಾಧಿಕಾರಿಯು ಹನುಮಂತರಾಯನನ್ನು ನೋಡಿ—ನೀವು ಯಾರು ಎಂದು ಕೇಳಿದನು. ಇದಕ್ಕೆ ಹನುಮಂತರಾಯನು ತನ್ನ ಕಥೆಯನ್ನು ಹೇಳಲು ಆರಂಭಿಸಿದ್ದು ಹೇಗೆಂದರೆ:—

ಸ್ವಾಮಿ ನನ್ನ ಹೆಸರು ಹನುಮಂತರಾವ್ ರಣನವರೆ, ನಾನು ಟಿಪುಸುಲ್ತಾನರ ದಂಡಿನಲ್ಲಿ ತುಕಡಿದಾರನಾಗಿದ್ದೆ. ಆಗ ನನಗೆ ಒಳ್ಳೇ ಪ್ರಾಯ. ಇಂಗ್ಲಿಷರ ಮೇಲೆ ಅನೇಕ ಯುದ್ಧಗಳನ್ನು ಮಾಡಿದೆ. ಶ್ರೀರಂಗಪಟ್ಟಣದ ಕೋಟೇ ಅಲಂಗದ ಮೇಲೆ ನಿಂತು ಜನರಿಗೆ ಧೈರ್ಯವನ್ನು ಹೇಳುತಾ ಫಿರಂಗಿಗಳನ್ನು ಗೋಲಂದಾಜರ ಮೂಲಕ ಹೊಡೆಯಿಸುತಾ ಇಂಗ್ಲಿಷಿನ ದಂಡಿನವರು ತಲ್ಲಣಗೊಳ್ಳುವ ಹಾಗೆ ಮಾಡಿದ ಸೈಯದುಗಫೂರ್ ಎಂಬ ಅಧಿಕಾರಿಗಳಿಗೆ ಬಿಳೀ ಛತ್ರಿಯನ್ನು ಹಿಡಿದು ಆತನನ್ನು ಶತ್ರುಗಳ ಗುಂಡಿನಿಂದ ಹೊಡೆಯಿಸಿದ ಒಬ್ಬ ದ್ರೋಹಿಯನ್ನು ಆಕ್ಷಣದಲ್ಲಿಯೇ ನಾನು ಕತ್ತರಿಸಿ ಹಾಕಿದೆ. ರಾಜದ್ರೋಹಿಯಾದ ಮೀರ್ ಮೊಹಮ್ಮದಸಾದಕನನ್ನು ಕೋಟೇ ಬಾಗಿಲಲ್ಲಿ ಕತ್ತರಿಸಿ ಹಾಕಿದ ಸಿಪಾಯಿಯು ನನ್ನ ತುಕಡಿಯವನು. ಪಟ್ಟಣವು ಹಲ್ಲಾ ಆಗಿ ಇಂಗ್ಲಿಷರ ವಶವಾದ ಮೇಲೆ ಮೈಸೂರ ದಂಡಿನಲ್ಲಿಯೇ ನಾನು ಸೇರಿಕೊಂಡು ಬಿಷ್ಟೋಪಂತರು ತರುವಾಯ ಬಕ್ಷಿ ರಾಮರಾಯರು ಬಕ್ಷಿ ಭೀಮರಾಯರು ಇವರ ಸೇನೆಯಲ್ಲಿದ್ದುಕೊಂಡು ಇಂಗ್ಲಿಷರಿಗೆ ಸಹಾಯವಾಗಿ ಅನೇಕ ಯುದ್ಧಗಳನ್ನು ಮಾಡಿದೆ, ಪೇಶ್ವೆ ಶ್ರೀಮಂತ ಬಾಜೀರಾಯರನ್ನು ಕೈಸೆರೆ ಹಿಡಿದ ಬಿರಾದರಿಯಲ್ಲಿ ನಾನು ಸೇರಿದ್ದೆ. ಅಲ್ಲಿಂದ ಮೈಸೂರಿಗೆ ಬಂದೆ. ನಮ್ಮ ತುಕಡಿಯನ್ನು ಒಡೆದುಬಿಟ್ಟರು. ಮೈಸೂರ ಮಂಡೀ ಮೊಹಲೆಯಲ್ಲಿ ಮನೇ ಮಾಡಿಕೊಂಡು ನಾನು ನನ್ನ ಹೆಂಡತಿ ನನ್ನ ಮಗ ವಾಸವಾಗಿದ್ದೆವು. ಈ ಅಪ್ರಮೇಯನು ನನ್ನ ಪರಮ ಮಿತ್ರನಾಗಿ

ನನ್ನಲ್ಲಿ ಗುಮಾಸ್ತನಾಗಿದ್ದನು. ದೇಪಣ್ಣನವರಿಗೂ ನನಗೂ ಸ್ನೇಹವಾಯಿತು. ಅವರು ಶ್ರೀ ಕೃಷ್ಣರಾಜ ಪ್ರಭುಗಳಲ್ಲಿ ಮಂತ್ರಿಯಾಗಿ ನಿಂತು ರಾಜಕಾರ್ಯಗಳನ್ನು ನಡೆಸುತಾ ಇದ್ದರು. ಅವರಿಗೆ ಕೆಲವು ದೊಡ್ಡ ಇಂಗ್ಲಿಷ್ ಸರದಾರರ ಪರಿಚಯುವನ್ನು ಮಾಡಿಸಿ ಕೊಟ್ಟೆ. ಅವಸರದ ಹೋಬಳಿ ಗುರಕಾರನಾದ ಒಬ್ಬ ಬಸಪ್ಪನೆಂಬ ಮನುಷ್ಯನು ದೇಪಣ್ಣನವರಲ್ಲಿ ಶತ್ರುತ್ವವನ್ನು ಬೆಳಸಿ ಅವರ ಮೇಲೆ ತಂತ್ರಗಳನ್ನು ನಡಿಸುತಾ ಇದಾನೆಂದು ನನಗೆ ತಿಳಿಯ ಬಂದಿತ್ತು. ಅನೇಕ ಸ್ಥಳಗಳಲ್ಲಿ ಯುದ್ಧಮಾಡಿ ಆಯಾ ಕೋಟೆಗಳನ್ನೂ ರಾಜರುಗಳನ್ನೂ ಹಿಡಿದಿದ್ದೆ. ಅಲ್ಲೆಲ್ಲಾ ಇಂಗ್ಲಿಷರ ದಂಡಿನ ಸರದಾರರು ಲೂಟಿಗೆ ಅಪ್ಪಣೇ ಕೊಡುತಿದ್ದರು. ಆ ಲೂಟಿಗಳಲ್ಲಿ ಸಿಕ್ಕಿದ್ದನ್ನು ಹಂಚುತಿದ್ದರು. ನನ್ನ ಭಾಗಕ್ಕೂ ಕೆಲವು ವಸ್ತುಗಳು ಬಂದವು. ನನಗೆ ರತ್ನ ಪರೀಕ್ಷೆ ಸ್ವಲ್ಪ ಗೊತ್ತಿದೆ. ಭಾರಿಯಾದ ರತ್ನಗಳನ್ನು ಪರೀಕ್ಷೆಗಾಗಿ ನನ್ನಲ್ಲಿಗೆ ವರ್ತಕರು ತರುತಿದ್ದರು. ಕೆಲವನ್ನು ನಾನು ಕೊಂಡುಕೊಳ್ಳುತಿದ್ದೆ. ಈ ಮಧ್ಯೆ ಮೈಸೂರಿನಲ್ಲಿ ಒಂದು ಪ್ರವಾದಹುಟ್ಟಿತು. ಮೈಸೂರ ದಂಡಿನವರು ಮರಾಟೆ ಕದನಗಳಲ್ಲಿ ಅನೇಕ ಸ್ಥಳದಲ್ಲಿ ಲೂಟೀಮಾಡಿ ವಿಶೇಷವಾದ ಐಶ್ವರ್ಯವನ್ನು ಹೊತ್ತುಕೊಂಡು ಬಂದಿದಾರೆ, ಆ ವಸ್ತುಗಳನ್ನೂ ಅದನ್ನು ತೆಗೆದುಕೊಂಡು ಬಂದ ಜನರನ್ನೂ ಹಿಡಿದು ಮದರಾಸಿಗೆ ಕಳುಹಿಸಬೇಕೆಂದು ಕುಂಪಣಿ ಸರ್ಕಾರದವರು ಮಹಾರಾಜರ ಸರ್ಕಾರಕ್ಕೆ ಕರೀತಾ ಬರೆದಿದಾರೆ, ಅದರಂತೆ ಅದಕ್ಕೆ ಸಂಬಂಧಪಟ್ಟ ಜನರನ್ನು ದಂಡಿನ ಸಿಪಾಯಿಗಳೂ ಕಂದಾಚಾರದವರೂ ಹಿಡಿದು ನಸರ್‍ಬಂದಿಯಲ್ಲಿಡುತಾ ಇದಾರೆಂದು ಅಲ್ಲಲ್ಲಿ ಜನರು ಹೇಳಿಕೊಳ್ಳುತಾ ಬಂದರು. ನನಗೆ ಎಲ್ಲಿ ಅವಮಾನವಾಗುವುದೋ ಎಂದು ಭಯ ಪಡುತಾ ಇದ್ದೆ. ಈ ಅಲ್ಪ ಜನರ ಕೈಗೆ ಸಿಕ್ಕಿ ನರಳಿ ಮಾನವನ್ನು ಹೋಗಲಾಡಿಸಿಕೊಳ್ಳುವುದಕ್ಕಿಂತಲೂ ಈ ಮಾತು ನಿಜವಾಗಿ

ದ್ದರೆ ನಾನೇ ಕುಂಪಣಿ ಸರದಾರರುಗಳನ್ನು ಕಂಡು ಅದು ಸಟಿಯೆಂದಿಟವೆ ಎಂಬ ಮಾತನ್ನು ತಿಳಿದು ಅಗತ್ಯ ಬಿದ್ದರೆ ಅಂಥಾ ಬೆಲೆಯಾದ ಸಾಮಾನುಗಳನ್ನು ನಾನೇ ಕುಂಪಣಿಯವರಿಗೆ ಒಪ್ಪಿಸೋಣವೆಂದು ಯೋಚನೆ ಮಾಡುತಾ ಇದ್ದೆ.

ಹೀಗಿರುವಲ್ಲಿ ನನಗೆ ದೊಡ್ಡದಾಗಿ ವಿಪತ್ತು ಸಂಭವಿಸಿತು. ಜವಾಹಿರು ನಗಗಳನ್ನು ನನಗೆ ತೋರಿಸಿ ಬೆಲೆ ಕಟ್ಟಿಸುವ ನೆವದಲ್ಲಿ ಇಂಗ್ರೀಜಿ ಹಯಾತನೆಂಬ ಒಬ್ಬ ನೀಚನು ಅವನಿಗಿಂತಲೂ ನೀಚರಾದ ಕೆಲವು ಜನರ ಪಿತೂರಿಗೆ ಒಳಪಟ್ಟು ಒಡ್ಡಿದ ಜಾಲವು ನನ್ನನ್ನು ಮೋಸಗೊಳಿಸಿತು. ತನ್ನ ಬಲೆಯನ್ನು ಕಟ್ಟಿ ಒಂದು ಕೊನೆಯಲ್ಲಿ ಕೂತು ಇರವಾಗ ಅಕಸ್ಮಾತ್ತಾಗಿ ಯಾವುದಾದರೂ ಇತರ ಹುಳು ಆ ಬಲೆಗೆ ಸಿಕ್ಕಿದರೆ ಜಾಡವು ತನ್ನ ತಂತುವನ್ನು ದೂರದಿಂದಲೇ ತನ್ನ ಬೀಳಿನ ಸುತ್ತಲೂ ಬೇಗ ಬೇಗ ಸುತ್ತಿ ಅದನ್ನು ಅಲ್ಲಾಡದಂತೆ ಹೇಗೆ ಮಾಡಿಬಿಡುವುದೋ ಹಾಗೆ ನನ್ನ ಸ್ಥಿತಿ ಆಯಿತು. ಅನೇಕ ಜನ ತುಂಡಾಂಡಿಗಳು ನನ್ನನ್ನು ಹಿಡಿಯುವುದಕ್ಕೆ ಬಂದರು. "ಹಿಡಿದು ಚಾವಡಿಗೆ ಎಳೆದುಕೊಂಡು ನಡೆಯಿರಿ" ಎಂದು ದೂರದಿಂದಲೇ ಒಬ್ಬ ಕೂಗಿದನು. ಲೂಟೀ ಮಾಲುಗಳ ಸಂಬಂಧಕ್ಕಾಗಿ ಸರ್ಕಾರದವರು ನನ್ನನ್ನು ಹಿಡಿಯಲು ಬಂದರೆಂದು ನನ್ನ ಮನಸ್ಸಿನಲ್ಲಿ ನಾಟಿದ್ದ ಭಯ ನಿಶ್ಚಯವಾಯಿತೆಂದೂ ಇವರ ಕೈಗೆ ಸಿಕ್ಕಿ ಅವಮಾನ ಪಡುವುದಕ್ಕಿಂತಲೂ ಮಾನ ಸಂರಕ್ಷಣಾರ್ಥವಾಗಿ ತಲೇ ತಪ್ಪಿಸಿಕೊಂಡು ಎಲ್ಲಿಯಾದರೂ ಹೊರಟು ಹೋಗಬೇಕೆಂದೂ ಯೋಚಿಸಿ ನನ್ನ ಸೊಂಟದಲ್ಲಿದ್ದ ಪಠಾಕತ್ತಿಯನ್ನು ತಿರುಗಿಸುತಾ ನನ್ನ ಮೇಲೆ ಬೀಳಲು ಬಂದ ಜನರ ಮೈಮೇಲೆ ಅದರ ಹರಿತವನ್ನು ತೋರಿಸುತಾ ಗಾಢಾಂಧಕಾರದಲ್ಲಿ ರಾತ್ರಿಯೇ ಕಾಡುಬಿದ್ದು ಹೊರಟು ಹೋದೆ. ಅನ್ನ ನೀರು ಇಲ್ಲದೆ ಎಲ್ಲೆಲ್ಲಿಯೋ ಅಲೆದೆ. ನನಗೆ ಬೇಕಾದ ಸರದಾರರನೇಕರು ಬೊಂಬಾಯಿ ಪ್ರಾಂತದಲ್ಲಿದ್ದರು.

ಅವರನ್ನು ಕಂಡು ಉಪಾಯವಾಗಿ ಲೂಟೀ ಮಾಲಿನ ಪ್ರಸ್ತಾಪ ವನ್ನು ಮಾಡಿದೆ, ಕೊಳ್ಳೆ ಮಾಲುಗಳನ್ನು ಹಿಡಿಯಬೇಕೆಂತ ಲಾಗಲಿ ಅದನ್ನು ಇರಿಸಿಕೊಂಡಿರುವ ಜನರನ್ನು ಹಿಡಿಯಬೇಕೆಂತ ಲಾಗಲಿ ಕುಂಪಣೀ ಸರಕಾರದವರು ಎಂದಿಗೂ ಅಪ್ಪಣೇ ಮಾಡ ಲಿಲ್ಲವೆಂದು ತಿಳಿಯಿತು. ಆಗ ಮನಸ್ಸಿಗೆ ಧೈರ್ಯವಾಯಿತು.

ಸ್ವಲ್ಪ ದಿವಸದಲ್ಲಿಯೇ ಕುಂಪಣೀ ಬಹಾದುರವರ ಸೇನೆಗೂ ಪಂಜಾಬುದೇಶದವರಿಗೂ ಯುದ್ಧ ತೊಡಗಿತು. ನನ್ನ ಸ್ನೇಹಿತ ರಾದ ಕೆಲವು ಸರದಾರರು ಯುದ್ಧ ಪ್ರಯತ್ನವನ್ನು ಕುರಿತು ನನ್ನ ಅನುಭವವನ್ನು ಕೇಳಿದರು. ನಾನು ಅವರಿಗೆ ಬೇಕಾದ ಅಂಶವನ್ನು ಹೇಳಿದೆ. ಅವರು ಅದಕ್ಕೆ ಒಪ್ಪಿ ಮೂರು ನಾಲ್ಕು ದಿವಸದಮೇಲೆ ಸರ್ವ ಸೇನಾಪತಿಯಾದ ಲಾರ್ಡು ಗಾಫ್ ಸಾಹೇಬರಲ್ಲಿ ನನಗೆ ಭೇಟೀ ಮಾಡಿಸಿದರು. ಆತನು ಬಹುದೊಡ್ಡ ಸರದಾರ, ನನ್ನನ್ನು ಬಹುಮರ್ಯಾದೆಯಿಂದ ಕಂಡು, ನನ್ನ ಅನು ಭವವನ್ನು ಕೇಳುತಾ ಕುಂಪಣೀ ಸೇನೆಯಲ್ಲಿ ನಾನು ಒಂದು ಅಧಿ ಕಾರವನ್ನು ವಹಿಸಬೇಕೆಂದು ಹೇಳಿದರು. ನಾನು ಸಮ್ಮತಿಸಲಿಲ್ಲ. ಕಡೆಗೆ ಬಲವಂತಮಾಡಿ ನನಗೆ ಕಮಿಷರ್ಕೊಡಿಸಿ ತಮ್ಮ ಖಾಸಾ ತುಕಡಿಯಲ್ಲಿ ನನ್ನನ್ನು ಇರಿಸಿಕೊಂಡರು. ಆ ಪಂಜಾಬು ಯುದ್ಧಗಳಲ್ಲಿ ನಾನು ಬಹು ಶ್ರಮಪಟ್ಟೆ. ಸಮ ಶತ್ರುಗಳು ಎಂದರ ಆ ಸಿಕ್ಕರೇ ಸರಿ. ಅವರ ಪರಾಕ್ರಮಕ್ಕೆ ಮಿಂಚಿದ್ದಿಲ್ಲ. ಆದರೂ ಕುಂಪಣೀಯವರಿಗೇ ಜಯವಾಗುತಾ ಬಂತು. ಏನೋ ಕೆಲಸವಾಗಿ ನಾನು ಮರಾಟೀ ಸೀಮೆಗೆ ಬರಬೇಕಾಯಿತು. ಗಾಫ್ ಸಾಹೇಬರ ಅಪ್ಪಣೆ ಪಡೆದು ಬಂದೆ. ಅಷ್ಟರಲ್ಲಿ ಸುಬೇದಾರ್ ಮೇಜರ್ ಸರದಾರ್ ಬಹಾದುರ್ ಎಂತಲೂ ಇನ್ನೂ ಏನೇನೋ ಬಿರುದುಗಳನ್ನು ನನಗೆ ಕೊಟ್ಟು ಕುಂಪಣೀ ಸರ್ಕಾರದವರು ನನಗೆ ಬಹಳ ಗೌರವವನ್ನು ತೋರಿಸಿದರೆಂದು ತಿಳಿಯಿತು. ಇಂಥಾ ಸಂತೋಷಕಾಲದಲ್ಲಿ ನಮ್ಮ ಗುರುಗಳಾದ ಆತ್ಮಾರಾಂ

ಬಾವಾಜಿ ಎಂಬ ಮಹಾ ಯೋಗಿಗಳಿಗೆ ನಮಸ್ಕಾರಮಾಡಿ ಅವರ ಆಶೀರ್ವಾದವನ್ನು ಪಡೆಯಬೇಕೆಂದು ಅವರಿರುವ ಮಹಾ ಕ್ಷೇತ್ರಕ್ಕೆ ಹೋಗಿ ಅವರ ಶುಶ್ರೂಷೆಯಲ್ಲಿ ಒಂಪೆರಡು ದಿವಸ ಇದ್ದೆ. ಆಗ ಅವರು ನನ್ನ ಎರಡನೇ ಪ್ರಾಣವಾದ ಅಪ್ರಮೇಯ ನನ್ನನ್ನು ಹುಡುಕಿಕೊಂಡು ಅಲ್ಲಿಗೆ ಬಂದಿದ್ದನೆಂತ ಅವನು ಅವರಲ್ಲಿ ಹೇಳಿದ ಸಮಾಚಾರವನ್ನೆಲ್ಲಾ ವಿಸ್ತಾರವಾಗಿ ತಿಳಿಸಿದರು. ನನ್ನ ಪ್ರಾಣ ಹೋಗಲಿ ಇರಲಿ, ನನ್ನ ಪರಮ ಮಿತ್ರರಾದ ದೇಪಣ್ಣನವರಿಗೆ ಪ್ರಾಪ್ತವಾಗಿರುವ ವಿಪತ್ತನ್ನು ಪರಿಹಾರ ಮಾಡುವುದಕ್ಕೋಸ್ಕರ ನನ್ನ ಹೆಂಡತಿಯನ್ನು ಕರೆದುಕೊಂಡು ಕೇವಲ ಆತುರದಿಂದ ಬಂದೆ. ಈ ಮೊಕದ್ದಮೆಯ ವಿಚಾರಣೆಯು ಮುಗಿಯುತಾ ಬಂತೆಂದು ತಿಳಿಯಿತು. ತಮ್ಮ ಅಪ್ಪಣೆಯನ್ನು ಪಡೆಯದೆ ಮಿತ್ರಾರ್ಥವಾಗಿ ಒಳಕ್ಕೆ ನುಗ್ಗಿ ಬಂದೆ. ನನ್ನ ಪಕ್ಕದಲ್ಲಿ ನಿಂತಿರುವ ಹೆಂಗಸು ನನ್ನ ಪತ್ನಿಯಾಗಿದ್ದಾಳೆ. ಆಕೆಯ ಹೆಸರು ಈ ವ್ಯವಹಾರದಲ್ಲಿ ಪ್ರಾಮುಖ್ಯವನ್ನು ಹೊಂದಿರುವ ಕಾರಣ ಉಳಿದ ಸಂಗತಿ ಏನಿದ್ದಾಗ್ಯೂ ನನ್ನ ಪತ್ನಿಯನ್ನು ಕೇಳಿ ತಿಳಿದುಕೊಳ್ಳಬಹುದು.

ಈ ಪ್ರಕಾರ ಹನುಮಂತರಾವ್ ರಣಸವರೆಯು ಹೇಳಿ ಮುಗಿಸಿದ ತನ್ನ ಕಥೆಯನ್ನು ಕೇಳಿ ದಂಡನಾಧಿಕಾರಿಯೂ ಪಂಚಾಯಿತರೂ ಬೆಕ್ಕಸ ಬೆರಗಾಗಿ ಅರೆಗಳಿಗೆ ಸುಮ್ಮನೇ ಇದ್ದು ತರುವಾಯ ಒಬ್ಬೊಬ್ಬರು ತಮ್ಮೊಳಗೆ ಮಾತನಾಡಿಕೊಂಡಮೇಲೆ ಸೋಮಾರಗಿರಿ—ಹನುಮಂತರಾಯರೇ, ತಮ್ಮ ಕಾಲ ಉಂಗುಷ್ಟವನ್ನು ತೋರಿಸಿ, ಎಂದನು. ಅದರಂತೆ ಹನುಮಂತರಾಯನು ತೋರಿಸಲು ಯಡಗಾಲ ಹೆಬ್ಬೆರಳ ಮುಂದುಗಡೆ ಸ್ವಲ್ಪ ಮಟ್ಟಿಗೆ ಎರಡು ಬೆರಳಾಗಿ ಕುಯಿದು ತಗ್ಗಿದಂತೆ ಕಾಣಿಸಿತು. ಅಪ್ರಮೇಯನ ಮಾತು ನಿಜವೆಂದು ಎಲ್ಲರೂ ಒಪ್ಪಿದರು. ಅಲ್ಲಿದ್ದ ಜನಗಳ ಗುಂಪಿನಿಂದ ಗುಸುಗುಟ್ಟುವ ಶಬ್ದ ಬಲವಾಯಿತು. ಉತ್ತರಕ್ಷಣದಲ್ಲಿಯೇ

ಹನುಮಂತರಾಯನ ಸಂಗಡ ಬಂದು ಆತನ ಪಕ್ಕದಲ್ಲಿ ನಿಂತು ಕೊಂಡಿದ್ದ ದುರ್ಗಾಬಾಯಿಯನ್ನು ಕುರಿತು :

ದಂಡನಾಧಿಕಾರಿ—ನಿಮ್ಮ ಹೆಸರೇನಮ್ಮ?

ದುರ್ಗಾ—ನನ್ನ ಹೆಸರು ದುರ್ಗಾಬಾಯಿ.

ದಂಡನಾ—ನೀವು ಹನುಮಂತರಾಯರ ಕುಟುಂಬವೊ ?

ದುರ್ಗಾ—ಹವುದು.

ದಂಡನಾ—ನಿಮ್ಮ ಯಜಮಾನರನ್ನು ದೇಪಣ್ಣನವರು ಕೊಲ್ಲಿಸಿದರೆಂದು ನೀವು ಕಮಿಷನರು ಸಾಹೇಬರಿಗೂ ಕೊತ್ವಾಲ ಚಾವಡಿಗೂ ಅರ್ಜಿಯನ್ನು ಯಾವಾಗಲಾದರೂ ಕೊಟ್ಟಿರ ?

ದುರ್ಗಾ—ಅಂಥಾ ಯಾವ ಅರ್ಜಿಯನ್ನೂ ನಾನು ಕೊಡಲಿಲ್ಲ

ದಂಡನಾ—ಈ ವಿಷಯದಲ್ಲಿ ನೀವು ಎಲ್ಲಿಯಾದರೂ ಫಿರ್ಯಾದನ್ನು ಹೇಳಿದಿರ ?

ದುರ್ಗಾ—ಇಲ್ಲ.

ದಂಡ—ಇದುವರೆಗೆ ನೀವು ಎಲ್ಲಿದ್ದಿರಿ ?

ದುರ್ಗಾ—ನಮ್ಮ ತಂದೆಗೆ ದೇಹಾಲಸ್ಯವೆಂದು ಕಾಗದಬಂತು. ನನ್ನನ್ನೂ ನನ್ನ ಮಗನನ್ನೂ ಜಾಗ್ರತೆಯಾಗಿ ಕಳುಹಿಸಬೇಕೆಂದು ಬರೆದಿತ್ತು. ನಮ್ಮ ಯಜಮಾನರು ಗಾಡೀಮಾಡಿ ನಮ್ಮಗಳನ್ನು ಸಾತಾರೆಗೆ ಕಳುಹಿಸಿಕೊಟ್ಟರು.

ದಂಡ—ನೀವು ಅಲ್ಲಿಗೆ ತಲಪಿದಾಗಿನಿಂದಲೂ ಎಲ್ಲಿದ್ದಿರಿ ?

ದುರ್ಗಾ—ಸಾತಾರೆಯಲ್ಲಿಯೇ ಇದ್ದೆ.

ದಂಡ—ನೀವು ಸಾತಾರೆಗೆ ತಲಪಿದಾಗಿನಿಂದ ನಿಮ್ಮ ಯಜಮಾನರ ಸಂಗಡ ಹೊರಟು ಇಲ್ಲಿಗೆ ಬರುವವರೆಗೆ ಈ ಮಧ್ಯಕಾಲದಲ್ಲಿ ನೀವು ಇನ್ನು ಯಾವದಾದರೂ ಊರಿಗೆ ಹೋಗಿದ್ದಿರ ?

ದುರ್ಗಾ—ನಾನು ಎಲ್ಲಿಗೂ ಹೋಗಿರಲಿಲ್ಲ.

ದಂಡ—ಸಾತಾರೆಯಲ್ಲಿ ನೀವು ಇರುವಾಗ ಯಾವುದಾದರೂ ಅರ್ಜಿಯನ್ನು ಯಾರಿಗಾದರೂ ಬರಸಿದ್ದಿರ ?

ದುರ್ಗಾ—ಇಲ್ಲ.

ದಂಡ—ಯಾರಾದರೂ ಏನಾದರೂ ಕಾಗದವನ್ನು ತಂದು ನಿಮ್ಮ ಕೈಯಲ್ಲಿ ರುಜು ಹಾಕಿಸಿದರೆ?

ದುರ್ಗಾ—ಇಲ್ಲ.

ದಂಡ—ಈ ಮಧ್ಯಕಾಲದಲ್ಲಿ ನಿಮ್ಮನ್ನು ಯಾರೂ ಈ ಸೀಮೆಗಾಗಲಿ ಇತರ ಸೀಮೆಗಾಗಲಿ ಕರೆದುಕೊಂಡು ಹೋಗಿರಲಿಲ್ಲವೆ?

ದುರ್ಗಾ—ಇತರರು ಯಾರೂ ನನ್ನನ್ನು ಹಾಗೆ ಕರೆದುಕೊಂಡು ಹೋಗಿರಲೂ ಇಲ್ಲ, ನಾನು ಹಾಗೆ ಹೋಗತಕ್ಕವಳೂ ಅಲ್ಲ.

ದಂಡ—ಈ ಅರ್ಜಿಗಳನ್ನು ನಿಮಗೆ ಓದಿ ಹೇಳುತೇವೆ, ಕೇಳಿ. ಇದನ್ನು ನೀವು ಬರಸಿದಿರ?

ದುರ್ಗಾ—ನಾನು ಬರಸಲಿಲ್ಲ.

ದಂಡ—ಅಂಚೆ ಕಪನಿ ಕೈಗೆ ನೀವು ಕಮಿಾಷನರ ಹೆಸರಿಗೆ ಅರ್ಜಿ ಬರೆದು ಟಪಾಲು ಮನೆಯಲ್ಲಿ ಕೊಟ್ಟದ್ದುಂಟೆ?

ದುರ್ಗಾ—ಅಂಚೇಕಪನಿ ಯಾರೋ ನಾನು ಕಾಣೆ.

ದಂಡ—ಕೋರ್ಟಿನಲ್ಲಿ ನಿಂತಿದಾನೆ ನೋಡಿ. ಈ ಮನುಷ್ಯನ ಕೈಗೆ ಯಾವುದಾದರೂ ಕಾಗದವನ್ನು ನೀವು ಕೊಟ್ಟಿರ?

ದುರ್ಗಾ—ನಾನು ಯಾವ ಕಾಗದವನ್ನೂ ಕೊಡಲಿಲ್ಲ.

ದಂಡ—ಕೋರ್ಟಿನಲ್ಲಿ ನಿಂತುಕೊಂಡಿರುವ ಈ ಫಿರ್ಯಾದಿ ಯಾರು?

ದುರ್ಗಾ—ನಾನರಿಯೆ.

ಬದ್ರೋಜಮಾಖಾ—ಹನುಮಂತರಾಯರೆ, ಈ ಫಿರ್ಯಾದಿ ಯಾರು ನೀವು ಬಲ್ಲರ?

ಹನುಮಂತರಾವ್—ನಾನರಿಯೆ.

ಬದ್ರೋ—ಈ ಫಿರ್ಯಾದಿ ನಿಮ್ಮ ಹೆಂಡತಿಯಲ್ಲವೆ?

ಹನುಮಂತ—ಖಂಡಿತವಾಗಿಯೂ ಅಲ್ಲ.

ಇದೆಲ್ಲವನ್ನೂ ಕೇಳಿ ಅಧಿಕಾರಿಗೂ ಪಂಚಾಯಿತರಿಗೂ ಈ

ಮೊಕದ್ದಮೆಯಲ್ಲಿ ನಡೆದಿರತಕ್ಕ ಛದ್ಮನೆಯೆಲ್ಲಾ ಮನಸ್ಸಿಗೆ ಅಂಟಿತು. ಇವರುಗಳಲ್ಲಿ ವಿಶೇಷವಾಗಿ ದರ್ಪ ಉಳ್ಳ ಬದ್ರೋ ಜಮಾಖಾನನು ಫಿರ್ಯಾದಿಯನ್ನು ಕುರಿತು,

ಬದ್ರೋ—"**ಮುಸುಗ ತೆಗೆಯೋ ಮಾಯಾಂಗನೆ.**"

ಫಿರ್ಯಾದಿ—ನಮ್ಮಲ್ಲಿ ಗೋಷಾ ಉಂಟು, ನಾನು ಮುಸುಗ ತೆಗೆಯುವುದಿಲ್ಲ.

ದಂಡನಾಧಿಕಾರಿ—ನೀನು ಮುಸುಗ ತೆಗೆಯುತೀಯೋ ಜವಾನನ ಕೈಯಿಂದ ತೆಗೆಯಿಸೋಣವೋ?

ಇದನ್ನು ಕೇಳಿ ಫಿರ್ಯಾದಿಯು ಮುಸುಗ ತೆಗೆದಳು. ಭಯದಿಂದಲೂ ಮಧ್ಯಾಹ್ನದ ಬೇಸಿಗೆಯ ಬಿಸಿಲಿನ ವೇಗದಿಂದಲೂ ಕೋರ್ಟಿನೊಳಗೆ ವಿಶೇಷವಾಗಿ ಗಾಳಿ ಸಂಚಾರವಿಲ್ಲದ್ದರಿಂದಲೂ ಇದರ ಮೇಲೆ ಬಟ್ಟೆ ಗುಬರನ್ನು ಹಾಕಿಕೊಂಡಿದ್ದದರಿಂದಲೂ ಅವಳ ಮುಖದಿಂದ ಬೆವರು ಹರಿಯುತಿತ್ತು. ತಾನು ಮರಾಟಿಯವರಂತೆ ವಿಶೇಷವಾಗಿ ಕೆಂಪಗೆ ಇದೇನೆಂದು ತೋರಿಸಿಕೊಳ್ಳುವುದಕ್ಕಾಗಿ ಅವಳು ಮುಖಕ್ಕೆ ಬಳಿದುಕೊಂಡಿದ್ದ ಅರಿದಳದ ಬಣ್ಣವೂ ಅಲ್ಲಲ್ಲಿ ಬೆವರಿನ ಜೋರುಗಳೂ ಗೀರು ಗೀರಾಗಿ ಹರಿದು ಮುಖವೆಲ್ಲಾ ವಿಕಾರವಾಗಿ ಕಾಣಿಸುತಿತ್ತು. ಇಂಥಾ ಚೆಂದುಳ್ಳಿ ಚೆಲುವಾದ ಮುಖವನ್ನು ನೋಡಿ ಸಭೆಯಾದ ಸಭೆಯೆಲ್ಲಾ ಗೊಳ್ ಎಂದು ನಕ್ಕುಬಿಟ್ಟಿತು. ಆಗ ಇವಳನ್ನು ಮೊದಲಿನಿಂದಲೂ ಬಲ್ಲಂಥಾ ಪಂಚಾಯಿತರಲ್ಲಿ ಒಬ್ಬನಾದ ಭತ್ತದ ಮಳಿಗೆ ಮರಿಯಣ್ಣನು ಕೇಳಿದ್ದೇನೆಂದರೆ:

ಮರಿಯಣ್ಣ—ನಿನ್ನ ಹೆಸರೇನು?

ಫಿರ್ಯಾದಿ—ದುರ್ಗಾಬಾಯಿ.

ಮರಿಯಣ್ಣ—ನಿನ್ನನ್ನು ದುರ್ಗಿ ಎಂದು ಕರಿಯುತಾರೆಯೊ?

ಫಿರ್ಯಾದಿ—ಹವುದು.

ಮರಿಯಣ್ಣ—ನಿಮ್ಮ ತಾಯಿಯ ಹೆಸರೇನು?

ಫಿರ್ಯಾದಿ—ಚನ್ನಮ್ಮ.

ಮರಿಯಣ್ಣ—ಚೆನ್ನಿ ಎಂತಲೂ ಕರೆಯುತಾರೆಯೊ?

ಫಿರ್ಯಾದಿ—ಹವುದು.

ಮರಿ—ಹಗ್ಗದ ಚೆನ್ನಿ ಎಂದು ಅವಳ ಅಡ್ಡ ಹೆಸರಲ್ಲವೆ?

ಫಿರ್ಯಾದಿ—ಹವುದು.

ಮರಿ—ಮುಸರೆ ಚೆನ್ನಿಎಂತಲೂ ಕರೆಯುತಾರಲ್ಲವೆ?

ಫಿರ್ಯಾದಿ—ಹವುದು.

ಮರಿ—ಹಗ್ಗದ ಪಿಂಡಿಯನ್ನು ತಲೆಯಮೇಲೆ ಹೊತ್ತುಕೊಂಡು ಬೀದಿಯಲ್ಲಿ ಸಾರುತಾ ಮನೆಗಳಿಗೆ ಹೋಗಿ ಮಾರುತಾಳಷ್ಟೆ.

ಫಿರ್ಯಾದಿ—ಹವುದು.

ಮರಿ—ನಿನಗೆ ಮದುವೆಯಾಗಿದೆಯೆ?

ಫಿರ್ಯಾದಿ—ಇಲ್ಲ.

ಮರಿ—ನೀನು ಹುಟ್ಟಿದ್ದು ಗಂಜಾಮುದಲ್ಲಿಯೋ?

ಫಿರ್ಯಾದಿ—ಹವುದು.

ಮರಿ—ನಿನ್ನ ಮನೆಗೆ ಅಂಚೆ ಕಪನಿ, ಅವಸರದ ಹೋಬಳಿ ಬಸಪ್ಪ, ವೆಂಕಟನಾರಿ, ಆಮಿಾಲ ನರಸದಾಸಪ್ಪ, ಕಲ್ಲಿಬಿಲ್ಲಿ ಖಾನರು ಇವರೆಲ್ಲಾ ಬರುತಾ ಇದಾರಲ್ಲವೆ?

ಫಿರ್ಯಾದಿ—ಹವುದು.

ಮೊಹರ್ದಿ ನವಾಬ್ ಖಾ—ಕಮಿಾಷನರು ಸಾಹೇಬರಿಗೆ ಈ ಅರ್ಜಿಯನ್ನೂ ಸರರ್ಮರಿಗೆ ಈ ಅರ್ಜಿಯನ್ನೂ ನೀನು ಕೊಟ್ಟದ್ದುಂಟೆ?

ಫಿರ್ಯಾದಿ—ಉಂಟು.

ಮೊಹರ್ದಿ—ಇದನ್ನು ಯಾರ ಕೈಯಲ್ಲಿ ಬರಿಸಿದೆ?

ಫಿರ್ಯಾದಿ—ಗುರಿಕಾರರು ಬರಿಸಿ ತಂದುಕೊಟ್ಟರು.

ಮೊಹರ್ದಿ—ಅದನ್ನು ನಿನಗೆ ಓದಿ ಹೇಳಿದರೋ?

ಫಿರ್ಯಾದಿ—ಇಲ್ಲ.

ಮೊಹರ್ದಿ—ನೀನೇ ಓದಿ ನೋಡಿದೆಯ?

ಫಿರ್ಯಾದಿ—ಹವುದು.

ಮೊಹರ್ದಿ—ದೇಪಣ್ಣನವರು ಅವರ ಕಡೆಯವರು ಹನುಮಂತರಾಯರನ್ನು ಕೊಲ್ಲಿಸಿದರು ಎಂದು ಬರೆದಿತ್ತೋ?

ಫಿರ್ಯಾದಿ—ಹವುದು.

ಮೊಹರ್ದಿ—ಕೋರ್ಟಿನಲ್ಲಿರುವ ಹನುಮಂತರಾಯರನ್ನು ಯಾವಾಗಲಾದರೂ ನೋಡಿದ್ದೆಯ ?

ಫಿರ್ಯಾದಿ—ಇಲ್ಲ.

ಮೊಹರ್ದಿ—ನೀನು ಅವರ ಹೆಂಡತಿಯಲ್ಲವಷ್ಟೆ?

ಫಿರ್ಯಾದಿ—ಅಲ್ಲ.

ಇದೆಲ್ಲವನ್ನೂ ಪಂಚಾಯಿತರು ಕೇಳಿ ತಮ್ಮೊಳಗೆ ಆಲೋಚನೆ ಮಾಡಿಕೊಂಡು ದಂಡನಾಧಿಕಾರಿಯನ್ನು ಕುರಿತು—ದೇಪಣ್ಣ ಮೊದಲಾದ ಕೆಲವು ಅಪರಾಧಿಗಳಿಂದ ಯಾವ ಅಪರಾಧವೂ ನಡೆದಿಲ್ಲವೆಂತಲೂ, ಆದ್ದರಿಂದ ನಿರಪರಾಧಿಗಳಾದ ಅವರನ್ನು ಸೆರೆಯಿಂದ ಬಿಡುಗಡೆಮಾಡಬೇಕೆಂತಲೂ, ಉಳಿದ ಅಪರಾಧಿಗಳ ಮೇಲೆ ಈ ಮೊಕದ್ದಮೆಯಲ್ಲಿ ನಮೂದಾಗಿರುವ ತಪ್ಪು ಹೊರದೆ ಬೇರೆ ದುಷ್ಕಾರ್ಯವನ್ನು ಅವರು ಮಾಡಿದಾರೆಂತ ತಿಳಿಯಬರುವ ಕಾರಣ, ಅಂಥವರನ್ನು ಈ ಮೊಕದ್ದಮೆಯಲ್ಲಿ ಬಿಡುಗಡೇ ಮಾಡಿ, ಅವರಮೇಲೂ ಅವಸರದ ಹೋಬಳಿ ಬಸಪ್ಪ, ಹಗ್ಗದ ಚೆನ್ನಿ ಮಗಳು ದುರ್ಗಿ ಇವರೇ ಮೊದಲಾದವರಮೇಲೂ ಬೇರೇ ಮೊಕದ್ದಮೆ ಜರುಗಿಸಬಹುದೆಂತಲೂ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಈ ಅಭಿಪ್ರಾಯದಂತೆ ದಂಡನಾಧಿಕಾರಿಯು ದೇಪಣ್ಣನೇ ಆದಿಯಾಗಿ ಕೆಲವರನ್ನು ನಿರಪರಾಧಿಗಳೆಂದು ಬಿಡುಗಡೆಮಾಡಿ, ಉಳಿದವರನ್ನು ಆಕ್ಷಣವೇ ಕೋರ್ಟಿನಲ್ಲಿಯೇ ಹಿಡಿದು ನಿರ್ಬಂಧದಲ್ಲಿರಿಸುವಂತೆ ಅಪ್ಪಣೆ ಮಾಡಿದನು. ಈ ಜನರ ವಿಚಾರಣೆ ಬೇರೇ

ನಡೆದು ಈ ಫಿತೂರಿಗೆ ಸೇರಿದ್ದ ವಿಶಿಷ್ಟರಿಗೂ ಶಿಕ್ಷೆಯಾಯಿತು. ಪಂಚಾಯಿತರು ಮತ್ತು ಅಧಿಕಾರಿ ಇವರ ವಿಚಕ್ಷಣೆಯನ್ನೂ ಮುಖ್ಯವಾಗಿ ಅಪ್ರಮೇಯನ ಸಾಹಸವನ್ನೂ ಪ್ರಾಮಾಣಿಕತೆಯನ್ನೂ ಸ್ವಾಮಿಭಕ್ತಿಯನ್ನೂ ಜನರೆಲ್ಲರೂ ಕೊಂಡಾಡುತಾ ಅವಸರದ ಹೋಬಳಿ ಬಸಪ್ಪ ಅಂಚೆ ಕಪನಿ ಮೊದಲಾದ ಖೂಳರನ್ನು ಯಚ್ಚ ಯಾವಚ್ಚ ಬಯ್ಯುತಾ ಹೊರಟುಹೋದರು.

## ೨೨ನೇ ಅಧ್ಯಾಯ

## ರಾಜಪೂಜ್ಯತೆ

ಈ ಪ್ರಕಾರ ವ್ಯವಸ್ಥೆಯಾದ ಸಂಗತಿ ಶ್ರೀ ಕೃಷ್ಣರಾಜಪ್ರಭುಗಳ ಮಹಾಸನ್ನಿಧಾನದಲ್ಲಿ ತಿಳಿಯಿತು. ಆಗ—"ಶಹಬಾಷ್, ಹೀಗೆ ಈ ಮೋಸದ ಮಹಾಜಾಲವನ್ನು ಶೋಧಿಸಿ ನ್ಯಾಯವಿಮರ್ಶೆ ಮಾಡುವ ಸಮರ್ಥರಾದ ಅಧಿಕಾರಿಗಳೂ ಪಂಚಾಯಿತರೂ ನಮ್ಮ ರಾಜ್ಯದಲ್ಲಿದಾರಲ್ಲ. ನಮಗೆ ಸಂತೋಷವಾಯಿತು. ಹೀಗೆ ಇಲ್ಲದೆ ನಮ್ಮ ದೇಪುವಿಗೆ ಏನಾದರೂ ಶಿಕ್ಷೆಯಾಗಿದ್ದರೆ ರಾಜಕೀಯವಾದ ಅನೇಕ ಪ್ರಮಾದಗಳು ಉಂಟಾಗುವುದಕ್ಕೆ ಮಾರ್ಗ ಸರಿಯಾಗಿತ್ತು. ಆ ನಂಜುಂಡೇಶ್ವರನನ್ನೂ ಆ ತಾಯಿ ಚಾಮುಂಡೇಶ್ವರಿಯನ್ನೂ ನಾನು ನಂಬಿದೇನೆ. ಅವರೇ ನಮ್ಮ ಹೆಸರುವಾಸಿಯನ್ನು ಕಾಪಾಡುತಾರೆ" ಹೀಗೆಂದು ಶ್ರೀ ಕೃಷ್ಣರಾಜಪ್ರಭುವು ಅಪ್ಪಣೆಕೊಡಿಸಿ ಸಂತೋಷಪಟ್ಟರು; ಮೇಲಾಗಿ ಈ ಸಂಗತಿಯನ್ನು ಕುರಿತು ಕಮಿಷನರು ಕಬ್ಬ್‌ಸಾಹೇಬರಿಗೂ ಬರೆಯಿಸಿ ಕಳುಹಿಸಿ ಕೊಟ್ಟರು.

ಇದನ್ನು ಕೇಳಿ ಜನರಲ್ ಕಬ್ಬ್ ಸಾಹೇಬರು ಮೊಕದ್ದಮೆಯಲ್ಲಿ ಮೊದಲು ಬೇಕಾಬಿಟ್ಟಿಯಾಗಿ ವ್ಯವಸ್ಥೆಮಾಡಿ ನಿರಪರಾಧಿಗಳಿಗೆ ಶಿಕ್ಷೆ ಕೊಟ್ಟಿದ್ದ ಅಧಿಕಾರಿಯ ಅಜಾಗರೂಕತೆಯನ್ನೂ ಅವಿ

ವೇಕವನ್ನೂ ಆಕ್ಷೇಪಿಸಿ—ಈ ದೇಶೀಯ ಸಂಸ್ಥಾನವನ್ನು ಪೂರ್ವದ ಹಕ್ಕುದಾರರಿಗೇ ಕೊಟ್ಟು ರಾಜ್ಯಭಾರಕ್ರಮವನ್ನು ಈ ದೇಶಸ್ಥರು ಹೇಗೆ ನಡಿಸುತಾರೆಯೋ ಪರೀಕ್ಷಿಸಬೇಕೆಂದು ಕುಂಪಣೀ ಮಹಾ ಸರ್ಕಾರದವರು ಮಾಡಿದ ಏರ್ಪಾಡಿಗೆ ಅಪವಾದವನ್ನು ತಂದು ಆ ಮಹಾ ಸರ್ಕಾರದವರ ಹೆಸರನ್ನೇ ಅವಿವೇಕಿಗಳಾದ ಅಧಿಕಾರಿಗಳು ಕೆಡಿಸುತಾ ಇದ್ದರು. ಈ ಮೊಕದ್ದಮೆಯು ಅನ್ಯಥಾ ವ್ಯವಸ್ಥೆಯಾಗಿದ್ದರೆ ಕಂಪನಿಯವರಿಗೂ ದೇಶೀಯರಾಜರಿಗೂ ಆ ಚಂದ್ರಾರ್ಕವಾಗಿ ಅಪವಾದ ನಿಂತುಹೋಗುತಾ ಇತ್ತು. ದೇವರ ಕೃಪೆಯಿಂದ ಇದು ತಪ್ಪಿತು, ಎಂದು ಕಲ್ಕತ್ತಾ ಸರ್ಕಾರದವರಿಗೆ ಬರೆದು ಈ ವಿಷಯದಲ್ಲಿ ಶ್ರೀರ್ಮ ಮಹಾರಾಜರಿಗೆ ಮೊದಲು ಉಂಟಾದ ವಿಷಾದಕ್ಕೂ ಕಡೆಯಲ್ಲಿ ಉಂಟಾದ ಆನಂದಕ್ಕೂ ತಾನು ಭಾಗಿಯಾಗಿದೇನೆಂದು ಉಪಚಾರವಾದ ಕಾಗದವನ್ನು ಬರೆದು ಕಳುಹಿಸಿದರು.

ಅತ್ತ ಅಪ್ರಮೇಯನು ಹನುಮಂತರಾಯರನ್ನೂ ದುರ್ಗಾಬಾಯಿಯನ್ನೂ ತನ್ನ ಊರಿಗೆ ಕರೆದುಕೊಂಡು ಹೋಗಿ ಅವರ ಒಡವೆ ಜವಾಹಿರು ಮೊದಲಾದ ವಿಶಿಷ್ಟ ಸ್ವತ್ತನ್ನೂ ದಂಪತಿಗಳ ವಶಕ್ಕೆ ಕೊಟ್ಟು ಕೆಲವು ದಿವಸ ಅವರನ್ನು ತನ್ನ ಮನೆಯಲ್ಲಿರಿಸಿ ಕೊಂಡಿದ್ದು ತಾನು ಹನುಮಂತರಾಯನನ್ನು ಹುಡುಕುವುದರಲ್ಲಿ ಪಟ್ಟ ಕಷ್ಟವನ್ನೆಲ್ಲಾ ಒಂದೊಂದು ದಿವಸ ಒಂದೊಂದು ಕಥೆಯಾಗಿ ಹೇಳಿ ಅವರನ್ನು ಉಪಚರಿಸಿದನು. ಆ ದಂಪತಿಗಳು ತಮಗೋಸ್ಕರ ಅಪ್ರಮೇಯ ಪಟ್ಟ ಶ್ರಮಕ್ಕೂ ಅವನ ಸತ್ಯಸಂಧತೆಗೂ ಮೆಚ್ಚಿ ಅವನು ತಮ್ಮ ಅರ್ಧ ಜವಾಹಿರನ್ನು ಉಪಹಾರವಾಗಿ ತೆಗೆದುಕೊಳ್ಳಬೇಕೆಂದು ಕೇಳಿಕೊಂಡರು. ಆಗ ಅಪ್ರಮೇಯನು —ಸ್ವಾಮಿ, ತಾವು ಮಹಾಶೂರರು, ತಮ್ಮ ಉಪ್ಪಿನಿಂದ ಈ ಶರೀರ ಬೆಳೆಯಿತು. ಅದಕ್ಕೆ ಬದಲಾಗಿ ನನ್ನ ಕೈಲಾದ ಕಾರ್ಯವನ್ನು ತಮ್ಮ ಸದ್ಗುಣಗಳಿಗಾಗಿ ಮಾಡಿದೆ. ಉಳಿದ ಯಾವು

ದನ್ನೂ ನಾನು ಅಂಗೀಕರಿಸುವುದಿಲ್ಲ. ಹಾಗೆ ಸ್ವೀಕರಿಸಿದರೆ ನಾನು ಮಾಡಿದ ಕೆಲಸವೆಲ್ಲಾ ಮುಂದೆ ಹೊಂದತಕ್ಕ ಪ್ರಯೋಜನದ ನಿರೀಕ್ಷಣೆಗಾಗಿ ಮಾಡಿದಂತಾಗುವುದೇ ಹೊರತು ಹಿಂದೆ ನಾನು ಹೊಂದಿದ ಉಪಕಾರಕ್ಕೆ ಕೃತಜ್ಞತೆ ಎನಿಸುವುದಿಲ್ಲ. ಆದ್ದರಿಂದ ತಮ್ಮ ಪದಾರ್ಥವು ತಮ್ಮಲ್ಲಿರಬೇಕು. ನಾನು ಸ್ವೀಕರಿಸತಕ್ಕವನಲ್ಲ, ಎಂದನು. ಆಗ ಆ ವೀರದಂಪತಿಗಳು ಆ ಬ್ರಾಹ್ಮಣನ ಅನ್ಯಾದೃಶವಾದ ಸದ್ಗುಣಗಳನ್ನು ಕೊಂಡಾಡುತಾ ಆ ಉಪಹಾರಗಳನ್ನು ಅಪ್ರಮೇಯನ ಮಗನಿಗೂ ಹೆಂಡತಿಗೂ ಕೊಟ್ಟು ಸಾತಾರೆಗೆ ಪ್ರಯಾಣಸನ್ನದ್ಧರಾದರು.

ಇಷ್ಟರಲ್ಲಿ ದೇಪಣ್ಣನು ಹನುಮಂತರಾಯ ಮತ್ತು ಆತನ ಕುಟುಂಬ ದುರ್ಗಾಬಾಯಿ ಮತ್ತು ಅಪ್ರಮೇಯ ಇವರುಗಳನ್ನು ಮೈಸೂರಿಗೆ ಕರೆದು ತರಬೇಕೆಂದು ಆಪ್ತರ ಮೂಲಕ ಅತ್ಯಂತ ವಿನಯವಾಗಿ ಹೇಳಿ ಕಳುಹಿಸಿದನು. ಆ ದೊಡ್ಡ ಮನುಷ್ಯನ ಮಾತನ್ನು ತೆಗೆಯಲಾರದೆ ಇವರುಗಳು ಮೈಸೂರಿಗೆ ಹೋದರು. ಅಲ್ಲಿ ದೇಪಣ್ಣನು ಇವರುಗಳಿಗೆ ಬಹಳವಾಗಿ ಉಪಚರಿಸಿ ಅವರುಗಳು ತನಗೋಸ್ಕರ ಪಟ್ಟಂಥಾ ಹೇಳಲಶಕ್ಯವಾದ ಕಷ್ಟಗಳಿಗಾಗಿ ತನ್ನ ದೇಹವನ್ನು ಅವರಿಗೆ ತೆಯಿದು ಒಪ್ಪಿಸಿದರೂ ಜನ್ಮಜನ್ಮಾಂತರಕ್ಕೂ ಆ ಸಾಲ ತೀರಲಾರದೆಂದು ಹೇಳಿ, ಹನುಮಂತರಾಯನನ್ನೂ ಅಪ್ರಮೇಯನನ್ನೂ ಅರಮನೆಗೆ ಕರೆದುಕೊಂಡು ಹೋಗಿ ಶ್ರೀ ಕೃಷ್ಣರಾಜ ಪ್ರಭುಗಳ ಸನ್ನಿಧಿಯಲ್ಲಿ ಬೇಟಿ ಮಾಡಿಸಿದನು.

ಆಗ ದೊರೆಗಳು—"ಹನುಮಂತರಾಯರೇ, ನಿಮ್ಮ ಮಹಾಪರಾಕ್ರಮದಿಂದ ನಮಗೂ ನಮ್ಮ ರಾಜ್ಯಕ್ಕೂ ಬಂದ ಖ್ಯಾತಿಯು ಶಾಶ್ವತವಾಗಿ ನಿಂತಿದೆ. ಏನೇನೋ ಅಚಾತುರ್ಯಗಳಿಂದ ನಿಮ್ಮನ್ನು ನಾನು ನೋಡುವುದಕ್ಕಿಲ್ಲದೇ ಹೋಯಿತು. ಈಚೆಗೆ ದರಬಾರಿನ ವಿಚಾರದಲ್ಲಿ ನೀವು ಮಾಡಿದ ಕೆಲಸಗಳೂ ಸಹಾಯವೂ ನಮ್ಮ ದೇಪುವಿನಿಂದ ಪದೇ ಪದೇ ತಿಳಿಯಬರಲಾಗಿ

ಸಂತೋಷಪಡುತಿದ್ದೆವು. ಈ ಮಧ್ಯೆ ನಮ್ಮೂರಿನ ಅನೇಕ ದುಷ್ಟ ಜನರು ಸೇರಿ ಮಾಡಿದ್ದ ಪಿತೂರಿ ಸಂಸ್ಥಾನದ ಗೌರವಕ್ಕೆ ಎಲ್ಲಿ ಕುಂದಕವನ್ನು ತಂದೀತೋ ಎಂದು ಮನಸ್ಸಿಗೆ ಚಿಂತೆಯಾಗಿತ್ತು. ನಿಮ್ಮಂಥಾ ಸತ್ಪುರುಷರಾದ ವೀರ ಶಿಖಾಮಣಿಗಳ ಸಹಾಯ ವನ್ನು ದೊರಕಿಸಿಕೊಟ್ಟ ನಮ್ಮ ಭಾಗದ ಚಾಮುಂಡೇಶ್ವರಿಯು ಬೆಟ್ಟದ ಹಾಗೆ ಬಂದದನ್ನು ಮಂಜಿನ ಹಾಗೆ ಪರಿಹಾರಮಾಡಿ ದಳು. ಏನೈ ಅಪ್ರಮೇಯ, ನಿನ್ನ ಸಾಹಸದಿಂದಲೇ ಈ ಕಷ್ಟ ವೆಲ್ಲಾ ಪರಿಹಾರವಾಯಿತೇ ಹೊರತು ಮತ್ತೆ ಬೇರೆ ಇಲ್ಲವೆಂದು ತಿಳಿಯಿತು. ಈ ಮೊಕದ್ದಮೆಯಲ್ಲಿ ನಡೆದಿದ್ದ ವಿಶಿಷ್ಟ ಸಂಗತಿ ಯನ್ನೂ ಸ್ವಲ್ಪವೂ ಬಿಡದೆ ನಮಗೆ ತಿಳಿಸೈಯ್ಯ" ಎಂದು ಅಪ್ಪಣೇ ಕೊಡಸಿದರು. ಆಗ ಅಪ್ರಮೇಯನು ಬಸಪ್ಪ ಮುಂತಾ ದವರು ಮಾಡಿದ್ದ ಮಹಾ ತಂತ್ರದ ಜಾಲವನ್ನೂ ಅದನ್ನು ಜೈಸುವುದಕ್ಕೆ ತಾನು ಮಾಡಿದ ಪ್ರತಿ ಕ್ರಿಯೆಗಳನ್ನೂ ತಾನು ಪಟ್ಟ ಶ್ರಮವನ್ನೂ ಈಚೆಗೆ ತಾನು ಮಾಡಿದ ತಂತ್ರಗಳನ್ನೂ ವಿಚಾರಣೇ ಕ್ರಮವನ್ನೂ ಸಾಕ್ಷಿಗಳ ಹೇಳಿಕೆ ಮೊದಲಾಗಿ ಫಿತೂರಿ ಹೊರಕ್ಕೆ ಬರಲು ತಾನು ಹಾಕಿದ ಸವಾಲಿನ ರೀತಿಯನ್ನೂ ಆದ್ಯಂತವಾಗಿ ವಿವರಿಸಿ ಅರಿಕೇ ಮಾಡಿದನು. ಆಗ ಪ್ರಭುಗಳು ಅಪ್ರಮೇಯ ಮಾಡಿದ ಅರಿಕೆಯನ್ನೆಲ್ಲಾ ಕೇಳಿ ತಮ್ಮ ಸಹಜ ವಾದ ವಾಗ್ಝರಿಯಿಂದ—"ಇಂಥಾ ಘಟಕರೂ ಇಂಥಾ ಸಾಹಸಿ ಗಳೂ ನಮಗೆ ದೊರೆಯುವುದು ಅಪೂರ್ವ. ಇಂಥವರು ತಾವಾಗಿ ನಮ್ಮಲ್ಲಿ ಬರುವುದಿಲ್ಲ, ಒಂದು ವೇಳೆ ಯಾರಾದರೂ ಹಟಾತ್ತಾಗಿ ಬಂದರೂ ನಮ್ಮ ಸುತ್ತಮುತ್ತ ಓಡಾಡಿಕೊಂಡು ನಮ್ಮನ್ನು ಸ್ತೋತ್ರ ಮಾಡುತಾ ಅರಮನೆಯಿಂದ ಬೇಕಾದ್ದನ್ನು ದೋಚಿ ಕೊಂಡು ತಮ್ಮ ಮನೆ ತುಂಬಿಕೊಳ್ಳುತಾ ಸಮಯದಲ್ಲಿ ನಮಗೇ ಎರಡು ಬಗೆಯುತಾ ಇರುವ ಪರಮ ನೀಚರು ಅಂಥವರನ್ನು ನಮ್ಮ ದೃಷ್ಟಿಗೆ ಬೀಳದಂತೆಯೇ ಮಾಡಿ, ನಮ್ಮ ಲೋಕವೆಲ್ಲಾ

ಈ ಖೂಳರೇ ಎನ್ನುವ ಹಾಗೂ ಅರಮನೆ ಎಂಬುವುದು ಕಾರಾಗೃಹವೆನ್ನುವ ಹಾಗೂ ಮಾಡಿಬಿಟ್ಟಿದ್ದಾರೆ. ದೊರೆತನ ಮಾಡುವವನಿಗೆ ದೈವಕೃಪೆಯಿಂದ ನಿಮ್ಮಂಥಾ ಸತ್ಪುರುಷರ ಸಹವಾಸ ದೊರೆಯಬೇಕೇ ಹೊರತು ಮತ್ತೆ ಬೇರೇ ಮೋಕ್ಷವೇ ಇಲ್ಲ. ಅಪ್ರಮೇಯ, ನೀನು ನಮ್ಮ ಸನ್ನಿಧಾನದಲ್ಲಿಯೇ ಇರಬೇಕೈ. ನಿನ್ನಂಥವರಿಂದ ನಡೆಯಬೇಕಾದ ಕಾರ್ಯಗೌರವ ಎಷ್ಟೋ ಇದೆ" ಹೀಗೆಂದು ಮಹಾಸ್ವಾಮಿಗಳು ಅಪ್ಪಣೇ ಕೊಡಿಸಿ, ಹನುಮಂತ ರಾವ್ ರಣನವರೆಗೂ ಅಪ್ರಮೇಯನಿಗೂ ಬೇಕಾದ ಇನಾಮುನ್ನು ಕೊಟ್ಟು ಕಾಪಾಡಿದರು, ಎಂಬಲ್ಲಿಗೆ "ಮುಸುಗ ತೆಗೆಯೇ ಮಾಯಾಂಗನೆ" ಎಂಬ ಗ್ರಂಥಕ್ಕೆ ಮಂಗಳಂ.

ಮಹಾ ಶ್ರೀ ಶ್ರೀ ಶ್ರೀ || ಶಾಂತಿಶ್ಶ್ಯಾಂತಿಶ್ಶ್ಯಾಂತಿಃ ||

# ಎವರೆಸ್ಟ್ ವೀರ

## ತೆನ್‌ಸ್ಸಿಂಗ್ ಮತ್ತು ಉಲ್ಮನ್

ಇದು ಎವರೆಸ್ಟ್ ವೀರ ತೆನ್ ಸಿಂಗ್‌ನ ಆತ್ಮಕಥೆ. ೧೯೫೩ ರ ಮೇ ತಿಂಗಳಲ್ಲಿ ಅವನು ಹಿಲೆರಿಯೊಡನೆ ಹಿಮಾಲಯದ ಅತ್ಯುನ್ನತ ಶಿಖರವಾದ ಎವರೆಸ್ಟನ್ನು ಏರಿದಾಗ ವಿಶ್ವಖ್ಯಾತಿಯನ್ನೂ ವಿಶ್ವೋನ್ನತಿಯನ್ನೂ ಗಳಿಸಿದನು. ಠಾಕೂರ್, ಗಾಂಧಿ, ರಾಮನ್, ನೆಹರು—ಇವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹೇಗೆ ಪ್ರಸಿದ್ಧರಾಗಿದಾರೊ, ಹಾಗೆ ತೆನ್‌ಸ್ಸಿಂಗ್ ಇಂದು ಸಾಹಸಪ್ರಪಂಚ ದಲ್ಲಿ ವಿಶ್ವವಿಖ್ಯಾತನಾಗಿದ್ದಾನೆ.

ತೆನ್‌ಸ್ಸಿಂಗ್ ನೇಪಾಳ ಸಂಸ್ಥಾನದ ಪರ್ವತಪ್ರದೇಶದಲ್ಲಿ ಷರ್ಪಾ ಜನರಲ್ಲಿ ಜನಿಸಿದನು. ಅವನು ಹುಟ್ಟಿದ ಗ್ರಾಮ ಎವರೆಸ್ಟಿ ನಿಂದ ಒಂದು ದಿನದ ಪ್ರಯಾಣ ಮಾತ್ರ. ಹುಡುಗನಾಗಿರು ವಾಗ ಇವನು ತಂದೆಯ ಚಮರೀಮೃಗಗಳನ್ನು ಪರ್ವತದ ಇಳು ಕಲುಗಳಲ್ಲಿ ಮೇಯಿಸುತ್ತಾ ಚೋಮೊಲುಂಗ್ಮಾ (ಎವರೆಸ್ಟ್) ವನ್ನು ನೋಡುತ್ತಾ ಅದನ್ನೇರುವ ಕನಸುಗಳನ್ನು ಕಟ್ಟುತ್ತಿದ್ದನು.

ತೆನ್‌ಸ್ಸಿಂಗ್‌ನಿಗೆ ದೊರೆತ ಜಯ ಆಕಸ್ಮಿಕವಾದುದಲ್ಲ. ಕಷ್ಟದ ಬದುಕನ್ನು ಬಾಳಿ ನಿಜವಾದ ವೀರನಾಗಿದ್ದಾನೆ. ಚಿಕ್ಕವನಾಗಿರು ವಾಗಲೇ ಅವನು ಮನೆಯನ್ನು ಬಿಟ್ಟೋಡಿ ನಾನಾ ಪರ್ವತ ಯಾತ್ರೆಗಳಲ್ಲಿ ಪೋರ್ಟರನಾಗಿ, ಸರದಾರನಾಗಿ, ಸದಸ್ಯನಾಗಿ ದುಡಿದನು. ಎವರೆಸ್ಟನ್ನು ಆರು ಬಾರಿ ಏರಿಹೋಗಿ ಏಳನೆಯ ಬಾರಿ ಅದರ ನೆತ್ತಿಯನ್ನು ಮುಟ್ಟಿ ಜಯಶೀಲನಾದನು. ಜಯ ದಿಂದ ಉನ್ಮತ್ತನಾಗದೆ ದೈವಕ್ಕೆ ಕೃತಜ್ಞತೆ ಸಲ್ಲಿಸಿದನು.

ತೆನ್‌ಸ್ಸಿಂಗ್ ದೀನಜನರಲ್ಲಿ ಹುಟ್ಟಿದವನು. ವಿದ್ಯಾಶಿಕ್ಷಣದ

ಸೌಲಭ್ಯ ಅವನಿಗೆ ದೊರೆಯಲಿಲ್ಲ. ರಾಮಕೃಷ್ಣ ಪರಮಹಂಸ ರಂತೆ ಅವನು ಅನಕ್ಷರಸ್ಥ. ಆದರೆ ಪ್ರಪಂಚದ ನಾನಾ ಕಡೆ ಗಳಿಂದ ಅವನಿಗೆ ಬರುವ ಕಾಗದಗಳಿಗೆ ಲೆಕ್ಕವಿಲ್ಲ. ಅವನ ಲೌಕಿಕಜ್ಞಾನವೂ, ವ್ಯವಹಾರಬುದ್ಧಿಯೂ, ಕುತೂಹಲ ಪ್ರವೃತ್ತಿಯೂ, ಗ್ರಹಣಶಕ್ತಿಯೂ ಪದವೀಧರರನ್ನು ನಾಚಿಸು ವಂಥವು.

ತೆನ್‌ಸಿಂಗ್‌ನಲ್ಲಿ ನಿಜವಾದ ತೇಜಸ್ಸಿದೆ, ಸತ್ತ್ವವಿದೆ, ಗೆಲು ವಿದೆ, ಗುಣವಿದೆ; ಎಲ್ಲ ಗುಣಗಳನ್ನೂ ಮೀರಿ ನಿಲ್ಲುವ ವಿನಯ ವಿದೆ. ಈ ಕಥೆಯ ಉದ್ದಕ್ಕೂ ಹಸನ್ಮುಖಿಯಾದ ಈ ಷರ್ಪಾ ಪರ್ವತಪುತ್ರನ ಸರಳತೆಯೂ, ಪ್ರಾಮಾಣಿಕತೆಯೂ, ಮೋಹಕ ವಾದ ಗೆಲವೂ ಓದುಗರ ಮನಸ್ಸನ್ನು ಸೆರೆಗೊಳ್ಳುತ್ತವೆ.

**ಆಕರ್ಷಕವಾದ ಈ ಕಥೆ ಪೂರ್ವದೇಶದ ಭಾಷೆ ಯೊಂದಕ್ಕೆ ಭಾಷಾಂತರವಾಗಿ ಬರುವುದು ಇದೇ ಮೊದಲು**

ಕ್ರಾನ್ ಅ. ಪುಟಗಳು ೩೮೪ ; ಚಿತ್ರಗಳು ೩೨

ಬೆಲೆ, ಸಾದಾ ಪ್ರತಿ ರೂ. ೫-೦-೦; ಕ್ಯಾಲಿಕೊ ಪ್ರತಿ ರೂ. ೭-೮-೦

**ಕಾವ್ಯಾಲಯ * ಪ್ರಕಾಶಕರು * ಮೈಸೂರು**